ಗೌರಿ ಲಂಕೇಶರ

# ಲಂಕೇಶ್

◆ ರಂಜನೆ ◆ ಬೋಧನೆ ◆ ಪ್ರಚೋದನೆ

-ರೂ



★ ಖುಷ್ವಂತ್ ಸಿಂಗ್
★ ಸಲ್ಮಾನ್ ರಶ್ದಿ
★ ರಹಮತ್ ತರೀಕೆರೆ
★ ಡಾ. ವಿನಯಾ
★ ಜಿ. ರಾಜಶೇಖರ್
★ ಸಾಕೇತ್ ರಾಜನ್
★ ಬಿ. ಚಂದ್ರೇಗೌಡ
★ ಎಚ್.ಎಲ್.ಕೆ.
★ ಕೃಪಾಕರ-ಸೇನಾನಿ
★ ಕೆ.ಟಿ. ಗಟ್ಟಿ
★ ಡಾ. ಆಶಾದೇವಿ
★ ಶಿವಸುಂದರ್
★ ಎಂ.ಡಿ. ಒಕ್ಕುಂದ

ರಾಜಕೀಯ, ವಿಡಂಬನೆ, ಕ್ರೀಡೆ, ಒದುಗರ ಸೃಜನಶೀಲ ಬರಹ, ವರದಿ, ಸಿನಿಮಾ, ಹಾಸ್ಯ....

# ವಿಶೇಷಾಂಕ

# 'ಮೇಘದೂತ'ನ ಜೊತೆ ಎರಡು ದಿನ



ಪಿ.ಲಂಕೇಶ್

'ನಿನ್ನ ಮನಸ್ಸು ನೀನು ಗೆದ್ದವಳನ್ನು ಕುರಿತು ಧ್ಯಾನಿಸುತ್ತದೋ, ಕಳೆದುಕೊಂಡವಳನ್ನು ಕುರಿತು ಧ್ಯಾನಿಸುತ್ತದೋ?' ಎಂದು ಕವಿ ಏಟ್ಸ್ ಕೇಳುತ್ತಾನೆ. ಕಾಳಿದಾಸ ತನ್ನ 'ಮೇಘದೂತ'ದಲ್ಲಿ ತನ್ನ ವಶವಾದವಳನ್ನು ಅಥವಾ ತನ್ನನ್ನು ತಿರಸ್ಕರಿಸಿದವಳನ್ನು ನೆನೆಯದೆ ತನ್ನಿಂದ ತಂಗಾಮಿಯಾಗಿ ಬೇರ್ಪಟ್ಟವಳನ್ನು ನೆನೆಯುತ್ತಾನೆ. ದೇವರ ಶಾಪಕ್ಕೊಳಗಾಗಿ ಒಂದು ವರ್ಷ ತನ್ನನಿಯಳಿಂದ ಬೇರೆಯಾದ ಯಕ್ಷ ರಾಮಗಿರಿಯ ನಿರ್ಜನ ಪ್ರದೇಶದಲ್ಲಿ ಕೂತು ಕಾಲವನ್ನು ಸವೆಸುತ್ತಿದ್ದಾನೆ. ಇದು ಶಾಪ. ದೇವತೆಗಳಲ್ಲಿ ಒಬ್ಬನಾದ ಯಕ್ಷ ಮನುಷ್ಯನ ವಿರಹ ಅನುಭವಿಸುವುದಕ್ಕಾಗಿಯೇ ಶಾಪಗ್ರಸ್ತನಾಗಿರುವಂತೆ ಕಾಣುತ್ತದೆ. ಶಾಪದಿಂದಾಗಿ ಆತ ದೈಹಿಕವಾಗಿ ತನ್ನವಳಲ್ಲಿಗೆ ಹೋಗಲಾರ; ಮಾನಸಿಕವಾಗಿ ಹೋಗಬಹುದಾದರೂ ಅದು ತನಗಾಗಿ ಹೋದ ಸ್ವಾರ್ಥವಾಗತ್ತದೆ; ಅದು ತನ್ನವಳೊಂದಿಗೆ ನಡೆಸಿದ ಸಂಯೋಗ ಅಥವಾ ಸಂಭೋಗವಾಗುವುದಿಲ್ಲ. ಪಾರಿವಾಳ ಅಥವಾ ಗಿಳಿಯೊಂದಿಗೆ ಮಾತಾಡಿದರೆ ಯಕ್ಷನ ಮಾತು ಸಂಕೇತವಾಗಿ ಸಂಕುಚಿತವಾಗುತ್ತದೆ. ಆದ್ದರಿಂದ ಯಕ್ಷ ಹುಟ್ಟುತ್ತದೆ. ಯಕ್ಷ ಶಾಪಗೊಂಡ "ಕೆಲವೇ ತಿಂಗಳಲ್ಲಿ ಚಿನ್ನದ ಕಡಗ ಮೊಳಕೈಗೆ ಸರಿದು ಬಂತು" ಎಂಬುದು ನನ್ನ ಮನಸ್ಸಿನಲ್ಲಿ ಬಹುಕಾಲ ಇದ್ದ ಮಾತು; ಹಾಗೆಯೇ ಅಲಕಾವತಿಯಲ್ಲಿರುವ ಗೆಳತಿಯ ಬಗ್ಗೆ ಹೇಳುತ್ತಾ "ನಾರಿ ಹೃದಯದಲ್ಲಿ ನಾರಿನೆಳೆಯವೊಲು ಇಹುದು ಆಸೆಯೊಂದು" ಎಂದು ತನ್ನಾಕೆಯ ಹಂಬಲದ ಬಗ್ಗೆ ಸೂಚಿಸುತ್ತಾನೆ. ಮೇಘ, ಗಿರಿಶಿಖರದಲ್ಲಿ ಹೋಗುತ್ತಿರುವುದನ್ನು ಯಕ್ಷ ಕಲ್ಪಿಸಿಕೊಂಡು ಮೇಘಕ್ಕೆ ಹೇಳುತ್ತಾನೆ. ಬೆಟ್ಟದೆದೆಯ ಮೇಲೆ ಸುರಿದ ಮಾವು "ಅಮರ ಮಿಥುನಗಳ ಪ್ರಣಯದೃಷ್ಟಿ ಅರಳುವಂತೆ" ಆಗುತ್ತದೆ ಮಾತ್ರವಲ್ಲ; ಮೇಘ ಮತ್ತು ಬೆಟ್ಟದ ಜೋಡಿಯಿಂದ "ಮಲೆಯ ತುದಿ ಕಪ್ಪಾಗಿ ತೋರುವುದು ನೆಲದ ಮೊಲೆಯ ಹಾಗೆ." ಬೆಟ್ಟಗಳಂತೆಯೇ ನಿರ್ವಿಂಧ್ಯೆಯ ವರ್ಣನೆ ಮನೋಹರವಾಗಿದೆ. ಮೋಡ ಬಂದಿದೆ; ಮಳೆಯಾಗಬೇಕಾಗಿದೆ. ಆದರೆ ಈಗ ನದಿಯ ಹೆಳಲು ಇಳಿದಿದೆ, 'ಮೋಡದಿಂದ ಅಗಲಿ ಸೊರಗಿ ಸಣ್ಣಗಹಳು', ಆಕೆ "ದೈವದಿಂದ ನಿಮ್ಮನ್ನು ಸೇರಿ ಮೈದುಂಬಿಕೊಳ್ಳಬಹಳು."

ಮೇಘದೂತದ ಸೂತ್ರ ಕೂಡ ಹೀಗಿದೆ:

ಯಾರು ಬರಿಯ ಸುಖ, ಬರಿಯ ದುಃಖ ಪಟ್ಟವರು ಲೋಕದಲ್ಲಿ

ದೆಸೆಯು ಕೆಳಗೆ ಮೇಲಾಗಿ ತಿರುಗುವುದು ಏಕಚಕ್ರದಲ್ಲಿ

ಹಾಗೆಯೇ,

'ಅಗಲಿದಾಗ ತಿನ್ನುವುದು ಸ್ನೇಹವೆನ್ನುವರು ಜೀವವನ್ನು

ಕೂಡಿದೊಡನೆ ಅದೆ ಸೊರೆ ಮಾಡುವದು ಪ್ರೇಮವನ್ನು'

ಬರೀ ಸುಖ, ಬರೀ ದುಃಖ ಬದುಕಲ್ಲ; ವಿರಹ ಸ್ನೇಹವನ್ನು ಕೊಲ್ಲುತ್ತದೆ ಅನ್ನುವುದಕ್ಕೆ ಬದಲು ಕೂಡಿಕೆ ಪ್ರೇಮವನ್ನು ನಾಶ ಮಾಡೀತು ಅನ್ನುವುದು ಸತ್ಯ. ಜೀವನಕ್ಕೆ ಸುಖ, ದುಃಖ, ವಿರಹ, ಅಗಲಿಕೆ ಎಲ್ಲವೂ ಮುಖ್ಯ.

ಕಾಮ ರೂಪಿಯಾದ, ಚಲನಶೀಲವಾದ, ಮಳೆಯ ಚೇತನವುಳ್ಳ, ಜೀವಕ್ಕೆ ರೂಪಕವಾದ ಮೋಡದೊಂದಿಗೆ ಮಾತಾಡತೊಡಗುತ್ತಾನೆ. ಆಷಾಢ ಕಳೆದು ಶ್ರಾವಣ ಬರುತ್ತಿದ್ದಂತೆ ಇಡೀ ಜಗತ್ತು ಹೊಸ ಉಡುಪಿಗಾಗಿ, ಹೊಸ ಹುಟ್ಟಿಗಾಗಿ ಕಾತರಿಸುವಾಗ, ಮನುಷ್ಯನ ಮನಸ್ಸು ಕಾಮಪ್ರೇರಿತವಾಗುತ್ತದೆ; ತನ್ನ ಹೃದಯದ ರಾಣಿಯ ಸಂಗಕ್ಕೆ ದೇಹ ತೊಳಲಾಡುತ್ತದೆ. ಯಕ್ಷ ಚಿಂತೆಯಿಂದ ತನ್ನಲ್ಲೇ ಮುಳುಗಿ ಹೋಗುವುದಕ್ಕೆ ಪರ್ಯಾಯವಾಗಿ ಮೋಡದೊಂದಿಗೆ ಮಾತಾಡಿ ತನ್ನ ಇಡೀ ಭರತ ವರ್ಷವನ್ನು ವರ್ಣಿಸುತ್ತಾನೆ; ಯಕ್ಷನಿಗೆ ಅಲಕಾವತಿಗೆ ಹೋಗುವ ಮಾರ್ಗವನ್ನು ಸೂಚಿಸುತ್ತಲೇ ಆತ ದಾರಿಯಲ್ಲಿ ಗಮನಿಸಬೇಕಾದ ಅನೇಕ ಬನಗಳು, ನದಿಗಳು, ಗ್ರಾಮಗಳು, ಜನಜೀವನ, ಶ್ರೀರಾಮನ ಚಿತ್ರಕೂಟ-ಎಲ್ಲವನ್ನೂ ಕವಿಯ ಕಣ್ಣಿನಿಂದ ವರ್ಣಿಸುತ್ತಾನೆ.

ಅದೊಂದು ಆದರ್ಶ ಜಗತ್ತು-ಕಾಮಪೀಡಿತ ಯಕ್ಷ ಬಸವಳಿದ ನದಿಗಳನ್ನೂ, ಚಿಗುರಲಿರುವ ಮರಗಳನ್ನೂ, ಪ್ರೇಮದೃಶ್ಯಗಳನ್ನೂ, ವೃದ್ಧರು ಕತೆ ಹೇಳುವುದನ್ನೂ, ವಿಟರ ಕ್ರೀಡೆಗಳನ್ನೂ, ಸಂಸ್ಕೃತಿಯ ಅರ್ಥಗಳನ್ನೂ ತೆರೆದಿಡುತ್ತಾನೆ; ಯಕ್ಷ ತನ್ನ ಕಣ್ಣಿಂದ ನೋಡಿದ್ದಕ್ಕಿಂತ ತನ್ನ ಕಲ್ಪನೆಯಿಂದ ಕಂಡರಿಸಿದ್ದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಕಾಮದ ಸ್ವಾರ್ಥದಿಂದ ಹೇಳತೊಡಗುವ ಯಕ್ಷ ಇಡೀ ಜಗವನ್ನು ಪ್ರೇಮಿಸುವ, ಉದಾರವಾಗಿ ನೋಡುವ ತನ್ನ ಯಕ್ಷಿಗೆ ಸಂದೇಶ ಕಳಿಸುವುದರ ಮೂಲಕವೇ ಕಾಯುವುದನ್ನು ಹಗುರ ಮಾಡಿಕೊಳ್ಳುವ ಕ್ರಿಯೆಯಾಗುತ್ತದೆ. ಕಾಮಕ್ಕೆ ಅವಕಾಶ ಕೊಟ್ಟರೆ ಕೂಡಿಕೆ ಮಾತ್ರ ಸಾಧ್ಯ; ಕಾಮ ನಿಸ್ವಾರ್ಥಗೊಂಡರೆ ಮಾತ್ರ ಪ್ರೇಮ, ಔದಾರ್ಯ, ಜಾನಪದ ಬದುಕು, ನಾಗರಿಕ ಸಂಸ್ಕೃತಿ ಸಾಧ್ಯವಾಗುತ್ತದೆ; ಮೋಡ ನೆರಳಾಗಿ, ಸಿಡಿಲಾಗಿ, ಮಿಂಚಾಗಿ, ಮಳೆಯಾಗುವಂತೆ ಕಾಮ ಪ್ರೇಮವಾಗಿ ಭಕ್ತಿಯೂ ಆಗುತ್ತದೆ. ಶಾಪದಿಂದ ಸಿಟ್ಟು, ಸಿಡಿಮಿಡಿ ಹುಟ್ಟಿಕೊಳ್ಳುವುದಕ್ಕೆ ಬದಲು ಶಾಪವೇ ವರವಾಗುತ್ತದೆ.

ಇದು ಕಾಳಿದಾಸನ ಮೇಘ ಸಂದೇಶವನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಾಲ್ಕಾರು ದಿನ ಓದಿದಾಗ ನನಗನ್ನಿಸಿದ್ದು.

ಎಂದಿನಂತೆ ಮಂಗಳವಾರ ಪುಸ್ತಕವನ್ನು ಓರಣಗೊಳಿಸುವಾಗ ನನಗೆ ಟಿ.ಎಸ್. ವೆಂಕಣ್ಣಯ್ಯನವರ 'ಪ್ರಾಚೀನ ಸಾಹಿತ್ಯ', ಬೇಂದ್ರೆಯವರು ಕನ್ನಡಕ್ಕೆ ಹರಿಸಿರುವ 'ಮೇಘದೂತ' ಮತ್ತು ಶ್ರೀಮತಿ ಚಂದ್ರಾ ರಾಜನ್ ಅವರ 'ದಿ ಲೂಮ್ ಆಫ್ ಟೈಮ್' ಎಂಬ ಪುಸ್ತಕಗಳು ಕಂಡವು. ನಾನು ಎಂದೋ ನಿರ್ಲಕ್ಷ್ಯದಿಂದ ಓದಿದ್ದ ಬೇಂದ್ರೆಯವರ 'ಮೇಘದೂತ'ವನ್ನು ಹೆಚ್ಚು ಆಸಕ್ತಿಯಿಂದ ಓದತೊಡಗಿದೆ. ಸ್ವಲ್ಪ ಸಲೀಸಾಗಿ ಹರಿಯುವ, ಅಲ್ಲಲ್ಲಿ ಅಪಕ್ವತೆಯಿರುವ ಈ ಅನುವಾದದಲ್ಲಿ ಇದ್ದಕ್ಕಿದ್ದಂತೆ ಬೇಂದ್ರೆಯವರ ಗತ್ತು, ಸೊಗಡು ಕಾಣಿಸಿಕೊಳ್ಳುತ್ತದೆ; ಅವರು ಕಾಳಿದಾಸನ ಧ್ಯಾನಕ್ಕೆ ಹತ್ತಿರವಿರುವ ವಿಶ್ವಾಸ

ಒಂದು ಬೆಳಗಿನ ವರ್ಣನೆ ಕೂಡ ವಿಚಿತ್ರವಾಗಿದೆ. ರವಿ ರಾತ್ರಿಯನ್ನು ಬೇರೊಬ್ಬಳೊಂದಿಗೆ ಕಳೆದು ಬಂದಿದ್ದಾನೆ; ಕೋಪಗೊಂಡ ಭೂಮಿಯನ್ನು ರಮಿಸಲಿರುವ ಆತನಿಗೆ





ಮೋಡ ಅಡ್ಡವಾದರೆ ಕೆಂಡವಾಗಬಹುದು-ಆದ್ದರಿಂದ ಆತನ ಕಿರಣಗಳನ್ನು ತಡೆಯಬೇಡ ಎಂದು ಹೇಳುತ್ತಾನೆ. ವೈವಿಧ್ಯಮಯ ಬದುಕು, ಹಗಲು, ಇರುಳು, ಹಳ್ಳಿಯ ಹುಡುಗಿಯರು-ಎಲ್ಲವನ್ನೂ ವರ್ಣಿಸಿ ಕೊನೆಗೆ ತನ್ನ ಹುಡುಗಿಯನ್ನು ಯಕ್ಷ ಮನಸ್ಸಿನಲ್ಲಿಯೇ ನೋಡುತ್ತಾನೆ; ತನ್ನ ಮನೆ, ಅದರ ಪರಿಸರ ವರ್ಣಿಸಿದ ಆತ ಆಕೆಯನ್ನು "ಒಳ್ಳೆ ಮೈಯಿ, ನನೆ ಹಲ್ಲು, ಕೆಂಪು ತುಟಿ ಹಣ್ಣು ತೊಂಡೆಯಂತೆ, ಸಣ್ಣ ನಡುವು, ಚೆಲು ಹುಲ್ಲೆಗಣ್ಣು ಕುಳಿ ನಾಭಿಸುಳಿಗಳಂತೆ; ತುಂಬು ಎದೆಗೆ ನಸುಬಾಗಿ, ಹರವು ಹಿಮ್ಮೆಗೆ ಮಂದವಾಗಿ, ಎಲ್ಲ ಹೆಣ್ಣಿನೊಳೆ ಬ್ರಹ್ಮಕೃತಿಗೆ ಹೊಸ ಹೊಚ್ಚ ಚೊಚ್ಚಲಾಗಿ" ಎನ್ನುತ್ತಾನೆ.

ಈ ಪದ್ಯಗಳನ್ನು ಮತ್ತೆಮತ್ತೆ ಓದಿ ಬೇಂದ್ರೆಯವರು ಈ ಕಾವ್ಯವನ್ನು ಪರಿಚಯಿಸುವುದನ್ನು ಓದಿದೆ. ಇಲ್ಲಿ ಜಾಗವಿಲ್ಲವಾದ್ದರಿಂದ ಸಂಗ್ರಹವಾಗಿ ಒಂದು ಮಾತು-ಬೇಂದ್ರೆ ವಿಮರ್ಶೆಯನ್ನು ಗದ್ಯದಲ್ಲಿ ಮಾಡುವಾಗ ಸ್ವಲ್ಪ ತಡವರಿಸುತ್ತಾರೆ. ಅವರು ಪದ್ಯದಲ್ಲಿ ಹೇಳಿದ್ದು ವಿಮರ್ಶೆಯನ್ನೊಳಗೊಂಡು ಹದಗೊಂಡಿರುತ್ತದೆ. ಮೇಘದೂತದ ಬಗ್ಗೆ ಅವರು ಬರೆದ ಹಲವು ಸಾಲುಗಳನ್ನು ನೀಡಿ ವೆಂಕಣ್ಣಯ್ಯನವರ ಒಂದು ಪ್ಯಾರಾ ಮಾತ್ರ ನೀಡಿ, ನನಗನ್ನಿಸಿದ ಒಂದು ಮಾತು ಹೇಳುತ್ತೇನೆ.

'ಮೇಘದೂತ' ಕುರಿತು ಬೇಂದ್ರೆ:

ತನ್ನ ಕಿಚ್ಚಿನೊಳೆ ಬೆಂಕಿ ಸುಟ್ಟು ಬೆಳಕಾಗಿ ಮಿಂಚಬಹುದು

ಮೂಲ ಕಾಮದಲಿ ವಿರಹ ಬೆಳೆದು ಸುಪ್ರೇಮವರಳಲಹುದು

ಅನ್ನಪ್ರಾಣಗಳ ಮಿಥುನದಂತೆ ಮೈ ಎರಡು ಕಲೆತು ಬೆರೆತು

ಮನದ ಕಾವಿನಲ್ಲಿ ಕಾಮವಾಗಿ

ಮನದಾಚೆಗೇನೊ<br>ಅರಿತು

ಚಿತ್ತದಲ್ಲಿ<br>ನಿಷ್ಕಾಮರತಿಯು<br>ರಸಪಾಕವಾಗಿ<br>ನಿಂತು

ಧಾರೆಗೆಡದೆ<br>ಭಗವಂತನಲ್ಲಿ<br>ಚಿರಭಕ್ತಿಯಾಗಿ<br>ಬಂತು

ಭಿನ್ನದೇಹದಲ್ಲಿ<br>ಏಕಜೀವ<br>ಕಾಣುವರು ಕರಗಿ<br>ಮಾಗಿ

ಯಾರೊ<br>ಮೋಹದಲಿ,<br>ಯಾರೊ<br>ಊಹೆಯಲಿ,<br>ಯಾರೊ<br>ಯೋಗಿಯಾಗಿ....

ವೆಂಕಣ್ಣಯ್ಯನವರು ಮೂಲಭೂತವಾಗಿ ಅಧ್ಯಾಪಕರು; ಒಳನೋಟವುಳ್ಳ ಪ್ರತಿಭಾವಂತರು; ಅಂಥ ವಿಮರ್ಶಕರಲ್ಲ, ಅವರ ನಾಲ್ಕು ಪುಟದ ಪುಟ್ಟ ವಿಮರ್ಶೆಯಿಂದ ಕೆಲವು ಪ್ಯಾರಾ ಕೊಡುತ್ತಿದ್ದೇನೆ...

ಆ ಪ್ರಾಚೀನ ಭರತಖಂಡದ ನದಿ ಗಿರಿ ನಗರಿಗಳ ಹೆಸರುಗಳು ಕೂಡ ಎಷ್ಟು ಸುಂದರವಾದುವು! ಅವಂತೀ, ವಿದಿಶಾ, ಉಜ್ಜಯನೀ, ರೇವಾ, ಸಿಪ್ರಾ, ನೇತ್ರಾವತಿ ಈ ಹೆಸರುಗಳಲ್ಲಿ ಏನೋ ಒಂದು ವಿಧವಾದ ಕಾಂತಿಯೂ ಸಂಭ್ರಮವೂ ಶುಭ್ರತೆಯೂ ಇವೆ. ಕಾಲವು ಅಲ್ಲಿಂದೀಚೆಗೆ ಕ್ರಮಕ್ರಮವಾಗಿ ಬದಲಾಯಿಸಿ, ಆ ಕಾಲದ ಭಾಷೆ ವ್ಯವಹಾರ ಮನೋವೃತ್ತಿ ಇವು ಜೀರ್ಣವೂ ಅಪಭ್ರಂಶವೂ ಆದಂತಾಗಿದೆ; ಈಗ ಹೆಸರುಗಳನ್ನು ಕೊಡುವುದೂ ಇವಕ್ಕೆ ಅನುಸಾರವಾಗಿಯೇ ಇದೆ. ಆದರೆ ಆ ಕಾಲದ ರೇವಾ ಸಿಪ್ರಾ ನಿರ್ವಿಂಧ್ಯಾ ನದಿಗಳ ತೀರಗಳಿಗೂ ಅವಂತೀ ವಿದಿಶಾ ನಗರಿಗಳ ಒಳಕ್ಕೂ ಹೋಗಲು ಯಾವುದಾದರೂ ಒಂದು ದಾರಿ ಇದ್ದಿದ್ದರೆ ನಾವು ಈ ಕಾಲದಲ್ಲಿ ನಾಲ್ಕು ಕಡೆಯೂ ಇರುವ ಗಲಭೆಗಳಿಂದ ತಪ್ಪಿಸಿಕೊಳ್ಳಬಹುದಾಗಿತ್ತು ಎನಿಸುತ್ತದೆ.

ಆದಕಾರಣ, ಪಾಠಕರ ವಿರಹಯಾತನೆಯಿಂದ ಬಂದ ನಿಟ್ಟುಸಿರು ಆ ನಗ ನದೀ ನಗರಿಗಳ ಮೇಲೆ ಹೋದ ಯಕ್ಷನ ಮೇಘಕ್ಕೆ ಜೊತೆಗಾರನಾಗುತ್ತದೆ. ಯಾವ ದೇಶದಲ್ಲಿ ಗ್ರಾಮಸ್ತ್ರೀಯರ ಪ್ರೀತಿ ಸ್ನಿಗ್ಧಲೋಚನವು ಭ್ರೂ ವಿಕಾರವನ್ನು ಕಲಿತಿರಲಿಲ್ಲವೋ ಪುರನಾರಿಯ ಕೌತೂಹಲ ದೃಷ್ಟಿಯ ಭ್ರೂಲತಾವಿಭ್ರಮವನ್ನರಿತ ಮತ್ತು ನಿಬಿಡಪಕ್ಷವುಳ್ಳ ಅವರ ನೇತ್ರದಿಂದ ಮಧುಕರಪಂಕ್ತಿಯಂತೆ ಮೇಲಕ್ಕೆ ಏಳುತ್ತಿತ್ತೋ; ಆ ಕವಿಭಾರತವರ್ಷದಿಂದ ನಾವು ಚ್ಯುತರಾಗಿದ್ದೇವೆ. ಈಗ ಅಲ್ಲಿಗೆ ಕವಿಯು ಮೇಘವನ್ನು ಬಿಟ್ಟರೆ, ಮತ್ತಾವ ದೂತರನ್ನೂ ಕಳುಹಿಸಲಾರೆವು.

ಆದರೆ ಪ್ರತಿಯೊಬ್ಬ ಮನುಷ್ಯನಲ್ಲಿಯೂ, ಅತೀವ ವರ್ತಮಾನವಷ್ಟೇ ಅಲ್ಲ, ಅತಲಸ್ಪರ್ಶಿಯೂ ಆದ ವಿರಹವಿದೆ. ನಾವು ಯಾರೊಂದಿಗೆ ಸೇರಲು ಅಪೇಕ್ಷಿಸುವೆವೋ ಅವರು ತಮ್ಮ ಮಾನಸಸರೋವರದ ಅಗಮ್ಯತೀರದಲ್ಲಿ ವಾಸ ಮಾಡುತ್ತಾರೆ. ಅಲ್ಲಿಗೆ ನಾವು ಕಲ್ಪನೆಯನ್ನು ಮಾತ್ರ ಕಳುಹಿಸಬಹುದು. ಸಶರೀರವಾಗಿ ಹೋಗುವುದಕ್ಕೆ ಮಾರ್ಗವಾವುವೂ ಇಲ್ಲ. ನಾನಿರುವುದೆಲ್ಲಿ, ನೀನಿರುವುದೆಲ್ಲಿ! ಮಧ್ಯದಲ್ಲಿರುವ ಅನಂತವನ್ನು ದಾಟಬಲ್ಲವರಾರು? ಅನಂತದ ಕೇಂದ್ರದಲ್ಲಿರುವ ಆ ಪ್ರಿಯತಮನೂ ಅವಿನಶ್ವರನೂ ಆದ ಮಾನವನನ್ನು ಯಾರು ತಾನೇ ಸಾಕ್ಷಾತ್ತಾಗಿ ಪಡೆಯಬಲ್ಲರು! ಈಗ, ಕೇವಲ ಭಾಷೆ ಭಾವಗಳಲ್ಲಿಯೂ ಅಭ್ಯಾಸ ಇಂಗಿತಗಳಲ್ಲಿಯೂ, ಮರೆವು ಭ್ರಾಂತಿಗಳಲ್ಲಿಯೂ ಬೆಳಕು ಕತ್ತಲೆಗಳಲ್ಲಿಯೂ ದೇಹ ಮನಸ್ಸುಗಳಲ್ಲಿಯೂ ಜನನ ಮರಣಗಳ ರಭಸ ಪ್ರವಾಹಮಧ್ಯದಲ್ಲಿಯೂ, ಅವನ (ಕಡೆಯ) ಗಾಳಿ ಮಾತ್ರ ಒಂದು ಸ್ವಲ್ಪ ಬೀಸುತ್ತದೆ. ಒಂದು ವೇಳೆ ನಿನ್ನ ಕಡೆಯಿಂದ ಹೊರಟು ಬಂದ ತಂಗಾಳಿಯ ನಮ್ಮ ಹತ್ತಿರಕ್ಕೆ ಬಂದು ಸೇರುವುದಾದರೆ ಅದೇ ನಮ್ಮ ಮಹಾ ಸೌಭಾಗ್ಯ. ಈ ವಿರಹಲೋಕದಲ್ಲಿ ಅದಕ್ಕಿಂತಲೂ ಹೆಚ್ಚನ್ನು ಯಾರೂ ಆಶಿಸಲಾಗುವುದಿಲ್ಲ.

* * * * * *

ಇವೆಲ್ಲಕ್ಕಿಂತ ಮುಖ್ಯವಾಗಿ ನನ್ನನ್ನು ಕಾಡಿದ ಪ್ರಶ್ನೆಯೊಂದಿದೆ. ಅದನ್ನು ಕೇಳುವುದಕ್ಕಾಗಿಯೇ ಮೇಲಿನದನ್ನೆಲ್ಲ ಬರೆದಿದ್ದೇನೆ. ರಾಮಾಯಣದ ನೆರಳಲ್ಲಿ ಕೂತು ಕಾಳಿದಾಸ ಬರೆಯುತ್ತಿದ್ದಾನೆ. ರಾಮಗಿರಿ, ಚಿತ್ರಕೂಟಗಳ ನೆನಪೆಲ್ಲ ಮೇಘದೂತದಲ್ಲಿವೆ. ಆದರೆ ನಾವು ಯಾವ ನೆರಳಲ್ಲಿದ್ದೇವೆ? ಅಂದರೆ ರಾಮಾಯಣ ಬರೆದವನು, ಮಹಾಭಾರತ ಬರೆದವನು, ಮೇಘದೂತ ಬರೆದವನು ಎಷ್ಟು ಸಹಜವಾಗಿ, ತೀವ್ರವಾಗಿ ಕಲ್ಪಿಸಿಕೊಳ್ಳಬಲ್ಲ; ಅವನಿಗೆ ದೇವಲೋಕ, ಮರ್ತ್ಯಲೋಕವೆಲ್ಲ ನಿಜ. ನಾವು ಇವರೆಲ್ಲರ ಬಗ್ಗೆ, ಇವರು ಗ್ರಹಿಸುವ ಕ್ರಮದ ಬಗ್ಗೆ ಯೋಚಿಸಿದರೆ ಇಂಥವರು ಇದ್ದರೆ? ಇವರೆಲ್ಲ ಹೇಗೆ ಬರೆದರು? ಎಂದು ವಿಸ್ಮಯವಾಗುತ್ತದೆ. ನಮ್ಮಂತೆಯೇ ನೋವು, ಸಾವು, ವಿರಹ, ಹಸಿವು, ಬಾಯಾರಿಕೆಯಿಂದಿದ್ದ ಪಂಚೇಂದ್ರಿಯಗಳಿಗೆ ಬದ್ಧರಾಗಿದ್ದ, ದೇಹ ಮತ್ತು ಮನಸ್ಸುಗಳ ಮಿತಿ ಪಡೆದಿದ್ದ ಈ ಜನರ ಕಲ್ಪನೆ ಮತ್ತು ತಿಳಿವಳಿಕೆ ನಮ್ಮ ನೆರೆಯವನ ತಿಳಿವಳಿಕೆಯಂತೆ ಆದೊಡನೆ ಅವರ ಶಕ್ತಿ ನಮ್ಮದಾಗುತ್ತದೆ.

–ಆಗಸ್ಟ್ 4, 1993

ನಾನು ಎಲ್ಲಿ ತಲುಪಬೇಕೆಂದಿದ್ದನೋ ಅಲ್ಲಿಗೆ ತಲುಪಲಿಲ್ಲ, ಆದರೆ ಎಲ್ಲಿರಬೇಕಿದ್ದೇನೋ, ಅಲ್ಲಿದ್ದೇನೆ. -ಡಗ್ಲಸ್ ಆಡಮ್ಸ್

# ಅಪ್ಪನ ಮೌಲ್ಯಗಳು ಮತ್ತು ಇಶಾಳ ಕನಸುಗಳು....

ಕಳೆದ ಒಂದು ವರ್ಷದಲ್ಲಿ ರಾಜ್ಯ ಮತ್ತು ರಾಷ್ಟ್ರ ಹಲವಾರು ಬದಲಾವಣೆಗಳನ್ನು ಕಂಡಿವೆ. ಎರಡೂ ಕಡೆ ಚುನಾವಣೆಗಳಲ್ಲಿ ಜನರಿಗೊಂದು ಆಶ್ವಾಸನೆ ನೀಡಿ, ಗೆದ್ದ ನಂತರ ಆ ಆಶ್ವಾಸನೆಗಳ ವಿರುದ್ಧವೇ ರಾಜಕಾರಣಿಗಳು ನಡೆದುಕೊಂಡಿದ್ದನ್ನು ನೋಡಿದ್ದೇವೆ.

ಹಿಂದೆಲ್ಲ ರಾಜಕಾರಣಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ ಎಂದು ಕಿರಿಕಾರಬಹುದಿತ್ತು. ಆದರೆ ಈಗ ರಾಜಕಾರಣಿಗಳು ಅಪ್ಪಟ ದುಷ್ಟರಾಗಿರುವುದನ್ನು ನೋಡಬೇಕಿದೆ. ಇಲ್ಲವೆಂದರೆ ಅಧಿಕಾರಕ್ಕೆಂದೇ ಜೆಡಿಎಸ್ ಮತ್ತು ಬಿಜೆಪಿ ನಡುವೆ ಹಲವು ತಿಂಗಳ ಕಾಲ ನಡೆದ ಗುಪ್ತ ಒಡಂಬಡಿಕೆಯನ್ನು 'ಕ್ಷಿಪ್ರ ರಾಜಕೀಯ ಬೆಳವಣಿಗೆ' ಎಂದೂ, ದೇವೇಗೌಡರ ಮೊಸಳೆ ಕಣ್ಣೀರನ್ನು ನಿಜವಾದ ಮುಖ ಎಂದೂ, ಕುಮಾರಸ್ವಾಮಿ ಈ ರಾಜ್ಯದ ಮತದಾರರ ನಿಜವಾದ ಆಯ್ಕೆ ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ.

ಈ ರಾಜ್ಯಕ್ಕೆ ತನ್ನದೆ ಆದ ಸೌಹಾರ್ದ ಪರಂಪರೆ ಇದೆ, ಇಲ್ಲಿ ಪ್ರಗತಿಪರ ಆಶಯವಿದೆ, ಚಿಂತನಾಶೀಲ ಜನರಿದ್ದಾರೆ ಎಂದೇ ನಂಬಲಾಗಿದೆ. ಆದರೆ ಇವತ್ತಿನ ದುರಂತ ನೋಡಿ. ಅಂತಹ ಕರ್ನಾಟಕ ರಾಜ್ಯದಲ್ಲಿ ಕೋಮುವಾದಿಗಳು ಅಧಿಕಾರದ ಗದ್ದುಗೆಗೆ ಏರಲು ಕುಮಾರಸ್ವಾಮಿ ಎಂಬ ಹುಂಬ ಹಿಂದು, ಮುಂದು ನೋಡುವುದಿಲ್ಲ. ಪುತ್ರ ವ್ಯಾಮೋಹಿ ದೇವೇಗೌಡ ತನ್ನ "ನಿಜವಾದ ಮಗ"ನ ವಿರುದ್ಧ ಒಂದೇ ಒಂದು ಕ್ರಮ ತೆಗೆದುಕೊಳ್ಳುವುದಿಲ್ಲ. ಎಂ.ಪಿ. ಪ್ರಕಾಶ್‌ರಂತಹ "ಬುದ್ಧಿಜೀವಿ" ರಾಜಕಾರಣಿಗಳು ಚಕಾರವೆತ್ತುವುದಿಲ್ಲ. ಇದೆಲ್ಲ ಗೊತ್ತಿದ್ದೇ ಯಡಿಯೂರಪ್ಪನಂತಹ ಕೋಮುವಾದಿಗಳೊಂದಿಗೆ ಕುಮಾರಸ್ವಾಮಿ ಸಿಹಿಯನ್ನು, ಅಧಿಕಾರವನ್ನೂ ಹಂಚಿಕೊಳ್ಳುತ್ತಾರೆ, ಆತ್ಮಸಾಕ್ಷಿಗೆ ತಿಲಾಂಜಲಿ ಇಡುತ್ತಾರೆ.



ಇದು ರಾಜ್ಯದ ದುರಂತ.

ಇನ್ನು ರಾಷ್ಟ್ರದಲ್ಲಿನ ಪರಿಸ್ಥಿತಿ ಇದಕ್ಕಿಂತಲೂ ಭಿನ್ನವಾಗೇನಿಲ್ಲ. "ಮಾನವೀಯ ಮುಖ" ಹೊಂದಿರುವ ಆರ್ಥಿಕ ನೀತಿ ತರುವುದಾಗಿ ಚುನಾವಣೆಗಳ ಮುನ್ನ ಹೇಳಿದ್ದ ಕಾಂಗ್ರೆಸ್ ಪಕ್ಷ, ಗೆದ್ದ ಕೂಡಲೇ ತಾನು ಹಾಗೆ ಹೇಳಿದ್ದೇ ಇಲ್ಲ ಎಂದಿತು. ಅಷ್ಟೇ ಅಲ್ಲ ಹಿಂದಿನ ಬಿಜೆಪಿ ನೇತೃತ್ವದ NDA ಸರ್ಕಾರ ಸಮಯ ಇಲ್ಲದಿದ್ದಕ್ಕೋ ಅಥವಾ ಅವಕಾಶ ಸಿಗದಿದ್ದಕ್ಕೋ, ಬಿಕರಿ ಮಾಡದೇ ಇದ್ದ ಸಾರ್ವಜನಿಕ ಸಂಪತ್ತನ್ನೆಲ್ಲ ಮಾರಲು ತುದಿಗಾಲ ಮೇಲೆ ನಿಂತಿತು. ಕೋಮುವಾದಿ ಬಿಜೆಪಿಗೆ ವಾಜಪೇಯಿ ಹೇಗೆ ಮುಖವಾಡವಾಗಿದ್ದರೋ, ಹಾಗೆಯೇ ಕಾಂಗ್ರೆಸ್ ಪಕ್ಷಕ್ಕೆ "ಮಾನವೀಯ ಮುಖದ ಆರ್ಥಿಕ ನೀತಿ"ಯೂ ಜನರನ್ನು ವಂಚಿಸುವ ಮುಖವಾಡವಾಗಿದೆ.

ಇವತ್ತು ಯಾವ ಸಾರ್ವಜನಿಕ ಸಂಪತ್ತೂ ಜನರಿಗಾಗಿ ಉಳಿಯುತ್ತಿಲ್ಲ. ಇತ್ತ ರಾಜ್ಯ ಸರ್ಕಾರ ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವಾರು ನಗರಗಳಲ್ಲಿ ಕುಡಿಯುವ ನೀರನ್ನೇ ಖಾಸಗಿ ಕಂಪನಿಗಳಿಗೆ ನೀಡುತ್ತಿದ್ದರೆ ಅತ್ತ ಕೇಂದ್ರ ಸರ್ಕಾರ ವಿಮಾನ ನಿಲ್ದಾಣಗಳಿಂದ ಹಿಡಿದು ದೊಡ್ಡ ಕಾರ್ಖಾನೆಗಳನ್ನೇ ವಿದೇಶಿ ಕಂಪನಿಗಳಿಗೆ ಮಾರುತ್ತಿದೆ. ಈ ಖಾಸಗೀಕರಣದಿಂದಾಗಿ ಜನರಿಗೆ ಏನು ಲಾಭ ಎಂದು ಯಾವ ರಾಜಕಾರಣಿಯೂ ಕೇಳಿಕೊಳ್ಳುತ್ತಿಲ್ಲ. ಬದಲಾಗಿ ಮತ್ತೊಂದು ಪಕ್ಷವೋ, ಮತ್ತೋರ್ವ ರಾಜಕಾರಣಿಯೋ ಅಧಿಕಾರಕ್ಕೆ ಬರುವ ಮುನ್ನ ತಾನೇ ಆದಷ್ಟನ್ನು ಮಾರಿ ಹಣ ಮಾಡಿಕೊಳ್ಳುವ ತರಾತುರಿಯಲ್ಲಿದ್ದಾರೆ.

ಇಂತಹ ಜನದ್ರೋಹ ಕಾರ್ಯಗಳಿಗೆ ಕುಮಾರಸ್ವಾಮಿ ಹೇಳಿ ಮಾಡಿಸಿದಂತಿದ್ದಾರೆ. ತನಗೆ ಅಧಿಕಾರ ಬೇಕು, ಯಾವ ಸಿದ್ಧಾಂತ, ನೀತಿ, ತತ್ವ ಬೇಕಿಲ್ಲ ಎಂದು ಯಾವ ಮುಲಾಜಿಲ್ಲದೆ ಘೋಷಿಸಿಕೊಂಡಿರುವ ಕುಮಾರಸ್ವಾಮಿಗೆ ರೈತರು ಬೀದಿ ಪಾಲಾದರೂ ಪರವಾಗಿಲ್ಲ, ಬಾಬಾಬುಡನ್ ಗಿರಿ ದರ್ಗವನ್ನು ಪುರೋಹಿತಶಾಹಿಗಳು ಕಬ್ಜಾ ಮಾಡಿಕೊಂಡರೂ ಪರವಾಗಿಲ್ಲ, ಅಂಬೇಡ್ಕರ್‌ಗೆ ಅವಮಾನವಾದರೂ ಸರಿ, ಟಿಪ್ಪೂ ಸುಲ್ತಾನ್ ಇತಿಹಾಸದಿಂದ ಕಣ್ಮರೆಯಾದರೂ ಲೆಕ್ಕಕ್ಕಿಲ್ಲ... ತಾನು ಮುಖ್ಯಮಂತ್ರಿ ಆಗಿದ್ದೇ ತನ್ನ ಜೀವನ ಸಾರ್ಥಕವಾಯಿತು ಎಂಬ ಸಂತಸ. ಇಂತಹ ಮನುಷ್ಯನ ಆಡಳಿತದಲ್ಲಿ ಆತ್ಮಹತ್ಯೆಗಳಿಗೆ ಶರಣಾಗುತ್ತಿರುವ ಬಡ ಬೋರೇಗೌಡನಾಗಲಿ, ಚೆಡ್ಡಿಗಳಿಂದ ಅಮಾನುಷವಾಗಿ ಹಲ್ಲೆಗೀಡಾದ ಬಡ ಹಸನಬ್ಬ ಮತ್ತು ಆತನ ಮಗನಿಗಾಗಲಿ, ಪಕ್ಷದ ಲಾಂಛನವಾಗಿರುವ ಹೊರೆ ಹೊತ್ತ ಮಹಿಳೆಗಾಗಲೀ, ಎಲ್ಲಿದೆ ನೆಮ್ಮದಿ? ಸಮಾನತೆ? ಅಭಿವೃದ್ಧಿ? ನ್ಯಾಯ?

ಮುಖ್ಯಮಂತ್ರಿಗಿರಿ ಪಡೆದ ಕುಮಾರಸ್ವಾಮಿಯವರ ಜೀವನ ಸಾರ್ಥಕವಾಗಿರಬಹುದು. ಆದರೆ ಈ ರಾಜ್ಯದ ಜನತೆಯ ಬದುಕು ಕಿಂಚಿತ್ತಾದರೂ ಸುಧಾರಿಸಬಾರದೆ? ಈಗ ಕುಮಾರಸ್ವಾಮಿ ಹೊಸ ವರಸೆ ಶುರು ಮಾಡಿದ್ದಾರೆ. ಅದೇ ಊರೂರುಗಳಲ್ಲಿ ತಾವು ನಡೆಸಲಿರುವ 'ಜನತಾ ದರ್ಶನ.' ಇದಕ್ಕಿಂತಲೂ ಹಾಸ್ಯಾಸ್ಪದವಾದ, ಜನರನ್ನು ಅವಮಾನಿಸುವ ಮತ್ತೊಂದು ಯೋಜನೆ ಇರಲಿಕ್ಕಿಲ್ಲ. ಏಕೆಂದರೆ ಇದೇ ಕುಮಾರಸ್ವಾಮಿಯವರ "ನಿಜವಾದ ತಂದೆ" ದೇವೇಗೌಡರು 1994 ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದೆಲ್ಲೆಡೆ ಇಂತಹದ್ದೇ 'ಜನತಾ ದರ್ಶನ'ಗಳನ್ನು ನೀಡಿ ಲಾರಿಗಟ್ಟಲೆ ಜನರ ಅಹವಾಲುಗಳನ್ನು ವಿಧಾನ ಸೌಧಕ್ಕೆ ತಂದಿದ್ದರು. ವಾಸ್ತವ ಏನೆಂದರೆ, ಆ ಅಹವಾಲುಗಳು ಇಂದಿಗೂ ಸರ್ಕಾರದ ವಿವಿಧ ಕಚೇರಿಗಳಲ್ಲಿ ಒಂದೋ ಗಿರಕಿ ಹೊಡೆಯುತ್ತಿವೆ, ಅಥವಾ ಸಾರಾಸಗಟಾಗಿ ತಿರಸ್ಕೃತಗೊಂಡಿವೆ. ಮಾಧ್ಯಮಗಳಲ್ಲಿ ಮಾತ್ರ ವಿಜೃಂಭಿಸುವ ಈ ಜನತಾ ದರ್ಶನಗಳಿಂದ ಸಹಾಯ ಪಡೆದವರಿಗಿಂತ ನಿರಾಶೆಗೊಂಡವರೇ ಹೆಚ್ಚು.


ಇವತ್ತು ಯಾವ ರಾಜಕಾರಣಿಯ ಮುಖವನ್ನೂ ಜನ ನೋಡಲು ಇಚ್ಛಿಸುವುದಿಲ್ಲ. ಬದಲಾಗಿ

## ಕಂಡಹಾಗೆ



ತಾನು ಇದ್ದಲ್ಲಿಂದಲೇ ಜನಪರವಾದ ಕಾರ್ಯಕ್ರಮಗಳನ್ನು ರೂಪಿಸಿ, ಅಧಿಕಾರಿಗಳು ಅದನ್ನು ಅನುಷ್ಠಾನಕ್ಕೆ ತಂದು ಜನರ ಬವಣೆಗಳನ್ನು ಕಡಿಮೆ ಮಾಡಿದರೆ ಸಾಕು. ಅದರಲ್ಲೂ ಇಂಟರ್‌ನೆಟ್‌ನಂತಹ ಇವತ್ತಿನ ತಂತ್ರಜ್ಞಾನ ಯುಗದಲ್ಲಿ ಮುಖ್ಯಮಂತ್ರಿಯೊಬ್ಬ ಬೀದಿ, ಬೀದಿ ಅಲೆಯುವ ಅಗತ್ಯವೇ ಇಲ್ಲ. ಇದೆಲ್ಲದರ ಬಗ್ಗೆ ಅರಿವೇ ಇಲ್ಲದ ಕುಮಾರಸ್ವಾಮಿ 'ಯುವ ಉತ್ಸಾಹಿ'ಯಂತೆ ರಾಜ್ಯವನ್ನು ಸುತ್ತಲು ಹೊರಟು ವಿಧಾನ ಸೌಧದ ಕಸದಬುಟ್ಟಿಗಳಿಗೆ ಹೆಚ್ಚು ರದ್ದಿ ಸಂಗ್ರಹಿಸಲು ಸಜ್ಜಾಗಿದ್ದಾರೆ. ಇದನ್ನು ನೋಡಿ ಜನರಿಗೆ ಅಳಬೇಕೋ, ನಗಬೇಕೋ ಗೊತ್ತಾಗುತ್ತಿಲ್ಲ.....

ಇನ್ನು ಯಡಿಯೂರಪ್ಪ ಎಂಬ ಕೋಮುವಾದಿ ತನ್ನ ದೇಹದಲ್ಲಿ ಅಡಗಿರುವ ವಿಷವನ್ನು ರಾಜ್ಯದ ಜನರ ಮೇಲೆ ಕಾರಿಕೊಳ್ಳಲು ತಯಾರಾಗಿದ್ದಾರೆ. ಅಂಬೇಡ್ಕರ್‌ಗೆ ಅವಮಾನಿಸಿದ್ದು ಈ ರಾಜ್ಯದ ದಲಿತರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಕಾದಿರುವ ಕರಾಳ ದಿನಗಳ ಪ್ರಾರಂಭಿಕ ಸೂಚನೆಯಷ್ಟೇ. ಆಗಲೇ ರಾಜ್ಯದೆಲ್ಲೆಡೆ ಸಂಘ ಪರಿವಾರದ ಪುಂಡರು ಬಾಲ ಬಿಚ್ಚಲಾರಂಭಿಸಿದ್ದಾರೆ. ಕುಮಾರಸ್ವಾಮಿಯಂತಹ ಹುಂಬ, ಯಡಿಯೂರಪ್ಪನಂತಹ ಪುಂಡ ಜೊತೆಗೂಡಿ ಕರ್ನಾಟಕವನ್ನು ಇನ್ನೆಂತಹ ದುರಂತದಲ್ಲಿ ಮುಳುಗಿಸುತ್ತಾರೆ ಎಂದು ಯೋಚಿಸಿದರೇ ಭಯವಾಗುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ...



ಇಲ್ಲೊಂದು ಮುಖ್ಯವಾದ ಅಂಶವನ್ನು ಕಾಣಿಸಲೇ ಬೇಕು. ಇವತ್ತು ಕುಮಾರಸ್ವಾಮಿ ಮತ್ತು ಯಡಿಯೂರಪ್ಪಗಳಿಗೆ ಮಂತ್ರ, ರಾಹುಕಾಲ, ಜ್ಯೋತಿಷ್ಯ, ಹೋಮ, ಹವನಗಳೇ ಮುಖ್ಯವಾಗಿದೆ; ಈ ರಾಜ್ಯದ ಜನರ ಕ್ಷೇಮವಲ್ಲ. ಸ್ವಾತಂತ್ರ್ಯ ಪಡೆದು ಐವತ್ತೈದು ವರ್ಷಗಳ ನಂತರ ಅಭಿವೃದ್ಧಿ, ಪ್ರಗತಿ, ವೈಜ್ಞಾನಿಕ ಚಿಂತನೆ ಹೆಚ್ಚಾಗಿ ಕಂಡು ಬರಬೇಕಾಗಿದ್ದ ಸಂದರ್ಭದಲ್ಲಿ, ಕಂಡಕಂಡ ಗುಡಿಗೂ, ಸ್ವಾಮಿಗಳ ಪಾದಗಳಿಗೂ ಪೊಡಮೊಡುವ ಈ ಜೋಡಿ ನಿಜವಾಗಲೂ ಕರ್ನಾಟಕದ ಜೋಕರ್ಸ್... ಆದರೆ ನಗಿಸುವುದಕ್ಕಿಂತಾ ಕಣ್ಣೀರಿಡಿಸುವ ಜೋಕರ್ಸ್!

* * * * * * * * * *

ಇಂತಹ ರಾಜಕೀಯ ಸಂದರ್ಭದಲ್ಲೇ ಅಪ್ಪನ ಪತ್ರಿಕೆ ಮರುಹುಟ್ಟು ಪಡೆದು ಒಂದು ವರ್ಷವಾಗುತ್ತಿದೆ.

ಒಂದು ವರ್ಷ ಅದೆಷ್ಟು ಬೇಗ ಸರಿದು ಹೋಯಿತು ಎಂದು ಆಶ್ಚರ್ಯವಾಗುತ್ತಿದೆ. ಪತ್ರಿಕೆ ಸಿಬ್ಬಂದಿ ಸೇರಿದಂತೆ ಸ್ನೇಹಿತರು ಕೂಡ "ಅರೆ, ಮಾರ್ಚ್ 8 ಬಂದೇಬಿಟ್ಟಿತಾ? ಒಂದು ವರ್ಷ ಆಯ್ತಾ?" ಎಂದೇ ಕೇಳುತ್ತಿದ್ದಾರೆ.

ಆದರೆ ಒಂದು ವರ್ಷ ಸಾಗಿರುವುದು ನಿಜ. ಈ ಒಂದು ವರ್ಷದಲ್ಲಿ ಈ ಪತ್ರಿಕೆ ನಿಜವಾಗಲೂ ಜನರ ಪತ್ರಿಕೆಯಾಗಿ, ಜನಪ್ರಿಯವಾಗುತ್ತಾ ಮುಂದೆ ಸಾಗಿದೆ. ಅಪ್ಪನ ಮೌಲ್ಯಗಳು, ಜನಪರ ಕಾಳಜಿ, ಪ್ರಗತಿಪರ ಸಿದ್ಧಾಂತದೊಂದಿಗೆ ಸಾಗಿರುವ ಈ ಪತ್ರಿಕೆ ಪ್ರಗತಿರಂಗದ ಲಾಂಛನವಾಗಿದ್ದ 'ಗುಲಾಬಿ' ಹೂ ಬಾಡದಂತೆ ಎಚ್ಚರವಹಿಸಿದೆ. ಅದಕ್ಕೆ ನಮ್ಮ ಶ್ರಮ ಎಷ್ಟು ಮುಖ್ಯವೋ ಕನ್ನಡದ ಜಾಣ-ಜಾಣೆಯರ ಬೆಂಬಲ ಕೂಡ ಅಷ್ಟೇ ಮುಖ್ಯ ಎಂಬ ಅರಿವು ನಮ್ಮೆಲ್ಲರಿಗಿದೆ.

ಒಂದು ವರ್ಷ ಕಳೆದಿದ್ದರಿಂದ ನಿಮಗಾಗಿ ಈ ವಿಶೇಷ ಸಂಚಿಕೆಯನ್ನು ತಂದು ನಿಮ್ಮ ಕೈಯಲ್ಲಿಟ್ಟಿದ್ದೇವೆ. ಕಳೆದ ಆರು ವರ್ಷಗಳಲ್ಲಿ ಅಪ್ಪನ ಪತ್ರಿಕೆಯ ಒಟ್ಟು ಹತ್ತು ವಿಶೇಷಾಂಕಗಳನ್ನು ತಂದಿರುವ ನನಗೆ ಈ ಸಂಚಿಕೆ ತುಂಬಾ ತೃಪ್ತಿ ನೀಡಿದೆ. ಈ ಸಂಚಿಕೆಯಲ್ಲಿ ಸಾಹಿತ್ಯ ಹಾಸ್ಯ ವಿಡಂಬನೆಗಳೊಂದಿಗೆ ಇವತ್ತು ನಮ್ಮ ಸುತ್ತಲಿನ ಸಮಾಜದಲ್ಲಿ ಘಟಿಸುತ್ತಿರುವ ಸಂಗತಿಗಳನ್ನು ಆಳವಾಗಿ ಚರ್ಚಿಸುವ ವಿಶೇಷ ಲೇಖನಗಳಿವೆ. ಇವುಗಳನ್ನು ಬರೆದು ಕೊಟ್ಟ ಎಲ್ಲ ಹಿರಿಯರಿಗೂ, ಮಿತ್ರರಿಗೂ ನನ್ನ ಧನ್ಯವಾದಗಳು.

ಇನ್ನು ನಮ್ಮ ಓದುಗರು ಕಳುಹಿಸಿರುವ ಲೇಖನಗಳು ಒಂದಕ್ಕಿಂತ ಒಂದು ಅದ್ಭುತವಾಗಿವೆ. ಕಳೆದ 25 ವರ್ಷಗಳಿಂದ ಅಪ್ಪ ಮತ್ತು ಪತ್ರಿಕೆ ಕರ್ನಾಟಕದ ಜನರಲ್ಲಿ ಮೂಡಿಸಿರುವ ಸೂಕ್ಷ್ಮತೆಗೆ ಈ ಲೇಖನಗಳೇ ಸಾಕ್ಷಿ ಎನಿಸುತ್ತದೆ. ವಾಸ್ತವವಾಗಿ ಎಲ್ಲ ಓದುಗರು ಕಳುಹಿಸಿದ್ದ ಬರಹಗಳನ್ನು ಪ್ರಕಟಿಸಬೇಕಿದ್ದರೆ ಈ ಸಂಚಿಕೆಯ ಪುಟಗಳೇ ಸಾಕಾಗುತ್ತಿರಲಿಲ್ಲ. ಆದ್ದರಿಂದ ಅವುಗಳಲ್ಲೇ ಶ್ರೇಷ್ಠವಾದದ್ದನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಉಳಿದವರು ಬೇಸರಗೊಳ್ಳಬಾರದೆಂದು ನನ್ನ ವಿನಂತಿ.

* * * * * * * * * *

ಸ್ವಾತಂತ್ರ್ಯ ನಂತರ ಕರ್ನಾಟಕದ ಜನತೆ ಬಹಳ ಕ್ಲಿಷ್ಟಕರವಾದ ಸಂದರ್ಭವನ್ನು ಎದುರಿಸುತ್ತಿದ್ದಾರೆ. ಇದನ್ನು ಮೆಟ್ಟಿನಿಲ್ಲಲು ಆತ್ಮಸ್ಥೈರ್ಯ ಮತ್ತು ಆತ್ಮವಿಶ್ವಾಸ ಬೇಕಿದೆ. ಅಪ್ಪ ಹಿಂದೊಮ್ಮೆ ಹೇಳಿದ್ದಂತೆ "ಮನುಷ್ಯ ಬದುಕುವುದು ಹೊಟ್ಟೆಗಾಗಿ ಮಾತ್ರವಲ್ಲ-ಆತ್ಮಗೌರವಕ್ಕಾಗಿ, ಕ್ರಿಯಾಶೀಲ ದುಡಿತಕ್ಕಾಗಿ, ಸಮುದಾಯದೊಂದಿಗೆ ಒಂದಾಗಿಯೇ ಆತ್ಮ ಸಂಪತ್ತು ರೂಢಿಸಿಕೊಳ್ಳುವುದಕ್ಕಾಗಿ."

ಆ ನಿಟ್ಟಿನಲ್ಲಿ ಪತ್ರಿಕೆ ಕಾರ್ಯನಿರ್ವಹಿಸುತ್ತಿದೆ ಮಾತ್ರವಲ್ಲ, ಆ ಆಶಯಗಳನ್ನು ಹೊಂದಿರುವ ಎಲ್ಲರನ್ನೂ ತನ್ನ ಜೊತೆ ಕರೆದುಕೊಂಡು ಹೋಗುತ್ತಿದೆ. ಇವತ್ತು ನಾವು ನಮ್ಮ ಮೊದಲನೆ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದೇ ಈ ಹೋರಾಟದ ಫಲ. ನಿಮಗೆಲ್ಲಾ ನಾನು ಋಣಿ...

-ಗೌರಿ ಲಂಕೇಶ್



ನಮ್ಮ ಸಾಮರ್ಥ್ಯಕ್ಕಿಂತಲೂ ನಮ್ಮ ಆಯ್ಕೆಗಳು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತವೆ-ಜೆ.ಕೆ. ರೌಲಿಂಗ್




# ರಾಮನಗರದಲ್ಲಿ ಅನಿತಕ್ಕನ ದರ್ಬಾರು!

ಆವತ್ತು ಹಿಂದ್ಯಾವತ್ತಿಗಿಂತಲೂ ಗತ್ತಾಗಿದ್ದರು ಅನಿತಕ್ಕ. 'ಅಳೀ ಬ್ಯಾಟಪ್ಪ ಬೆಳಿಗ್ಗೆಯಾಪಿ ಬೆಂಗಳೂರಲ್ಲಿರ್ತೀರಲೀ? ನೊದಲು ಹಳ್ಳೀಲಿದ್ದು ಕೆಲ್ಸ ಮಾಡೋದು ಕಲಿತು ಕೊಳ್ಳೀ....!' ಎಂದದ್ದೇ ತಡ ನೆರೆದವರೆಲ್ಲ ಕಕ್ಕಾಬಿಕ್ಕಿ. ಆ ಕಾಲದಿಂದಲೂ ತನ್ನನ್ನು ಬೆಂಬಲಿಸಿಕೊಂಡೇ ಬಂದ ಲಕ್ಕೀಸಾಗರ ತಾಲ್ಲೂಕು ಪಂಚಾಯ್ತಿ ಮೆಂಬರ್ ಬ್ಯಾಟಪ್ಪನನ್ನು ಒಮ್ಮೆ ಕೂಡ ಕುಮಾರಣ್ಣ ಹೀಗೆ ಗದರಿಸಿರಲಿಲ್ಲ.

ಆದರೆ ಅವರು ಮುಖ್ಯಮಂತ್ರಿಯಾದ ಮೂರನೇ ವಾರಕ್ಕೇ ಕುಮಾರಣ್ಣನ ಮಡದಿ ಅನಿತಕ್ಕ ಬ್ಯಾಟಪ್ಪನ ಭೂತ ಬಿಡಿಸುತ್ತಾರೆ. ಅದೂ ನೆರೆದ ಅಧಿಕಾರಿಗಳು ಮತ್ತು ಜನರೆದುರಿಗೆ!

ಅದು 2006ರ ಫೆಬ್ರವರಿ ಇಪ್ಪತ್ತೈದನೇ ತಾರೀಖು. ಜೆಪಿನಗರದ ಬಂಗಲೆಯಿಂದ ನೇರವಾಗಿ ರಾಮನಗರದ ಶಾಸಕರ ಭವನಕ್ಕೆ ಬಂದ ಅನಿತಕ್ಕನನ್ನು ಬರಮಾಡಿಕೊಂಡ್ದಾದರೂ ಯಾರು? ರಾಮನಗರ ನಗರಸಭೆ ಕಮೀಷನರ್ ಶಿವಣ್ಣ, ಸರ್ಕಲ್ ಇನ್‌ಸ್ಪೆಕ್ಟರ್ ಪುರುಷೋತ್ತಮ್, ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಪಾಪಣ್ಣ ಗೌಡ, ರಾಮನಗರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ. ರಾಜು, ಪ್ರಧಾನ ಕಾರ್ಯದರ್ಶಿ ಉಮೇಶ್, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷೆ ಸುಮಿತ್ರಮ್ಮ, ರಾಮನಗರ-ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ್ ಹೀಗೆ ಇಡೀ ರಾಮನಗರದ ಅತಿರಥ ಮಹಾರಥರೆಲ್ಲ ಅನಿತಕ್ಕನ ಆಗಮನಕ್ಕಾಗಿ ಕಾತರಿಸುತ್ತಿದ್ದರು.

ಅವತ್ತು ಅಕ್ಕನ ಗತ್ತೇ ಹಾಗಿತ್ತು. ಕುಮಾರಣ್ಣನ ಆಪ್ತ ಸಹಾಯಕ ನರಸಿಂಹ ಶೆಟ್ಟಿಯ ಜೊತೆ ರಾಮನಗರದ ಶಾಸಕರ ಭವನಕ್ಕೆ ಅಕ್ಕ ಕಾಲಿಡುತ್ತಿದ್ದಂತೆ ಜಯ ಘೋಷ ಮುಗಿಲು ಮುಟ್ಟಿತು. ಹೆಣ್ಣುಮಕ್ಕಳಿಗೆಂದು ಹೊಲಿಗೆ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ಅನಿತಕ್ಕನ ಅಮೃತ ಹಸ್ತದಿಂದಲೇ ಉದ್ಘಾಟಿಸಲಾಯ್ತು. ರೈತರು ವಿದ್ಯುತ್ ಸಮಸ್ಯೆಯ ಬಗ್ಗೆ ದೂರು ಕೊಟ್ಟರು. ಇನ್ನೂ ಕೆಲವರು ತಾಲ್ಲೂಕಿನಲ್ಲಿ ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ದುಮ್ಮಾನ ತೋಡಿಕೊಂಡರು.



ಕುಮಾರಣ್ಣನಂತೆ 'ಆಯ್ತು ಹೇಳ್ತೀನಿ, ಮಾಡ್ತೀನಿ' ಎನ್ನಲಿಲ್ಲ ಅನಿತಕ್ಕ. ಅಸಿಸ್ಟೆಂಟ್ ಕಮೀಷನರ್ ರುದ್ರಪ್ಪನಿಗೆ ಫೋನ್ ಮಾಡಿದ್ದೇ ಎಕ್ಕಾಮಕ್ಕಾ ಝಾಡಿಸಿಬಿಟ್ಟರು. ರುದ್ರಪ್ಪನ ಸಂಜೆ ಖಯಾಲಿಗಳ ಸಾಥಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ರಾಜು ಅದೇನೋ ತಿಪ್ಪೆ ಸಾರಿಸಲೆತ್ನಿಸಿದರೆ 'ಕಂಡಿದಿನಿ ಕೂತ್ಕೊಳ್ರೀ... ಯಾರ್‍ಯಾರು ಏನೇನು ಅಂತ ನನ್ನತ್ರ ಪೋಲೀಸ್ ಇನ್‌ಫಾರ್ಮೇಷನ್ ಇದೆ ಗೊತ್ತಾ?' ಎಂದುಬಿಟ್ಟರು.

ವಿದ್ಯುತ್ ಸಮಸ್ಯೆಗೆ ಸಂಬಂಧಪಟ್ಟಂತೆ ಬೆಸ್ಕಾಮ್ ಅಧಿಕಾರಿಗಳಿಗೆ ಫೋನಾಯಿಸಿ ಭೂತ ಬಿಡಿಸಿದರು.

ಇದು ಫೆಬ್ರವರಿ ಇಪ್ಪತ್ತೈದರ ಅನಿತಕ್ಕನ ರಾಮನಗರ ಕ್ಷೇತ್ರ ದರ್ಶನದ ಸ್ಯಾಂಪಲ್ ಮಾತ್ರ. ಇದಕ್ಕೂ ಮುನ್ನ ಫೆಬ್ರವರಿ ಆರರಂದು ಕೂಟಗಲ್ಲು ಹೋಬಳಿ ತಿಮ್ಮಸಂದ್ರ ಗ್ರಾಮಕ್ಕೆ ಬಂದು ಮಲೆ ಮಾದೇಶ್ವರ ಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನೆ ಮಾಡಿದ್ದಾರೆ. ಆವತ್ತು ಮುಖ್ಯಮಂತ್ರಿಯೇ ಬರುತ್ತಾರೆಂದು ಸ್ವತಃ ಸಿದ್ಧಗಂಗೆ ಸ್ವಾಮಿಯೇ ತಿಮ್ಮಸಂದ್ರಕ್ಕೆ ಬಂದಿದ್ದರು. ಆದರೆ ಬಂದದ್ದು ಅನಿತಕ್ಕ!

ಯಾರಿಗೂ ನಿರಾಶೆಯಾಗಲಿಲ್ಲ. ಏಕೆಂದರೆ ಕುಮಾರಣ್ಣನ ಕೈಲಾಗದ್ದು ಅನಿತಕ್ಕನಿಂದಾಗುತ್ತದೆ ಎಂಬುದು ಅನೇಕರ ನಂಬಿಕೆ. ಅದೇನೋ, ಕುಮಾರಣ್ಣನನ್ನು ಕಂಡರೆ ಬೆನ್ನು ತಿರುಗಿಸುತ್ತಿದ್ದ ರಾಮನಗರದ ಪುಢಾರಿಗಳೆಲ್ಲ ಅನಿತಕ್ಕ ಕಾಲಿಡುತ್ತಿದ್ದಂತೆ ಬಾಲಮುದುರಿ ಬರುತ್ತಿದ್ದಾರೆ. ಕುಮಾರಣ್ಣ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮರುಕ್ಷಣವೇ ಅನಿತಕ್ಕ 'ಇನ್ನು ರಾಮನಗರದ ಕುಂದು ಕೊರತೆಗಳನ್ನೆಲ್ಲಾ ನಾನೇ ನಿಭಾಯಿಸುತ್ತೇನೆ' ಎಂಬರ್ಥದ ಹೇಳಿಕೆ ಕೊಟ್ಟದ್ದು ಸುಮ್ಮನೇನಾ?

ಅಲ್ಲಿಗೆ ರಾಮನಗರದ ಉಸಾಬರಿಯನ್ನೆಲ್ಲ ಕುಮಾರ ತಮ್ಮ ಪತ್ನಿ ಅನಿತಾರ ಹೆಗಲಿಗೆ ಹಾಕಿದ್ದು ಸ್ಪಷ್ಟವಾಗಿತ್ತು. ಆ ಹೊತ್ತಿಗಾಗಲೇ ರಾಮನಗರ ನಗರಸಭೆ ಜೆಡಿಎಸ್ ಕೈತಪ್ಪಿಹೋಗಿತ್ತು. ರಾಮನಗರದಲ್ಲಿ ಕುಮಾರಣ್ಣನ ಗೆಲುವಿಗೆ ಪ್ರಮುಖ ಕಾರಣಕರ್ತರಲ್ಲೊಬ್ಬರಾದ ಯುವ ಮುಖಂಡ ಶೇಷಾದ್ರಿ, ಮಾಜಿ ರೇಷ್ಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿಯಾವುಲ್ಲಾ, ಕೌನ್ಸಿಲರ್‌ಗಳಾದ ನೂರುಲ್ಲಾ ಷರೀಫ್, ಮಹಮ್ಮದ್ ಆರಿಫ್, ಮಹೀಬ್ ಪಾಷಾ, ಇಲಿಯಾಸ್ ಪಾಷಾ, ವೇದಮೂರ್ತಿ ಮುಂತಾದವರೆಲ್ಲ ಕುಮಾರಣ್ಣನ

**ರಾ. ಸೋಮನಾಥ್**

ವಿರುದ್ಧ ಬಂಡೆದ್ದು ಜೆಡಿಎಸ್ ತೊರೆದಿದ್ದರು. ಮುಖ್ಯಮಂತ್ರಿಗೆ ತನ್ನ ಕ್ಷೇತ್ರದಲ್ಲೇ ಭಾರೀ ಹಿನ್ನಡೆಯಾಗಿತ್ತು.

ಯಾವತ್ತು ಅನಿತಕ್ಕ ರಾಮನಗರದ ಮೇಜುವಾನಿಗೆ ನಿಂತರೋ ಮುನಿಸಿಕೊಂಡು ದೂರಾದವರ ಪೈಕಿ ಕೆಲವರಾದರೂ ಅನಿತಕ್ಕನ ಮುಂದೆ ಕೈ ಕಟ್ಟಿ ನಿಂತಿದ್ದರು!

ಅದು ಅನಿತಕ್ಕನ ತಾಕತ್ತು. ಹಾಗೇ ನೋಡಿದರೆ ಇಡೀ ಗೌಡರ ಮನೆತನದಲ್ಲಿ ಯಾವೊಬ್ಬ ಹೆಣ್ಣುಮಕ್ಕಳೂ ಈ ರೀತಿ ಸಾರ್ವಜನಿಕ ರಂಗಕ್ಕೆ ಕಾಲಿಟ್ಟದ್ದಿಲ್ಲ. ದೇವೇಗೌಡರ ಧರ್ಮಪತ್ನಿ ಚೆನ್ನಮ್ಮ ಅದ್ಯಾವತ್ತೂ ಅಡಿಗೆ ಮನೆಬಿಟ್ಟು ಬರಲಿಲ್ಲ. ಮಗಳು ಶೈಲಜ, ರೇವಣ್ಣನ ಪತ್ನಿ ಭವಾನಿಯವರ ಹೆಸರುಗಳು ಅಲ್ಲಲ್ಲಿ ಕೇಳಿ ಬರುತ್ತಾದರೂ ಹೀಗೆ ಅನಿತಕ್ಕನಂತೆ ಅವರ್‍ಯಾರೂ ಬಹಿರಂಗ ಚರ್ಚೆಗೀಡಾಗಿದ್ದಿಲ್ಲ. ಅನಿತಕ್ಕ ದೇವೇಗೌಡರ ಮನೆತನದ ಸಂಪ್ರದಾಯವನ್ನು ಮುರಿದ ಮೊದಲ ಹೆಣ್ಣುಮಗಳು.

ಡಾ. ಟಿ.ಎಸ್. ಸೀತಾರಾಮ್ ಹಾಗೂ ವಿಮಲಾ ದಂಪತಿಗಳ ಪುತ್ರಿ ಟಿ.ಎಸ್. ಅನಿತಾ ಕುಮಾರಸ್ವಾಮಿಯ ಕೈ ಹಿಡಿದದ್ದು 1987-88 ರಲ್ಲಿ. ಆ ಹೊತ್ತಿಗಾಗಲೇ ಅನಿತಾ ಒಕ್ಕಲಿಗರ ಸಂಘದ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (BIT) ಬಿ.ಇ.ಪದವಿಧರೆ. ಕೆಲಸಕ್ಕೆ ಸೇರಿದ್ದರೆ ಯಾವುದಾದರೂ ಮಲ್ಟಿ ನ್ಯಾಷನಲ್ ಕಂಪೆನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರಬೇಕಿತ್ತು. ತಂದೆ ಸೀತಾರಾಮ್ ರಾಮನಗರ-ಚನ್ನಪಟ್ಟಣ ಮತ್ತು ಜಯನಗರದ ಸಂಜಯ್ ಗಾಂಧಿ ಆಸ್ಪತ್ರೆಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದರು. ಆ ಹೊತ್ತಿಗೆ ಹೆಗಡೆ ಕ್ಯಾಬಿನೆಟ್‌ನಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ದೇವೇಗೌಡರಿಗೆ ಡಾ.ಸೀತಾರಾಮ್ ಪರಿಚಯವಾಗಿದ್ದು ಆದಿಚುಂಚನಗಿರಿ ಮಠದಲ್ಲಿ.



ರಾಮನಗರದ ಮಹಿಳೆಯರ ಮಧ್ಯೆ ಅನಿತಕ್ಕ!

ಮೂಲತಃ ಸಜ್ಜನರಾದ ಡಾ. ಸೀತಾರಾಮ್ ಬೀಗತನಕ್ಕೆ ದೇವೇಗೌಡರು ಹಾತೊರೆದದ್ದಕ್ಕೂ ಕಾರಣವಿತ್ತು. ಮುಂದೊಮ್ಮೆ ತಾವು ಒಕ್ಕಲಿಗ ಸಮುದಾಯದ ನಾಯಕ ಎನಿಸಿಕೊಳ್ಳಬೇಕಾದರೆ ತಮ್ಮ ಮಕ್ಕಳಿಗೆ ಒಂದೊಂದು ಒಕ್ಕಲಿಗ ಉಪಜಾತಿಯಿಂದ ಹೆಣ್ಣು ತಂದುಕೊಳ್ಳಬೇಕೆಂಬ ತಂತ್ರವೊಂದು ಗೌಡರ ತಲೆ ಹೊಕ್ಕಿತ್ತು. ಡಾ. ಸೀತಾರಾಮ್ 'ಮರಸು' ಒಕ್ಕಲಿಗರಾದ್ದರಿಂದ ಪ್ರಾರಂಭದಲ್ಲಿ ಪತ್ನಿ ಚೆನ್ನಮ್ಮಾಜಿ 'ದಾಸ' ಒಕ್ಕಲಿಗರಾದ ತಮಗಿದು ಸಲ್ಲದೆಂದು ತಕರಾರೆತ್ತಿದರಾದರೂ ಅಂತಿಮವಾಗಿ ದೇವೇಗೌಡರ ಹಠವೇ ಗೆದ್ದಿತ್ತು. ತಮ್ಮ ಮೂರನೇ ಮಗ ಕುಮಾರಸ್ವಾಮಿಗೆ ಅನಿತಾರನ್ನು ತಂದುಕೊಳ್ಳುವ ಮೂಲಕ ದೇವೇಗೌಡ ಒಕ್ಕಲಿಗರ ಐಕ್ಯತೆಗೂ ತಮ್ಮ ರಾಜಕೀಯದ ಆಶಾಗೋಪುರಕ್ಕೂ ಭದ್ರ ಬುನಾದಿಯನ್ನೇ ಹಾಕಿದ್ದರು.

ಆಗಿನ್ನೂ ಕುಮಾರಣ್ಣ ದೇವೇಗೌಡರ ಆಸ್ಥಾನದಲ್ಲಿ ಪ್ರಮುಖನಾಗಿರಲಿಲ್ಲ. ಗಾಂಧಿನಗರದಲ್ಲೊಂದು ಫಿಲ್ಮ್ ಡಿಸ್ಟ್ರಿಬ್ಯೂಷನ್ ಆಫೀಸ್ ಬಿಟ್ಟರೆ ಕುಮಾರಣ್ಣನಿಗೆ ಬೇರೇನಿರಲಿಲ್ಲ. ಇಂಥ ಸ್ಥಿತಿಯಲ್ಲಿ ದೇವೇಗೌಡರು ಕುಮಾರಣ್ಣನಿಗೆಂದು ಬಿಡದಿಯಲ್ಲಿ ಇಪ್ಪತ್ತೆಕರೆ ತೋಟ ಕೊಡಿಸಿದ್ದರು. 1989 ರಲ್ಲಿ ತಮ್ಮದೇ ಎಸ್.ಜೆ.ಪಿ. ಪಕ್ಷ ಕಟ್ಟಿ ಹೀನಾಯವಾಗಿ ಸೋತು ನೆಲ ಕಚ್ಚಿದ ದೇವೇಗೌಡರನ್ನು ಕಂಡರೆ ಅವರ ಇಡೀ ಕುಟುಂಬವೇ ಮೂಗು ಮುರಿಯುತ್ತಿತ್ತು. ರೇವಣ್ಣ ಹೊಳೆನರಸಿಪುರದಲ್ಲಿ ತನ್ನ ಪಾಡಿಗೆ ತಾನಿದ್ದುಬಿಟ್ಟಿದ್ದ. ಹಿರಿಯ ಮಗ ಬಾಲಕೃಷ್ಣಗೌಡ ಸಂಸಾರ

## ಗಾಳಿ ಬಂದಾಗ ತೂರಿಕೊಳ್ಳದಿದ್ದರೆ?

ಅನಿತಕ್ಕನನ್ನು ಕೆಲವರು ಪ್ರೇಮಾ ಕೃಷ್ಣರಿಗೆ ಹೋಲಿಸುವುದುಂಟು. ಇನ್ನೂ ಕೆಲವರು ವೀರಪ್ಪ ಮೊಯ್ಲಿ ಪತ್ನಿ ಮಾಲತಿಯವರಿಗೆ ಹೋಲಿಸುತ್ತಾರೆ. ಎರಡೂ ತಪ್ಪೇ!

ಪ್ರೇಮಾ ಕೃಷ್ಣ ಅದೆಷ್ಟೇ ಸುಸಂಸ್ಕೃತರಂತೆ ಕಂಡರೂ ನಫೀಸಾ ಫಜಲ್ ಥರದವರ ಜೊತೆ ಇಸ್ಪೀಟ್-ಶಾಪಿಂಗ್ ಖಯಾಲಿಯಿತ್ತು. ಕೃಷ್ಣರನ್ನು ಗದರಿಯೇ ಲ್ಯಾಂಡ್ ಡೀನೋಟಿಫೈ, ಅಧಿಕಾರಿಗಳ ವರ್ಗಾವರ್ಗಿ ನಡೆಸುತ್ತಿದ್ದರು. ಮಾಲತಿ ವೀರಪ್ಪ ಮೊಯ್ಲಿಗೆ ಇಂಥ ಖಯಾಲಿಗಳಿಲ್ಲದಿದ್ದರೂ ತಮ್ಮದೇ ಭ್ರಷ್ಟ ಅಧಿಕಾರಿಗಳ ನೆಟ್‌ವರ್ಕುಗಳಿದ್ದವು. ದುಡ್ಡಿನ ಹಪಾಹಪಿಯಿತ್ತು.

ಆದರೆ ಪ್ರಭಾವತಿ ಧರ್ಮಸಿಂಗ್ ಹಾಗಲ್ಲ. ತಾವಾಯಿತು ಅಡಿಗೆ ಮನೆಯಾಯಿತು ಎಂಬಂತಿದ್ದು ಬದುಕುತ್ತಿದ್ದರು. ವಿಂಡ್ಸರ್ ಮ್ಯಾನರ್ ಎದುರಿನ ಟ್ರಾಫಿಕ್ ಸಿಗ್ನಲ್ ಕಾಯುವ ಪೋಲೀಸ್ ಪೇದೆಗಳನ್ನು ಕರೆದು ಭಕ್ಷೀಸು ಕೊಟ್ಟು ಊಟ ಮಾಡಿಸುತ್ತಿದ್ದ ಪ್ರಭಾವತಿ ಯಾವತ್ತೂ ಅಧಿಕಾರಕ್ಕೆ ಕೈ ಹಾಕಲಿಲ್ಲ. ಹಾಗೇ ಜೆ.ಎಚ್. ಪಟೇಲ್ ಪತ್ನಿ ಸರ್ವಮಂಗಳಮ್ಮ. ಆಕೆ ಎಂಥಾ ದಯಾಮಯಿ ಎಂದರೆ ಮನೆ ಕಾಯುವ ವಾಚ್‌ಮನ್‌ನಿಂದ ಹಿಡಿದು ಬೀದಿಯಲ್ಲಿನ ಭಿಕ್ಷುಕನ ತನಕ ಆತ ಊಟ ಮಾಡಿದ್ದಾನಾ ಎಂದು ತಿಳಿದ ನಂತರವೇ ತಾವು ಊಟ ಮಾಡುತ್ತಿದ್ದರು. ಇದೇ ಸಾಲಿಗೆ ಸೇರುವ ಮತ್ತೊಬ್ಬರೆಂದರೆ ವೀರೇಂದ್ರ ಪಾಟೀಲರ ಪತ್ನಿ. ರೊಟ್ಟಿ ತಟ್ಟದ್ದು ಬಿಟ್ಟರೆ ಎಂದೂ ಹೊರಗೆ ಕಾಣಿಸಿಕೊಂಡವರಲ್ಲ. ಬಂಗಾರಪ್ಪನವರ ಪತ್ನಿ ಶಕುಂತಲಮ್ಮ ಕೂಡ ದೇವರು, ದಾನ, ಧರ್ಮದಲ್ಲೇ ಕಾಲ ಕಳೆದರು.

ಗುಂಡೂರಾವ್ ಪತ್ನಿ ವರಲಕ್ಷ್ಮಿ ಮತ್ತು ಹೆಗಡೆ ಪತ್ನಿ ಶಕುಂತಲಾ ಇಬ್ಬರದೂ ಒಂದೇ ಕರ್ಮ. ತಮ್ಮ ಗಂಡಂದಿರನ್ನೂ ನಿಯಂತ್ರಿಸಲಿಲ್ಲ, ಅಧಿಕಾರಕ್ಕೂ ಕೈ ಹಾಕಲಿಲ್ಲ, ಕನಿಷ್ಠ ಮಕ್ಕಳನ್ನೂ ನಿಯಂತ್ರಿಸಲಿಲ್ಲ. ಆದರೆ ಅನಿತಕ್ಕ ಹಾಗಲ್ಲ, ಆಕೆಗೆ ಗಂಡನ ಮೇಲೆ ಬಿಗಾಯಿಸಿದ ನಿಯಂತ್ರಣವಿದೆ. ಅದು ಅಧಿಕಾರಕ್ಕಷ್ಟೇ ಅಲ್ಲದೆ ತನ್ನ ಸಂಸಾರದ ಹಿತಕ್ಕೆಂಬುದು ಸ್ವತಃ ಕುಮಾರಣ್ಣನಿಗೆ ಮನದಟ್ಟಾಗಿದೆ. ಅನಿತಕ್ಕನಿಗೆ ರಾಜಕೀಯ ಬೇಕಿಲ್ಲ, ಆದರೆ ಗಾಳಿ ಬಂದಾಗ ತೂರಿಕೊಳ್ಳಬೇಕಲ್ಲ, ಅದಕ್ಕೆ ಅನಿತಕ್ಕ ಕೂಡ ಹೊರಟೇಸಲ್ಲ.



ಪ್ರಭಾವತಿ ಧರ್ಮಸಿಂಗ್



ಪ್ರೇಮಾ ಕೃಷ್ಣ




ಶಕುಂತಲಾ ಹೆಗಡೆ

# ಅಕ್ಕನ ಕೈಯಲ್ಲಿ ಟ್ರಾನ್ಸ್‌ಫರ್ ಪಟ್ಟಿ!

ಶುರುವಿನಿಂದಲೂ ದೇವೇಗೌಡರ ಮನೆಯಲ್ಲಿ ಎರಡು ಪಾರ್ಟಿ. ಒಂದು ಅತ್ತೆ ಚೆನ್ನಮ್ಮಾಜಿಯರಾದರೆ ಮತ್ತೊಂದು ಅನಿತಕ್ಕನದು. ಪ್ರಾರಂಭದಿಂದಲೂ ಚೆನ್ನಮ್ಮ ರೇವಣ್ಣನ ಪರವಾದರೆ ದೇವೇಗೌಡರಿಗೆ ಕುಮಾರಣ್ಣ ಮುದ್ದಿನ ಮಗ. ಅನಿತಕ್ಕನಿಗೆ ಕೊಂಚ ಸ್ವಪ್ರತಿಷ್ಠೆ ಜಾಸ್ತಿ, ಹಾಗಂಥ ಜಗಳಗಂಟಿಯಲ್ಲ, ತನ್ನ ಗಂಡ ಯಾವತ್ತಿಗೂ ತನ್ನ ಅಂಕೆಯಲ್ಲೇ ಇರಬೇಕೆಂಬ ಸ್ವಾರ್ಥದ ಹೊರತಾಗಿ ತಾನು ಅಧಿಕಾರಕ್ಕೆ ಬರಬೇಕು, ದರ್ಬಾರು ಮಾಡಬೇಕೆಂಬ ದುರಾಶೆಗಳಿಲ್ಲ.

ಪ್ರಾರಂಭದಲ್ಲಿ ನಾಗಮಂಗಲದ ಶಿವರಾಮೇಗೌಡರ ಪತ್ನಿ ಸುಧಾ ಅನಿತಕ್ಕನಿಗೆ ಆಪ್ತರಾಗಿದ್ದರು. ಆನಂತರ ಸ್ಲಂ ರಮೇಶ್ ಪತ್ನಿ ಹೇಮಲತಾ ಗೆಳತಿಯಾದರು. ಅನಿತಾ-ಹೇಮಲತಾ ಸೇರಿ ತಮಿಳು ಸಿನಿಮಾ ಮಾಡುವ ಮಾತಿತ್ತು. ಸ್ಲಂ ರಮೇಶ್ ಇದನ್ನೇ ಬಳಸಿಕೊಂಡು ಕುಮಾರಣ್ಣನಿಗೆ ಲಕ್ಷಗಟ್ಟಲೇ ಕೈ ಎತ್ತಿದ ಮೇಲೆ ಅನಿತಕ್ಕ ಹೇಮಲತಾಳನ್ನು ಹೊರಗಟ್ಟಿದರು. ಶಿವರಾಮೇಗೌಡ ಕಾಂಗ್ರೆಸ್ ಸೇರಿ ಆ ಜಾಗಕ್ಕೆ ಚೆಲುವರಾಯಸ್ವಾಮಿ ಬಂದ ಮೇಲೆ ಅನಿತಕ್ಕನ ಕ್ಯಾಬಿನೆಟ್ಟಿಗೆ ಮಾಜಿ ಗಣಿ ಮಂತ್ರಿ ಜಯರಾಮ್ ಪತ್ನಿ ಪ್ರಭಾವತಿ ಜಯರಾಮ್ ಕಾಲಿಟ್ಟರು. ಸದ್ಯ ಅಂಥ ಯಾವ ಹೆಂಗಸರೂ ಅನಿತಕ್ಕನ ಹಿಂದಿಲ್ಲ, ಮಿಕ್ಕಂತೆ ಅನಿತಕ್ಕನನ್ನು ಕಂಡು ಸಣ್ಣಪುಟ್ಟ ಕೆಲಸ ಮಾಡಿಸಿಕೊಳ್ಳುತ್ತಿದ್ದದ್ದು ಕುಮಾರಣ್ಣನ ಬೆಂಬಲಿಗರೆ. ಈಗಲೂ ಅಷ್ಟೇ. ಯಾರಿಗೆಲ್ಲ ಕುಮಾರಣ್ಣನ ಭೇಟಿ ಸಾಧ್ಯವಿಲ್ಲವೋ ಅವರೆಲ್ಲ ಬೆಳ್ಳಂಬೆಳಿಗ್ಗೆಯೇ ಅನಿತಕ್ಕನ ದರ್ಶನಕ್ಕೆ ಸಾಲುಗಟ್ಟಿ ನಿಲ್ಲುತ್ತಾರೆ.

ಅಷ್ಟಕ್ಕೂ ಮುಖ್ಯಮಂತ್ರಿ ಕುಮಾರಣ್ಣನ ಆಪ್ತ ಸಹಾಯಕ ರಂಗಸ್ವಾಮಿ ಅನಿತಕ್ಕನಿಗೇ ಹೆಚ್ಚು ನಿಷ್ಠಾವಂತ. ಗೊಟ್ಟಿಗೆರೆ ಮಂಜು ಥರದ ಕುಮಾರಣ್ಣನ ಬಂಟರಂತೂ ಪೊಲೀಸ್ ವರ್ಗಾವರ್ಗಿಯ ಪಟ್ಟಿಯನ್ನೇ ಅನಿತಕ್ಕನ ಕೈಗೊಪ್ಪಿಸಿದ್ದಾರಂತೆ. ಇಂಥಾ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನೇ ಹಾಕಿಸಿಕೊಳ್ಳಿ ಎಂದು ಕೆಲ ಎಮ್ಮೆಲ್ಲೆಗಳಿಗೆ ಅನಿತಕ್ಕ ಫೋನ್ ಕೂಡ ಮಾಡಿದ್ದಾರಂತೆ. ಕಾಲ ಮತ್ತು ಪರಿಸ್ಥಿತಿಗಳು ಹೇಗೆ ಗೃಹಿಣಿಯೊಬ್ಬಳನ್ನು ಮಾರ್ಪಡಿಸಿಬಿಡುತ್ತದೆ ಎಂಬುದಕ್ಕೆ ಅನಿತಕ್ಕ ಈಗ ತಾಜಾ ಉದಾಹರಣೆಯಂತಿಲ್ಲವೆ?


ಇನ್ಸ್‌ಪೆಕ್ಟರ್ ಪುರುಷೋತ್ತಮ್, ಕೆ. ರಾಜು ಜೊತೆ ಅನಿತಕ್ಕ

ಪತ್ರಯದಲ್ಲಿ ಬಿಜಿಯಾಗಿದ್ದ. ದಿನಂತೆ ಅಧಿಕಾರ, ಜನಸಾಗರ ಾವುದೂ ಇಲ್ಲದೇ ತತ್ತರಿಸಿದ್ದ ವೇಗೌಡರಿಗೆ ಖರ್ಚಿಗೆಂದು ತ್ತಿಪ್ಪತ್ತು ಸಾವಿರ ಕೊಡುವ ಟ್ಟಕ್ಕೆ ಕುಮಾರಸ್ವಾಮಿ ಬೆಳೆದು ತಿದ್ದು ಅಚ್ಚರಿ ಹುಟ್ಟಿಸಿತ್ತು. ಗಿಂತಲೂ ವಿದ್ಯಾವಂತನಲ್ಲದ, ೇನೂ ಆಗಿರದ ಮಾರಣ್ಣನನ್ನು ಆ ಮಟ್ಟಕ್ಕೆ ರೆಡಿ ಾಡಿದ್ದೇ ಅನಿತಕ್ಕ. ಕಜವಾಗಿಯೇ ಮಾರಸ್ವಾಮಿಯ ಪ್ರಾಮುಖ್ಯತೆ ಚ್ಚಿತ್ತು. ಹಾಗೇ ಗೌಡರ ಕುಟುಂಬದಲ್ಲಿ ಅನಿತಕ್ಕನ ನಮಾನವೂ ವೃದ್ಧಿಸಿತ್ತು, ಅಲ್ಲಿಯ ತನಕ ಅನಿತಕ್ಕನಿಗೂ ತ್ತೆ ಚೆನ್ನಮ್ಮಾಜಿಗೂ ಅಷ್ಟಕ್ಕಷ್ಟೇ. ರೇವಣ್ಣನ ಪತ್ನಿ ವಾನಿ ಮತ್ತು ಮಗಳು ಶೈಲಜ ಚೆನ್ನಮ್ಮಾಜಿಗೆ ಪ್ತರಾದರೆ ಅನಿತಕ್ಕನದು ಶುರುವಿನಿಂದಲೂ ತನ್ನದೇ ರಿ. ತಾನಾಯಿತು ತನ್ನ ಮನೆಯಾಯಿತು ಎಂಬಂಥ ಕ್ತಿತ್ವ. ಯಾರೊಂದಿಗೂ ಹೆಚ್ಚು ಬೆರೆತವರಲ್ಲ. ಮಾರಣ್ಣನ ಜೊತೆ ಬಹಿರಂಗವಾಗಿ ಕಾಣಿಸಿಕೊಂಡದ್ದೂ ್ಮ. 1994 ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾ ತ್ತಿದ್ದಂತೆ ಕುಮಾರಣ್ಣ ಲೋಕಸಭಾ ಸದಸ್ಯನಾದ. ದಿನಕ್ಕೇ ದೇವೇಗೌಡರಿಗೆ ಪ್ರಧಾನಿ ಪಟ್ಟದ ಅದೃಷ್ಟ ಯಿತು. ಆಗ ಮೊದಲು ಬಾರಿಗೆ ಅನಿತಕ್ಕನ ಹೆಸರು ಳಿಬಂತು.

ಬಡ ನಿರುದ್ಯೋಗಿ ಎಂದು ಸುಳ್ಳು ಪ್ರಮಾಣ ್ರ ಕೊಟ್ಟು ತಮ್ಮ ಸೊಸೆಗೇ ದೇವೇಗೌಡರು ಟ್ರೋಲ್ ಬಂಕ್ ಮಂಜೂರು ಮಾಡಿಸಿಕೊಂಡಿದ್ದಾ ದು ಗೌಡರ ಬದ್ಧವೈರಿ ವೆಂಕಟಗಿರಿಗೌಡರು ಬ್ಬಿಯಿಟ್ಟಿದ್ದರು. ಹಕೀಕತ್ತೇನೆಂದರೆ ಅನಿತಕ್ಕನ ಹೆಸರಲ್ಲಿ ಟ್ರೋಲ್ ಬಂಕ್ ಮಂಜೂರಾಗಿದ್ದು 1991 ರಲ್ಲಿ, ನರಸಿಂಹರಾಯರು ಪ್ರಧಾನಿಯಾಗಿದ್ದರು. ವಿವಾದ ಯುತ್ತಿದ್ದು ದೇವೇಗೌಡರು ಪ್ರಧಾನಿಯಾದ ಮೇಲೆ. ತಮ್ಮ ಹೆಸರಿಗೆ ಪೆಟ್ರೋಲ್ ಬಂಕ್ ಪಡೆದಿದ್ದ ತಾ ಮೇಡಂಗೆ ನಂತರ ನಡೆದ ವಿಚಾರಣೆ ಮುಜುಗರ ಡಿತ್ತು. ಬಿ.ಇ., ಓದಿರುವ ತಾನು ನಿರುದ್ಯೋಗಿಯಾಗಿ ಂದ ಜೀವನ ನಿರ್ವಹಣೆಗೆಂದು ಪೆಟ್ರೋಲ್ ಬಂಕ್ ಪಡೆದುಕೊಂಡೆ ಎಂಬ ಮಹಾನ್ ಸತ್ಯವನ್ನು ಕೋರ್ಟ್ ಮುಂದೆ ಹೇಳಿದ್ದರು ಅನಿತಾ ಮೇಡಂ. ಆದರೆ ಕೋರ್ಟ್ ಬಿ.ಇ., ಪಡೆದರೂ ಸಿಲಿಕಾನ್ ವ್ಯಾಲಿ ಬೆಂಗಳೂರಿನಲ್ಲಿ ಕೆಲಸ ಸಿಗಲಿಲ್ಲ ಎಂಬುದನ್ನು ನಂಬುವುದೇ ಕಷ್ಟ ಎಂಬ ಪ್ರಶ್ನೆ ಹಾಕಿತ್ತು. ಮುಂದೆ ಅನಿತಾರ ಪೆಟ್ರೋಲ್ ಬಂಕ್‌ನ್ನು ಹರಾಜು ಹಾಕುವಂತೆ ಕೋರ್ಟ್ ಆದೇಶಿಸಿತ್ತು. ಆಗ ರೆಡ್ಡಿ ವೀರಣ್ಣನೆಂಬ ಗಂಗಾವತಿ ಮೂಲದ ಕಂಟ್ರಾಕ್ಟರ್ ಕುಳ "ಮೇಡಂ ಎಷ್ಟಾದರೂ ಹಣ ಹೋಗಲಿ, ಹರಾಜಿನಲ್ಲಿ ಆ ಪೆಟ್ರೋಲ್ ಬಂಕ್‌ನ್ನು ನಿಮ್ಮ ಪರವಾಗಿ ನಾವೇ ಪಡೆದುಕೊಳ್ಳುತ್ತೇವೆ...." ಎಂದು ವೀರಾವೇಶ ಪ್ರದರ್ಶಿಸಿ ಗೌಡರ ಕುಟುಂಬದ ಪರ ತನ್ನ ನಿಷ್ಠೆ ಪ್ರದರ್ಶಿಸಿದ್ದ.

'ದೇವೇಗೌಡರ ಪೆಟ್ರೋಲ್ ಬಂಕ್' ಎಂದೇ ಕರೆಸಿಕೊಳ್ಳುವ ಅನಿತಾ ಮೇಡಂರ ಬಂಕ್ ಈಗ ಚೆನ್ನಾಗೇ ವ್ಯಾಪಾರ ಮಾಡುತ್ತಿದೆ.

ಅನಿತಕ್ಕನ ತಮ್ಮ ಕೃಷ್ಣ ಕುಮಾರಣ್ಣನ ಇಡೀ ಸಿನಿಮಾ ವ್ಯವಹಾರವನ್ನು ನಿಭಾಯಿಸತೊಡಗಿದ. ನ್ಯಾಷನಲ್ ಟ್ರಾವೆಲ್ಸ್ ಜಮೀರ್ ಥರದವರು ಪ್ರತಿನಿತ್ಯ ಅನಿತಕ್ಕನಿಗೆ ನಮಸ್ಕಾರ ಹಾಕಿಯೇ ಕುಮಾರಣ್ಣನಿಗೆ ಆಪ್ತರಾದರು. ಕಬ್ಬಡಿ ಬಾಬು, ಕಂಟ್ರಾಕ್ಟರ್ ಗೋಪಾಲ್, ಆರಾಧ್ಯರಂಥ ಡೀಲರುಗಳೆಲ್ಲ ಇವತ್ತು ಕುಮಾರಣ್ಣನ ಸುತ್ತ ಕಂಗೊಳಿಸುತ್ತಾರೆಂದರೆ ಅದು ಅನಿತಕ್ಕನ ಕೃಪೆಯೇ ಹೊರತು ಮತ್ತೇನಲ್ಲ. ಕುಮಾರಣ್ಣ ಅನಿತಕ್ಕ ಹಾಕಿದ ಗೆರೆ ದಾಟೋಲ್ಲ ಎಂಬುದು ಪ್ರತಿಯೊಬ್ಬರಿಗೂ ಗೊತ್ತು. ಅದಕ್ಕೇ ಅಕ್ಕನಿಗೆ ಜೈಕೂಗುತ್ತಿದ್ದಾರೆ. ಅಣ್ಣನಿಂದಾಗದ ಕೆಲಸ ಅಕ್ಕನಿಂದಾಗುತ್ತದೆಯಂತೆ. ಬೆಂಗಳೂರಿನ ಎಲ್ಲೆಂದರಲ್ಲಿ ಕುಮಾರಣ್ಣನ ಜೊತೆ ದೇವೇಗೌಡರನ್ನೇ ಕೈಬಿಟ್ಟು ಅನಿತಕ್ಕನ ಕಟೌಟ್‌ಗಳು ವಿಜೃಂಭಿಸುತ್ತಿವೆಯೆಂದರೆ ಅದು ಅಕ್ಕನ ವರ್ಚಸ್ಸಲ್ಲದೇ ಮತ್ತೇನು?


ಅತ್ತ ಅಣ್ಣನ ಮಹಿಮೆಯಾದರೆ ಇತ್ತ ಅಕ್ಕನ ಲೀಲೆ ಶುರುವಾಗಿದೆ. ಎಲ್ಲಿಗೆ ಬಂದು ಮುಟ್ಟುತ್ತೊ ಬಲ್ಲವರಾರು?


ಅನಿತಕ್ಕನ ಕಟೌಟ್

ಕನಕಗೋಪುರ-ಬಾಬಾಬುಡನ್‌ಗಿರಿ


# ಚೆಡ್ಡಿಗಳಿಗೆ ಶರಣಾದ ಕುಮಾರಸ್ವಾಮಿ

ಇದು ಅನಿರೀಕ್ಷಿತ ಬೆಳವಣಿಗೆಯೇನಲ್ಲ, ಹೊಸ ಸಮ್ಮಿಶ್ರ ಸರ್ಕಾರದ ಬಿಜೆಪಿಯ ಅಸಲಿ ಕೋಮುವಾದ ಹಾಗೂ ಕುಮಾರಸ್ವಾಮಿಯ ನಕಲಿ ಜಾತ್ಯತೀತತೆಯ ಮುಖವಾಡಗಳು ಈಗ ಕಳಚಿ ಬೀಳುತ್ತಿವೆ.



ಕರ್ನಾಟಕದಲ್ಲಿ ಕೋಮುವಾದಿ ಸಂಘ ಪರಿವಾರದವರು ಹುಟ್ಟು ಹಾಕಿರುವ ಕನಕಗೋಪುರ ಹಾಗೂ ಬಾಬಾಬುಡನ್‌ಗಿರಿ ವಿವಾದದಲ್ಲಿ ಈಗ ಚೆಡ್ಡಿಗಳ ಇಷ್ಟಾನುಸಾರವೇ ಘಟನೆಗಳು ನಡೆಯುತ್ತಿವೆ.

ಒಂದೆಡೆ ಗುಜರಾತಿನ ನರಹಂತಕ "ನರೇಂದ್ರ ಮೋದಿಯೇ ನನ್ನ ಆದರ್ಶ ನಾಯಕ" ಎಂಬ ನೀಚ ಹೇಳಿಕೆ ಕೊಟ್ಟಿರುವ ಚೆಡ್ಡಿ ಚತುರ ನಾಗರಾಜ ಶೆಟ್ಟಿಯೇ ಈಗ ಕುಮಾರಸ್ವಾಮಿ ಮಂತ್ರಿಮಂಡಲದಲ್ಲಿ ಮುಜರಾಯಿ ಮಂತ್ರಿ. ಮತ್ತೊಂದೆಡೆ ಪೇಜಾವರ ಶಿಷ್ಯ, ಭ್ರಷ್ಟಾತಿಭ್ರಷ್ಟ ಚೆಡ್ಡಿ ಬಿ.ಶ್ಯಾಂ ಭಟ್ಟನೇ ಈಗ ಮುಜರಾಯಿ ಕಮೀಷನರ್ ಆಗಿ ನೇಮಕಗೊಂಡಿದ್ದಾನೆ.




ಈ ಇಬ್ಬರೂ ಹಾರ್ಡ್‌ಕೋರ್ ಚೆಡ್ಡಿಗಳು ಜೊತೆಗೂಡಿ ಈಗ ಕುರುಬರು, ಹಿಂದುಳಿದವರು, ಮುಸ್ಲಿಮರ ಧಾರ್ಮಿಕ ನಂಬಿಕೆ ಹಾಗೂ ಶ್ರದ್ಧೆಗಳ ವಿರುದ್ಧ ವ್ಯವಸ್ಥಿತವಾಗಿ ಪಿತೂರಿ ಆರಂಭಿಸಿದ್ದಾರೆ. ಉಡುಪಿಯ ಕನಕಗೋಪುರ ವಿಚಾರದಲ್ಲಿ ಅಷ್ಟಮಠಗಳಿಗೆ ಸೈಲೆಂಟಾಗಿ ನೆರವಾಗಲು ಇವರು ಕಾಯ್ದೆ-ಕಾನೂನು, ನೀತಿ-ನಿಯಮಾವಳಿಗಳನ್ನೇ ಬುಡಮೇಲು ಮಾಡುತ್ತಿದ್ದಾರೆ.

ಉಡುಪಿ ಕೃಷ್ಣ ದೇವಸ್ಥಾನವು ಸಾರ್ವಜನಿಕ ದೇವಾಲಯ ಎಂಬುದಾಗಿ ಧಾರ್ಮಿಕ ದತ್ತಿ ಇಲಾಖೆಯ ದಾಖಲೆಗಳಿಂದ ಈ ಹಿಂದಿನ ಕೋರ್ಟು ಕೇಸುಗಳ ತೀರ್ಮಾನದಿಂದ ಈಗಾಗಲೇ ಸಾಬೀತಾಗಿದೆ. ಇದರ ವಿರುದ್ಧ ಈಗ ಪೇಜಾವರ ಸ್ವಾಮಿ ಉಡುಪಿ ಸಿವಿಲ್ ಕೋರ್ಟಿನಲ್ಲಿ ಒಂದು ತಡೆಯಾಜ್ಞೆ ತಂದಿದ್ದಾರೆ. ಈ ಸ್ಟೇ ಆರ್ಡರ್ ತೆರವು ಮಾಡಿಸಲು ಪ್ರಯತ್ನಿಸಬಾರದೆಂಬ ಅರ್ಥ ಬರುವ ಪತ್ರವೊಂದನ್ನು ಕಾನೂನು ಇಲಾಖೆಯ ಅಧೀನ ಕಾರ್ಯದರ್ಶಿ ವಿನೀತಾ ಪಿ. ಶೆಟ್ಟಿ ದಿನಾಂಕ 24.8.05ರಂದು ಉಡುಪಿ ಡಿಸಿ ಶ್ಯಾಂಭಟ್ಟನಿಗೆ ಕಳಿಸಿದ್ದರು. ಆದರೆ ಆಗಿನ ಕಾನೂನು ಸಚಿವ ಎಚ್.ಕೆ. ಪಾಟೀಲರಿಗೇ ಈ ವಿಚಾರ ಗೊತ್ತಿರಲಿಲ್ಲ, ಕೊನೆಗೆ ವಕೀಲ ಲಕ್ಷವಳ್ಳಿ ಮಂಜುನಾಥ್ ಈ ವಿಷಯ ಪತ್ತೆ ಮಾಡಿ ದೂರು ನೀಡಿದಾಗ ವಿನೀತಾ ಬಗ್ಗೆ ಇಲಾಖಾ ತನಿಖೆ ನಡೆಸಲಾಗಿದೆ. ಆದರೆ ಈಗ ಆ ತನಿಖಾ ವರದಿಯೇ ನಾಪತ್ತೆಯಾಗುವಂತೆ ಮಾಡಲಾಗಿದೆ. ಕೇಸ್‌ಗೆ ಸಂಬಂಧಿಸಿದಂತೆ ಸರ್ಕಾರಿ ವಕೀಲರು ಬೇಕಾಬಿಟ್ಟಿಯಾಗಿ ನಡೆದುಕೊಳ್ಳುತ್ತಿರುವುದಂತೂ ಉದ್ದೇಶಪೂರ್ವಕ ಎಂಬುದು ಈಗಾಗಲೇ ಗೊತ್ತಾಗಿದೆ.

ಇನ್ನು ಕನಕಗೋಪುರ ಕೆಡವಿದ ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮಿ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ವಿಚಾರದಲ್ಲೂ 'ಕೋ-ಜಾ' ಸರ್ಕಾರ ಮುಂದಾಗುತ್ತಿಲ್ಲ.

ಉಡುಪಿ ಶ್ರೀ ಕೃಷ್ಣ ದೇವಾಲಯಕ್ಕೆ ಉಚ್ಚ ನ್ಯಾಯಾಲಯದ ಆದೇಶದಿಂದ ಆಡಳಿತಾಧಿಕಾರಿಯನ್ನು ನೇಮಿಸಲು ಈಗ ಇರುವ ಒಂದೇ ಅಡೆತಡೆಯೆಂದರೆ ಅಷ್ಟಮಠಗಳು ಉಡುಪಿ ಸಿವಿಲ್ ಕೋರ್ಟಿನಲ್ಲಿ ತಂದಿರುವ ತಡೆಯಾಜ್ಞೆ.

ಆದರೆ ಜಾತ್ಯತೀತತೆ ಅಂದರೇನೆಂದು ಗೊತ್ತಿರದ ಹುಂಬ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಸಂಘಪರಿವಾರದವರು ಹಿಂದೂ ಕೋಮುವಾದದ ರಾಮರಸವನ್ನು ಅರೆದು ಕುಡಿಸಿದ್ದಾರೆ. ಹಾಗಾಗಿ ಶ್ಯಾಂಭಟ್ಟ ಮುಜರಾಯಿ ಕಮೀಷನರ್ ಆಗಿ ಮುಂದುವರೆದಿದ್ದಾನೆ. ನಾಗರಾಜ ಶೆಟ್ಟಿ ಮುಜರಾಯಿ ಮಂತ್ರಿಯಾಗಿದ್ದಾನೆ. ಉಡುಪಿ ಕೃಷ್ಣ ದೇವಾಲಯ ಬ್ರಾಹ್ಮಣರ ಅಕ್ರಮ ಹಿಡಿತದಲ್ಲೇ ಉಳಿಯುವಂತಾಗಿದೆ.


ಶ್ಯಾಂ ಭಟ್ಟ

ಕುರುಬ ಹಾಗೂ ಹಿಂದುಳಿದ ಜನಾಂಗದವರು ಜನತಾ ದಳದಿಂದ ದೂರವಾಗಿರುವುದರಿಂದ ಅವರ ಮೇಲಿನ ಸೇಡಿಗೆ ಹಾಗೂ ಚೆಡ್ಡಿ ಪರಿವಾರದ ಒತ್ತಡಕ್ಕೆ ಮಣಿಯುತ್ತಿರುವ ಕುಮಾರಸ್ವಾಮಿ ಬೆನ್ನುಮೂಳೆ ಇರದ ನಾಯಕ ಎಂಬುದಕ್ಕೆ ಇದಕ್ಕಿಂತಾ ಸಾಕ್ಷಿ ಬೇಕೆ.


-ವರದಿಗಾರ

# ಮುಸ್ಲಿಮರಿಗೆ ಕಿರುಕುಳ

ಮುಸ್ಲಿಮರು ಹಾಗೂ ಅಬ್ರಾಹ್ಮಣ ಹಿಂದೂಗಳ ಶ್ರದ್ಧಾ ಕೇಂದ್ರ ಬಾಬಾ ಬುಡನ್‌ಗಿರಿಯನ್ನು ಬ್ರಾಹ್ಮಣೀಕರಿಸುವ ಸಂಘ ಪರಿವಾರದವರ ಕಿತಾಪತಿ ಈಗಲೂ ಮುಂದುವರೆದಿದೆ. ವಿವಾದ ಶುರುವಾದ ಕಳೆದ 10 ವರ್ಷಗಳಲ್ಲಿ ಮೊದಲೈದು ವರ್ಷ ಚೆಡ್ಡಿಗಳ ಆರ್ಭಟವಷ್ಟೇ ಕೇಳಿ ಬಂದಿತ್ತು. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಕರ್ನಾಟಕದ ಎಲ್ಲ ಪ್ರಗತಿಪರ ಸೆಕ್ಯುಲರ್ ಶಕ್ತಿಗಳು, ಮುಸ್ಲಿಮರು ಜೊತೆಗೂಡಿ ಕೋಮುವಾದಿಗಳಿಗೆ ದಿಟ್ಟ ಉತ್ತರ ನೀಡುತ್ತಾ ಬಂದಿದ್ದಾರೆ. ಇದಕ್ಕೆ ಪೂರಕವಾಗಿ ಚಿಕ್ಕಮಗಳೂರು ಡಿಸಿಯಾಗಿದ್ದ ಕಟಾರಿಯಾ ಹಾಗೂ ಈಗಿನ ಡಿಸಿ ಹರ್ಷದಾಸ್ ಗುಪ್ತ, ಎಸ್‌ಪಿಗಳಾದ ಪಿ.ಕೆ. ಹಾಂದೆ ಹಾಗೂ ಮಧುಕರ ಶೆಟ್ಟಿ ಮುಂತಾದ ಅಧಿಕಾರಿಗಳು ಕೋಮುವಾದಿಗಳ ಒತ್ತಡಕ್ಕೆ ಮಣಿಯದೆ ನಿಷ್ಠುರವಾಗಿ ವರ್ತಿಸಿದ್ದರು. ಆ ಕಾರಣಕ್ಕೆ ಈಗ ಚೆಡ್ಡಿಗಳು ಡಿಸಿ ಹಾಗೂ ಎಸ್‌ಪಿಯವರನ್ನು ವರ್ಗಾ ಮಾಡುವಂತೆ ಹುಯಿಲೆಬ್ಬಿಸುತ್ತಿದ್ದಾರೆ.

ಇದೇ ಮಾರ್ಚ್‌ನಲ್ಲಿ ನಡೆಯಲಿರುವ ಉರುಸ್‌ಗಾಗಿ ತಮಗೆ ಹೆಚ್ಚುವರಿ ಸ್ಥಳಾವಕಾಶ ನೀಡುವಂತೆ ಕೋರಿ ಶಾಖಾದ್ರಿಯವರು ಮನವಿ ಕೊಟ್ಟರೆ 'ಅದು ಸಾಧ್ಯವಿಲ್ಲ' ಎಂಬುದಾಗಿ ಸರ್ಕಾರ ಉತ್ತರ ಕೊಟ್ಟಿದೆ. ಅಷ್ಟೇ ಅಲ್ಲ ಆಡಳಿತಾತ್ಮಕವಾಗಿ ಕಿರುಕುಳ ನೀಡುವ ಹೊಸದಾರಿಗಳನ್ನು ಈಗಿನ ಕುಮಾರಸ್ವಾಮಿ ಸರ್ಕಾರ ಹುಡುಕುತ್ತಿದೆ.

# ಅನಂತಮಯ್ಯನ ನಾಟಕಕ್ಕೆ ಅಂತ್ಯ



ಅನಂತಮಯ್ಯ

ಚಿತ್ರದುರ್ಗ ಪ್ರಗತಿ ಗ್ರಾಮೀಣ ಬ್ಯಾಂಕ್‌ನಲ್ಲಿ ಅಧೀನ ನೌಕರರಿಗೆ ಸತತ ಕಿರುಕುಳ ನೀಡುತ್ತಲೇ ವಿಕೃತ ಸಂತೋಷ ಅನುಭವಿಸುತ್ತಿದ್ದ ಸಿಬ್ಬಂದಿ ವಿಭಾಗದ ಮುಖ್ಯಸ್ಥ ಅನಂತಮಯ್ಯ ಈಗ ಕೋಲಾರಕ್ಕೆ ವರ್ಗಾವಣೆಯಾಗುವ ಸಂಭ್ರಮದಲ್ಲಿದ್ದಾನೆ.

ಹಾಗೆ ನೋಡಿದರೆ ಅನಂತಮಯ್ಯನ ಈ ವರ್ಗಾವಣೆಗೆ ಈತನಿಂದ ಕಿರುಕುಳ ಅನುಭವಿಸಿದ ಸಿಬ್ಬಂದಿಯೆಲ್ಲಾ ಸಂಭ್ರಮಪಡಬೇಕಿತ್ತು, ಕೆಲವರಿಗೆ ಈ ವರ್ಗಾವಣೆಯಿಂದಾಗಿ 'ಸದ್ಯ ಪೀಡೆ ತೊಲಗಿತು' ಅನ್ನಿಸಿದರೆ ಮತ್ತೂ ಕೆಲವರಿಗೆ ಇಷ್ಟೆಲ್ಲಾ ಗೋಳು ಹೊಯ್ದುಕೊಂಡ ಅನಂತಮಯ್ಯ ತಾನು ಬಯಸಿದ ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗುತ್ತಿದ್ದಾನೆಂಬ ಅಸಮಾಧಾನವೂ ಇದೆ.

ಈ ಅಸಮಾಧಾನಕ್ಕೆ ಸಕಾರಣಗಳೂ ಇವೆ. ಈ ಅನಂತಮಯ್ಯ ವಿಕ್ಷಿಪ್ತ ಸ್ವಭಾವದವ. ನೌಕರರ ಪೀಡನೆಯಲ್ಲಿಯೇ ಪರಮಾನಂದ ಅನುಭವಿಸುವ ವಿಕೃತ ಮನಸ್ಸು. ಬಗ್ಗಿದರೆ ಜುಟ್ಟು ಹಿಡಿದುಕೊಳ್ಳುವ, ಎದ್ದರೆ ಕಾಲಿಗೆ ಬೀಳುವ ಮನಸ್ಥಿತಿಯವ. ದಕ್ಷರು, ಪ್ರಾಮಾಣಿಕರು, ಸೌಮ್ಯ ಸ್ವಭಾವದವರ ಮೇಲೆ ಇಲ್ಲದ ಕಾರು-ಬಾರು ನಡೆಸುವ ಅನಂತಮಯ್ಯ ದೌರ್ಜನ್ಯ ಪ್ರವೃತ್ತಿಯ, ಗುಂಪುಗಾರಿಕೆ ಹಿನ್ನೆಲೆಯ ನೌಕರರನ್ನು ಕಂಡಾಗ ಸಲಾಮು ಹೊಡೆಯುತ್ತಾನೆ.

ಮೇ.ನಾ. ಅಹೋಬಳಪತಿ

ಈ ಮಯ್ಯ ಸಿಬ್ಬಂದಿಗೆ ಕಿರುಕುಳ ನೀಡುವ ಪ್ರವೃತ್ತಿಗೆ ಹಲವು ವರ್ಷಗಳ ಇತಿಹಾಸವೇ ಇದೆ. ಈತ ಹಿಂದೆ ನರಸಾರೆಡ್ಡಿ ಎಂಬುವರು ಅಧ್ಯಕ್ಷರಾಗಿದ್ದಾಗಲೇ ನೌಕರರ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದ. ತನಗಾಗದವರನ್ನು ವರ್ಗಾವಣೆ ಮಾಡಿಸುವುದು, ಮೇಲಧಿಕಾರಿಗಳಿಗೆ ಸಲ್ಲದ ದೂರುಗಳನ್ನು ಹೇಳಿ ಕಿವಿ ಕಚ್ಚುವುದನ್ನೇ ಕಾಯಕವನ್ನಾಗಿಸಿಕೊಂಡ. ಆರಂಭದಲ್ಲಿ ಬ್ರಾಹ್ಮಣರ ಪರ ಲಾಬಿಯನ್ನು ಮಾಡಿಕೊಂಡು ಬಂದ. ಇದರ ಜೊತೆ ನೌಕರರಿಗೆ ಕಿರುಕುಳ ನೀಡುವ ಪ್ರವೃತ್ತಿಯನ್ನೂ ಮುಂದುವರೆಸಿಕೊಂಡು ಬಂದ.

ಅನಂತಮಯ್ಯ ಸಿಬ್ಬಂದಿ ವಿಭಾಗದ ಮುಖ್ಯಸ್ಥನಾದ ನಂತರವಾದರೂ ಇಂತಹ ನಖರಾಗಳಿಗೆ ತಿಲಾಂಜಲಿ ನೀಡಿ ಬ್ಯಾಂಕಿನ ಅಭಿವೃದ್ಧಿಯ ಕಡೆ ಗಮನ ಹರಿಸಬಹುದಿತ್ತು. ಆದರೆ ಅಂತಹ ಉಸಾಬರಿಗೆ ಹೋಗಲಿಲ್ಲ. ಬ್ಯಾಂಕ್‌ನ ಸಿಬ್ಬಂದಿಯ ಮೇಲೆ ತನ್ನ ಪ್ರಾಬಲ್ಯ ಉಳಿಸಿಕೊಳ್ಳುವುದನ್ನೇ ಧ್ಯೇಯವಾಗಿಸಿಕೊಂಡು ಸಿಬ್ಬಂದಿಯ ಮೇಲೆ ಕಾರ್ಯಾಚರಣೆಗಿಳಿಯುತ್ತಿದ್ದ.


ತನ್ನ ನಯಗಾರಿಕೆಯ ಮಾತಿನಿಂದಲೇ ಎಲ್ಲರ ತಲೆ ಸವರುತ್ತಾ ತನ್ನೊಳಗಿನ ವಿಘ್ನ ಸಂತೋಷಿತ್ವವನ್ನು ತಣಿಸಿಕೊಳ್ಳುತ್ತಿದ್ದ ಅನಂತಮಯ್ಯನಿಗೆ ನೌಕರರಿಗೆ ಕಿರುಕುಳ ನೀಡಲು ಇಂತಾದ್ದೇ ಎಂಬ ನಿಖರ ಕಾರಣಗಳೇನೂ ಬೇಕಿರಲಿಲ್ಲ. ಯಾವುದೋ ಸಮಯ-ಸಂದರ್ಭದಲ್ಲಿ ಸಿಬ್ಬಂದಿಗಳು ಈತನ ವಿರುದ್ಧ ಮಾತನಾಡಿದ, ಈತನ ಕಾರ್ಯ ವೈಖರಿಯನ್ನು ಟೀಕಿಸಿದ ಸಣ್ಣ ಕಾರಣಗಳನ್ನೇ ನೆಪವಾಗಿಟ್ಟುಕೊಂಡಿರುತ್ತಿದ್ದ. ಬ್ಯಾಂಕಿನ ಅಭಿವೃದ್ಧಿಯ ನೆಪ ಮುಂದೆ ಮಾಡಿ ಸಮರ್ಥಿಸಿಕೊಳ್ಳುತ್ತಿದ್ದ. ನೌಕರರು ಒಂದಷ್ಟು ಧೈರ್ಯ ಮಾಡಿ ಪ್ರಶ್ನಿಸಿದರೆ 'ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಅನಿವಾರ್ಯ' ಎಂದು ಸಬೂಬು ನೀಡುತ್ತಿದ್ದ. ತೀರಾ ಒತ್ತಡ ಮಾಡುವವರ ಬಳಿ 'ಆಯ್ತು, ಮ್ಯಾನೇಜ್‌ಮೆಂಟ್ ಜೊತೆ ಮಾತನಾಡುತ್ತೇನೆ' ಎಂದು ಒಂದು ಪುಕ್ಕಟೆ ಭರವಸೆ ಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದ.

ಚಿತ್ರದುರ್ಗ

ಈತನ ವರ್ಗಾವಣೆಯ ಟ್ರಾನ್ಸ್‌ ಎಷ್ಟು ವ್ಯವಸ್ಥಿತವಾಗಿ, ಅಮಾನವೀಯವಾಗಿರುತ್ತದೆ ಎಂದರೆ ದಾವಣಗೆರೆಯ ಜಗಳೂರಿನಿಂದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಎಂಬಲ್ಲಿಗೆ ಬಡ್ತಿಯ ನೆಪ ಮಾಡಿ ಅಬಲೆಯಾದ ಮಹಿಳಾ ನೌಕರರೊಬ್ಬರಿಗೆ ವರ್ಗಾವಣೆ ಮಾಡಿಸುತ್ತಾನೆ. ತನಗಾಗದ ನೌಕರರೊಬ್ಬರನ್ನು ತೀವ್ರ ಸ್ವರೂಪದ ಆರೋಗ್ಯದ ಸಮಸ್ಯೆ ಇದೆ ಎಂದು ಗೊತ್ತಿದ್ದೂ ವೈದ್ಯಕೀಯ ಸೌಲಭ್ಯಗಳೇ ಇಲ್ಲದ ಗ್ರಾಮೀಣ ಪ್ರದೇಶವೊಂದರ ಶಾಖೆಗೆ ವರ್ಗಾವಣೆ ಮಾಡಿಸುತ್ತಾನೆ. ಇಂತಹ ಸೇಡಿನ ಕ್ರಮಗಳಿಂದಲೇ ತಾನೇನೋ ಮಹಾನ್ ಸಾಧನೆ ಮಾಡಿದ್ದೇನೆಂದು ಹುಂಬತನದಿಂದ ಬೀಗುವುದೂ ಈತನ ಚಾಳಿ. ಈತನ ದರ್ಬಾರಿನಲ್ಲಿ ವರ್ಗಾವಣೆಯೆಂಬ ಕಿರುಕುಳಕ್ಕೆ ಬಲಿಪಶುಗಳಾದ ಮಹಿಳಾ ನೌಕರರದೊಂದು ಪಟ್ಟಿಯೇ ಇದೆ. ಆದರೆ ವರ್ಗಾವಣೆಯ ಈ ನೀತಿ-ನಿಯಮಗಳನ್ನು ಸುಮಾರು 15 ವರ್ಷಗಳಿಂದ ಚಿತ್ರದುರ್ಗ ವಲಯದಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ತಮ್ಮ ಶ್ರೀಮತಿಯವರ ಕಡೆ ಸುಳಿಯದಂತೆ ನೋಡಿಕೊಂಡಿದ್ದಾನೆ.

ಸಾಮಾನ್ಯವಾಗಿ ಬಡ್ತಿ ಪಡೆದ ನೌಕರರನ್ನು ವರ್ಗಾವಣೆ ಮಾಡುವುದು ನಿಯಮ. ಆದರೆ ಅನಂತಮಯ್ಯನ ಕೃಪಾಕಟಾಕ್ಷವೊಂದಿದ್ದರೆ ನಿಯಮಾವಳಿಗೊಂದು ಲೆಕ್ಕವೇ? ಸ್ವತಃ ಈತನೇ ಮುಂಬಡ್ತಿ ಪಡೆದು ಅಲ್ಲಿಯೇ ತಳವೂರಿರುವಾತ, ತನ್ನ ಚೇಲಾ ಪ್ರವೃತ್ತಿಯಿಂದಲೇ ಸೇವಾಹಿರಿತನದಲ್ಲಿ ತನಗಿಂತಲೂ ಸೀನಿಯಾರಿಟಿ ಇರುವ ಅಶೋಕ್ ಎಂಬಾತನನ್ನು ಹಿಂದಿಕ್ಕಿ ಬಡ್ತಿ ಪಡೆದಾತ. ಬಡ್ತಿ

# ಬಳ್ಳಾರಿ: ಮಂತ್ರಿ ಚೆನ್ನಿಗಪ್ಪನ ಡೀಲೂ; ವಿನಯ ಚಂದ್ರ ಎಂಬ ಸುನಾಮಿಯೂ!



ನೂತನ ಕೋ-ಜಾ ಸರ್ಕಾರದ ಅರಣ್ಯ ಮತ್ತು ಗಣಿ ಮಂತ್ರಿ ಸಿ. ಚೆನ್ನಿಗಪ್ಪ ಆಗಲೇ ಕಾರ್ಯಾಚರಣೆಗಿಳಿದು ಬಿಟ್ಟಿದ್ದಾರೆ. ಫೆಬ್ರವರಿ ಕೊನೇ ವಾರದಲ್ಲಿ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿದ್ದ ಸಚಿವರು ಭರ್ಜರಿ ಡೀಲನ್ನೇ ಕುದುರಿಸಿಕೊಂಡು ಬಳ್ಳಾರಿಯ ರಣಬಿಸಿಲಲ್ಲೂ ತಂಪಾಗಿ ವಾಪಸು ಹಿಂತಿರುಗಿದ್ದಾರೆ.

ಬಳ್ಳಾರಿ ಅರಣ್ಯ ಇಲಾಖೆಯ ಅಧಿಕಾರಿ ಗಣ ಮತ್ತು ಸಿಬ್ಬಂದಿ ಸಚಿವರನ್ನು ಸ್ವಾಗತಿಸಲು ಹಾರಾ-ತುರಾಯಿ ಹಿಡಿದು ಚಿತ್ರದುರ್ಗ ಜಿಲ್ಲೆಯ ಗಡಿ ರಾಂಪುರದ ಬಳಿ ಕಾದು ನಿಂತಿದ್ದಾರೆ. ಸಚಿವರು ಆಶ್ಚರ್ಯಕರ ರೀತಿಯಲ್ಲಿ ಮಾರ್ಗ ತಪ್ಪಿಸಿ ನೇರವಾಗಿ ಬಳ್ಳಾರಿಗೆ ಬಂದು ಬೆಸ್ಟ್‌ಸ್ಕೂಲ್‌ನ ರಾಮಪ್ಪನ ಕಾರಿನಲ್ಲಿ ಡಿವಿಷನ್ ಆಫೀಸಿಗೆ ನುಗ್ಗಿದ್ದಾರೆ. ಕಛೇರಿಯಲ್ಲಿ ಗಣಿಗುತ್ತಿಗೆ ವಿಭಾಗ ನೋಡಿಕೊಳ್ಳುವ ಕೇಸ್‌ವರ್ಕರ್ ವೀರಣ್ಣ ಎಂಬುವರ ಬಳಿಗೆ ಹೋಗಿ ಗಣಿ ಗುತ್ತಿಗೆ ನೀಡುವ ಫಾರಂ ನಂ. 31 ಅರ್ಜಿಗಳಿಗೆ ಅಡ್ವಾನ್ಸ್ ಆಗಿ ಸೀಲ್ ಹಾಕಿರುವುದನ್ನು ನೋಡಿ ತರಾಟೆಗೆ ತೆಗೆದುಕೊಂಡು ಗಣಿ ಗುತ್ತಿಗೆಗೆ ಸಂಬಂಧಿಸಿದ ಫೈಲುಗಳನ್ನೆಲ್ಲಾ ತೆಗೆದುಕೊಂಡು ಹೊಸಪೇಟೆಯ ಮುನೀರ್ ಮೈನ್ಸ್‌ನತ್ತ ಹೊರಟಿದ್ದಾರೆ. ಅಲ್ಲಿಂದ ಜಿಂದಾಲ್ ಗೆಸ್ಟ್‌ಹೌಸ್‌ಗೆ ಹೋಗಿ ತಂಗಿದ್ದಾರೆ. ಅಲ್ಲಿ ಗಣಿ ಲಾಬಿಯ ಕೆಲ ಕುಳಗಳ ಜೊತೆ ಮಾತುಕತೆ ನಡೆಸಿದ್ದಾರೆ.

ಮರುದಿನ ಪತ್ರಿಕಾಗೋಷ್ಠಿ ನಡೆಸಿ ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ವಿಫಲರಾಗಿದ್ದಾರೆಂಬ ಆರೋಪದ ಮೇಲೆ ಸಂಡೂರು ಆರ್‌ಎಫ್‌ಓ ಮಹೇಶ್ ಪಾಟೀಲ್, ಅರಣ್ಯ ಅಧಿಕಾರಿಗಳಾದ ರಾಮಮೂರ್ತಿ, ಲಕ್ಷ್ಮಿ ನಾರಾಯಣ ಹಾಗೂ ದ್ವಿತೀಯ ದರ್ಜೆ ಸಹಾಯಕ ನಾಗರಾಜ್ ಎಂಬುವರನ್ನು ಅಮಾನತು ಮಾಡಿ; ಇಲಾಖಾ ತನಿಖೆಗೆ ಆದೇಶಿಸಿರುವುದಾಗಿ ಹೇಳಿಕೆ ನೀಡಿದ್ದಾರೆ. "ಜಿಲ್ಲೆಯಲ್ಲಿ 95 ರಷ್ಟು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಸಾವಿರಾರು ಕೋಟಿ ರೂಪಾಯಿನ ಅದಿರನ್ನು ಕಳ್ಳ ಸಾಗಣಿಕೆ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ. ಅದಿರನ್ನು ಅಕ್ರಮವಾಗಿ ಸಾಗಿಸುವ ವಾಹನಗಳನ್ನು ವಶಕ್ಕೆ ತೆಗೆದುಕೊಂಡು ಹರಾಜು ಹಾಕಲು ಕಾನೂನು ತಿದ್ದುಪಡಿ ತರುತ್ತೇವೆ. ಅಕ್ರಮ ಹಾಗೂ ಒತ್ತುವರಿ ಗಣಿಗಾರಿಕೆ ನಡೆಸುವ, ಪರಿಸರ ಮಾಲಿನ್ಯ ಉಂಟು ಮಾಡುವ ಗಣಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುತ್ತೇವೆ" ಎಂದು ಬಾಂಬ್ ಸಿಡಿಸಿ ಇಡೀ ಗಣಿ ಮಾಫಿಯಾಕ್ಕೊಂದು ಶಾಕ್ ಟ್ರೀಟ್‌ಮೆಂಟ್ ನೀಡಿ ಅಲ್ಲಿಂದ ಬೆಂಗಳೂರಿಗೆ ವಾಪಸಾಗಿದ್ದಾರೆ.

ವಿಪರ್ಯಾಸವೆಂದರೆ ಅಲ್ಲಿನ ಪತ್ರಕರ್ತರಿಗಾಗಲೀ, ಅಕ್ರಮ ಗಣಿಗಾರಿಕೆ ಲಾಬಿಯ ದಂಧೆಗಳನ್ನು ಬಲ್ಲವರಿಗಾಗಲೀ ಇದ್ಯಾವುದೂ ಹೊಸತೇನಲ್ಲ. ಹಿಂದಿನ ಕಾಂಗ್ರೆಸ್-ಜೆಡಿಎಸ್ ನೇತೃತ್ವದ ಸರ್ಕಾರದಲ್ಲಿ ಅರಣ್ಯ ಮತ್ತು ಗಣಿ ಸಚಿವರಾಗಿದ್ದ ಗುರುಪಾದಪ್ಪ ನಾಗಮಾರಪಳ್ಳಿ ಕಳೆದ ಜೂನ್‌ನಲ್ಲಿ ಬಳ್ಳಾರಿಗೆ ಭೇಟಿ ನೀಡಿದ್ದಾಗ ಯಥಾವತ್ ಹೇಳಿಕೆ ನೀಡಿದ್ದರು. ಅದರ ಪರಿಣಾಮ ಮಾತ್ರ ಶೂನ್ಯವಾಗಿತ್ತು. ಬಳ್ಳಾರಿಯಲ್ಲೀಗ ಯಾವುದೇ ಮಂತ್ರಿ, ಅಧಿಕಾರಿ ಅಕ್ರಮ ಗಣಿಗಾರಿಕೆಯ ವಿರುದ್ಧ ಮಾತನಾಡುತ್ತಾನೆಂದರೆ ಅದು ಮತ್ತೊಂದು ಹೊಸ ಡೀಲಿಗಾಗಿ ನಡೆಸುತ್ತಿರುವ ಸಂಚಿನಂತೆ ಭಾಸವಾಗುತ್ತದೆ. 'ಹೇಳಿಕೆ' ಹಳೆಯದಾದರೇನು? ಮಂತ್ರಿ ಮತ್ತು ಡೀಲು ಹೊಸದು! ಎಂಬಂತೆ.

ಸಚಿವ ಚೆನ್ನಿಗಪ್ಪನವರ ನಡವಳಿಕೆ ಇದನ್ನೇ ಸಾಬೀತು ಪಡಿಸುವಂತಿದೆ. ಏಕೆಂದರೆ ಸಚಿವರು ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ವಿಫಲರಾಗಿದ್ದಾರೆಂಬ ಆರೋಪದ ಮೇಲೆ ಅಮಾನತು ಮಾಡಿದ ನೌಕರರ್ಯಾರೂ ಅಮಾನತುಗೊಂಡಿಲ್ಲ, ಅವರೆಲ್ಲಾ ಈಗಲೂ ಕರ್ತವ್ಯದಲ್ಲಿದ್ದಾರೆ. ಸಚಿವರ ಬಾಯಿಂದ ತಮ್ಮ ಅಮಾನತಿನ ಹೇಳಿಕೆ ಬಂದ ನಂತರ ಜಾಗೃತರಾದ ಅಧಿಕಾರಿಗಳು ಸಚಿವರನ್ನು ಭೇಟಿ ಮಾಡಿ 'ಸೂಟ್‌ಕೇಸ್ ಸಮರ್ಪಣೆ' ಮಾಡಿ 'ನಮ್ಮ ಮೇಲೆ ನಿಮ್ಮ ದಯೆಯಿರಲಿ' ಎಂದು ಅಲವತ್ತುಕೊಂಡಿದ್ದಾರೆ. ಅಲ್ಲಿಗೆ ಈ ಅಧಿಕಾರಿಗಳ ಅಮಾನತು ಪ್ರಹಸನಕ್ಕೆ ತೆರೆಬಿದ್ದಿದೆ.

## ವಿನಯಚಂದ್ರ ಎಂಬ ಅಪಾಯ

ಅಸಲಿ ಸಂಗತಿಯೆಂದರೆ ಅರಣ್ಯ ಮತ್ತು ಗಣಿ ಸಚಿವ ಚೆನ್ನಿಗಪ್ಪನ ಭೇಟಿಯ ಕುರಿತಾಗಲೀ, ಅವರಿಗೆ ಸಲ್ಲಿಸಿದ ಕಪ್ಪ ಕಾಣಿಕೆಯ ಬಗ್ಗೆಯಾಗಲೀ ಇಲ್ಲಿನ ಗಣಿ ಮಾಲೀಕರಿಗೆ, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅಂತಾ ವಿಷಾದವೇನೂ ಇದ್ದಂತಿಲ್ಲ. ಅದು ಯಥಾ ಪ್ರಕಾರ ನಡೆಯುವಂತಾದ್ದೇ ಎಂಬುದು ಅವರ ತಿಳುವಳಿಕೆ. ಇವರಿಗೆಲ್ಲಾ ಇರುವ ಒಂದೇ ಆತಂಕ ಎಂದರೆ ವಿನಯ ಚಂದ್ರ ಎಂಬ ಭ್ರಷ್ಟ ಅಧಿಕಾರಿ ನಡೆಸುವ ಚಿತಾವಣೆಗಳದ್ದು.

ಈ ವಿನಯಚಂದ್ರ, ಬಳ್ಳಾರಿಯ ಸಂಚಾರಿ ದಳದಲ್ಲಿ ರೇಂಜರ್ ಆಗಿದ್ದಾಗ ತನ್ನ ತಂತ್ರಗಾರಿಕೆ, ವಶೀಲಿ ಬಾಜಿ, ನಮಕ್ ಹರಾಮ್ ಕೆಲಸಗಳಿಂದ ಕುಖ್ಯಾತಿ ಪಡೆದವ. ಗಣಿ ಮಾಲೀಕರನ್ನು ನಕ್ಷತ್ರಿಕನಂತೆ ಬೆನ್ನುಹತ್ತಿ ಮಂತ್ರಿಗಳ ಹೆಸರಲ್ಲಿ, ಇಲಾಖೆಯ ಉನ್ನತ ಅಧಿಕಾರಿಗಳ ಹೆಸರಲ್ಲಿ, ಪತ್ರಕರ್ತರ ಹೆಸರಲ್ಲಿ...., ಹೀಗೆ ಹಣ ವಸೂಲಿ ಮಾಡಲು ಅನುಕೂಲವಾಗುವ ಯಾವುದೇ ನೆಪಗಳನ್ನು ಅಸ್ತ್ರವಾಗಿ ಕೊಂಡು ವಶೀಲಿಬಾಜಿ ನಡೆಸುವುದರಲ್ಲಿ ನಿಸ್ಸೀಮ ಇಂಥ ನಖರಾಗಳಿಂದಲೇ ದಲಿತ ಮುಖಂಡರಿಂದ ದೇಹ ಶುದ್ಧಿ ಮಾಡಿಸಿಕೊಂಡಿದ್ದವ.

ಇಂಥ ವಿನಯಚಂದ್ರ, ಮಂತ್ರಿ ಗುರುಪಾದಪ್ಪ ನಾಗಮಾರಪಳ್ಳಿಗೆ ಕೊಡಲಿಕ್ಕೆ ಎಂದು ಹೇಳಿ ಅಕ್ರಮವಾಗಿ ಗಣಿಗಾರಿಕೆ ನಡೆಸುವ ಕುಳಗಳಿಂದ ಕೋಟ್ಯಂತರ ರೂಪಾಯಿ ಸಂಗ್ರಹಿಸಿ ನಾಮ ಹಾಕಿದ್ದನೆಂದೂ, ಇದು ನಾಗಮಾರಪಳ್ಳಿಯವರ ಗಮನಕ್ಕೆ ಒಂದು ಇವನಿಗೆ ಬಳ್ಳಾರಿಯಿಂದಲೇ ಗೇಟ್‌ಪಾಸ್ ನೀಡಿ ಚಿಕ್ಕಮಗಳೂರು ವನ್ಯಜೀವಿ ವಿಭಾಗಕ್ಕೆ ವರ್ಗಾವಣೆ ಮಾಡಿದರೆಂದೂ ಹೇಳಲಾಗುತ್ತಿದೆ.

ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಕಮಾಯಿ ಸಿಗುವ ಸಂಚಾರಿದಳದಂತ ಆಯಕಟ್ಟಿನ ಹುದ್ದೆಯಿಂದ ಚಿಕ್ಕಮಗಳೂರಿಗೆ ಹೋಗಿ ಬರೀ ಸಂಬಳ ಎಣಿಸಿ ಕೊಳ್ಳಲು ಮನಸೊಪ್ಪದೇ ಶತಾಯ-ಗತಾಯ

ಫ್ಯಾಷನ್ ಎಂಬುದು ಬೇಕಂತಲೇ ಹಬ್ಬಿಸಿದ ಸಾಂಕ್ರಾಮಿಕ ಕಾಯಿಲೆ ಅಲ್ಲದೆ ಬೇರೇನೂ ಅಲ್ಲ-ಜಾರ್ಜ್ ಬರ್ನಾರ್ಡ್ ಶಾ



ಪಡೆದ ಬೇರೆಯವರನ್ನು ವರ್ಗಾವಣೆ ಮಾಡಿ ತನ್ನ ಬುಡಕ್ಕೆ ನೀರು ಭಿಟ್ಟುಕೊಳ್ಳುತ್ತಾನೆಯೇ?

ಇಂಥಾ ಅನಂತಮಯ್ಯನ ಒಡೆದಾಳುವ ನೀತಿಗೆ ನೌಕರ ಸಂಘಟನೆಗಳೊಳಗಿನ ಒಡಕುಗಳು, ಅಪಸ್ವರಗಳು ಸಹಕಾರಿಯಾದದ್ದು ವಿಪರ್ಯಾಸಕರ. ಇದರ ಸಂಪೂರ್ಣ ಲಾಭ ಪಡೆದ ಈತ ನೌಕರರ ಮೇಲಿನ ಪ್ರಾಬಲ್ಯವನ್ನೇ ಪ್ರತ್ಯಾತೀತವಾಗಿಸಿಕೊಂಡ. ಅನಂತಮಯ್ಯನೊಂದಿಗಿನ ವಿಶ್ವಾಸದಿಂದ ನೌಕರರ ಮೇಲೆ ಹಿಡಿತವಿಟ್ಟುಕೊಳ್ಳಲು ನೌಕರ ಸಂಘಟನೆಯ ಪದಾಧಿಕಾರಿಗಳು ಪ್ರಶ್ನಿಸಿದರೆ; ತನಗಾಗದ ನೌಕರರನ್ನು ವರ್ಗಾವಣೆ ಮಾಡಿ ಅವರ ಪರವಾಗಿ ಸಂಘಟನೆಯ ಲೀಡರುಗಳು ಧ್ವನಿಯೆತ್ತದಂತೆ ಅನಂತಮಯ್ಯ ನೋಡಿಕೊಳ್ಳುತ್ತಿದ್ದ.

ನೌಕರರ ಸಂಘಟನೆಯ ಪದಾಧಿಕಾರಿಗಳು ಮತ್ತು ಅನಂತಮಯ್ಯನ ಅಪವಿತ್ರ ಮೈತ್ರಿಯ ಫಲವೆಂಬಂತೆ ನೌಕರರ ಹಿತರಕ್ಷಣೆಗಳು ಕಡೆಗಣಿಸಲ್ಪಟ್ಟವು. ಆಡಳಿತ ಮಂಡಳಿಗೆ ಶರಣಾಗತಿ ಘೋಷಿಸಿರುವ ನೌಕರರ ಸಂಘಟನೆಯ ಮುಖಂಡರುಗಳಿಂದ ತೊಂದರೆಗೊಳಗಾದ ನೌಕರರು ಅದೆಂತಹಾ ಹಿತರಕ್ಷೆಯನ್ನು ಬಯಸಲು ಸಾಧ್ಯ?

ಹೀಗೆ ಸಿಬ್ಬಂದಿಯ ಪೀಡನೆಯ ಇತಿಹಾಸವನ್ನೇ ಬೆನ್ನಿಗೇರಿಸಿಕೊಂಡಿರುವ ಅನಂತಮಯ್ಯ ತನ್ನ ಅನುಕೂಲಕ್ಕೆ ತಕ್ಕಂತೆ ಈಗ ಕೋಲಾರದತ್ತ ಮುಖ ಮಾಡಿದ್ದಾನೆ. ಅದಕ್ಕಾಗಿ ತಕ್ಕ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾನೆ. ಆದರೆ ನೊಂದ ಬ್ಯಾಂಕಿನ ಸಿಬ್ಬಂದಿ ಮಾತ್ರ ಈತನನ್ನು ಪನಿಷ್‌ಮೆಂಟ್ ಟ್ರಾನ್ಸ್‌ಫರ್ ಮಾಡಿ ಬಳ್ಳಾರಿಯ ತುಂಗ-ಭದ್ರ ಗ್ರಾಮೀಣ ಬ್ಯಾಂಕ್‌ಗೆ ಎಸೆದರೆ ಕನಿಷ್ಠ ಅನಂತಮಯ್ಯ ತನ್ನ ನೌಕರ ಪೀಡನೆಯ ಪ್ರವೃತ್ತಿಯ ಕುರಿತು ಆತ್ಮಾವಲೋಕನ ಮಾಡಿಕೊಳ್ಳಲು ಅನುಕೂಲವಾದೀತೆಂಬ ನಿರೀಕ್ಷೆಯಲ್ಲಿದ್ದಾರೆ. ಅವರ ಆಸೆ ಈಡೇರಲಿ. ವರ್ಗಾವಣೆ ಎಂಬ ಶಿಕ್ಷೆಯನ್ನು ಅನಂತಮಯ್ಯನೂ ಅನುಭವಿಸಲಿ.

---

ಬಳ್ಳಾರಿಯಲ್ಲೇ ಉಳಿಯಲು ಪ್ರಯತ್ನ ನಡೆಸಿದ ಈ ಭೂಪ ನೇರವಾಗಿ ಆಗಿನ ಮುಖ್ಯಮಂತ್ರಿ ಧರಂಸಿಂಗರನ್ನು ಭೇಟಿ ಮಾಡಿ, ಮಂತ್ರಿ ನಾಗಮಾರಪಳ್ಳಿಯ ಬಗ್ಗೆಯೇ ಇಲ್ಲಸಲ್ಲದ ಚಾಡಿ ಹೇಳಿ ತನ್ನ ವರ್ಗಾಣೆಯನ್ನು ರದ್ದು ಮಾಡಬೇಕೆಂದು ಅಲವತ್ತುಕೊಂಡನೆಂದೂ; ಈತನ ವಾಚಾಳಿತನವನ್ನೂ, ಹರಕು ನಾಲಗೆಯ ಮಾತಿನ ತೀಕ್ಷ್ಣತೆಯನ್ನೂ ನೋಡಿದ ಧರಂಸಿಂಗ್‌ರವರು ತರಾಟೆಗೆ ತೆಗೆದುಕೊಂಡು ವಾಪಸು ಕಳಿಸಿದ್ದರೆಂಬುದೂ ಫ್ಲಾಷ್ ಬ್ಯಾಕ್ ಸ್ಟೋರಿ.

ಹೀಗೆ ಕರಾಳ ದಂಧೆಗಳ ಇತಿಹಾಸವನ್ನೇ ಬೆನ್ನಿಗೇರಿಸಿಕೊಂಡಿರುವ ವಿನಯಚಂದ್ರನಿಗೂ, ನೂತನ ಕೋ-ಜಾ ಸರ್ಕಾರದ ಅರಣ್ಯ ಮತ್ತು ಗಣಿ ಮಂತ್ರಿ ಚೆನ್ನಿಗಪ್ಪನಿಗೂ ಅದ್ಯೇಗೋ ಗಳಸ್ಯ-ಕಂಠಸ್ಯ ಸಂಬಂಧ ಕುದುರಿಬಿಟ್ಟಿದೆ.

ಕೆಲವು ಮೂಲಗಳ ಪ್ರಕಾರ ಬಳ್ಳಾರಿಗೆ ನೂತನ ಸಚಿವರ ಭೇಟಿ, ಅರಣ್ಯ ಇಲಾಖೆಯ ಅಧಿಕಾರಿಗಳ ಅಮಾನತು ಪ್ರಹಸನ, ಅಕ್ರಮ ಗಣಿಗಾರಿಕೆ ನಡೆಸುವವರ, ಇದಕ್ಕೆ ಬೆಂಬಲಿಸುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದು....., ಇತ್ಯಾದಿ ವಿಚಾರಗಳ ಬಗ್ಗೆ ನೀಲಿನಕ್ಷೆಯನ್ನು ರೂಪಿಸಿ, ಅದು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳುವುದರ ಹಿಂದೆ ಸೂತ್ರಧಾರನಾಗಿದ್ದವನು ಇದೇ ವಿನಯಚಂದ್ರ ಎಂದು ಹೇಳಲಾಗುತ್ತಿದೆ.

ಮಂತ್ರಿ ಚೆನ್ನಿಗಪ್ಪನೊಂದಿಗಿನ ಇಂತ ಗಳಸ್ಯಕಂಠಸ್ಯ ಸಂಬಂಧಗಳ ಹಿನ್ನೆಲೆಯಲ್ಲಿಯೇ ವಿನಯಚಂದ್ರ ಮತ್ತೆ ಸಂಡೂರಿಗೆ ವಕ್ಕರಿಸಲಿದ್ದಾನೆ. ಬಳ್ಳಾರಿಯ ಗಣಿ ಮಾಫಿಯಾದಲ್ಲೀಗ ನೂತನ ಸಚಿವರ ಭೇಟಿಯ ಜೊತೆಗೇ ವಿನಯಚಂದ್ರ ಎಂಬ ಸುನಾಮಿಯ ಆಗಮನದ ಸುದ್ದಿಯೂ ಕಂಪನ ಮೂಡಿಸಿದೆ. ಆರು ತಿಂಗಳಿಗೋ, ವರ್ಷಕ್ಕೋ ಭೇಟಿ ನೀಡುವ ಸಚಿವ ಚೆನ್ನಿಗಪ್ಪನನ್ನು ಸಹಿಸಿಕೊಳ್ಳಬಹುದು. ಸಚಿವ ಚೆನ್ನಿಗಪ್ಪನ ಹೆಸರಿನಲ್ಲಿ ವಶೀಲಿಬಾಜಿಗಿಳಿಯುವ, ನಕ್ಷತ್ರಿಕನಂತೆ ಅನುಕ್ಷಣವೂ ಹೆಗಲೇರುವ ವಿನಯ ಚಂದ್ರನನ್ನು ಸಹಿಸಿಕೊಳ್ಳುವುದು ಹೇಗೆಂಬುದೇ ಅವರ ಚಿಂತೆಯಾಗಿಬಿಟ್ಟಿದೆ. ಅಂತೂ ವಿನಯಚಂದ್ರ ಮತ್ತೊಮ್ಮೆ ಬಲಿಗೆಯೆಂಬ ಯಾಗ'ಕ್ಕೆ ಸಜ್ಜಾಗಲಿದ್ದಾನೆ. ಗಣಿ ಮಾಫಿಯಾ ಇದರ ಪ್ರಾಯೋಜಕತ್ವವನ್ನು ಒಪ್ಪಿಕೊಳ್ಳಬೇಕಿದೆ.

---

ಶ್ರೀರಾಂಪುರದ ಲಿಕ್ಕರ್ ದುರಂತ!


# ವಿಷ ಬೆರೆಸಿದ್ದು ಯಾರು?

"ಇನ್ನು ಎಂಟು ತಿಂಗಳಷ್ಟೇ ಬಾಕಿಯಿರುವ ಕಾರ್ಪೋರೇಷನ್ ಚುನಾವಣೆಗಿದು ಕರಾಳ ಮುನ್ನುಡಿಯೇ? ಶ್ರೀರಾಂಪುರದ ಲಿಕ್ಕರ್ ದುರಂತವೂ ಬರಲಿರುವ ಕಾರ್ಪೋರೇಷನ್ ಚುನಾವಣೆಗೂ ಸಂಬಂಧವಿದೆಯೇ?

ಚೆಂಡೀಗ ಪೋಲೀಸರ ಅಂಕಣದಲ್ಲಿದೆ. ಫೆಬ್ರವರಿ 16ರ ರಾತ್ರಿ ಶ್ರೀರಾಂಪುರದ ಶ್ರೀನಿವಾಸ್ ಬಾರಿನಲ್ಲಿ ವಿಸ್ಕಿ ಕುಡಿದು ಸತ್ತವರೆಲ್ಲ ಸಯನೈಡ್ ವಿಷಪ್ರಾಶನದಿಂದ ಸತ್ತಿದ್ದಾರೆಂದು ಮಲ್ಲೇಶ್ವರಂ ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯರು ವರದಿ ಕೊಡುವುದರೊಂದಿಗೆ ಇಡೀ ಪ್ರಕರಣಕ್ಕೊಂದು ಹೊಸ ರೂಪ ಬಂದುಬಿಟ್ಟಿದೆ. ಪೋಲೀಸರ ತನಿಖೆ ಮತ್ತು ಅಬಕಾರಿ ಅಧಿಕಾರಿಗಳ ವರದಿಗಳೆರಡೂ ಇದನ್ನೇ ಸಾರಿ ಹೇಳುತ್ತಿವೆಯೆಂದರೆ ಏನರ್ಥ?


ಜನರ ಆಕ್ರೋಶದ ಬೆಂಕಿಗೆ ಆಹುತಿಯಾದ ಶ್ರೀನಿವಾಸ ಬಾರ್

ಘಟನೆಯನ್ನೇ ನೋಡಿ. ಫೆಬ್ರವರಿ 16ರ ರಾತ್ರಿ ಎಂಟು ಗಂಟೆಯ ಹೊತ್ತಿಗೆ ರಾಜೇಶ್ ಎಂಬಾತ ಶ್ರೀನಿವಾಸ ಬಾರಿಗೆ ಬಂದು ಓರಿಜಿನಲ್ ಚಾಯ್ಸ್ ವಿಸ್ಕಿ ಕುಡಿದ. ಅದಾಗಿ ಅರ್ಧ ಗಂಟೆಗೇ ಆತ ಹೆಣವಾಗಿದ್ದ. ಆತನಿಗಿನ್ನೂ ಇಪ್ಪತ್ತೈದರ ಹರೆಯ. ಅದೇ ವಯಸ್ಸಿನ ಚಂದ್ರಶೇಖರ್ ಸಿಲ್ವರ್ ಕಪ್ ವಿಸ್ಕಿ ಕುಡಿದ. ಅರವತ್ತರ ಇಳಿವಯಸ್ಸಿನ ದಾಸ್ ಎಂಬ ವೃದ್ಧ ಕೂಡ ವಿಸ್ಕಿ ಕುಡಿದು ಮನೆಯೊಳಕ್ಕೆ ಕಾಲಿಡುತ್ತಿದ್ದಂತೆ ಕುಸಿದು ಬಿದ್ದಿದ್ದ. ಈ ಮೂವರೂ ಒಂದೇ ಬ್ರಾಂಡಿನ ವಿಸ್ಕಿ ಕುಡಿದವರಲ್ಲ, ಆದರೆ ಒಂದೇ ಹೊತ್ತಿನಲ್ಲಿ ಕುಡಿದವರು. ವಿಶೇಷವೆಂದರೆ ಬಾರ್ ಕೌಂಟರ್ ಪಕ್ಕದಲ್ಲೇ ಇಟ್ಟಿದ್ದ ಜಗ್‌ನಿಂದ ನೀರು ಬೆರೆಸಿಕೊಂಡು ಕುಡಿದರು.


ಕುಡಿದು ಸತ್ತ ರಾಜೇಶ್

ಅಬಕಾರಿ ಡಿ.ಸಿ. ಬಸವರಾಜ್ ಕಣಜಿಯ ಪ್ರಕಾರ ಇದೇ ಜಗ್‌ನಲ್ಲಿದ್ದ ನೀರಿಗೆ ಯಾರೋ ವಿಷ ಬೆರೆಸಿ ಹೋಗಿದ್ದಾರೆ!

ಹಾಗೇ ನೋಡಿದರೆ ಶ್ರೀರಾಂಪುರ ಐದನೇ ಮೇನ್‌ನಲ್ಲಿರುವ ಶ್ರೀನಿವಾಸ್ ಬಾರ್‌ನಲ್ಲಿ ಅವತ್ತು ಇನ್ನೂರಕ್ಕೂ ಹೆಚ್ಚು ಮಂದಿ ಕುಡಿದಿದ್ದಾರೆ. ಇಪ್ಪತ್ತೈದು ಸಾವಿರಕ್ಕೂ ಅಧಿಕ ರೂಪಾಯಿಗಳಷ್ಟು ವ್ಯಾಪಾರವಾಗಿದೆ. 1973 ರಿಂದಲೂ ಅಸ್ತಿತ್ವದಲ್ಲಿರುವ ಶ್ರೀನಿವಾಸ ಬಾರ್ ಕೃಷ್ಣಪ್ಪ ಎಂಬಾತನ ಹೆಸರಲ್ಲಿದೆ ಯಾದರೂ ಅದನ್ನು ನಡೆಸುವುದು ಅವರ ಕಿರಿಯ ಮಗ ಗೋಪಿ. ಈತ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ. ಗಾಂಧಿನಗರದ ಶಾಸಕ ದಿನೇಶ್ ಗುಂಡೂರಾವ್ ಮತ್ತು ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್‌ರ ಕಟ್ಟಾ ಅನುಯಾಯಿ. ಎಲ್ಲಕ್ಕೂ ಮಿಗಿಲಾಗಿ ಈತ ಮುಂದಿನ ಕಾರ್ಪೋರೇಷನ್ ಚುನಾವಣೆಗೆ ಶ್ರೀರಾಂಪುರದ ಸೇವಾಶ್ರಮ ವಾರ್ಡಿಗೆ ಪ್ರಬಲ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.

ಸದ್ಯ ಸೇವಾಶ್ರಮಕ್ಕೆ ಕೌನ್ಸಿಲರ್ ಆಗಿರುವವನು ಜೆಡಿ(ಎಸ್)ನ ನಾಗರಾಜ್ ಉರ್ಫ್ ಬಾಂಬ್ ನಾಗ. ಗೋಪಿ ಈತನಿಗೆ ಪಕ್ಕಾ ವೈರಿ. ಪಾಲಿಕೆ ಚುನಾವಣೆಯ ಗುರಿಯಿಟ್ಟುಕೊಂಡೇ ಪಕ್ಕದಲ್ಲೊಂದು ದೇವಸ್ಥಾನ ಕಟ್ಟಿಸಿಕೊಟ್ಟ. ತಾನೇ ನಿಂತು ಪಬ್ಲಿಕ್ ಲೈಬ್ರರಿ ಕಟ್ಟಿಸಿದ. ಹೇಳಿಕೇಳಿ ತಮಿಳು ಏರಿಯಾ. ಅಣ್ಣಾದುರೈ, ಎಂ.ಜಿ.ಆರ್. ತಿಥಿ, ಕರುಣಾನಿಧಿ ಬರ್ತ್‌ಡೆ, ಕಮಲ್‌ಹಾಸನ್ ಹುಟ್ಟುಹಬ್ಬ, ಜಯಲಲಿತಾ ಜನ್ಮದಿನ ಇತ್ಯಾದಿ ಕಾರ್ಯಕ್ರಮಗಳಿಗೆಲ್ಲ ದುಡ್ಡು ಬಿಚ್ಚುತ್ತಿದ್ದ.

ಕಳೆದ ಬಾರಿ ಬಾಂಬ್ ನಾಗನ ವಿರುದ್ಧ ಸೇವಾಶ್ರಮ ವಾರ್ಡಿನಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದವನು ಪಳನಿಕಾಂತ್. ಈತ ಕೂಡ ಬಾಂಬ್ ನಾಗನಂತೆ ರೌಡಿ ಎಲಿಮೆಂಟೆ. ಸಾಲದ್ದಕ್ಕೆ ತಮಿಳು ಭಾಷಾಂಧ. ಈ ಬಾರಿ ಕಾಂಗ್ರೆಸ್ ಟಿಕೆಟ್ ತನ್ನ ಕೈ ತಪ್ಪಿ ಗೋಪಿಯ ಪಾಲಾಗುತ್ತದೆ ಎಂಬುದು ಪಳನಿಗೆ ಖಾತರಿಯಾಗಿತ್ತು. ಏಕೆಂದರೆ ಗೋಪಿಯ ಪರವಾಗಿ ಹರಿಪ್ರಸಾದ್ ನಿಂತಿದ್ದರು. ಹಾಗೊಮ್ಮೆ ಗೋಪಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದೇ ಆದರೆ ತಾನು ಸೋಲುವುದು ಗ್ಯಾರಂಟಿ ಎಂಬುದು ಹಾಲಿ ಕೌನ್ಸಿಲರ್ ನಾಗನಿಗೆ ಮನದಟ್ಟಾಗಿತ್ತು.


ಬಾಂಬ್ ನಾಗೆ

ಈ ಎರಡು ಹಿತಾಸಕ್ತಿಗಳ ಹೊರತಾಗಿ ಗೋಪಿಗೆ ಶತ್ರು ಅಂಥ ಬೇರೊಬ್ಬನಿಲ್ಲ. ಕಳೆದ ಮೂವತ್ತು ವರ್ಷಗಳಿಂದ ಇದೇ ಬಾರ್ ನಡೆಸುವ ಗೋಪಿ ತನ್ನ ಬಾರಿನಲ್ಲಿ ಉಚಿತವಾಗಿ ಉಸಲಿ ಕಾಳುಗಳನ್ನಿಡುತ್ತಿದ್ದ. ಟೇಬಲ್ಲಿನ ಮೇಲೆ ಉಪ್ಪು ಇಟ್ಟಿರುತ್ತಿದ್ದ. ಸಾಲದ್ದಕ್ಕೆ ಆಂಧ್ರದಿಂದ ಉಪ್ಪಿನಕಾಯಿ ತರಿಸಿ ಗಿರಾಕಿಗಳಿಗೆ ಉಚಿತವಾಗಿ ಕೊಡುತ್ತಿದ್ದ. ಬಹುಶಃ ಗೋಪಿಗೆ ಆಗದ ಯಾರೋ ಆತನ ಬಾರ್‌ನ ನಿರ್ದಿಷ್ಟ ಒಂದು ನೀರಿದ್ದ ಜಗ್ಗಿನಲ್ಲಿ ಸಲ್ಫ್ಯೂರಿಕ್ ಆಸಿಡ್ ಅಥವಾ ಸಯನೈಡ್ ದ್ರಾವಣವನ್ನು ಬೆರೆಸಿರಬೇಕು!

ಬೆಳಿಗ್ಗೆಯಿಂದ ನೂರಕ್ಕೂ ಅಧಿಕ ಮಂದಿ ಇದೇ ಶ್ರೀನಿವಾಸ್ ಬಾರ್‌ನಲ್ಲಿ ಕುಡಿದಿದ್ದಾರೆ. ಅವರ್ಯಾರಿಗೂ ಏನೂ ಆಗಿಲ್ಲ, ಸಂಜೆ ಎಂಟರಿಂದ ಎಂಟೂವರೆಯ ಮಧ್ಯೆ ಕುಡಿದ ಎಲ್ಲರಿಗೂ ಅಪಾಯವಾಗಿಲ್ಲ, ಸತ್ತ ಮೂವರನ್ನೂ ಸೇರಿ ಹೆಚ್ಚೆಂದರೆ ಏಳು ಜನಕ್ಕಷ್ಟೇ ಆರೋಗ್ಯ ಕೆಟ್ಟಿದೆ. ಈ ಎಂಟೂ ಮಂದಿ ಒಂದೇ ಜಗ್‌ನಲ್ಲಿದ್ದ ನೀರನ್ನು ಬಳಸಿದ್ದರೆ?

ಇದೇ ಪ್ರಶ್ನೆಗಾಗಿ ಪೋಲೀಸರು ತಲೆ ಕೆಡಿಸಿಕೊಂಡಿದ್ದಾರೆ. ಸದ್ಯ ಅಬಕಾರಿ ಅಧಿಕಾರಿಗಳು ಕೊಟ್ಟ ವರದಿಯ ಪ್ರಕಾರ ಶ್ರೀನಿವಾಸ್ ಬಾರ್‌ನಿಂದ ವಶಪಡಿಸಿಕೊಂಡ ಮದ್ಯ ನಕಲಿಯಲ್ಲ, ಕುಡಿಯಲು ಯೋಗ್ಯ ಎಂದು ಹೇಳಿದ್ದಾರೆ. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಸತ್ತವರನ್ನು ಪೋಸ್ಟ್ ಮಾರ್ಟಂಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಲಾಗಿದೆ. ಅಲ್ಲಿಂದ ಅಂಗಾಂಶಗಳನ್ನು ಮಡಿವಾಳದ ಫೋರೆನ್ಸಿಕ್ ಲ್ಯಾಬಿಗೂ ಕಳಿಸಿದ್ದಾರೆ. ಫೋರೆನ್ಸಿಕ್ ಪ್ರಯೋಗಾಲಯದ ವರದಿ ಇಡೀ ಪ್ರಕರಣಕ್ಕೊಂದು ತಾರ್ಕಿಕತೆ ಕಲ್ಪಿಸಲಿದೆ.

ಆದರೆ ಫೆಬ್ರವರಿ 16ರ ರಾತ್ರಿ ನಡೆದದ್ದಾದರೂ ಏನು? ವಿಸ್ಕಿ ಕುಡಿದು ಜನ ಸತ್ತ ಸುದ್ದಿ ಹಬ್ಬಿದ್ದೇ ತಡ ಕೌನ್ಸಿಲರ್ ಬಾಂಬ್ ನಾಗ ಧಾವಿಸಿ ಬಂದಿದ್ದೇ ಬಾರ್ ಮುಚ್ಚಿಸಿಬಿಟ್ಟ. ಆತನ ಬಂಟರೇ ನಿಂತು ಬಾರಿಗೆ ಬೆಂಕಿಯಿಟ್ಟರು. ಇದೇ ಗೋಪಿಯ ಅಣ್ಣ ನಡೆಸುತ್ತಿದ್ದ ಸುಪ್ರಭಾತ್ ಬಾರಿಗೂ ಕಲ್ಲು ತೂರಿದರು. ವಿಚಿತ್ರವೆಂದರೆ ಈ ಎರಡೂ ಬಾರ್‌ಗಳಿಂದ ವಿಸ್ಕಿ, ಬ್ರಾಂದಿಯ ಕೇಸುಗಳನ್ನು ಹೆಗಲ ಮೇಲೆ ಹೊತ್ತೊಯ್ದು ದೋಚಿದ ಬಾಂಬ್‌ನಾಗನ ಬಂಟರಾಗಲಿ, ಅದನ್ನು ಕಂಠಮಟ್ಟ ಕುಡಿದು ದೊಂಬಿ ನಡೆಸಿದ ಪಡ್ಡೆಗಳಾಗಲಿ ಯಾರೊಬ್ಬರೂ ಸತ್ತಿಲ್ಲ!

ಏನಿದರ ಮರ್ಮ? ಭೇದಿಸುವ ಧೈರ್ಯ ಮಾಡಬೇಕಾದದ್ದು ಕಮೀಷನರ್ ಅಜಯ್‌ಕುಮಾರ್ ಸಿಂಗ್.

-ರಾ.ಸೋ.

---

## ಪ್ರಶ್ನೆ


ಊರವರ ಹಾದರದ ಬೀಜಕ್ಕೆ
ಹದವಾದ ನೆಲವಾದೆ
ನನ್ನವ್ವ, ನೀನು ದಿಕ್ಕೆಟ್ಟ ಹೆಣ್ಣು.

ಮೈಯ ಕೀಲು ಕೀಲುಗಳಲ್ಲಿ
ನರಳಿಕೆಯ ನೋವನುಟ್ಟಿಸುವ
ನರಸತ್ತವನ ಸಹವಾಸ ಸಾಕೆಂದು ದೂಡಿ,
ತೆರೆದಿಟ್ಟ ಇರುಳುಗಳ ಊರವರಿಗೆಲ್ಲಾ
ದಪ್ಪಗಾಲಿನ ಕಚ್ಚೆಹರುಕರಿಗೆಲ್ಲಾ,
ಹೊಕ್ಕಳೊಳ ಹೊಕ್ಕು ಬಿಸಿಯುಸಿರ ಬಸಿದವಗೆ
ತೆರೆದಿಟ್ಟೆ ಬಸಿದ,
ಊರಾಚೆಯ ಪಾಳುಭೂಮಿ ಸ್ವಂತದೆಂಬಂತೆ
ಉತ್ತು, ಬಿತ್ತರು ತಮ್ಮೆಲ್ಲಾ ತೆವಲಿರಿಸಿಕೊಂಡರು.

ಅಂದು ನಿನ್ನೊಳಗೆ ನನ್ನ ಉತ್ತು, ಬಿತ್ತವರೇ
ಇಂದೆನ್ನ ಕೇಳುವರು ಅಣಕದಲ್ಲಿ, ಹುಣ್ಣಿಸೆಯಡಿಯ ಹುಸಿನಗೆಯಲ್ಲಿ
"ಯಾರಿಗುಟ್ಟಿದವನೋ ನೀನೆಂದು, ನಿನ್ನ ಹುಟ್ಟಿಸಿದವ ನಾನೆಂದು."

ಏನ ಹೇಳಲೇ ಅವ್ವಾ?
ನನ್ನವ್ವ ದ್ರೌಪದಿ, ಅವಳೈವ ವಿಟರು ನೀವೆಂದು
ನಿಮಗುಟ್ಟಿದವ ನಾವೆಂದು,
ಒದರಿಬಿಡಲೇ? ರಾಚಿದಂತೆ ಮುಖಕ್ಕೆ.

-ಎಸ್.ಆರ್. ಪ್ರಸನ್ನಕುಮಾರ್




## ಬೆಂಗಳೂರು-ಶಿವಮೊಗ್ಗ-ಗುಲಬರ್ಗಾ ವಿ.ವಿ.

# ಉಪ ಕುಲಪತಿ ಕುರ್ಚಿಗೆ ಕಿತಾಪತಿ

**ಕರ್ನಾಟಕದ ಅಕಾಡಮಿಕ್ ವಲಯಗಳಲ್ಲಿ ಈಗ ಮಿಂಚಿನ ಚಟುವಟಿಕೆಗಳು ನಡೆಯುತ್ತಿವೆ. ನಿಗಮ-ಮಂಡಳಿಗಳ ಕುರ್ಚಿ ಹಿಡಿಯಲು ಲಗುಬಗೆಯಿಂದ ಓಡಾಡುತ್ತಾ ಲಾಬಿ ನಡೆಸಿರುವ ಪುಢಾರಿಗಳನ್ನು ಮೀರಿಸುವ ಶೈಲಿಯಲ್ಲಿ ನಮ್ಮ ಅಕಾಡಮಿಷಿಯನ್‌ಗಳೂ ಓಡಾಡುತ್ತಿದ್ದಾರೆ. ತಮ್ಮ ಕೀರ್ತಿ, ಬಿರುದು-ಬಾವಲಿಗಳ ಪ್ರದರ್ಶನ, ಜಾತಿ, ಪ್ರಾಂತ್ಯ ರಾಜಕೀಯ ನಂಟೆಂಬ ಅಸ್ತ್ರಗಳನ್ನು ಪ್ರಯೋಗಿಸುತ್ತಾ ಬ್ಯುಸಿಯಾಗಿದ್ದಾರೆ.**

ಯೂನಿವರ್ಸಿಟಿ ವೈಸ್ ಛಾನ್ಸಲರ್ ಕುರ್ಚಿಗಾಗಿ ನಡೆದಿರುವ ಸರ್ಕಸ್ ಇದು.




ಶಂಕರಮೂರ್ತಿ

ಶಿವಮೊಗ್ಗ-ಗುಲ್ಬರ್ಗಾ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿದ್ದ ಡಾ. ಚಿದಾನಂದಗೌಡ ಹಾಗೂ ಪ್ರೊ. ಕುಟನ್ನೊ ಈಗ ತಾನೆ ನಿವೃತ್ತರಾಗುತ್ತಿದ್ದಾರೆ. ಇನ್ನು ಬೆಂಗಳೂರು ವಿವಿಯ ಡಾ. ತಿಮ್ಮಪ್ಪರ ಅವಧಿ ಇದೇ ಮಾರ್ಚ್‌ನಲ್ಲಿ ಮುಗಿಯುತ್ತಿದೆ. ಹೀಗೆ ಏಕಕಾಲದಲ್ಲಿ ಮೂರು ಉಪಕುಲಪತಿ ಹುದ್ದೆಗಳು ಖಾಲಿ ಬಿದ್ದರೆ ಯಾರ ಜೀವ ತಾನೆ ಚಡಪಡಿಸದೆ ಸುಮ್ಮನಿದ್ದೀತು. ಅದರಲ್ಲೂ ಈಗ ಬಿಜೆಪಿಗಳು ಅಧಿಕಾರದಲ್ಲಿರುವುದರಿಂದ ಜಾತಿವಾದಿ-ಕೋಮುವಾದಿ ಅಕಾಡಮಿಷಿಯನ್‌ಗಳು ಪೈಪೋಟಿ ನಡೆಸಿದ್ದಾರೆ. ಹೇಗೂ ಪಕ್ಕಾ ಆರ್‌ಎಸ್‌ಎಸ್ ಡಿ.ಎಚ್. ಶಂಕರಮೂರ್ತಿ ಉನ್ನತ ಶಿಕ್ಷಣ ಸಚಿವರಾಗಿರುವುದರಿಂದ ಚೆಡ್ಡಿ ಶಿಕ್ಷಣ ಚತುರರನೇಕರಿಗೆ ಹಾಗೂ ಪ್ರಗತಿಪರ ಶಿಕ್ಷಣ ತಜ್ಞರಿಗೂ ವಿಸಿ ಕುರ್ಚಿಯ ಕನಸು-ಕನವರಿಕೆಗಳು ಶುರುವಾಗಿವೆ.

### ಜ್ಞಾನಭಾರತಿ ಲಾಬಿ-ನಾನಾ ರೀತಿ

ಡಾ. ಎಂ.ಎಸ್. ತಿಮ್ಮಪ್ಪ ವಿಸಿಯಾಗಿದ್ದ ಅವಧಿಯಲ್ಲಿ ಬೆಂಗಳೂರು ವಿವಿಯಲ್ಲಿ ಪ್ರಮುಖ ಹಗರಣಗಳೇನೂ ನಡೆಯಲಿಲ್ಲ ಎಂಬುದೊಂದು ಸಕಾರಾತ್ಮಕ ಅಂಶ. ಆದರೆ ಮಹತ್ತರ ಬದಲಾವಣೆಗಳೇನೂ ಕಂಡು ಬರಲಿಲ್ಲ ಎಂಬುದೂ ಅಷ್ಟೇ ವಾಸ್ತವ. ಬೆಂಗಳೂರು ವಿವಿಯಲ್ಲಿ ಪದವಿ ಪರೀಕ್ಷೆ ಹಾಗೂ ಮೌಲ್ಯಮಾಪನ ಎಷ್ಟು ಹದಗೆಟ್ಟಿದೆಯೆಂದರೆ ಈ ಪ್ರಕ್ರಿಯೆಯ ಎಲ್ಲಾ ಜವಾಬ್ದಾರಿಯುತ ಸ್ಥಾನಗಳೂ ಈಗ ಬಿಕರಿಗಿವೆ. ಮೌಲ್ಯಮಾಪನ ಎಂಬುದು ವಂಚನೆಯ ದೊಡ್ಡ ರಾಕೆಟ್ ಆಗಿ ಬೇರು ಬಿಟ್ಟಿದೆ. ಇಂತಾ ಪರಿಸ್ಥಿತಿಯಲ್ಲಿ ಉಪಕುಲಪತಿಯಾಗಲು ಅನೇಕರು ಕ್ಯೂ ನಿಂತಿದ್ದಾರೆ. ಕನ್ನಡ ವಿಭಾಗದ ಡಾ. ಸಿದ್ಧಲಿಂಗಯ್ಯ, ಇತಿಹಾಸ ವಿಭಾಗದ ಡಾ. ಚಂದ್ರಶೇಖರ್ ಹಾಗೂ ಶಕುಂತಲಾ ಖತ್ರಿ, ಜೋಗಾನೆ ಶಂಕರ್ ಇವರಲ್ಲಿ ಪ್ರಮುಖರು.

ಡಾ. ಸುಮಿತ್ರಾ ಆರೋಪಿಸಿದ್ದ ಲೈಂಗಿಕ ಕಿರುಕುಳ ಘಟನೆಯಲ್ಲಿ ನಿರ್ದೋಷಿಯೆಂದು ತೀರ್ಪು ಪಡೆದಿರುವ ಡಾ. ಸಿದ್ಧಲಿಂಗಯ್ಯ ಈ ಬಾರಿ ವಿಸಿಯಾಗುವ ಛಾನ್ಸ್ ಬಿಡಬಾರದೆಂದು ತೀರ್ಮಾನಿಸಿದಂತಿದೆ. ಹಾಗಾಗಿ ಇತ್ತೀಚೆಗೆ ಉನ್ನತ ಶಿಕ್ಷಣ ಸಚಿವ ಡಿ.ಎಚ್. ಶಂಕರಮೂರ್ತಿ 'ಅಂಬೇಡ್ಕರ್ ಗೋಹತ್ಯೆ ವಿರೋಧಿ' ಎಂಬ ಸುಳ್ಳಿನ ಬಾಲಿಶ ಭಾಷಣ ಕುಟ್ಟುತ್ತಿದ್ದಾಗ ಅದೇ ವೇದಿಕೆಯಲ್ಲಿದ್ದ ಅಂಬೇಡ್ಕರ್‌ವಾದಿ ಸಿದ್ಧಲಿಂಗಯ್ಯ ತುಟಿ ಬಿಚ್ಚರಲಿಲ್ಲ. ಅಷ್ಟೇ ಅಲ್ಲ ಸಿದ್ಧಲಿಂಗಯ್ಯ ಈಗ ತಮ್ಮ ಇಮೇಜ್ ಬಿಲ್ಡಿಂಗ್‌ನ ಲಾಗಾ ಹಾಕಲೂ ಮುಂದಾಗಿದ್ದಾರೆ. ತಮ್ಮ ಶಿಷ್ಯರನ್ನು ಛೂ ಬಿಟ್ಟು ಮೂರು ದಶಕಗಳ ಹಿಂದೆ ಬರೆದಿದ್ದ 'ಹೊಲೆಮಾದಿಗರ ಹಾಡು' ಕೃತಿಯ ಸ್ಮರಣಾರ್ಥ ಭಟ್ಟಂಗಿ ಸಭೆ ಮಾಡಿಸಿದ್ದಾರೆ. ಪ್ರತಿಭಟನೆಯ ಹಾಡುಗಳನ್ನು ಅಂದು ಸ್ವತಃ ಸಿದ್ಧಲಿಂಗಯ್ಯನವರೇ ಬರೆದಿದ್ದರೂ ಇವತ್ತಿನ ರಾಜೀ ಮನೋಭಾವದ ಸಿದ್ಧಲಿಂಗಯ್ಯನವರಿಗೂ ಆ ಹಾಡುಗಳಿಗೂ ಯಾವುದೇ ಸಂಬಂಧವಿರಲು ಅಸಾಧ್ಯ. ಆದರೂ ವಿಸಿ ಹುದ್ದೆ ಕಾರಣಕ್ಕೆ ಸಿದ್ಧಲಿಂಗಯ್ಯನವರಿಗೆ ಅದೆಲ್ಲಾ ಈಗ ನೆನಪಾಗಿರಲಿಕ್ಕೂ ಸಾಕು.




ಸಿದ್ಧಲಿಂಗಯ್ಯ

ವಾಸ್ತವವಾಗಿ ಶಕುಂತಲಾ ಖತ್ರಿ, ಚಂದ್ರಶೇಖರ್, ಜೋಗಾನೆ ಶಂಕರ್ ಇವರಲ್ಲಿ ಯಾರೇ ಉಪಕುಲಪತಿಯಾದರೂ ಅಡ್ಡಿಯಿಲ್ಲ. ವಿದ್ವತ್ತು, ಗಾಂಭೀರ್ಯ ಹಾಗೂ ದಕ್ಷತೆ ಎಲ್ಲಾ ಇರುವ ಇವರನ್ನು 'ಕೋ-ಜಾ' ಸರ್ಕಾರ ಪರಿಗಣಿಸಬೇಕಷ್ಟೇ.


### ಕುವೆಂಪು ವಿವಿ-ರಾಹುಕಾಲ ನಿರ್ಗಮನ

ಹೆಸರು ಕುವೆಂಪು ವಿವಿ. ವಿಸಿಯಾಗಿದ್ದವರು ಸ್ವತಃ ಕುವೆಂಪುರವರ ಖಾಸಾ ಅಳಿಯ ಡಾ. ಚಿದಾನಂದಗೌಡ. ಆದರೆ ಕುವೆಂಪುರವರಿಗಿದ್ದ ಆಶಯ, ವೈಚಾರಿಕತೆಗಳೆಲ್ಲಾ ಕಸದ ಬುಟ್ಟಿ ಸೇರಿದ್ದು ಅವರ ಅಳಿಯನ ಅವಧಿಯಲ್ಲಿ ಎಂಬುದು ವಿಪರ್ಯಾಸಕರ.



ಚಿದಾನಂದ ಗೌಡ

ಆರ್ಟ್ ಆಫ್ ಲೀವಿಂಗ್‌ನ ಚಿಲ್ಲರೆ ಧರ್ಮಗುರು ರವಿಶಂಕರ್, ಇನ್‌ಫೋಸಿಸ್‌ನ ವ್ಯಾಪಾರಿ ನಾರಾಯಣ ಮೂರ್ತಿ ಮತ್ತು ಮನುವಾದದ ಬಗ್ಗೆ ಪುಸ್ತಕ ಬರೆದಿರುವ ಹಿಂದೂತ್ವವಾದಿ ರಾಮಾ ಜೋಯಿಸ್‌ರಂಥವರನ್ನು ಕರೆದು ಡಾಕ್ಟರೇಟ್ ಕೊಡಿಸಿದ ಉಪಕುಲಪತಿ ಚಿದಾನಂದಗೌಡ ಎಲ್ಲರ ಕಣ್ಣಲ್ಲೂ ಹಾಸ್ಯಾಸ್ಪದರಾಗಿದ್ದರು. ಇವರ ಆಡಳಿತದಲ್ಲಿ ಕುವೆಂಪು ವಿವಿ ಕೇವಲ ಆಡಳಿತಾತ್ಮಕವಾಗಷ್ಟೇ ಅಲ್ಲ ನೈತಿಕವಾಗಿಯೂ ತೀರಾ ಕೆಳಮಟ್ಟಕ್ಕಿಳಿಯಿತು.



ರಾಮಾ ಜೋಯಿಸ್

ಈಗ ಚಿದಾನಂದಗೌಡರು ನಿವೃತ್ತರಾಗಿದ್ದಾರೆ. ಪರಿಸರ ವಿಜ್ಞಾನ ವಿಭಾಗದ ಇ.ಟಿ. ಪುಟ್ಟಯ್ಯ ಇನ್‌ಚಾರ್ಜ್ ವಿಸಿಯಾಗಿದ್ದಾರೆ. ಇದನ್ನೇ ಖಾಯಂ ಆಗಿಸಿಕೊಳ್ಳುವ ಆಸೆ ಅವರಿಗಿದೆ. ಅದಕ್ಕಾಗಿ ಪ್ರಯತ್ನಗಳನ್ನೂ ನಡೆಸುತ್ತಿದ್ದಾರೆ. ವೀರಪ್ಪ ಮೊಯಿಲಿ ನೆಂಟರಾದ ಕೆಮಿಸ್ಟ್ರಿ ವಿಭಾಗದ ಡಾ. ಶಿರೇಗಾರ್, ಶ್ರೀಕಂಠ ಕೂಡಿಗೆ ಸಹ ಓಡಾಡುತ್ತಿದ್ದಾರೆ. ಮೈಸೂರು ವಿವಿಯ ಪ್ರಾಣಿಶಾಸ್ತ್ರ ವಿಭಾಗದ ಡಾ.ರಂಗನಾಥ್ ಸಹ ಮುಖ್ಯಮಂತ್ರಿ ಕುಮಾರಸ್ವಾಮಿ ಜೊತೆಗಿರುವ ನಂಟನ್ನು ಬಳಸಿ ಲಾಬಿ ನಡೆಸುತ್ತಿದ್ದಾರೆ.

ಆದರೆ ಇವರೆಲ್ಲರಿಗಿಂತಾ ಹೆಚ್ಚು ಕೇಳಿ ಬರುತ್ತಿರುವ ಹೆಸರು ಅನಂತನ್‌ರವರದ್ದು. ಮೈಸೂರು ವಿವಿಯಲ್ಲಿ ಕಾಮರ್ಸ್ ಬೋಧಿಸುತ್ತಿದ್ದ ಬ್ರಾಹ್ಮಣ ಜನಾಂಗದ ಅನಂತನ್ ಇತ್ತೀಚೆಗಷ್ಟೇ ನಿವೃತ್ತರಾಗಿದ್ದಾರೆ. ಇವರ ಅಭ್ಯರ್ಥಿತನದ ಬಲ ಇರುವುದು ಶಿಕ್ಷಣ ತಜ್ಞ, ದಕ್ಷ ಎಂದಲ್ಲ, ಬದಲಾಗಿ ಬಿಜೆಪಿ ಸಖ್ಯದಿಂದಾಗಿ. ಹೇಗೂ ಶಿವಮೊಗ್ಗ ಜಿಲ್ಲೆಯಲ್ಲೀಗ ಬಿಜೆಪಿಯವರೇ ಮೂವರು ಮಂತ್ರಿಗಳಾಗಿದ್ದಾರೆ. ಚೆಡ್ಡಿ ಚತುರನೊಬ್ಬನನ್ನು ತಂದು ಕೂರಿಸದೆ ಮತ್ಯಾರಿಗೆ ಚಾನ್ಸ್ ಕೊಡುತ್ತಾರವರು.

ಬೇರೆ ಸಂದರ್ಭದಲ್ಲಾಗಿದ್ದರೆ ಒಂದು ಕೈ ನೋಡಿರುತ್ತಿದ್ದ ಪ್ರೊ. ರಾಜೇಂದ್ರ ಚೆನ್ನಿ ಈಗ ಸುಮ್ಮನಾಗಿಬಿಟ್ಟಿದ್ದಾರೆ. ಪ್ರಗತಿಪರ ಎನಿಸಿಕೊಂಡ ತಪ್ಪಿಗೆ ಸಂಘಪರಿವಾರದವರ ಭಯ ಅವರನ್ನು ಕಾಡುತ್ತಿರುವಂತಿದೆ.

### ಗುಲ್ಬರ್ಗಾ- ಕಾಗೆ ಜಗಳ

ಅಂದರಿಕಿ ಮಂಚಿವಾಡು ಅನಂತಯ್ಯ ಎಂಬಂತೆ ಆಡಳಿತ ನಡೆಸಿದ ಪ್ರೊ. ಕುಟನ್ನೊ ಗುಲ್ಬರ್ಗಾ ವಿವಿಯಿಂದ ನಿರ್ಗಮಿಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಧರಂಸಿಂಗ್‌ರ ಅಕ್ಕನ ಮಗ ಪಿ.ಕೆ. ತಿವಾ... ಎಂಬ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದವರು ಈಗ ಪ್ರಭಾರ ವಿಸಿ. ಆದೇ ಜಾಗ ಖಾಯಂ ಮಾಡಿಕೊಳ್ಳಲು ಅವರ ಯತ್ನ ನಡೆದಿದೆ. ವಿಸಿ ಹುದ್ದೆಗೆ ಆದೇ ವಿವಿಯ ಜಾನಪದ ತಜ್ಞ ಖಂಡೋಬಾ, ಕನ್ನಡದ ಬಿ. ನಾಯಕ್, ಕಾನೂನು ವಿಭಾಗದ ಜೆ.ಎಸ್. ಪಾಟೀಲ ಓಡಾಡುತ್ತಿದ್ದಾರೆ. ಈ ಜೆ.ಎಸ್. ಪಾಟೀಲರು ಸಚಿವ ಅಮರೇಗೌಡ ಬಯ್ಯಾಪುರ ನೆಂಟರೆಂಬುದು ಪ್ಲಸ್ ಪಾಯಿಂಟ್. ವಿ.ಎಸ್. ಮೂಲಿಮನಿ ಎಂಬ ಧಾರವಾಡದ ಇನ್ನೊಂದು ಹೆಸರು ಕೇಳಿಬರುತ್ತಿದೆ.

ಆದರೆ ಇಲ್ಲೂ ಈಗ ಚೆಡ್ಡಿಗಳ ಕಲರವ ಕೇಳಿ ಬರುತ್ತಿದೆ. ಮಾಜಿ ಹೈಕೋರ್ಟ್ ಜಡ್ಜ್ ರಾಮಾ ಜೋಯಿಸ್ ಈಗ್ಗೆ ಕೆಲ ತಿಂಗಳಿಂದ ಪದೇ ಪದೇ ಗುಲ್ಬರ್ಗಾಗೆ ಹೋಗುತ್ತಿದ್ದಾರೆ. ವಿಜ್ಞಾನೇಶ್ವರ ಎಂಬಾತ ಬರೆದಿರುವ ಪುರಾತನ ಕಾನೂನು ಗ್ರಂಥ 'ಮಿತಾಕ್ಷರ'ದ ಬಗ್ಗೆ ಸದಾ ಮಾತನಾಡುತ್ತಾ ಗುಲ್ಬರ್ಗಾದಲ್ಲೇ ಅವ... ರೊಂದು ಚೆಡ್ಡಿ ಅಕಾಡಮಿಷಿಯನ್ನರ ಗುಂಪು ಕಟ್ಟಿದ್ದಾರೆ.


ಅಲ್ಲಿಂದಲೆ ಚೆಡ್ಡಿಯೊಂದು ಹಾರಿ ಬಂದು ವಿಸಿ ಕುರ್ಚಿಯಲ್ಲಿ ಕುಳಿತರೂ ಆಶ್ಚರ್ಯವಿಲ್ಲ. ಒಟ್ಟಿನಲ್ಲಿ ಉನ್ನತ ಶಿಕ್ಷಣ ಸಚಿವ ಬಿಜೆಪಿಯವರಾಗಿರುವುದರಿಂದ ಚೆಡ್ಡಿ ಶಿಕ್ಷಣ ತಜ್ಞರಿಗೆ ಅಪಾರ ಅಧಿಕಾರದ ಹಸಿವು ಇರುವುದರಿಂದ ಹಾಗೂ ಮುಖ್ಯವಾಗಿ ಜಾತ್ಯತೀತ ಜನತಾದಳವರಿಗೆ ವಿದ್ಯೆ ನೈವೇದ್ಯೆಯಾಗಿರುವುದರಿಂದ ಬೆಂಗಳೂರು, ಶಿವಮೊಗ್ಗ, ಗುಲ್ಬರ್ಗಾ ವಿವಿಗಳಿಗೆ ವಿಸಿ ರೂಪದಲ್ಲಿ ಯಾವ ಗ್ರಹಚಾರ ಕಾದಿದೆಯೋ ಕಾದು ನೋಡಬೇಕಿದೆ.

-ವರದಿಗಾರ

## ಜೆಡಿಎಸ್ V/s ಚೆಡ್ಡೀಸ್

# ನಿಗಮಗಳಿಗಾಗಿ ಸರಿಗಮ....

**ಹೊ**ಸ ಕೋ-ಜಾ ಸರ್ಕಾರದಲ್ಲಿ ಅಮರೇಗೌಡ ಬಯ್ಯಾಪುರನಿಗೆ ಬೈಬೈ ಹೇಳಿ ದೇವದುರ್ಗದ ದಂಡಪಿಂಡ ಆಲ್ಕೋಡ್ ಹನುಮಂತಪ್ಪನಿಗೆ "Hi, Hi" ಎಂದು ಕುಮಾರಸ್ವಾಮಿ ಹೇಳಿದಾಗಿನಿಂದ ರಾಯಚೂರಲ್ಲಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡಿವೆ. ಕಾಡಾ (ತುಂಗಭದ್ರಾ ಅಚ್ಚುಕಟ್ಟು ಪ್ರಾಧಿಕಾರ), ಹಟ್ಟಿ ಚಿನ್ನದ ಗಣಿ, ನಗರಾಭಿವೃದ್ಧಿ ಪ್ರಾಧಿಕಾರಗಳ ಮೇಲೆಲ್ಲ ಈಗ ಜೆಡಿಎಸ್, ಚೆಡ್ಡಿಗಳ ಕಣ್ಣುಬಿದ್ದಿದೆ. ಮತ್ತೊಂದು ಕಡೆ ಪೋಲೀಸ್ ಅಧಿಕಾರಿಗಳಿಂದ ಹಿಡಿದು ಜಿಲ್ಲಾಧಿಕಾರಿವರೆಗೆ ಬಹುತೇಕರ ಟ್ರಾನ್ಸ್‌ಫರ್‌ಗೆ ವೇದಿಕೆ ಸಿದ್ಧಗೊಂಡಿದೆ. ಕಳೆದ ಮೂರು ಚುನಾವಣೆಗಳಲ್ಲಿ ಮೂರು ವಿವಿಧ ಚಿಹ್ನೆಗಳಡಿ ಗೆದ್ದಿರುವ ಬಯ್ಯಾಪುರ ಜೆಡಿಎಸ್-ಕಾಂಗ್ರೆ ಸರ್ಕಾರದಲ್ಲಿ ಸಕ್ಕರೆ ಸಚಿವನಾಗಿ ಮುಕ್ಕುವ ಕಾಯಕ ಮಾಡಿದ. ನಂತರ ಹೆಚ್ಚುವರಿಯಾಗಿ ಜವಳಿ ಖಾತೆ ಸಿಕ್ಕಾಗ ಕಬಳಿಕೆಯ ಪರಾಕಾಷ್ಠೆ ತಲುಪಿ ಧನ್ಯನಾಗಿದ್ದ. ಜಿಲ್ಲಾ ಉಸ್ತುವಾರಿ ಸಚಿವನಾಗಿ ಜಿಲ್ಲೆಗೆ ಒಂದು ಬಿಲ್ಲೆಯ ಸಹಾಯವನ್ನು ಮಾಡದೇ ಹೋದ ಈ ಭಂಡ ಭಯ್ಯಾಪುರ ಈಗ ಕೋ-ಜಾ ಸರ್ಕಾರದಲ್ಲಿ ಮಂತ್ರಿಗಿರಿ ಇಲ್ಲದೇ ಪ್ಯಾಲಿಯಂತಾಗಿದ್ದಾನೆ. ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲು ಕುಮಾರಸ್ವಾಮಿ ಹಿಂದೆ ಹಿಂದೆ ಅಂಡಲೆಯುತ್ತಿರುವುದನ್ನು ಟಿವಿಯಲ್ಲಿ ನೋಡಿದ್ದ ಜನ 'ಭಯ್ಯಾ'ಗೆ ಮತ್ತೆ ಮಂತ್ರಿಗಿರಿ ಸಿಕ್ತು ಎಂದು ಕೊಂಡಿದ್ದರು. ಆದರೆ ಕುಮಾರಸ್ವಾಮಿ 'ಭಯ್ಯಾ'ಗೆ 'ಬೈಯ್ಯಾ' ಎಂದು ಹೇಳಿ ರಾಯಚೂರಿಗೆ ಓಡಿಸಿದ್ದಾರೆ.



ಪಾಪಾರೆಡ್ಡಿ ಶಂಕರಗೌಡ ಹರವಿ ಶರಣಪ್ಪಗೌಡ ಬಿಡಲದಿನ್ನಿ ತ್ರಿವಿಕ್ರಮ್ ಜೋಷಿ

### ಪೆದ್ದಪ್ಪನಾದ ಮುದ್ದಪ್ಪ

### ಜನುಮ ಪಡೆದ ಹನುಮ

ತಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇಲ್ಲದಾಗ ಅಭಿವೃದ್ಧಿಯ ಬಗ್ಗೆ ಸಿಕ್ಕಾಪಟ್ಟೆ ಮಾತಾಡುವ ದೇವದುರ್ಗದ ಆಲ್ಕೋಡ್ ಹನುಮಂತಪ್ಪನಿಗೆ ಸಚಿವಗಿರಿ ಸಿಕ್ಕಿ ಹೊಸ ಜನುಮವೇ ಸಿಕ್ಕಂತಾಗಿದೆ. ಹಿಂದೆ ದೈನೇಸಿಯಾಗಿ ಧಾರವಾಡ ಸೇರಿದ್ದ 'ಹನುಮ' ಕಳೆದ ಎಲೆಕ್ಷನ್ನಿನಲ್ಲಿ ದೇವೇಗೌಡ, ಜೆ.ಎಚ್. ಪಟೇಲ್ ಅವಧಿಯಲ್ಲಿ ಮಂತ್ರಿಯಾಗಿ ಮೆರೆದಿದ್ದ ಕಲ್ಮಲಾದ ಮುನಿಯಪ್ಪ ಮುದ್ದಪ್ಪ ಮಂತ್ರಿಗಿರಿ ಕನಸು ಕಂಡು ಪೆದ್ದಪ್ಪನಾಗಿದ್ದಾನೆ. ಕ್ಷೇತ್ರದ ಅಧಿಕಾರಿಗಳಿಂದ ನೀಟಾಗಿ ಮಂತ್ಲಿ ಎತ್ತುವ 'ಮುನಿಯನ ಮಾದರಿ' ಊರಿಗೆಲ್ಲಾ ಗೊತ್ತು. ಯಾವುದಾದರೂ ನಿಗಮ ಕೊಡಿ ಎಂದು ಸರಿಗಮ ರಾಗ ಹಾಡುತ್ತಿರುವವರಲ್ಲಿ ಈ ಮುನಿಯ ಮೊದಲಿಗ. ದುನಿಯಾ ಮುಳುಗಿದರೂ ಚಿಂತೆಯಿಲ್ಲ, ಮುನಿಯ ಮಾತ್ರ ಗೂಟದ ಕಾರು ಏರಲೇಬೇಕಂತೆ.

ಚೆಡ್ಡಿ ಪಾಪಿ ಸಮುದ್ರಕ್ಕೂ ಹೋದರೂ ಮೊಣಕಾಲ ಮಟ ನೀರು ಎಂಬಂತಾಗಿದೆ ರಾಯಚೂರಿನ ಏಕೈಕ ಬಿಜೆಪಿ ಶಾಸಕ ಪಾಪರೆಡ್ಡಿ ಎಂಬ ಪರಮ ಪಾಪಿಯದು. ಯಡ್ಡಿ ದಯೆ ತೋರದ್ದರಿಂದ ಮಂತ್ರಿಗಿರಿ ತಪ್ಪಿಸಿಕೊಂಡ 'ಪಾಪಿ'ಯೀಗ ಹಪಾಹಪಿಯಿಂದ ಬೋರ್ಡ್‌ನತ್ತ ನಾಲಿಗೆ ಚಾಚಿದ್ದಾನೆ.

### ನಿಗಮಗಳತ್ತ ಪುಢಾರಿಗಳ ಗಮನ

ಮಂತ್ರಿಗಿರಿ ಮಿಸ್ಸಾದರೇನು? ಸಂಪದ್ಭರಿತ ನಿಗಮ, ಮಂಡಳಿಗಳಾದರೂ ದಕ್ಕಲಿ ಎಂದು ಶಾಸಕರು, ಸೋತ ಕ್ಯಾಂಡಿಡೇಟುಗಳು ಗಡಿಬಿಡಿಯಲ್ಲಿ ಗುದ್ದಾಟ ನಡೆಸಿವೆ.

'ಕಾಡಾ' ಕಬ್ಜಾ ಮಾಡಿಕೊಳ್ಳಲು ಜೆಡಿ(ಎಸ್) ರೈತ ಘಟಕದ ರಾಜ್ಯಾಧ್ಯಕ್ಷ ಹನುಮನಗೌಡ ಬೆಳಗುರ್ಕಿ ಹಾಗೂ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಂಕರಗೌಡ ಹರವಿ ಮಧ್ಯೆ ತೀವ್ರ ಪೈಪೋಟಿ ನಡೆದಿದೆ. ಹಿಂದೆ ಈ ಇಬ್ಬರೂ ರೈತ ಸಂಘದಲ್ಲಿದ್ದಾಗಿನಿಂದಲೂ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋಲುವುದನ್ನು ಪ್ರಾಕ್ಟೀಸು ಮಾಡುತ್ತಲೇ ಬಂದಿದ್ದಾರೆ. ಈಗ ಹಿಂಬಾಗಿಲ ಮೂಲಕವಾದರೂ 'ಕಾಡಾ'ಕ್ಕೆ ಕನ್ನ ಹಾಕಲು ರೆಡಿಯಾಗಿದ್ದಾರೆ. ಈ ಇಬ್ಬರು ಲಿಂಗಾಯತ ರೆಡ್ಡಿಗಳು. ವಿದೇಶಿ ಕಂಪನಿಗಳ ಕಾಕದೃಷ್ಟಿಗೆ ಬಿದ್ದಿರುವ ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷ ಸ್ಥಾನಕ್ಕಾಗಿ ಬಿಜೆಪಿಯ ಶರಣಪ್ಪಗೌಡ ಜಾಡಲದಿನ್ನಿ ಹಾಗೂ ಜೆಡಿ(ಎಸ್) ಜಿಲ್ಲಾಧ್ಯಕ್ಷ ಶೇಖ್ ರಿಜ್ವಾನ್‌ಗಳು ಲಾಬಿ ನಡೆಸಿದ್ದಾರೆ. ಚಿನ್ನದ ಕನ್ನ ತಪ್ಪಿದರೂ atleast ರಾಯಚೂರು ನಗರಸಭಾ ಪ್ರಾಧಿಕಾರವನ್ನಾದರೂ ಕೊಡಲೇಬೇಕು ಎಂದು ರಿಜ್ವಾನ್ ಶಂಖ ಹೊಡೆಯುತ್ತಿದ್ದಾನೆ. ಮಾನ್ವಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕಾಗಿ ಜೆಡಿಎಸ್‌ನ ಆರ್. ವೆಂಕೋಬಯ್ಯ ಶೆಟ್ಟಿ ಮತ್ತು ಮೋಹಿನ್‌ಖಾನ್ ನಡುವೆ ತುರುಸಿನ ಕಾಳಗವಿದೆ. ಮಧ್ಯದಲ್ಲಿ ಚೆಡ್ಡಿ ಸುಧಾಕರನೂ ನಾಲಿಗೆ ಚಾಚಿ ಕುಳಿತಿದ್ದಾನೆ. ಸಿಂಧನೂರು ನಗರ ಯೋಜನಾ ಪ್ರಾಧಿಕಾರ ಲೂಟಿ ಹೊಡೆಯಲು ಹೊಂಚು ಹಾಕಿ ಕುಳಿತಿರುವ ಬಿಜೆಪಿಯ ವೀರೇಶ್ ಇಲ್ಲೂರು ತನ್ನ ಕುಲಬಾಂಧವ ಸಚಿವ ಶಂಕರಮೂರ್ತಿಯ ಆಶೀರ್ವಾದ ಪಡೆದು ಬಂದಿದ್ದಾನೆ.

ಈಗಾಗಲೇ ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷನಾಗಿ ಮೇಯ್ದಿರುವ ಜೆಡಿಎಸ್‌ನ ಗಿರಿಜಾ ಶಂಕರ, ಕಡು... ಗೋಲು ಆಂಜನೇಯ, ಬಯ್ಯಾಪುರ ಭಂಟರಾದ ಬಸವಂತರಾಯ ಕುರಿ, ಶರಣಪ್ಪ ಮೇಟಿ, ಅನಂತ್... ಕುಮಾರ್‌ನ ಬಾಲ ತ್ರಿವಿಕ್ರಮ ಜೋಶಿ, ಆರ್. ತಿಮ್ಮಯ್ಯ ಮುಂತಾದ ಎಮ್ಮೆತಮ್ಮಯ್ಯಗಳೂ ಎಲ್ಲಾದರೂ ಒಂದಿಷ್ಟು ಪವರ್ ಕೊಡಿ ಎಂದು ಜೊಲ್ಲು ಸುರಿಸುತ್ತಿವೆ. ಎನ್. ಶಂಕ್ರಪ್ಪನೆಂಬ ಚೆಡ್ಡಿ ಸೇಡಂನ ಹಿಂದೆ ಹೋಗಿ ಅಬ್ಬೇಪಾರಿಯಾಗಿದ್ದಾನೆ. ಜಿ.ಪಂ. ತಾಪಂ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳಿಗೆ ಟ್ರಾನ್ಸ್‌ಫರ್ ಭೂತ ಹೊಕ್ಕಿದೆ. ಜೆಡಿಎಸ್-ಚೆಡ್ಡಿಗಳು ತಮಗೆ ಬೇಕಾದ ಕೋ-ಜಾ ಅಧಿಕಾರಿಗಳನ್ನು ರಾಯಚೂರಿಗೆ ತರುವ ಹುನ್ನಾರದಲ್ಲಿವೆ.

-ವರದಿಗಾರ


ಎಲ್ಲಾ ಸತ್ಯಗಳು ಪ್ರಾರಂಭವಾಗುವುದೇ ನಿಂದನೆಗಳಿಂದ -ಜಾರ್ಜ್ ಬರ್ನಾರ್ಡ್ ಶಾ



## ಚಿದಂಬರಂ ಬಜೆಟ್:
# ಟ್ರೈನ್ ಹೋದ ಮೇಲೆ ಕೊಟ್ಟ ಟಿಕೆಟ್!

ಬಜೆಟ್ ಎಂದರೆ ಇಲ್ಲದ ಆಸಕ್ತಿ ಕುತೂಹಲ ಕೆರಳಿಸಲು ತಿಂಗಳೊಪ್ಪತ್ತಿನಿಂದ ಸರ್ಕಾರದ ಕಸರತ್ತು ಪ್ರಾರಂಭವಾಗುತ್ತದೆ. ಇದು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಸಮಾಜದ ಎಲ್ಲಾ ವರ್ಗಗಳ ಜೊತೆಗೂ ಸಮಾಲೋಚನೆ ನಡೆಸುವ ನಾಟಕವೂ ನಡೆಯುತ್ತದೆ. ಆದರೆ ಅಂತಿಮವಾಗಿ ಯಾವ ಬಜೆಟ್ ಬಡವರಿಗಂತೂ ನಿರಾಳ ತರುವುದಿಲ್ಲ. ಬಜೆಟ್ಟಿನಲ್ಲಿ ಪ್ರಹಾರಗಳು ಇರದಿದ್ದರೂ ಬಜೆಟ್ ಮಂಡನೆಯಾದ ಆರಂಭದಲ್ಲೇ ಪ್ರಾರಂಭವಾಗುವ ಬಜೆಟ್ಟಿನಲ್ಲಿರದ ತೆರಿಗೆಗಳು, ಶುಲ್ಕಗಳು, ಹೊಸ ಹೊಸ ಬಗೆಯಲ್ಲಿ ಸುಲಿಯುವ ಪ್ರಸ್ತಾಪಗಳು ಪ್ರಾರಂಭವಾಗುತ್ತವೆ.

ಇವೆಲ್ಲಾ 58 ವರ್ಷದಿಂದ ನಡೆಯುತ್ತಲೇ ಬರುತ್ತಿದ್ದರೂ ಬಜೆಟ್ಟಿನ ವಿಶ್ಲೇಷಣೆ ಮಾಡುವಾಗ ನಮ್ಮ ಪಂಡಿತರು – ಆರ್ಥಿಕ ತಜ್ಞರು, ಸಾಮಾಜಿಕ ಕ್ಷೇತ್ರಕ್ಕೆ ಹೆಚ್ಚುಹಣ ನೀಡಿದ್ದರೆ ಅದು ಬಡವರ ಪರವೆಂದೂ, ಕೈಗಾರಿಕೋದ್ಯಮಿಗಳ ಪರವಾಗಿ ಅವರ ಮೇಲಿನ ಹೊರೆ ಇಳಿಸಿದ್ದರೆ ಅದನ್ನು ಅಭಿವೃದ್ಧಿ ಪರವೆಂದೂ, ನಿಷ್ಕಾರಣ್ಯದಿಂದ ಬಡವರಿಗೆ ನೀಡುತ್ತಿದ್ದ ಎಲ್ಲಾ ಸೇವೆ, ಸೌಕರ್ಯಗಳನ್ನೂ ಹಿಂತೆಗೆದುಕೊಂಡಿದ್ದರೆ ಅದನ್ನು ಅತ್ಯಂತ ಧೈರ್ಯಶಾಲಿ ಬಜೆಟ್ ಎಂದೂ ವರ್ಣಿಸುತ್ತಾರೆ. ಬಡವರು ಉಪಯೋಗಿಸುವ ಸರಕುಗಳ ಮೇಲೆ ತೆರಿಗೆ ಜಾಸ್ತಿ ವಿಧಿಸಿದ್ದರೆ ಅದನ್ನು ಬಡವರ ವಿರೋಧಿ ಬಜೆಟ್ಟೆಂದೊ, ಹಾಗಿಲ್ಲದಿದ್ದರೆ ಅದು ನೀರಸ ಬಜೆಟ್ಟೆಂದು ವಿರೋಧ ಪಕ್ಷಗಳು ಸ್ಟಿರಿಯೋ ಟೈಪ್ ಪ್ರತಿಕ್ರಿಯೆಗಳನ್ನು ನೀಡುತ್ತಾರೆ. ಒಟ್ಟಾರೆ ಈ ಎಲ್ಲಾ ಪ್ರತಿಕ್ರಿಯೆಗೂ ಬಜೆಟ್ ಪ್ರಕ್ರಿಯೆಯು ಆವರೆಗೆ ನಡೆಯುತ್ತಲೆ ಬರುತ್ತಿರುವ ವಿದ್ಯಮಾನಗಳಿಂದ ಹೊರತು ಪಡಿಸಿ ಹುಸಿ ನಿರೀಕ್ಷೆಯನ್ನು ಮೂಡಿಸುತ್ತದೆ.



ಆದ್ದರಿಂದಲೇ ಬಜೆಟನ್ನು ವಿಶ್ಲೇಷಿಸುವ, ಅರ್ಥಮಾಡಿಕೊಳ್ಳುವ ಕ್ರಮವೇ ಬದಲಾಗಬೇಕು. ಮೊದಲನೆಯದಾಗಿ ವರ್ಷಕ್ಕೊಮ್ಮೆ ಮಂಡನೆಯಾಗುವ ಬಜೆಟ್ ವರ್ಷವಿಡೀ ಆಚರಣೆಯಲ್ಲಿರುವ ಆರ್ಥಿಕ ಕ್ರಮಗಳ ಮುಂದುವರೆದ ಭಾಗವಷ್ಟೇ. ಆದರಲ್ಲೂ 2002ರಲ್ಲಿ ಭಾರತ ಸರ್ಕಾರ ಸಂಸತ್ತಿನಲ್ಲಿ FRBM (FISCAL RESPONSIBILITY AND BUDGET MANAGEMENT) ಎಂಬ ಮಸೂದೆಯನ್ನು ಪಾಸು ಮಾಡಿದ ನಂತರ ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದರ ಭಾಗವಾಗಿಯೇ ಬಜೆಟ್ಟನ್ನು ರೂಪಿಸಬೇಕು. ಅಂದರೆ ಸರ್ಕಾರ ಖರ್ಚುಗಳನ್ನು ಕಡಿಮೆ ಮಾಡಿ ಆದಾಯ ಹೆಚ್ಚಿಸಬೇಕು. ಅರ್ಥಾತ್ ಸರ್ಕಾರ ಬಡಜನತೆಯ ಕಲ್ಯಾಣದ ಮೇಲೆ ಮಾಡುವ ಖರ್ಚನ್ನು, ಕೊಡುತ್ತಿದ್ದ ಸಬ್ಸಿಡಿಯನ್ನು, ರಿಯಾಯಿತಿ ದರದ ಸೇವೆ-ಸರಕುಗಳನ್ನು ಹಿಂತೆಗೆದುಕೊಳ್ಳಬೇಕು ಎಂದರ್ಥ. ವಿತ್ತೀಯ ಕೊರತೆ ಕಡಿಮೆ ಮಾಡುತ್ತಾರೆ ಎಂದರೆ ಬಡವರಿಗೆ ಇಷ್ಟು ಹೊರೆ ಬಿತ್ತು ಎಂತಲೇ ಅರ್ಥ.

ಚಿದಂಬರಂ ಅವರ ಬಜೆಟ್ ವಿತ್ತೀಯ ಕೊರತೆಯನ್ನು 4.2ರಿಂದ 3.8ಕ್ಕೆ ಇಳಿಸಿ, ಈ ವರ್ಷ 3.2 ಗಳಿಸುವ ಯೋಜನೆ ಹೊಂದಿದೆ. ಪ್ರತಿ 0.1% ಕೊರತೆಯ ಇಳಿತ ಎಂದರೆ 11,000 ಕೋಟಿ ರೂ. ಹೆಚ್ಚುವರಿ ತೆರಿಗೆ, ಬಡವರಿಗೆ ಎಂದರ್ಥ. 0.6% ಕೊರತೆಯ ಇಳಿತ ಎಂದರೆ 66,000 ಕೋಟಿ ಹೆಚ್ಚುವರಿ ತೆರಿಗೆ ಹೊರೆ ಬಡವರ ಮೇಲೆ ಎಂದರ್ಥ. ಆದರೂ ಈ ಬಜೆಟ್ಟನ್ನು ಬಡವರ ಪರ ಬಜೆಟ್ ಎಂದು ಪಂಡಿತರು ಹೊಗಳುತ್ತಾರೆ. ಇನ್ನು ಸಾಮಾಜಿಕ ಕ್ಷೇತ್ರದಲ್ಲಿ ಹೆಚ್ಚುವರಿ ಹೂಡಿಕೆಯಾದ ಮಾತ್ರಕ್ಕೆ ಅದು ಬಡವರ ಪರ ಬಜೆಟ್ ಆಗುತ್ತದೆಯೇ? ಇಂದು ಭಾರತದ ಇಡೀ ಕೃಷಿಯಲ್ಲಿ ಕಾರ್ಪೊರೇಟೀಕರಣ, ಕ್ರಾಂಟ್ರಾಕ್ಟ್ ಫಾರ್ಮಿಂಗ್ ಪದ್ಧತಿ ಜಾರಿಗೆ ಬರುತ್ತಿದೆ. ಅದರ ಭಾಗವಾಗಿ ಕೃಷಿ ಬಹುರಾಷ್ಟ್ರೀಯ ಕಂಪನಿಗಳು ಕೆಲವು ನಿರ್ದಿಷ್ಟ ವಲಯದಲ್ಲಿ ನಿರ್ದಿಷ್ಟ ಹೂಡಿಕೆಯನ್ನು ಡಿಮ್ಯಾಂಡ್ ಮಾಡುತ್ತಿವೆ. ಈ ಬಜೆಟ್ ಅದನ್ನು ಪೂರೈಸಿದೆ. ಹೀಗಾಗಿ ಕೃಷಿ ಕ್ಷೇತ್ರದಲ್ಲಿ ಹೆಚ್ಚುವರಿ ಹೂಡಿಕೆ ಆದ ಮಾತ್ರಕ್ಕೆ ಅದು ರೈತರ ಪರವಾದ ಬಜೆಟ್ ಆಗಿಬಿಡುವುದಿಲ್ಲ.


ಆದ್ದರಿಂದಲೇ ಈ ದೇಶದ ಪ್ರಜಾತಂತ್ರದ ಬಗ್ಗೆ ಕವಿಯೊಬ್ಬ ಹೀಗೆ ಹೇಳುತ್ತಾನೆ:

*ಬಿರ್ಲಾನಿಗೂ ಒಂದೇ ಓಟು*
*ಪೆರಿಯಸ್ವಾಮಿಗೂ ಒಂದೇ ಓಟು*
*ಆಹಾ ಎಂತಾ ಪ್ರಜಾತಂತ್ರ*
*ಆದರೂ ಪ್ರತಿ ಬಾರಿ*
*ಪೆರಿಯಸ್ವಾಮಿ ಸೋಲುತ್ತಾನೆ*
*ಬಿರ್ಲಾ ಗೆಲ್ಲುತ್ತಾನೆ.*

# ರಾಘವೇಶ: ಮತ್ತೆ ಶೂದ್ರರಿಗೆ ಅವಮಾನ!



ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಸ್ವಾಮಿಯನ್ನು ಮನುವಿನ ಭೂತ ಇನ್ನೂ ಬಿಟ್ಟಂತಿಲ್ಲ. ಹಿಂದೊಮ್ಮೆ ಕ್ಷೌರಿಕ ಜನಾಂಗವನ್ನು ಅವಮಾನಿಸಿದ್ದ ರಾಘವೇಶ್ವರ ಸ್ವಾಮಿ ಕ್ಷೌರಿಕರ ಕೆಂಗಣ್ಣಿಗೆ ಗುರಿಯಾಗಿದ್ದ. ಕೊನೆಗೆ ಮಂಡೇಲಾ ಹೆಸರಲ್ಲೇ ಎಲ್ಲರ ತಲೆ ಬೋಳಿಸುತ್ತಿರುವ ಮುತ್ತುರಾಜ್ ಎಂಬ ಲೀಡರ್ ರಾಘವೇಶ್ವರ ಸ್ವಾಮಿಗಳಿಗೆ ಶರಣಾಗಿ ಇಡೀ ಕ್ಷೌರಿಕ ಜನಾಂಗದವರ ಪ್ರತಿಭಟನೆಯನ್ನೇ ಮಣ್ಣುಪಾಲು ಮಾಡಿದ್ದ. ಆದಾದ ನಂತರ ರಾಘವೇಶ್ವರ ಸ್ವಾಮೀಜಿ ಹೊರಟಿದ್ದೇ ಗೋ ರಕ್ಷಣೆ ಯಾತ್ರೆಯ ಮೇಲೆ. ಸ್ಥಳೀಯ ಗೋ ತಳಿಗಳನ್ನು ರಕ್ಷಿಸಬೇಕಾಗಿರುವುದು ಅಗತ್ಯವಾದರೂ, ಗೋರಕ್ಷಣೆಯ ಹೆಸರಲ್ಲಿ ರಾಘವೇಶ್ವರ ಸ್ವಾಮಿ ಮಾಡಿದ್ದು ಮಾತ್ರ ಬ್ರಾಹ್ಮಣಶಾಹಿಗಳ ಹಿಂದೂತ್ವವಾದದ ಮುಂದುವರಿಕೆ. ಅದೆಲ್ಲ ಹಿಂದಿನ ಮಾತು ಬಿಡಿ.




ಈಗ ಇದೇ ರಾಘವೇಶ್ವರ ಸ್ವಾಮಿ "ಶ್ರೀ ರಾಮಾಯಣ ಮಹಾಸತ್ರ" ಎಂಬ ಹೊಸ ಕಾರ್ಯಕ್ರಮ ನಡೆಸಿದ್ದಾರೆ. ಸುಮಾರು ಆರು ಕೋಟಿ ರೂಪಾಯಿಗಳು ವೆಚ್ಚವಾಗುತ್ತಿರುವ ಈ ಮಹಾಸತ್ರ ಕಾರ್ಯಕ್ರಮದಲ್ಲಿ ಭಾರತದ ಎಲ್ಲಾ ನದಿಗಳ ನೀರು, ಜೊತೆಗೆ ನಾಲ್ಕು ಸಮುದ್ರದ ನೀರನ್ನು ತಂದ ಅಭಿಷೇಕ ಮಾಡುತ್ತಾರಂತೆ. ಈ ಆರು ಕೋಟಿ ರೂ. ಕೂಡ ಮಠದಿಂದೇನು ಬರುತ್ತಿಲ್ಲ, ಅದು ಕೂಡ ಸಾರ್ವಜನಿಕರ ಜೇಬಿನಿಂದಲೇ ಎಂದು ಹೇಳುವ ಅಗತ್ಯವೇನಿಲ್ಲ. ಆದರೆ ಮೊನ್ನೆ ಈ ಕಾರ್ಯಕ್ರಮದಲ್ಲಿ ಜನರ ನಡುವೆ ಎಂಥ ಬೇದಭಾವ ಮಾಡಲಾಯಿತೆಂದರೆ ಬ್ರಾಹ್ಮಣರಿಗೇ ಒಂದು ಕಡೆ ಊಟ, ಶೂದ್ರ ಮತ್ತು ಇನ್ನಿತರರಿಗೆ ಪ್ರತ್ಯೇಕವಾಗಿ ಊಟ ಬಡಿಸಲಾಯ್ತು. ಸಹಜವಾಗಿಯೇ ಮೇಲುಜಾತಿ ಬ್ರಾಹ್ಮಣರು ಊಟ ಮಾಡುತ್ತಿದ್ದ ಜಾಗದ ಮುಂದೆ "ವೈದಿಕ ಭೋಜನ, ದಯವಿಟ್ಟು ಸಹಕರಿಸಿ" ಎಂದ ಬೋರ್ಡ್ ತಗುಲಿಸಿದ್ದಲ್ಲದೆ, ಶೂದ್ರರಿಗೆ ಉರಿಬಿಸಿಲಿನ ಬಯಲಿನಲ್ಲಿ ಊಟ ಬಡಿಸಲಾಯ್ತು.

ಹೇಳಿಕೇಳಿ ಇದೇ ಮಠದ ಆವರಣದಿಂದ ಹಿಂದೊಮ್ಮೆ ಜನಿವಾರ ಮರೆತಿದ್ದ ಸಾಗರ ಹಾಗೂ ಹೊಸನಗರದ ನ್ಯಾಯಾಧೀಶರನ್ನೇ ಹೊರಗಟ್ಟಲಾಗಿತ್ತು. (ಅವರೂ ಬ್ರಾಹ್ಮಣರೇ ಎಂದು ಆನಂತರ ಗೊತ್ತಾದ ಮೇಲೆ ಅವರ ಮನೆಗೇ ಹೋಗಿ ತಾಂಬೂಲ ಕೊಟ್ಟು ಬಂದಿತ್ತು ಸ್ವಾಮಿಗಳ ಪಟಾಲಂ). ಇಂತಹ ಮಠದಲ್ಲಿ ಬ್ರಾಹ್ಮಣರೇತರರಿಗೆ ಇನ್ನೆಂತಹ ಆತಿಥ್ಯ ದಕ್ಕೀತು? ಆದರೆ ಮುಠ್ಠಾಳ ಶೂದ್ರರಿಗೆ ಬುದ್ಧಿ ಬರುವುದಿಲ್ಲ. ಕ್ಷೌರಿಕ ಮುತ್ತುರಾಜನಂತೆ ಇವರು ಕೂಡ ಈ ಮನುವಾದಿ ಸ್ವಾಮಿಯ ಮುಂದೆ ನಡುಬಗ್ಗಿಸುತ್ತಾರೆ, ಆತನ ಗೋಯಾತ್ರೆಗೆ ಹಣ ನೀಡುತ್ತಾರೆ. ಈ ಶೂದ್ರರು ಉದ್ಧಾರವಾಗುವುದಾದರೂ ಎಂದು?

# ಸಿದ್ಧಲಿಂಗಯ್ಯನ ನಂಬಬೇಕ್ರಲಾ... ಮರೆತು ಬಿಡ್ರಲಾ...

ಗಣ್ಯ ವ್ಯಕ್ತಿಯೊಬ್ಬನಿಗೆ ಇಂತಿಷ್ಟೆಂದು ವಯಸ್ಸಾದರೆ, ಮಹತ್ವದ ಘಟನೆಯೊಂದು ಘಟಿಸಿದರೆ ಅದರ ನೆನಪಿನಲ್ಲಿ ಏನಾದರೂ ಕಾರ್ಯಕ್ರಮ ನಡೆಯುವುದು ಒಂದು ವಾಡಿಕೆ. ಆದರೆ ಮಹತ್ವದ ಪುಸ್ತಕವೊಂದು ಪಬ್ಲಿಷ್ ಆದ 30 ವರ್ಷಗಳ ನೆನಪಿನಲ್ಲಿ ಈಗ ಏನೇನೂ ಪ್ರಸ್ತುತತೆಯಿರದ ಅದೇ ಪುಸ್ತಕದ ಲೇಖಕನಿಗೆ ಸನ್ಮಾನ ನಡೆಸಿದರೆ ಏನನ್ನಬೇಕು!

ಇನ್ನೇನೂ ಬೇಕಿಲ್ಲ, ಅದರ ಒಳ ಉದ್ದೇಶಗಳೇನೆಂದು ನೋಡಬೇಕಷ್ಟೇ. ಕವಿ, ಬರಹಗಾರ, ಚಿಂತಕ, ಹೋರಾಟಗಾರ ಎಲ್ಲವೂ ಆಗಿದ್ದು ಈಗ ಎಲ್ಲದರಲ್ಲೂ ಮಾಜಿ ಎನಿಸಿಕೊಂಡಿರುವ ಹಾಲಿ ಬೆಂಗಳೂರು ವಿ.ವಿ. ಕನ್ನಡ ಪ್ರಾಧ್ಯಾಪಕ ಡಾ. ಸಿದ್ಧಲಿಂಗಯ್ಯನವರಿಗೆ ಕೆಲವು ನಿರುದ್ಯೋಗಿಗಳು ಸೇರಿಕೊಂಡು 'ಇಕ್ರಲಾ ಒದಿರಲಾ ಈ ನನ್ ಮಕ್ಕಳ ಚರ್ಮ ಎಬ್ರಲಾ' ಖ್ಯಾತಿಯ 'ಹೊಲೆ ಮಾದಿಗರ ಹಾಡು' ಕವನ ಸಂಕಲನ ಪ್ರಕಟವಾದ 30 ವರ್ಷದ ನೆನಪಿಗೆ ಸನ್ಮಾನ ವ್ಯವಸ್ಥೆ ಮಾಡಿದ್ದಾರೆ. ಇನ್ನೇನು ಖಾಲಿಯಾಗಲಿರುವ ಬೆಂಗಳೂರು ವಿ.ವಿ. ಉಪಕುಲಪತಿ ಹುದ್ದೆಗೆ ತಮ್ಮನ್ನು ತಾವೇ ಪ್ರೊಜೆಕ್ಟ್ ಮಾಡಿಕೊಳ್ಳಲು ಪಾಪ ಸಿದ್ಧಲಿಂಗಯ್ಯನವರಿಗೆ ಇನ್ನಾವ ದಾರಿ ಇತ್ತು ಹೇಳಿ.



ಕಿಡಿಗೇಡಿಗಳ್ಯಾರಾದರೂ ಸಿದ್ಧಲಿಂಗ್ಯಯನವರ 'ಇಕ್ರಲಾ, ಒದಿರ್ಲಾ' ಪ್ರತಿಯನ್ನು ಅರ್ಥ ಸಮೇತ ಕೇಶವಶಿಲ್ಪಕ್ಕೂ ಹಾಗೂ ಶಿಕ್ಷಣ ಸಚಿವ ಡಿ.ಎಚ್.ಶಂಕರಮೂರ್ತಿಗಳಿಗೂ ಕಳಿಸಿಕೊಟ್ಟರೆ ಮಾಜಿ ಕವಿಗಳ ಆಶೆ ನಿರಾಶೆಯಾದರೂ ಆಶ್ಚರ್ಯವಿಲ್ಲ. 'ತಕ್ಷಣ ತೀವ್ರವಾಗಿ ಪ್ರತಿಭಟಿಸು, ಆದರೆ ನಂತರ ಸಮಯ ಕಾದು ನೀನು ಎಂದೋ ಪ್ರತಿಭಟಿಸಿದ್ದನ್ನು ಆಳುವವನಿಗೆ ನೆನಪಿಸು. ನಿನಗೆ ಒಳಿತಾಗಬಹುದು....'

'ಇಕ್ರಲಾ' ಸಂಕಲನದ ಹೊಸ ಎಡಿಷನ್‌ನ ಕೊನೆ ಪುಟಕ್ಕೆ ಈ ಸಾಲುಗಳನ್ನು ಸೇರಿಸಿಕೊಂಡರೆ ಅಲ್ಲಿಗೆ ಸಿದ್ಧಲಿಂಗಯ್ಯ ಕಾಂಡದ ಅಧ್ಯಾಯ ಪರಿಪೂರ್ಣವಾದಂತಾಗುವುದಿಲ್ಲವೆ?

# ಸುಗಮ ಸಂಗೀತದಲ್ಲಿ ಚೆಡ್ಡಿ ರಾಗ!

'ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ' ಎಂಬ ಗಾದೆ ಮಾತಿಗೆ ತಕ್ಕ ಹಾಗೆ ಕರ್ನಾಟಕ ಸುಗಮ ಸಂಗೀತ ಪರಿಷತ್‌ನವರು ವರ್ತಿಸಿರುವುದು ಈಗ ಸುದ್ದಿಯಾಗಿದೆ.

ಸುಗಮ ಸಂಗೀತಕ್ಕೆ 'ಸಂತ ಶಿಶುನಾಳ ಷರೀಫ'ರ ಹೆಸರಿನಲ್ಲಿ ಕೊಡುತ್ತಿದ್ದ ಪ್ರಶಸ್ತಿಯ ಹೆಸರು ಬದಲಾಯಿಸಿ 'ಪಿ. ಕಾಳಿಂಗ ರಾವ್ ಪ್ರಶಸ್ತಿ' ಎಂದು ಬದಲಾಯಿಸಲು ಈ ತಲೆಹರಟೆಗಳು ಇತ್ತೀಚೆಗೆ ಒಂದು ನಿರ್ಣಯ ಮಾಡಿದ್ದಾರೆ.

ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಿ 'ಚೆಡ್ಡಿ ವೈರಸ್' ಹರಡುತ್ತಿರುವ ಸೂಚನೆಯಿದು. ಸಿ. ಅಶ್ವಥ್‌ನಂತಹ ಆವರೇಜ್ ಲೆವಲ್ಲಿನ ಹಾಡುವ ಕಸುಬಿನವರು ಅಷ್ಟಿಷ್ಟು ಹೆಸರು ಕಾಸು ಮಾಡಲು ಏಣಿಯಂತೆ ಬಳಸಿದ್ದೇ ಷರೀಫರ ರಚನೆಗಳನ್ನು ಹಾಡುವ ಮೂಲಕ. ಈಗ ಅದೇ ಜನ ತಮ್ಮ ಕೊಂಕು ಬುದ್ಧಿ ತೆಗೆದು ವಿನಾಕಾರಣ ಕಾಳಿಂಗರಾಯರ ಹೆಸರನ್ನು ತೆಗೆದು ತಮ್ಮ ಬೇರುಗಳು ಪುರೋಹಿತಶಾಹಿ ಅಂಗಳದಲ್ಲೇ ಇವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.



ಗಾಯಕನಾದವನ ಮನಸ್ಸು ಹೀಗೆ ತಿಪ್ಪೆಯಾದರೆ ಅವನು ಏನೇ ರಾಗಾ ಹಾಕಿದರೂ ಇನ್ನು ಮುಂದೆ ಕರ್ಕಶ ರಾಗಷ್ಟೇ ಕೇಳಿಸಲು ಸಾಧ್ಯ.

# ಗೋಧ್ರಾದಲ್ಲಿ ಟ್ರೈನಿಗೆ ಬೆಂಕಿ ಬಿದ್ದಿದ್ದು ಆಕಸ್ಮಿಕ -ಬ್ಯಾನರ್ಜಿ

ಎಲ್ಲರನ್ನೂ ಎಲ್ಲಾ ಕಾಲ ಮೋಸಗೊಳಿಸಲಾಗದೆಂದು ಈಗಲಾದರೂ ಸಂಘ ಪರಿವಾರ ಅರಿಯಲೇಬೇಕು. ಗುಜರಾತಿನ ಗೋಧ್ರಾದಲ್ಲಿ 2002ರ ಫೆಬ್ರವರಿ 26ರ ಬೆಳಿಗ್ಗೆ ಸಬರಮತಿ ಎಕ್ಸ್‌ಪ್ರೆಸ್ ಟ್ರೈನಿನ S-6ನೇ ಬೋಗಿಗೆ ಬೆಂಕಿ ಬಿದ್ದು 59 ಜನ ಸಜೀವವಾಗಿ ದಹನವಾದರು. ಆದರೆ ಆ ಬೆಂಕಿ ಆರುವ ಮುನ್ನ, ಆ ಬೆಂಕಿ ಬಿದ್ದದ್ದು ಹೇಗೆ ಎಂದು ತಿಳಿಯುವ ಮುನ್ನ ಸಂಘಪರಿವಾರದವರು ಇಡೀ ಗುಜರಾತಿಗೆ ಬೆಂಕಿ ಇಟ್ಟು ಭಾರತದ ನಾಗರೀಕತೆಯೇ ಕಂಡರಿಯದ ಪಾತಕಗಳನ್ನು ನಡೆಸಿ 2000ಕ್ಕೂ ಹೆಚ್ಚು ಮುಸ್ಲಿಮರನ್ನು ಬಲಿ ತೆಗೆದುಕೊಂಡರು. ಮುಸ್ಲಿಂ ಮಹಿಳೆಯರ ಮಾನಹರಣ ನಡೆಸಿದರು. ಗರ್ಭಿಣಿ ಸ್ತ್ರೀಯರ ಹೊಟ್ಟೆ ಬಗೆದರು. ಈ ದೇಶದ ಜನತೆಯ ಸಹಬಾಳ್ವೆಯ ಅಡಿಪಾಯವನ್ನೇ ವಿಶ್ವಾಸವನ್ನೇ ವಿಧ್ವಂಸ ಮಾಡಿದರು.



ಇವೆಲ್ಲಕ್ಕೂ ಅವರು ತೋರಿಸಿದ ಒಂದೇ ಕಾರಣ "ಅವರೇಕೆ ಸಬರಮತಿ ರೈಲಿನಲ್ಲಿದ್ದ ಕರಸೇವಕರನ್ನು ಕೊಲ್ಲಬೇಕಿತ್ತು" ಎಂಬುದು ಆದರೆ ಪ್ರಾರಂಭದಿಂದಲೂ RSS ಕಟ್ಟಿದ ಕತೆಯನ್ನು ನಂಬುವಂತಿರಲಿಲ್ಲ, ಕಿಕ್ಕಿರಿದು ಸೇರಿದ್ದ ಆ S-6 ಬೋಗಿಯಲ್ಲಿ ಬೆಂಕಿ ಬಿದ್ದಾಗ ಸತ್ತವರು 59 ಮಂದಿ ಮಾತ್ರ. ಉಳಿದ ರಿಸರ್ವೇಶನ್ ಹೊಂದಿದ್ದ ಪ್ರಯಾಣಿಕರ ಪತ್ತೆಯೇ ಆಗಿಲ್ಲ, ನಂತರ ಫೋರೆನ್ಸಿಕ್ ಲ್ಯಾಬ್ ನಡೆಸಿದ ಪರೀಕ್ಷೆಯಲ್ಲಿ S¥6 ಬೋಗಿಗೆ ಬೆಂಕಿ ಹೊರಗಿಂದ ಬೀಳಲು ಸಾಧ್ಯವೇ ಇಲ್ಲ ಎಂದು ನಿರ್ಣಾಯಕ ಅಭಿಪ್ರಾಯ ನೀಡಿತು.


ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶ ಬ್ಯಾನರ್ಜಿ ಸಮಿತಿ ಸತತ ಒಂದೂವರೆ ವರ್ಷ S-6 ಬೋಗಿಗೆ ಬೆಂಕಿ ಬಿದ್ದದ್ದು ಹೇಗೆ ಎಂಬುದನ್ನು ಕುರಿತು ಎಲ್ಲ ಬಗೆಯ ವಾದಗಳನ್ನು ಪರಿಶೀಲಿಸಿ "ಅದು ಆಕಸ್ಮಿಕವೇ ಹೊರತು ಉದ್ದೇಶಪೂರ್ವಕವಾದ ಕೃತ್ಯವಲ್ಲ. ಬೆಂಕಿ ಹೊರಗಡೆಯಿಂದ ಬಿದ್ದಿಲ್ಲ. ಆದ್ದರಿಂದ ಹೊರಗಿನಿಂದ ಮುಸ್ಲಿಮರು ಬೆಂಕಿ ಹಾಕಿದರು ಎಂಬ ವಾದದಲ್ಲಿ ಹುರುಳಿಲ್ಲ" ಎಂಬ ಖಚಿತವಾದ ತೀರ್ಮಾನ ನೀಡಿದ್ದಾರೆ.


ಗೋಧ್ರಾ ಘಟನೆಯ ನಂತರ ನಡೆದ ಗುಜರಾತ್ ಹತ್ಯಾಕಾಂಡವನ್ನು ಅಂದಿನ ಪ್ರಧಾನಿ ವಾಜಪೇಯಿ, ಗೃಹಮಂತ್ರಿ ಅಡ್ವಾನಿ, ಹಾಗೂ ಗುಜರಾತಿನ ಮುಖ್ಯಮಂತ್ರಿ ಮೋದಿ ಎಲ್ಲರೂ ಅದು ಹಿಂದೂಗಳು ರೋಸತ್ತು ಹೋಗಿ ತೋರಿಸುತ್ತಿರುವ ಪ್ರತಿಕ್ರಿಯೆಯಷ್ಟೇ ಎಂದು ಏಕಪಕ್ಷೀಯವಾಗಿ ಸಮರ್ಥಿಸಿಕೊಂಡಿದ್ದರು. ಅಮೆರಿಕದವರು ಇರಾಕ್‌ನ ನಿಶಸ್ತ್ರ ಜನರ ಮೇಲೆ ಬಾಂಬ್ ಎಸೆದು ಕೊಲ್ಯಾಟರಲ್ ಡ್ಯಾಮೇಜ್ ಎಂದು ಹೇಳುವಂತೆ. ಈಗ ಇರಾಕ್ ಮೇಲೆ ಯುದ್ಧ ಮಾಡಲು ಅಮೆರಿಕ ತೋರಿಸಿದ ಕಾರಣ ಸುಳ್ಳೆಂದು ಸಾಬೀತಾಗಿರುವಂತೆ, ಗುಜರಾತ್ ನರಮೇಧಕ್ಕೆ ಸಂಘ ಪರಿವಾರ ತೋರಿಸಿದ ಕಾರಣವೂ ಸುಳ್ಳೆಂಬುದು ಸಾಬೀತಾಗಿದೆ. ಆದರೆ ಅವರು ಸೃಷ್ಟಿಸಿದ ವಿನಾಶ ಇನ್ನೂ ಹಸಿಯಾಗಿದೆ. ಅದಕ್ಕೆ ನ್ಯಾಯ ಸಿಗುವುದೆ? ಸಿಗದಿದ್ದರೆ ಜನ ಸುಮ್ಮನಿರುತ್ತಾರೆಯೇ? ಇತಿಹಾಸದಲ್ಲಿ ಹಾಗೆ ಜನ ಸುಮ್ಮನೆ ಕುಳಿತ ಉದಾಹರಣೆಯಿಲ್ಲ.


ಪ್ರೀತಿಗಿಂತಲೂ, ಹಣಕ್ಕಿಂತಲೂ, ಖ್ಯಾತಿಗಿಂತಲೂ ನನಗೆ ಸತ್ಯ ಕೊಡಿ -ಹೆನ್ರಿ ಡೇವಿಡ್ ಥೋರೋ




















ಜಾರ್ಜ್ ಬುಷ್-ಪ್ರಾಯಶಃ ಪ್ರಪಂಚದಲ್ಲಿ ಯಾವುದೇ ಮೂಲೆಯಲ್ಲೂ ಜನ ದ್ವೇಷಿಸುವ ಏಕೈಕ ವ್ಯಕ್ತಿ. ವಿಶ್ವದ ವಿನಾಶಕ್ಕೆ ಸಂಕೇತದಂತಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಧಿಪತಿಯಾಗಿರುವ ಜಾರ್ಜ್ ಬುಷ್ ಯುದ್ಧ ವ್ಯಾಮೋಹಿ, ರಕ್ತಪಿಪಾಸು, ಆಧುನಿಕ ಹಿಟ್ಲರ್.

ಸಾಮ್ರಾಜ್ಯಶಾಹಿಯು ಬರ್ಬರ ಸಂಸ್ಕೃತಿಯು ಜಾರ್ಜ್ ಬುಷ್‌ನಲ್ಲಿ ಹಲವಾರು ಬಗೆಯಲ್ಲಿ ವ್ಯಕ್ತೀಕರಣಗೊಂಡಿದೆ. ಅದೂ ವಿಶ್ವದ ಹಲವಾರು ಮಾನವೀಯ, ಸಂವೇದನಾಶೀಲ ವ್ಯಂಗ್ಯ ಚಿತ್ರಕಾರರ ಕುಂಚದಲ್ಲಿ ಜಾರ್ಜ್ ಬುಷ್ ಹೀಗೆಲ್ಲಾ ಕಂಡಿದ್ದಾನೆ.


ಇಂತಹ ಬರ್ಬರ ವ್ಯಕ್ತಿತ್ವದ ವಿಶ್ವವಿನಾಶಕಾರಿ ಬುಷ್ ಭಾರತಕ್ಕೆ ಭೇಟಿ ಕೊಟ್ಟಾಗ ಮುಖ್ಯಧಾರೆಯ ಯಾವ ಪತ್ರಿಕೆಯಲ್ಲೂ ಅವನನ್ನು ಟೀಕಿಸುವ, ಗೇಲಿ ಮಾಡುವ ಸಾಹಸಕ್ಕೆ ಹೋಗದಿದ್ದುದು ಭಾರತದ ಸಾಂಸ್ಕೃತಿಕ ಲೋಕದ ದಾಸ್ಯಕ್ಕೆ ಸಂಕೇತವೇನೋ ಎನ್ನುವ ಅನುಮಾನ ಬರುತ್ತಿತ್ತು.

'ಲಂಕೇಶ್' ವಿಶೇಷ ಸಂಚಿಕೆಯಲ್ಲಿ ವಿಶ್ವದ ಹಲವಾರು ಶ್ರೇಷ್ಠ, ವ್ಯಂಗ್ಯಚಿತ್ರಕಾರರ ಮೂಸೆಯಲ್ಲಿ ಬುಷ್ ಬಣ್ಣಿತವಾದ ಬಗೆಯನ್ನು ಪ್ರಕಟಿಸುತ್ತಿದ್ದೇವೆ.




















# ಕತೆ

# ದಣಿವು ಕಾಡುವ ಹೊತ್ತು



ಸವಿತಾ, ಸರ್ ಬಂದಾರ'. ಒಂದು ಕ್ಲಾಸ್ ಮುಗಿಸಿ ಇನ್ನೊಂದು ಕ್ಲಾಸಿಗೆ ಹೋಗೋ ಅವಸರದಲ್ಲಿದ್ದಾಗ ಲಕ್ಷ್ಮಿ ಮೋಹಂ ಸಣ್ಣಗೆ ಅಂದರು. 'ಹೌದಾ ಹ್ಯಾಂಗ್ಯಾ ಅದಾರು. ಆಮೇಲೆ ಹೋಗೋಣಲ್ಲ' ಅಂದುಕೋತ ಕ್ಲಾಸಿಗೆ ಹೋದೆವು. ಆವತ್ತೇ ಹೋಗಿ ಬಂದಿದ್ದರೆ ಈಗಂಥ ಮುಜುಗರ ಇರ್ತಿರಲಿಲ್ಲ. ವಿಷಯ ತಿಳಿದ ತಕ್ಷಣ ಸ್ಟಾಫಿನವರೆಲ್ಲ ಒಂದು ಟ್ರಾಕ್ಸ್ ಮಾಡಿಕೊಂಡು ಹೋಗಿಬಂದಿದ್ದರು. ನಮ್ಮನ್ನೂ ಕರೆದರಾದರೂ ಟ್ರಾಕ್ಸ್‌ನಲ್ಲಿ ಒತ್ತೊತ್ತು ಕೂತು ಆ ಬೆವರು, ಸಿಗರೇಟು, ಜರ್ದಾಗಳ ಘಮಲಿನೊಳಗೆ ಹೋಗಿಬರೋದು ಹಗುರವಲ್ಲ ಅನ್ನಿಸಿ ಕೈಬಿಟ್ಟಿದ್ದೆವು. ಇಷ್ಟಕ್ಕೂ, ನಾವು ಬಂದಿಲ್ಲವೆಂದು ಯೋಚಿಸೋ ಹೊತ್ತಲ್ಲ ಅದು. ಅದರಲ್ಲೂ ನಮ್ಮ ಪಾವಸ್ಕರ್ ಸರ್ ಅಂಥವರಲ್ಲ. ಹೆಣ್ಮಕ್ಕಳು ಅನ್ನೋ ಉದಾಸೀನದಲ್ಲಿ ಅದೆಲ್ಲ ಮುಖ್ಯ ಮಾತಾಗುವುದಿಲ್ಲ.

ಮನುಷ್ಯ ಸ್ವಲ್ಪ ಗರ್ವಿ. ಮಾತೆತ್ತಿದರೆ ತನ್ನ ಪೂರ್ವದ ವಿಜೃಂಭಣೆಯ ಕಂತೆ ಕಂತೆ ಉದುರಿಸುತ್ತಾನೆ. ಒಂದು ಸಿ.ಎಲ್ ಕೇಳಲು ಹೋದವರೂ 'ಹಿಂದೆ ರಾಯಭಾಗ ಹೈಸ್ಕೂಲಲ್ಲಿದ್ದಾಗ ಹೇಗೆ ಒಬ್ಬನನ್ನು ಎತ್ತಗಂಡಿ ಮಾಡಿಸಿದೆ' ಅನ್ನೋ ಚರಿತ್ರೆ ಕೇಳಿಯೇ ಬರಬೇಕು. ಶಾಲೇಲಿ ಮಕ್ಕಳ ಮುಂದೆ ಮಾಸ್ತರರನ್ನ, ಮಾಸ್ತರರ ಮುಂದೆ ಮಕ್ಕಳನ್ನ ಸಣ್ಣಗೆ ಆಡಿಕೊಳ್ಳುತ್ತ ತಾನು ಮತ್ತು ತನ್ನ ಕುರ್ಚಿಗಳೆರಡರ ಸುರಕ್ಷತೆಯ ಕನಸು ಕಂಡೂ ಕಂಡೂ ಮನಸು ಬಾತುಕೊಂಡಿತ್ತು. ಈ ಹೆಡ್ ಮಾಸ್ತರಕಿ ತನಗೆ

ತೀರಾ ಸಿಸ್ಸಿ ಮೊನ್ನೆವರಗೂ ಐದರಾಗ ಬಿದ್ದು ದುಡೀತಿದ್ದೋರು ಊರಾಗ ಛೀ ಥೂ ಅನ್ನಿಸಿಕೊಂಡಿದ್ದರಿಂದ, ತಾನು ಹೆಡ್ ಆದ ಕೂಡ್ಲೆ ಹಿಂದ ಹಿಂದ ಉಗಳತಿದ್ದೋರನ್ನೆಲ್ಲ ಸರಸ್ವತಿ ಪೂಜಾ, ಬೀಳ್ಕೊಡುವ ಸಮಾರಂಭ, ಸ್ವಾಗತ ಸಮಾರಂಭ ಇಂಥದ್ದಕ್ಕೆಲ್ಲ ಕರೆಸಿ ವಿಠಲನ ಅಂಗಡಿ ಪೂರಿ-ಚಾ ಕುಡಿಸಿ 'ಛಂದ ಹೊಂಟದ ಸಾಲಿ, ಅಡ್ಡಿಯಿಲ್ಲ ಆಡಳಿತ' ಅಂತ ಸರ್ಟಿಫಿಕೇಟ್ ಪಡಕೊಂಡಿದ್ದರು. ಸಾಲಿ ಮಕ್ಕಳನ್ನ ಜಾತಿವಾರು ಹಂಚಿಕೊಂಡು, 'ಯಾರಾರ ಮಾಸ್ತರು ಒಂದೀಟ ಕಣ್ಣ ಕಿಸದ್ರ ಇರ್ಲಿ ಧಿಕ್ಕಾರ ಕೂಗಾಕ ಅಂತ ಹುಡುಗೋರ್ನ ಇಟ್ಟಕಂಡು; ಧಿಕ್ಕಾರ ಕೂಗಿ ಅಭ್ಯಾಸ ಆದ ಬಾಯಿ ಯಾರೂ ಸಿಗಲಿಲ್ಲಂದ್ರ ನನ್ನ ಹೆಸ್ರಲ್ಲೂ ಕೂಗತಾರೋ ಅನ್ನೋ ಭಯ ಹತ್ತಿ ಈ ಎಲ್ಲ ಜೋಲಿಹಿಡ್ದ ಸಂಭಾಳಿಸಿಕೊಳ್ಳೋ ಇರಾದೇಲಿ ಬಿದ್ದು ಇತ್ತಿತ್ತಲಾಗಿ ಸಣ್ಣಗೆ ಸೊರಗತೊಡಗಿದ್ದರು. ಹಿಂದ ಬರೀ ಮಾಸ್ತರಕಿಲಿದ್ದಾಗ ಹೆಡ್‌ಮಾಸ್ತರಗೋಳ್ನ ಬಗ್ಗಬಡಿಯೂಕಂತಾನ ಬತ್ತಿ ಹಚ್ಚೋ ಚಾಳಿ ರೂಢಿಸಿಕೊಂಡಿದ್ದ ಸರ್‌ಗೆ ಈಗ 'ತಾ ಕಳ್ಳ, ಪರರ್‍ನ ನಂಬ' ಅನ್ನೋ ಹಾಂಗಾಗಿತ್ತು. "ಆಯ್ಯ ಬಿಡ್ರಿ ಮಗನ್ನ ತಂದು. ಅದಕ ಹಲ್ಕಟಗಿರಿ ನಾವೂ ಮಾಡೂಣಂದ್ರ ನಮ್ಗೂ ಅದ್ಕೂ ಏನ್ ಫರಕ್ ಉಳದಾತೂ" ಅಂತ ವಿಠಲನ ಕ್ಯಾಂಟೀನನ ಭಜಿ ತಿನ್ತಾ ಸಂಕಟಾ ನುಂಗತಿದ್ರು ಸತರೆಡ್ಡಿ ಸರ್. "ಗಿಡ್ದ ಹೂ ಗಿಡ್ದ

ದೈವದತ್ತವಾಗಿ ಬಂದ ವರ ಅಂತ ತಿಳಿಕೊಂಡಿದ್ದ ಪಾವಸ್ಕರ್ ಸರ್ ಅಧಿಕಾರಧಾರಣ ಮಾಡಿದ ಎರಡೇ ದಿನಕ್ಕೆ ಜಾತಿ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದ್ದೊಂದು ವಿಶೇಷವಾಗಿತ್ತು. ಆಮೇಲಿಂದ ಒಂದೇ ಒಂದ ದಿನಾ ರಜಾ ಹಾಕದೆ 'ತಾನಿಲ್ಲದಿದ್ದರೆ ಕುರ್ಚಿಗೇನೋ ಗಂಡಾಂತರ ಕಾದಿದೆ' ಅನ್ನೋ ಭಯದಲ್ಲಿ ಮುಂಜಾನಿ 9.30 ರಿಂದ ಸಂಜೆ 5.00ರವರೆಗೂ ಯಾರರ ಕಪ್ಪ ಚೆಲ್ಲಿರೂ ಮಿಸಕಾಡಲಾರೆ ಅನ್ನೋ ಧರವಸೇಲಿ ಕುರ್ಚಿಗೆ ಹತ್ತಿಕೊಂಡಿದ್ದ. ತಿಂಗಳಿಗೊಮ್ಮೆ ಸ್ಟಾಫ್ ಮೀಟಂಗಿನಾಗ 'ನೋಡ್ರಿ, ನಮ್ದು ಸರ್ಕಾರಿ ಸಾಲಿ ಅದಾ. ಇಂದ ಇಲ್ಲಿರ್ತೀವಿ, ನಾಳೆ ಋಣ ಹರೀತಂದ್ರ ಮತ್ತೆಲ್ಲೋ ಇರ್ತೀವಿ. ನಾವು ಚಂದಾಗಿ ನೋಕರಿ ಮಾಡಬೇಕಷ್ಟ. ಅದ್ನ ಬಿಟ್ಟು ರಾಜಕೀಯ ಮುಖಂಡರ ಕೈ ಕಾಲು ಸುತ್ತಿದ್ರ ಕಿಮ್ಮತ್ತ ಉಳ್ಯಾಂಗಿಲ್ಲ' ಅಂತ ಗೋಡೆಗೆ ತಗುಲಿ ಹಾಕಿದ್ದ ಗಾಂಧಿಯ ತುಂಡೊಂದು ಕಿವಿಪಡೆದು ನುಡಿದಂತೆ ಮಾತು ಉಳ್ಳಿಸುತ್ತಿದ್ದ. ಅದೇ ದಿನ ಎಂ.ಎಲ್.ಎ. ಪಿ.ಎ. ಫೋನ್ ಮಾಡಿದ್ರೂ ಕುಂತ ಕುರ್ಚಿಯಿಂದ ಚಂಗನೆ ಎದ್ದು 'ಆತ್ರಿ ಸಾಹೇಬ್ರ' ಅಂತ ದಾಕ್ಕೆ ಮೂರ ಸರ್ತಿ ಉಗುಳು ನುಂಗಿದ್ದ. ಆದರ ನಮ್ಮ ವೆಂಕಾರೆಡ್ಡಿ ಸರ್ ಹೇಳೂವಾಂಗ್ ಇದ್ದಾಸ್ಪದೂ [illegible] ಅಹಾಯಕಾರಿಯಲ್ಲ, ಅದಕ ಪಕ್ಕದ ಶಂಕರಾಳ [illegible] ಸ್ಕೂಲಿನಾಗ ಹೆಡ್‌ಮಾಸ್ತರರಿಗೂ ಯಾದಗಿರಿ ಸರ್ [illegible] ಚಪ್ಪಲಿ ಬೀಸಾಡು ಮುಟ್ಟಿಕೆ, ರಾದ್ಧಾಂತ [illegible]. ಮುಧುಗಿರಿಯಿಂದ ವರ್ಗ ಆಗಿ ಬಂದ [illegible] ಸರ್ ಆ ಸಾಲಿ ಗೆಸದಾಗೊಬ್ಬ 'ಕೋಚಾ [illegible]' ಅಂದ ಗಬ್ಬುಬಡಕೋತಿದ್ದರು. ಬೆಲ್ಲದ ಸರ್ [illegible] ಹೀರಿ. ಕಳದ ದಿನಾ ಚಂದದಾವ. ಬರೂ [illegible] ದಕಕ್ಕ 'ಅಧ್ಯಾಂಗದಾವ' ಅಂತ ಅಬೈರ್ [illegible] ಟಿಚರ್ ಅಂತ ಕಿಟಕ್ಯಾಗ ಉಗಳೂದು... ಇದಕ [illegible] ಸಡೀತಿದ್ದ ದಿನದಾಗ ನಮ್ಮ ಪಾವಸ್ಕರ [illegible] 'ಅಧ್ಯಾಂಗ ಹೆಡ್‌ಮಾಸ್ತರ' ಅನ್ನಿಸಿಕೊಂಡಿದ್ದು.

ಬುಡಕ್ಕರೀ, ಎಲ್ಲರ ಬಾಳೇವದಾಗೂ ಆಖೈರಾ ಒಂದಿನ ಇರತೇತೇಳ್ರಿ" ಅಂತ ನದಾಫ ಸರ್ ತತ್ವ ಅಂತಿದ್ರು. ಹಳೇದ ನೆನ್ಸಿ ಹಿತ್ತ ಬಾಗ್ಲದಾಗ ಕುಂತ ಅಳೂದರ ಏಟದಿನಾ? ಅನ್ನೋ ನಿರ್ಲಿಪ್ತತೆಯಲ್ಲಿ ದಿನ ಹೊಂಟಿತ್ತು. ಪಾವಸ್ಕರ್ ಸರ್ ಮಾತ್ರ ಒಳಗೆ ಹೆಜ್ಜೆಯಿಟ್ಟ ನರಹುಳದ ಬಾಯಾಗ 'ಅಲಾ, ಛಂದ ಹೊಂಟದ ಹೌದಿಲ್ಲೊ' ಅಂತ ಕ್ವಾರಿಮೀಸಿ ತಿರವಿ ಕೇಳಿ 'ಹೂಂ' ಹಾಕಿಸಿಯೇ ಹೊರ ಕಳಿಸುತ್ತಿದ್ದರು.

ನಂಗೂ ಲಕ್ಷ್ಮಿಗೂ ಪಾವಸ್ಕರ್ ಸರ್ ಅಂದರ ಅಂಥ ತಲಬ್ಯಾನಿ ಏನೂ ಇರ್ಲಿಲ್ಲ. ತೇರಗಾಂವದಿಂದ ವರ್ಗ ಆಗಿ ಬಂದ ಲಕ್ಷ್ಮಿ ಹೇಳ್ತಾಳಲ್ಲ, ಅವಳಿಗೊಬ್ಬ ಹೆಡ್ ಇದ್ದನಂತ ಪುಣ್ಯಾತ್ಮ. ಲಕ್ಷ್ಮಿಯ ಅಕ್ಷರ ದುಂಡಾಗ್ತಾವ ಅಂತ ಅಂದು ಖಾಯಂ ಎದರ ಕುಂದರಸಗೊಂಡು ಬರ್‍ಸೂದ ಬರ್‍ಸೂದ ಬರ್‍ಸೂದ. ವಿನರ ತಪ್ಪಿ ಬ್ಲೌಸಿನ ಕೊನಿಯಿಂದ ಬ್ರಾ ಚೂರು ಕಂಡರ ನಿಧಾನ ಮುಂದ ಸರ್‍ದು 'ಲಕ್ಷ್ಮಿ, ಬ್ರಾ ಚೂರು ಹೊರ ಬಂದದ' ಅನ್ನೂವಂತ. ಇನ್ನೂ ಲಗ್ನಾ ಅಂತ ಆಗಿಲ್ಲದ ಲಕ್ಷ್ಮಿ ಈಗೂ ಅವನ ನೆನಪಾದ್ರ "ಯಪ್ಪಾ ಅವ್ನ ಹೆಣಾ ಎತ್ಲೆ" ಅಂತಾಳೆ ನಡಗ್ತಾ. ಪಾವಸ್ಕರ್ ಸರ್‌ಗೆ ಇಂಥ ತೆವಲುಗಳೇನೂ ಇರ್ಲಿಲ್ಲ, ಹಾಂಗ ಸಂಭಾವಿತ. ಅದೇನೋ ಎರಡ ಮದ್ವಿ ಆದ್ರ ಹಣ್ಯಾಗಿತ್ತು ಅಂತ ಕಾಣ್ತದ. ಮೊದಲನೀ ದಾಕೀನ್ನ ಬಿಟ್ಟು ಬ್ಯಾರೆ ಲಗ್ನಾ ಮಾಡ್ಕೊಂಡಿದ್ರು. ಈಗ ತೀರಿಕೊಂಡ್ಳಲ್ಲ, ಈ ಎರಡನೇದಾಕಿ ಭಾಳ ಒಳ್ಳೇದಾಕಿ ಇದ್ದಳಂತ. ಆಕೀನೂ ಎಲ್. ಐಯ್.ಸಿಯಾಗ ನೋಕರಿ ಮಾಡ್ತಿದ್ದಳಂತ. ಹಿಂಗಾಗಬಾರದಿತ್ತು, ಆಕೀಗಿ ಮೂರು ಮಕ್ಕಳದಾವ. ಗಂಡಾಗ್ಲಿ ಅಂತ ಎರಡನೇ ಡೆಲಿವರಿ ಆದ ಮ್ಯಾಗ ದವಾಖಾನ್ಯಾಗ, ಆಪರೇಶನೂ ಮಾಡ್ಕೊಬೇಕಾಗಿತ್ತಂತ. ಪಾಪ ದೇವರು ಹಣ್ಯಾತು ಅಂತ ಕಾಣತ್ತ, ಇತ್ತಿತ್ತಲಾಗಿ ದಿಗಿಲ್ಯಾಸ್ಸ್ಯಯಾದ್ರೂ ಹೊಟ್ಟಿ ಹೊಟ್ಟಿ ಅಂತ ನರಳಾಕಿಯಂತ. ದಿನಾ ಸಾಯೋರ್ಗೆ ಗಳೋರ್‍ರಾರು? ಅದೂ ಇದೂ ಗುಳಗಿ ನುಂಗಿ ಕಡೀಗ

ಹೋದ ತಿಂಗಳು ಚೆಕಪ್ ಮಾಡಿಸ್ಯಾರ. ದಾಕ್ಟ್ರ ಹೇದ, ಬೆಂಗಳೂರಿಗೆ ಬರದರಂತ. ಮೇಜರ್ ಆಪರೇಶನ್ ಆಗಬೇಕು ಅಂದಿದ್ದರಂತ. ಅದಕ್ಕ ಎರಡ ಲಕ್ಷ ಕ್ಯಾಶ್ ತಗೊಂಡು ಬಿಡಲಾರ್ದ ಕುರ್ಚಿ ಬಿಟ್ಟು ಕರ್ಕೊಂಡು ಹೋಗುವಾಗ ಸರ್ ಮಾರಿ ಸಣ್ಣ ಕೂಸಿನ ಮಾರಿ ಆದಹಾಂಗ ಆಗಿತ್ತು. 'ಬೇಗ ಆರಾಂ ಆಗಿ ಬರ್‍ತಾರ ಸರ್, ಹೋಗ್ಬನ್ನಿ' ಅಂತ ಧೈರ್ಯ ಹೇಳಿದ್ದೇ ಬಂತು. ನಾಕೇ ದಿನದಾಗ ಸಲವತ್ತೂ ದಾಟದ ಆಕಿ ಹೋಗ್ಬಿಟ್ಟದ್ಳು.

ಆವತ್ತು ದಿನಕ್ಕ ಮಾತಾಡ್ಸಿ ಬರಾಕಂತ ಹೋದೋರೆಲ್ಲ ಒಂದೊಂದ್ ನಮೂನಿ ಲೊಚ ಗುಟ್ಟಿದ್ರು. 'ತಲಿ ಬೋಳಿಸಿಕೊಂಡಾರಪಾ ಯಾಕೊ', 'ಪಾಪ ಸರ್, ಕಾಣುತ್ಲೆ ಹೊಯ್ಕೊಂಬಟ್ರು', 'ಮಕ್ಕ ಮದ್ವಿಯಿಲ್ಲ ಮುಂಜಿಯಿಲ್ಲ ಛೆ', 'ವಯಸ್ಸಾದಹಾಂಗ ಹೆಂಡ್ತಿ ಬೇಕರೆಪಾ. ಇಲ್ಲಾಂದ್ರ ಬೇಬರ್ಸಿ ಆಕ್ಯಾನ ಮನುಷ್ಯಾ'. ನಾನೂ ಲಕ್ಷ್ಮಿ ಸ್ಟಾಫ್‌ರೂಮಿನಲ್ಲಿ ಓಡಾಡುತ್ತಿದ್ದ ಮಾತುಗಳನ್ನ ಹೆಕ್ಕಿ ಜೋಡಿಸಿಕೊಳ್ಳುತ್ತ ದಿನ ಉರುಳಿದೆ. ಸರ್ ಬಂದಾರ. ಹೋಗಿ ಮಾತಾಡಿಸ ಬೇಕು.


ಹೆಡ್‌ಮಾಸ್ತರ ಖೋಲಿಯಲ್ಲಿ ಮಂದಿ ಖಾಲಿಯಾದ ಹೊತ್ತು ನೋಡಿ ಒಳಹೋದೆವು. 'ಸರ್ ಸಮಾಧಾನ ಮಾಡ್ಕೋರಿ. ಏನು ಮಾಡೂದು? ನಮ್ ಕೈಯಾಂದೇನು?' ಅಂತಿದ್ದ ಹಾಗೆ ಅವರು ಕಣ್ಣೆತ್ತಿ ನೋಡಿದರು. ಮೊದಲೇ ತೆಳ್ಳಗಿನ ಎತ್ತರದ ಕಪ್ಪು ಮನುಷ್ಯ ಕ್ವಾರಿ ಮೀಸಿಯಿಲ್ಲದ ತಲಿ ಬೋಳಿಸಿಕೊಂಡ ಕೆಂಪೋ ಕೆಂಪಾಗಿ ಹೋದ ಕಣ್ಣುಗಳಲ್ಲಿ...ನಮ್ಮ ಕಣ್ಣುಗಳಲ್ಲೂ ನೀರು. ಸರ್ ಟೇಬಲ್ಲಿನ ಮೇಲೆ ತಲೆಯಿಟ್ಟು ಬಿಕ್ಕಿ ಬಿಕ್ಕಿ ಅತ್ತರು. ಆ ಕ್ಷಣ ತುಂಬ ಕ್ರೂರವಾಗಿತ್ತು. ಪಕ್ಕದ ಆಫೀಸ್ ರೂಮಿನಿಂದ ಗೋವಿಂದಯ್ಯ ದಡಬಡಿಸಿ ಓಡಿ ಬಂದರು. ಒಂದು ಗುಟುಕು ನೀರು ಕುಡಿಸಿದರು. ವೆಂಕಾರೆಡ್ಡಿ ಸರ್ ಬಂದವರೇ ಬಯ್ಯೋ ಯಜಮಾನನ ಗತ್ತಲ್ಲಿ-ತಗೀರಿ ಸರ್. ಎಲ್ಲ ಮುಗದದ. ಕೈಮೀರಿ ಹೋಗೇದ. ಯಾರೇನ ಇಲ್ಲೇ ಇರಾಕ ಬಂದೀವಾ. ಎಲ್ರೂ ಹೊಂಡೂದ. ಒಬ್ರ ಮುಂದ. ಒಬ್ರ ಹಿಂದ. ಮಕ್ಕಳದಾವ. ಮಕ್ಕನೆಲ್ಲನ ಪರದೇಶಿ ಮಾಡೂಣನ್ನೋ ಇರಾದಿ ಐತೇನ ನಿಮಗ? ಅಂತ ಗದರಿಸಿದಂತೆ ದನಿ ಮಾಡಿದರು. ಪಾವಸ್ಕರ್ ಸರ್ ಹೆಂಡತಿಯ ಫೋಟೋ ತಮ್ಮ ಕಡಿ ಮುಖ ಮಾಡಿ ಟೇಬಲ್ಲಿನ ಮ್ಯಾಗಿಟ್ಟರು. ಹಣದ ಬ್ಯಾಗು ಅತ್ತ ದೂಡಿದರು. 'ನನ್ನ ದುಡ್ಡು ನನ್ನ ದುಡುಮಿ ಯಾವುದೂ ಆಕೀನ್ನ ಉಳಿಸಿಕೊಳ್ಳಾಕ ಆಗಲಿಲ್ಲ' ಅಂತ ಬಿಕ್ಕಿದರು. ಬೆಲ್ಲದ ಸರ್ ಪ್ಯೂನ್ ರಾಜುನ್ನ ಕರ್ಕೊಂಡು 'ತನ್ರಿ ಇತ್ತಾಗ. ಬ್ಯಾಂಕಿಗೆ ಜಮಾ ಮಾಡಿ ಬರ್ತೀನು' ಅಂತ ಹೊರಟರು. ವೆಂಕಾರೆಡ್ಡಿ ಸರ್ ಪಾವಸ್ಕರ್ ಸರ್ ಹೆಗಲ ಮೇಲೆ ಕೈಹಾಕಿದರು. 'ನೋಡಿ ಸರ್. ನಾ ಪ್ರಮಾಣ ಮಾಡಿ ಹೇಳ್ತೀನು. ನೀವು ಸಾಲಿ ಕೆಲ್ಸಾ ಹ್ಯಾಂಗ ಅಂತ ಗಾಬರಿಯಾಗಬ್ಯಾಡ್ರಿ. ಮುಖ್ಯ ಮನಿ-ಮಕ್ಕಳನ್ನ ಸಂಭಾಳಿಸಿಕೋರಿ. ಸಾಲಿ ಜವಾಬದಾರಿ ನನ್ನ ಹೆಗಲ ಮ್ಯಾಗ ಹಾಕರಿ. ನಾ ನೀಗಸ್ತೇನು. ನನ್ನ ನಿಮ್ಮ ತಮ್ಮ ಅನ್ನಕೋರಿ. ನೀವು ಬಂದ ಕುಂದರ್‍ರಿ ಸಾಕ. ಸಹಿ ಮಾಡರಿ ಸಾಕ....' ಯಾಕೋ ಎಲ್ಲವೂ ತುಂಬ ಸಿಕ್ಕು ಸಿಕ್ಕಾಗತೊಡಗಿತ್ತು. ಪಾವಸ್ಕರ್ ಸರ್ ಕೈಯಿಂದ ವೆಂಕಾರೆಡ್ಡಿ ಸರ್ ಕಯ್ಯಾಗ ಅಧಿಕಾರ ಬಂದರ ಏನೋ ಎಂತೋ, ಮನುಷ್ಯ ಈಗೇನೋ ಸರಿಯೇ. ಆಮ್ಯಾಗ ಹೆಂಗಿರುತ್ತೋ ಯಾರಿಗೆ ಗೊತ್ತು?

ಮನೆಗೆ ಬಂದರೂ ಎಷ್ಟೋ ಹೊತ್ತು ಪಾವಸ್ಕರ್ ಸರ್ ಗುಲಾಬು ಕಣ್ಣುಗಳೇ ಎದುರು ಬಂದಂತಾಗುತ್ತಿತ್ತು. 'ಸವಿತಾ ಅವರ. ಆಕೀಗೂ ನಿಮ್ಮ ಹಾಗೇ [illegible] ಅರ. ಒಮ್ಮ ದನಿ. ಹೆಂಗಾತ ನೋಡಿ [illegible] [illegible]" ಅಂದ ಮಾತು ರಿಂಗಣಿಸುತ್ತಿ [illegible] ಮಕ್ಕಳನ್ನ ಶಾಲೆಗೆ ಕಳ್ಸೋದು. ಆಗಲೇ ಬಂದ ನ [illegible]

ಒಂಭತ್ತು ಗಂಟೆಯೊಳಗೆ ಮುಗಿಯಬೇಕಾದ ಅಡಿಗೆ-ಸ್ನಾನ. ತಲೆಕೆಟ್ಟು ಇವನಿಗೆ ಕೂಗಾಡಿದ್ದೆ, "ಎಂಥವಳೇ ನೀನು, ಏನ್ ಯಾರೂ ಮಾಡದ ಕೆಲಸಾನ ನೀ ಮಾಡೋದು, ಇಷ್ಟಕ್ಕೂ ಪೇಪರ್ ಮುಂಜಾನೆದ್ದು ಓದೋದೋ ಏನ್ ರಾತ್ರಿ ಓದೋದೋ?" ಅವನೂ ನನಗೆ ಎಂದೂ ಉತ್ತರಿಸಲಾಗದ ಸರಳ ಪ್ರಶ್ನೆ ಬಿಸಾಕಿ ಪೆಡವಿನಿಂದಲೇ ಹೋಗಿದ್ದ. ಆ ಮಾತಿನ ನಾತ ಇನ್ನೂ ಸುಳಿಯುತ್ತಲೇ ಇತ್ತು. ಮಕ್ಕಳೂ ಆಟ, ಟಿವಿ ಅನ್ನದೆ ಸುಮ್ಮನೆ ಟಪ್ ಟಪ್ ಅಂತ ಕೈಕಾಲು ಮುಖ ತೊಳೆದು ತಿಂಡಿ ತಿಂದು ಹೋಂವರ್ಕ್ ಮಾಡತೊಡಗಿದ್ದರು. ನಾನೂ ಒಂದು ಕಪ್ ಚಾ ಕುಡಿದೆ. ಅವನಿರಬೇಕಿತ್ತು ಜೊತೆಗೆ. ಆದರೆ ಎಂದೂ ಆಫೀಸು ಮುಗಿಸಿ ಓಡಿ ಬಂದವನಲ್ಲ, ಊರ ತುಂಬ ಗೆಳೆಯರು. 'ಪರಿಸರ ತಂಡ' ಅಂತ ಮಾಡಿಕೊಂಡಿದ್ದಾರೆ. ನೀರಿನ ಸಂಗ್ರಹ-ಬಳಕೆ, ಕಸದ ವಿಲೇವಾರಿ, ಜನರಿಗೆ ಅರಿವು, ಸರ್ಕಾರಕ್ಕೆ ಪತ್ರ ಹೀಗೆ ತುಂಬ ಬಿಸಿಯಾಗಿರುತ್ತಾನೆ. ಊರ ಆ ತುದಿಯಲ್ಲಿರೋ ದ್ಯಾಮವ್ವನ ಕೆರೆ ಹೂಳೆತ್ತೋ ಕೆಲಸ ಮಾಡ್ತಿಸಾ ಇದ್ದಾರೆ. ಅಲ್ಲೇ ಹೋಗಿರಬೇಕು. ಇವನ ಈ ಗುಣ ನಂಗೆ ತುಂಬ ಇಷ್ಟ. ಸೋಶಿಯಲ್ ಕನ್ಸರ್ನ್ ಇರೋರು ತುಂಬ ಅಪರೂಪ ಆಗ್ತಿರೋ ದಿನಮಾನ ಇದು. ಆದರೂ ಒಮ್ಮೊಮ್ಮೆ ಸಂಜೆಗಳು ನೀಳವೆನ್ನಿಸುತ್ತವೆ. ಮಕ್ಕಳು ಭಾರವಾಗುತ್ತವೆ... ಆದರೆ ಇನ್ಮೇಲೆ ಹಾಗೆ ಎಗರಾಡಬಾರದು. ನಾನೇ ಎಲ್ಲ ಹೊಂದಿಸಿಕೋಬೇಕು. ಸಾಧ್ಯವಾದರೆ ಕೆಲಸದವಳಿಗೆ ಇನ್ನೊಂದು ನೂರು ಕೊಟ್ಟಾದರೂ ಮನೆಯೊಳಗಿನ ಸಾಮಾನುಗಳನ್ನು ಒರೆಸಿ ಜೋಡಿಸಿ ಇಡಲು ಕೇಳಬೇಕು. ಯೋಚನೆಯಲ್ಲೇ ಅವನ ಇಷ್ಟದ ಅಡಿಗೆ ಮಾಡಿದೆ. ಮಕ್ಕಳ ಊಟ ಆಗುವಷ್ಟೊತ್ತಿಗೆ ಬಂದ. ವಾತಾವರಣ ತಿಳಿಯಾಗಿಲ್ಲದಾಗ ಮಾಡುವಂತೆ ಒಂದು ಮೊಳ ಮಲ್ಲಿಗೆ ತಂದಿದ್ದ. ಮಕ್ಕಳಿಗೆ ತಾನೇ ಕಥೆ ಹೇಳಿ ಮಲಗಿಸಿದ. ಎಂಥ ಸೆಡವೂ ಇಲ್ಲದ ನಾನು ಅವನಿಗೊಂದು ಕ್ಷಣದ ದಿಗಿಲು. ಆದರೆ ಜಾಣ. ಹಾಸಿಗೆಯಲ್ಲಿ ಮೈ ಚೆಲ್ಲುತ್ತ ಮೈ ಮರೆಸುವವ. 'ಏನಿವತ್ತು ಸ್ಕೂಲಲ್ಲಿ...' ಏನಾದ್ರೂ ವಿಶೇಷವಾ?' ಅಂದ. ಕೇಳುತ್ತ ನಿದ್ದೆಗೆ ಸರಿಯುತ್ತಿದ್ದ. ಕೇಳಿದರೆ ಸಾಕೆನ್ನುವಂತಿದ್ದ ನಾನು ಪಾವಸ್ಕರ್ ಸರ್ ಕಥೆ ಹೇಳಿದೆ. ಮಲಗಲಾರದಂತೆ ಜಗ್ಗಿ ಜಗ್ಗಿ ಹೇಳಿದೆ. 'ಪಾಪ ಅಲ್ಲವಾ?' ಅಂದೆ.


"ಪಾಪವೇ. ಹೆಂಡತಿ ಸತ್ತರೆ... ಅದರಲ್ಲೂ ನಿಮ್ಮ ಪಾವಸ್ಕರ್ ಸರ್ ಜಗತ್ತು ತುಂಬ ಸಣ್ಣದು ಅಲ್ವಾ? ತಾನು, ಹೆಂಡತಿ, ಮಕ್ಕಳು, ಬಡ್ಡಿಯ ರೊಕ್ಕ ಅಂತಿದ್ವ...." ಮಾತಿನ ತುದಿಯಲ್ಲಿ ಗೊರಕೆಯ ಸದ್ದು.

ಎಂಥದೋ ತಕರಿಲ್ಲದ ಹಳವಂಡ. ಏನಂದ ಇವನು? ಹಾಗಂದನೇ? ಸಾವಿನ ಕುಣಿಯನ್ನು ಇನ್ನಿತರ ಸಂಬಂಧಗಳು ತುಂಬುತ್ತವೆಯೆಂದನೇ? ಇಲ್ಲ, ಇರಲಿಕ್ಕಿಲ್ಲ. ಇವನು ಹಾಗನ್ನಲಾರ. ಬೆರಳುಗಳು ಕಣ್ಣ ನೇವರಿಸಿ ರೆಪ್ಪೆಯ ಹೊದಿಕೆಯಲ್ಲಿ ನಿಶ್ಚಿಂತ ಒರಗಬೇಕನ್ನೊ ಈ ಸರೊತ್ತಿನಲ್ಲಿ ತುಂಬ ದಣಿವ ಮಂದ ಬೆಳಕಿನಲ್ಲಿ ಗಡಿಯಾರದ ಮುಳ್ಳು ಸುತ್ತುವುದು ಕಾಣುತ್ತಿದೆ. ಮಕ್ಕಳು ಮತ್ತೊಮ್ಮೆ ಮಗ್ಗಲು ಬದಲಿಸಿದ ಗಂಟಲೊಳಗೆ ಕೈ ಹಾಕಿ ತಿರುವ್ಯಾಡಿ ಗಬಗಬ ಕಟಬೇಕೆನಿಸುತದೆ. ಇಲ್ಲ ಇವನು ಹಾಗನ್ನಲಿಲ್ಲ. ಮಾತಿನ [illegible]



ಅದೃಷ್ಟವಶಾತ್ ಸ್ತ್ರೀ ಪ್ರಭಾವಿತ ಭಾರತೀಯ ಕುಟುಂಬವೊಂದರಿಂದ ನಾನು ಬಂದಿರುವುದು ನನ್ನ ಅದೃಷ್ಟವೆಂದೇ ನಾನು ಸದಾ ನಂಬಿಕೊಂಡು ಬಂದಿದ್ದೇನೆ. ನನಗೆ ಸಹೋದರರಿಲ್ಲವಾದರೂ ಬಹಳಷ್ಟು ಜನ ಸಹೋದರಿಯರಿದ್ದಾರೆ (ಮೂವರು ಸೋದರಿಯರೆಂದರೆ ಬೇಕಾದಷ್ಟು ಎಂದೇ ನನ್ನ ಅಭಿಮತ). ನನ್ನ ತಾಯಿಯ ಸಹೋದರಿಯರಿಬ್ಬರು **Bertie Wooster** ನ **Aunt Dahlia** ಮತ್ತು **Aunt Agatha** ರಂತೆ ಎದುರು ನಿಂತು ಪ್ರತಿಭಟಿಸಲಾಗದ, ದಿಗಿಲು ಹುಟ್ಟಿಸುವಂಥ ಭಯಂಕರ ಜೋಡಿ ಆಂಟಿಗಳವರು. ನನ್ನ ವಾರಿಗೆಯ ಸೋದರ ಸಂಬಂಧಿಗಳ ಮಕ್ಕಳಲ್ಲಿ ಸಂಖ್ಯಾಬಲದಲ್ಲೂ ಹೆಣ್ಣುಮಕ್ಕಳದೇ ಮೇಲುಗೈ. ನನ್ನ ಬಾಲ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನಗಳಲ್ಲಿರುವ ನಮ್ಮ ಕುಟುಂಬಕ್ಕೆ ಸೇರಿದ ಮನೆಗಳಲ್ಲಿನ ವಾತಾವರಣ ಆದೇಶಗಳಿಂದ, ಜಗಳಗಳಿಂದ, ನಗುವಿನ ಕಲರವದಿಂದ ಮತ್ತು ಈ ಹೆಣ್ಣುಮಕ್ಕಳ ಮಹತ್ವಾಕಾಂಕ್ಷೆಗಳಿಂದಲೂ ತುಂಬಿತುಳುಕುತ್ತಿತ್ತು; ಅವರಲ್ಲಿ ಕೆಲವರು ವಿನಯಶೀಲರೂ, ಸೌಮ್ಯ ಸ್ವಭಾವದ ಸಂಕೋಚ ಪ್ರವೃತ್ತಿಯುಳ್ಳವರೂ ಆದ, ಯಾರ ಕಣ್ಣಿಗೂ ಬೀಳಲಿಚ್ಛಿಸದ ಭಾರತೀಯ ಸ್ತ್ರೀಯ ಪಡಿಯಚ್ಚುಗಳಂತೆಯೂ ಹೋಲುತ್ತಿದ್ದರು. ಲಾಯರುಗಳು, ಶಿಕ್ಷಣ ತಜ್ಞರು, ತೀವ್ರ ಸುಧಾರಣೆಯ ಇಚ್ಛೆಯುಳ್ಳವರು, ಬದಲಾವಣೆ ಬಯಸುವ ಪ್ರಗತಿಪರರು ಹಾಗೂ ಮನೆಯ ಯಜಮಾನಿಯರೂ ಆಗಿದ್ದ ಇವರು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದ, ನಿರರ್ಗಳ ಮಾತಿನ, ಸೂಕ್ಷ್ಮಮತಿಗಳೂ, ತಮಾಷೆಯ ವ್ಯಕ್ತಿಗಳೂ, ಬಲಶಾಲಿಗಳೂ ಆಗಿದ್ದರು. ಇಂಥವರ ನಡುವೆ ನಿಮ್ಮ ಮಾತುಗಳು ಅವರ ಕಿವಿಗಳ ಮೇಲೆ ಬೀಳುವಂತೆ ಮಾಡಲು ದೊಡ್ಡದಾಗಿ ಧ್ವನಿ ಎತ್ತರಿಸಿ ಮಾತನಾಡಬೇಕಾಗುತ್ತಿತ್ತಲ್ಲದೆ ಏನಾದರೂ ಆಸಕ್ತಿಕರವಾಗಿರುವಂಥದನ್ನು ಹೇಳಬೇಕಾಗುತ್ತಿತ್ತು. ನೀವು ಹೇಳುವುದು ಆಲಿಸಲು ಯೋಗ್ಯವಲ್ಲದಂಥದಾಗಿದ್ದರೆ ಅದನ್ನವರು ಕೇಳಿಸಿಕೊಳ್ಳುತ್ತಲೇ ಇರಲಿಲ್ಲ.

ಇದರ ಫಲವಾಗಿಯೇ ನಾನು ಇಂದಿಗೂ ಹೆಣ್ಣುಮಕ್ಕಳ ಕಂಪೆನಿಯಲ್ಲಿ ತುಂಬ ಆರಾಮಾಗಿಯೂ ಸಲುಗೆಯಿಂದಲೂ ಇರಲು ಸಾಧ್ಯವಾಗುತ್ತದೆ. ನನ್ನ ಆಪ್ತಮಿತ್ರರಲ್ಲಿ ಹುಡುಗರಿಗಿಂತ ಹುಡುಗಿಯರದೇ ಸಂಖ್ಯೆ ಅಧಿಕ. ನನ್ನ ಬರಹಗಳಲ್ಲೂ ನನಗೆ ಗೊತ್ತಿರುವಂಥ ಶ್ರೀಮಂತ ಹಾಗೂ ಶಕ್ತಿಶಾಲಿ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಲು ನಾನು ಬಹಳಷ್ಟು ಕಡೆ ಪ್ರಯತ್ನಿಸಿದ್ದೇನೆ. ನನ್ನ ಬರಹಗಳಲ್ಲಿರುವ ಪುರುಷ ಪಾತ್ರಗಳು ಹೆಂಗಸರಷ್ಟು ವರ್ಣಮಯವಾಗಿರುವುದು ವಿರಳ. ಕೊನೆಯಪಕ್ಷ ನನ್ನ ಅನುಭವಕ್ಕೆ ಬಂದಂತೆ ಇವು ಹೇಗಿರಬೇಕಿತ್ತೋ ಹಾಗೆಯೇ ಇವೆ.




# ನನ್ನ ಅಕ್ಕ-ತಂಗಿಯರೆಲ್ಲಿ?

**ಭಾರತೀಯ ಸಂತತಿಯಲ್ಲಿ ಈಗ ಗರ್ಭ ಧರಿಸುತ್ತಿರುವ ಈ ಹೆಣ್ಣುಮಕ್ಕಳು ಅಥವಾ ಅವರ ಮುಂದಿನ ಪೀಳಿಗೆಯ ಸಂಭವನೀಯ ವಾರಸುದಾರರು ಕ್ಷಿಪ್ರಗತಿಯಲ್ಲಿ ದುರಂತಕ್ಕೀಡಾಗುವ ವರ್ಗದವರಂತಾಗುತ್ತಿದ್ದಾರೆ ಇದು ಚಿಂತೆಗೀಡು ಮಾಡುವಂಥ ಸಂಗತಿಯಾಗಿದೆ.**

ಭಾರತೀಯ ಸಂತತಿಯಲ್ಲಿ ಈಗ ಗರ್ಭ ಧರಿಸುತ್ತಿರುವ ಈ ಹೆಣ್ಣುಮಕ್ಕಳು ಅಥವಾ ಅವರ ಮುಂದಿನ ಪೀಳಿಗೆಯ ಸಂಭವನೀಯ ವಾರಸುದಾರರು ಕ್ಷಿಪ್ರಗತಿಯಲ್ಲಿ ದುರಂತಕ್ಕೀಡಾಗುವ ವರ್ಗದವರಂತಾಗುತ್ತಿರುವುದರಿಂದಲೇ ಇದು ಚಿಂತೆಗೀಡು ಮಾಡುವಂಥ ಸಂಗತಿಯಾಗಿದೆ. ಭ್ರೂಣದ ಲಿಂಗ ಪತ್ತೆ ಮಾಡುವುದು ಕಾನೂನುಬಾಹಿರ ಆಚರಣೆಯಾಗಿದ್ದಾಗ್ಯೂ, ಆರೋಗ್ಯ ತಪಾಸಣೆಯ ಕಪಟ ನೆಪದಲ್ಲಿ ಗರ್ಭದಲ್ಲಿರುವ ಭ್ರೂಣದ ಲಿಂಗವನ್ನು ಪತ್ತೆ ಮಾಡಿ, ಅಸಹ್ಯಕರವೆನ್ನಿಸುವಷ್ಟು ಸಂಖ್ಯೆಯ ಆರೋಗ್ಯಕರ ಹೆಣ್ಣು ಭ್ರೂಣಗಳ ಹತ್ಯೆ ಮಾಡುವುದಕ್ಕೆ ಅಲ್ಟ್ರಾ ಸೌಂಡ್ ಪರೀಕ್ಷೆಗಳು ಭಾರತದುದ್ದಗಲಕ್ಕೂ ಬಹುವಾಗಿ ದುರುಪಯೋಗಿಸಲ್ಪಡುತ್ತಿವೆ. ಜನಸಂಖ್ಯೆ ಅತಿಶೀಘ್ರವಾಗಿ ಅಸಮತೋಲನಗೊಳ್ಳುತ್ತಿದೆಯಲ್ಲದೆ ಗಂಡು-ಹೆಣ್ಣುಗಳ ಪ್ರಮಾಣದಲ್ಲಿ ಗಂಡಸರ ಸಂಖ್ಯೆ ನಿಜಕ್ಕೂ ಆಘಾತಕರವೆಂಬಷ್ಟು ಮಟ್ಟಕ್ಕೇರುತ್ತಿದೆ.

ಗರ್ಭಪಾತದ ಕುರಿತು ಆಯ್ಕೆಯ ಪರವಾಗಿ ವಾದಿಸುವವರಿಗಾಗಿ, ಅದರ ಪರಿಣಾಮಗಳನ್ನನುಭವಿಸುತ್ತಿರುವ ಒಬ್ಬ ಸದಸ್ಯನಾಗಿ ನಿಷ್ಠುರ ಸಂಗತಿಯೊಂದನ್ನು ನಿಮ್ಮ ಮುಂದಿಡುತ್ತಿದ್ದೇನೆ. ತಮ್ಮದೇ ಒಡಲಿನ ಕುಡಿಗಳಾದ ಹೆಣ್ಣು ಭ್ರೂಣಗಳ ವಿರುದ್ಧ ತಾರತಮ್ಯ ಮಾಡುವುದಕ್ಕೆ ಹೆಂಗಸರೇ ಮುಂದಾದಾಗ ಏನು ಮಾಡಬೇಕು? ಈ ಲಿಂಗಭೇದದ ಗರ್ಭಪಾತಗಳು ಕೊನೆಗೊಳ್ಳಬೇಕಾದರೆ ಭಾರತೀಯ ಸ್ತ್ರೀಯರಿಂದಲೇ ಈ ನಿರಾಕರಣೆಗಳು ಬರಬೇಕೆಂದು ಬಹಳಷ್ಟು ಭಾರತೀಯ ಚಿಂತಕರು ಅಭಿಪ್ರಾಯ ಪಡುತ್ತಾರೆ. ಆದರೆ ಭಾರತೀಯ ಸ್ತ್ರೀಯರಿಗೂ ಅವರ ಪುರುಷರಿಗೆ ಬೇಕಾದಂತೆಯೇ ಗಂಡುಮಕ್ಕಳು ಬೇಕು. ಭಾಗಶಃ ಇದು ವರದಕ್ಷಿಣೆ ಪದ್ಧತಿಯ ಖರ್ಚುಗಳೂ ಸೇರಿದಂತೆ ಪುರುಷ ಕೇಂದ್ರೀಕೃತ ಸಮಾಜವೊಂದರ ಅಸಂಖ್ಯಾತ ಒತ್ತಡಗಳಲ್ಲೊಂದಾಗಿದೆ. ಆದರೆ ಇದು ಮೂಲಭೂತವಾಗಿ ಸಾಂಪ್ರದಾಯಿಕ ಸಾಮಾಜಿಕ ವರ್ತನೆಗಳುಳ್ಳವರಿಗೆ ದೊರೆತ ಆಧುನಿಕ ತಂತ್ರಜ್ಞಾನದ ಪರಿಣಾಮ. ನನ್ನನ್ನು ಸಾಕಿ ಸಲಹಿದವರಂತೆ ನಿಚ್ಚಳವಾಗಿಯೂ ಭಾರತೀಯ ಸ್ತ್ರೀಯರೆಲ್ಲರೂ ಬಂಧಮುಕ್ತರಲ್ಲ, ಸಾಂಪ್ರದಾಯಿಕ ಭಾರತವೇ ಇನ್ನೂ ಅಸ್ತಿತ್ವದಲ್ಲಿದೆ; ಅದರ ಮೌಲ್ಯಗಳು ಇನ್ನೂ ಬಲಶಾಲಿಯಾಗಿವೆ. ನಿರುತ್ಸಾಹಗೊಳಿಸುವ ಈ ಹೊಸ ಸ್ತ್ರೀರೋಗ ವೈಜ್ಞಾನಿಕ ಆವಿಷ್ಕಾರದ ಕವಲುದಾರಿಯಲ್ಲಿ, ಹಳೆಯ ಕತೆ ತಿಳಿಸುವಂತೆ, ಹೆಂಗಸರೇ ಹೆಂಗಸರ ಕುರಿತು ಎಚ್ಚರ ವಹಿಸಬೇಕಾಗಿದೆ.



ಸಲ್ಮಾನ್ ರಶ್ದಿ

ಎಪ್ಪತ್ತರ ದಶಕದಲ್ಲಿ ಇಂದಿರಾ ಮತ್ತು ಸಂಜಯ ಗಾಂಧಿಯವರು ಗರ್ಭ ನಿಯಂತ್ರಣವನ್ನು ಪ್ರಾರಂಭಿಸಲು ಗರ್ಭ ನಿಯಂತ್ರಣದ ಆಪರೇಷನ್ನುಗಳ ಅತಿರೇಕಗಳನ್ನು ಒತ್ತಾಯಪೂರ್ವಕವಾಗಿ ಹೇರಲು ಪ್ರಯತ್ನಿಸಿದಾಗಿನಿಂದಲೂ ಭಾರತದ ಜನಮಾನಸ ಕುಟುಂಬ ಯೋಜನೆಯ ವಿಚಾರವನ್ನು ಒಪ್ಪಿಕೊಳ್ಳುವಂತೆ ಮಾಡುವುದು ಅತ್ಯಂತ ಕಷ್ಟಕರವಾಗಿದೆ. ಮದರ್ ಥೆರೆಸಾರ ಗರ್ಭನಿಯಂತ್ರಣ ವಿಧಾನಗಳನ್ನು ವಿರೋಧಿಸಿದ ಉಗ್ರ ನಿಲುವಿನಿಂದಲೂ ಏನೂ ಪ್ರಯೋಜನವಾಗಲಿಲ್ಲ. ಇತ್ತೀಚೆಗೆ ಹಿಂದೂ ರಾಷ್ಟ್ರವಾದಿಗಳು ಈ ದೇಶದ ಮುಸ್ಲಿಮರಲ್ಲಿ ಹಿಂದೂಗಳಿಗಿಂತ ವೇಗವಾಗಿ ಸಂತಾನವೃದ್ಧಿಯಾಗುತ್ತಿದೆಯೆಂದು ಪ್ರಸ್ತಾಪಿಸಿ ಹಿಂದೂತ್ವವೇ ಅಪಾಯಕ್ಕೀಡಾಗಿದೆಯೆಂದು ಹೇಳಿ (ಬಹುಸಂಖ್ಯಾತರಾದ ಹಿಂದೂಗಳೇ ಜನಸಂಖ್ಯೆಯ ಅಧಿಕ ಪಾಲು ಶೇ. 85 ರಷ್ಟಿದ್ದರೂ) ಸಮಸ್ಯೆಯನ್ನು ಕ್ಲಿಷ್ಟಕರಗೊಳಿಸಿದ್ದಾರೆ.

ಗರ್ಭ ನಿಯಂತ್ರಣ ವಿಧಾನಗಳೊಂದಿಗೆ ಗರ್ಭಪಾತವೂ ಇದುವರೆಗೂ ಭಾರತದ ಧಾರ್ಮಿಕ ಮುಖಂಡರುಗಳಿಂದ ಶಾಪಗ್ರಸ್ತ ವಿಷಯ ಗಳೆಂಬಂತೆಯೇ ನೋಡಲ್ಪಟ್ಟಿವೆ. ಇದರ ಪರಿಣಾಮವಾಗಿ ಭಾರತದ ಜನಸಂಖ್ಯೆ ನೂರು ಕೋಟಿಯನ್ನು ಮೀರಿದೆಯಲ್ಲದೆ ಚೀನಾ ದೇಶವನ್ನು ಒಂದೆರಡು ದಶಕಗಳಲ್ಲೇ ಹಿಂದೆ ಹಾಕುವುದೆಂದು ಹೇಳಲಾಗಿದೆ. ಆದರೆ ಈಗ ಒಮ್ಮೆಲೆ ಬಹಳಷ್ಟು ಭಾರತೀಯರಿಗೆ ಅತ್ಯಂತ ಆಕ್ಷೇಪಣಾರ್ಹವೆಂಬ ಕಾರಣಗಳಿಗಾಗಿ ಗರ್ಭಪಾತಗಳು ಸಮ್ಮತವಾಗುತ್ತಿವೆಯಲ್ಲದೆ ಜನಸಂಖ್ಯಾ ನಿಯಂತ್ರಣದ ಮೇಲೆ ಜರೂರಾಗಿ ಆಗಬೇಕಾದ ಚರ್ಚೆ, ವಾದ-ವಿವಾದಗಳು ಇನ್ನೂ ಮಸುಕಾಗುತ್ತಿವೆ. ಗಂಡುಮಕ್ಕಳ ಮೇಲಿನ ಪಕ್ಷಪಾತದ ಒಲವಿನಿಂದಾಗಿ ಹೆಣ್ಣುಮಕ್ಕಳನ್ನು ಹೊಂದಿದ ಭಾರತದ ಜೋಡಿಗಳು ಗಂಡುಮಗುವಾಗುವವರೆಗೂ ಹೆಣ್ಣುಮಕ್ಕಳನ್ನು ಹೆರುತ್ತಾ ಹೋಗಿ ಅತಿಯಾದ ಜನಸಂಖ್ಯೆಗೆ ಕಾರಣರಾಗುತ್ತಾರೆಂದು ಹೇಳುತ್ತ ಗರ್ಭಪಾತಗಳ ಈ ಹೊಸಲೀಲೆ ನಿಜಕ್ಕೂ ಲಾಭಕರವೆಂದು ಪ್ರತಿಪಾದಿಸುವವರಿದ್ದಾರೆ. ಆಯ್ಕೆಯನ್ನು ಅವರಿಗೇ ಬಿಡುವುದರಿಂದ ಹೆಣ್ಣುಮಕ್ಕಳ ಕೊರತೆಯಾಗುವುದಿಲ್ಲವೆಂದೂ ಆದರೆ ಹೆಣ್ಣುಮಕ್ಕಳಿಂದಲೇ ತುಂಬಿತುಳುಕದಂತೆ ಖಾತ್ರಿ ಮಾಡಿಕೊಳ್ಳಲು ಅನುವಾಗುವುದೆಂಬ ವಾದ ಮುಂದುವರೆಯುತ್ತದೆ. ಅಂಕಿ-ಅಂಶಗಳ ಆಧಾರಗಳ ಸೂಚನೆಯ ಪ್ರಕಾರ ಮುಂಬರುವ ತಲೆಮಾರಿನಲ್ಲಿ ನಿಜಕ್ಕೂ ಹೆಣ್ಣುಮಕ್ಕಳ ಕೊರತೆ ಕಂಡುಬರುವುದೆಂಬ ಸಂಗತಿಯೇ ಈ ವಾದದೊಂದಿಗೆ ತಳುಕು ಹಾಕಿಕೊಂಡಿರುವ ನಿಜವಾದ ಸಮಸ್ಯೆ. ಆಗ ಏನಾಗಬಹುದು? ಇಂದಿಗಿಂತ ಹೆಣ್ಣುಮಕ್ಕಳು ಹೆಚ್ಚು ಮೌಲ್ಯಯುತರಾಗುತ್ತಾರೆಯೇ ಅಥವಾ ಸಂಖ್ಯಾಬಲದಿಂದಲೇ ಬಲಪಟ್ಟ ಭಾರತೀಯ ಸಮಾಜದ ಪೌರುಷ ಹೆಚ್ಚು ದುರ್ಬಲರಾದ ಸ್ತ್ರೀಯರನ್ನೂ ಮತ್ತು ಅಪ್ಪಟ ಪುರುಷ ಸಿಂಹರನ್ನೇ ಸೃಷ್ಟಿಸುತ್ತಾ ಹೋಗುವುದೇ?

ಎಲ್ಲ ಸಮಸ್ಯೆಗಳಿಗೂ ತತ್‌ಕ್ಷಣಕ್ಕೆ ಪರಿಹಾರ ಕಂಡುಕೊಳ್ಳುವುದು ಸಾಧ್ಯವಿಲ್ಲ. ಭಾರತಮಾತೆ, ತಾಯಿ ಭಾರತಿ ಮತ್ತು ಹಿಂದೂತ್ವದಲ್ಲಿ ಪ್ರಮುಖ ದೇವತಾ ಪ್ರೇರಕ ತತ್ವಶಕ್ತಿ-ಹೆಣ್ಣಾಗಿದ್ದರೂ, ರಾಷ್ಟ್ರವೇ ತನ್ನನ್ನು ತಾನು ಸ್ತ್ರೀರೂಪದಲ್ಲಿ ಕಲ್ಪಿಸಿಕೊಂಡರೂ ಆಧುನಿಕ ಭಾರತ ಶತಮಾನಗಳಿಂದ ಹೆಣ್ಣುಮಕ್ಕಳ ವಿರುದ್ಧ ಎಸಗುತ್ತಿರುವ ಪಕ್ಷಪಾತದ ಧೋರಣೆಯನ್ನು ಮುಗುಚಿ ಬೀಳುವಂತೆ ಮಾಡುವಲ್ಲಿ ಸಫಲವಾದಾಗ ಮಾತ್ರ ಭಾರತದ ಕಾಣೆಯಾಗುತ್ತಿರುವ ಹೆಣ್ಣುಮಕ್ಕಳ ಕುರಿತ ಲೋಪವಾದ, ಕಳಂಕ ಅಂತ್ಯಗೊಳ್ಳುತ್ತದೆ.

ಅಂದರೆ ಏನೂ ಮಾಡಲಾಗುವುದಿಲ್ಲವೆಂದು ಇದರ ಅರ್ಥವಲ್ಲ. ಭ್ರೂಣದ ಲಿಂಗ ಪತ್ತೆ ಮಾಡಿ ಹೇಳುವ, ಕಾನೂನನ್ನು ಉಲ್ಲಂಘಿಸಲು ಜನರಿಗೆ ಅವಕಾಶ ಮಾಡಿ ಕೊಡುವ ಅಲ್ಟ್ರಾಸೌಂಡ್ ಕ್ಲಿನಿಕ್‌ಗಳ ಮೇಲೆ ಸರ್ಕಾರ ಮುಗಿಬೀಳಬೇಕು; ಇದು ಸರ್ಕಾರಕ್ಕೆ ಸಾಧ್ಯ. ಹೆಣ್ಣು ಮಕ್ಕಳಿರುವ ಕುಟುಂಬಗಳಿಗಾಗಿ ವಿಶೇಷ ಸೌಲತ್ತುಗಳನ್ನು ನೀಡಬೇಕು; ಅಲ್ಲದೆ ಪ್ರಾಯಶಃ ಒಂದು ಹಂತದವರೆವಿಗೂ ಗಂಡುಮಕ್ಕಳಿರುವ ಕುಟುಂಬಗಳ ಮೇಲೆ ತೆರಿಗೆ ದಂಡವನ್ನು ಕೂಡ ವಿಧಿಸಬಹುದು. ಸಮಸ್ಯೆಯ ಮೂಲವಾಗಿರುವ, ಸಮಾಜದಲ್ಲಿ ಬೇರುಬಿಟ್ಟಿರುವ ಪೂರ್ವಾಗ್ರಹಗಳನ್ನು ರಾಜಕಾರಣಿಗಳು, ಶಿಕ್ಷಣದಲ್ಲಿ ತೊಡಗಿಸಿಕೊಂಡವರು, ಚಳವಳಿಗಾರರು ಹಾಗೂ ಪತ್ರಿಕೆಗಳ ಅಂಕಣಕಾರರು ಕೂಡ ಈ ಕೆಡುಕುಗಳನ್ನು ಕಟುವಾಗಿ ಟೀಕಿಸಬೇಕು; ಇದು ಇವರಿಗೆ ಸಾಧ್ಯ ಕೂಡ. ಅಂತಿಮವಾಗಿ ಇವೆಲ್ಲವುಗಳ ತಾತ್ಪರ್ಯವಿಷ್ಟೇ: ಇಂದಿನ ಭಾರತ ತನ್ನ ಹೆಣ್ಣುಮಕ್ಕಳನ್ನು, ಅವರು ಗಂಡುಮಕ್ಕಳಿಗಿಂತ ಕೆಳಮಟ್ಟದವರೆಂದು ನಂಬುವ ಕಾರಣಕ್ಕಾಗಿ ಕಳೆದುಕೊಂಡು ದೂರ ಮಾಡುತ್ತಿರುವ ದೇಶವೆಂದು ನೋಡಲ್ಪಡುವುದಕ್ಕೆ ಸಿದ್ಧವಿದೆಯೇ? ಇದನ್ನು ಮಾಡುತ್ತಿರುವ ತಂದೆ-ತಾಯಿಯರು ತಾವೇ ಪೋಷಿಸಿದ ಮಕ್ಕಳಿಂದಲೇ ಮುಂದೊಂದು ದಿನ ಬರುವ "ನನ್ನ ಅಕ್ಕ-ತಂಗಿಯರೆಲ್ಲಿ? ಎಂಬ ಪ್ರಶ್ನೆಯನ್ನು ಎದುರಿಸಬೇಕಾಗಿ ಬರಬಹುದಲ್ಲವೆ?

ಆಗ ಅವರು ಏನೆಂದು ಉತ್ತರಿಸುತ್ತಾರೆ?

**ಕನ್ನಡಕ್ಕೆ: ಡಾ.ಎಂ.ಬಿ. ರಾಮಮೂರ್ತಿ**

**(Salman Rushdie,**

**Step Across this lime- P324-6)**


ಹಿಂದೊಮ್ಮೆ ದೀಪಾವಳಿಯು
ನಸುಕು ಸಂಜೆ
ನನ್ನವ್ವ ಸಾಲುದೀಪವ ಹಚ್ಚಿ
ನನ್ನ ಕಣ್ಣಲ್ಲಿ ಅವುಗಳ ಪ್ರತಿಬಿಂಬಕ್ಕೆ
ಮುದಗೊಂಡು ಇತ್ತ ಮುತ್ತು
ಹೃದಯಂಗಮ ನೆನಪು


-ನೀಲು



ದೇವರು ಕಟ್ಟುವವನಲ್ಲ, ಆದರೆ ತನ್ನ ಕೈಲಾಗುವವನ್ನೂ ಆತ ಮಾಡಲಿಲ್ಲ. -ವುಡಿ ಅಲನ್

ಲಂಕೇಶ್ ಅವರ ನಾಟಕ ಗುಣಮುಖದ ನಾಯಕ, 18ನೇ ಶತಮಾನದ ಪೂರ್ವಾರ್ಧದಲ್ಲಿ ಭಾರತದ ಮೇಲೆ ದಂಡೆತ್ತಿ ಬಂದ ನಾದಿರ್ ಶಾ. ಆದರೆ ನಾಟಕದ ಕಾಲವನ್ನು ಲೇಖಕ "ಆಕ್ರಮಣದ ಆತ್ಮ ನಿರೀಕ್ಷೆಯ ಆಧುನಿಕ ಕಾಲ" ಎಂದು ಸೂಚಿಸುತ್ತಾರೆ. ತನ್ನ ಈ ಸೂಚನೆಯನ್ನು ಸ್ಪಷ್ಟಪಡಿಸಲು ನಾಟಕದ ಮೊದಲಿಗೆ ಅವರು ಖ್ಯಾತ ತತ್ವಶಾಸ್ತ್ರಜ್ಞ ಲುಡ್ವಿಗ್ ವಿಟ್‌ಗೆನ್‌ಸ್ಟೀನ್‌ನ ಈ ಮಾತುಗಳನ್ನು ಉದ್ಧರಿಸುತ್ತಾರೆ. ಸತ್ಯ ಸಂಭಾವ್ಯತೆ, ಸಂವೇದನೆ ಮುಂತಾದ್ದರ ಬಗ್ಗೆ ನಿಖರವಾಗಿ ಯೋಚಿಸುವುದು ಕಷ್ಟ. ನಮ್ಮ ಮತ್ತು ಇತರ ಬದುಕಿನ ಕುರಿತು ಯೋಚಿಸುವುದಂತೂ ಇನ್ನಷ್ಟು ಕಷ್ಟ. ಹಾಗೆ ಯೋಚಿಸುವುದು, ಮನಸ್ಸಿಗೆ ಸಂತೋಷ ಕೊಡುವಂತಹದ್ದಲ್ಲ, ಅಷ್ಟೇ ಯಾಕೆ ಅನೇಕ ವೇಳೆ ಅದೊಂದು ಅಸಹನೀಯ ಅನುಭವ. ಆದರೆ ಅದು ಹಾಗಿದ್ದಾಗಲೇ ಅತ್ಯಂತ ಅವಶ್ಯಕವಾಗಿರುವಂತದ್ದು.






ಲಂಕೇಶ್ ತನ್ನ ನಾಟಕದಲ್ಲಿ ನಾದಿರ್ ಶಾನನ್ನು ಆತ್ಮ ನಿರೀಕ್ಷಣೆಗೆ ಎರವಾದ ಆಕ್ರಮಣ ಮತ್ತು ವಿವೇಚನೆ ಇಲ್ಲದ ಅಧಿಕಾರದ ರೂಪಕವನ್ನಾಗಿಸಿದ್ದಾರೆ. ದೆಹಲಿಯಲ್ಲಿ ತನ್ನ ಸೈನಿಕರು ನಡೆಸಿದ ಹಿಂಸೆಯ ಅಗಾಧತೆಯಿಂದ ನಾದಿರ್ ಶಾ ಬೆಚ್ಚಿಬಿದ್ದಿದ್ದಾನೆ. ಅವನು ಭಾರತಕ್ಕೆ ಬರುವ ವೇಳೆಗಾಗಲೇ ಮೊಘಲ್ ಸಾಮ್ರಾಜ್ಯ ಅವನತಿಯ ಹಾದಿ ಹಿಡಿದಿತ್ತು; ದೊರೆ


ಯಾಕೂಬ್ ಹಕೀಮು. ಈ ಹಕೀಮು ಅಲಾವಿಖಾನ ಕೂಡ ನಾದಿರ್ ಶಾನನ್ನು ಸಂಪೂರ್ಣ ಗುಣಪಡಿಸಲಾರ; ಹಬ್ಬೆಂದರೆ ಅವನನ್ನು 'ಗುಣಮುಖ'ನನ್ನಾಗಿಸಬಲ್ಲ. ನಾದಿರ್ ಶಾ ದೆಹಲಿಯನ್ನು ಕೊಳ್ಳೆ ಹೊಡೆಯುವುದಕ್ಕೆ ಮೊದಲೇ ಅಲಾವಿ ಖಾನ್ ದೆಹಲಿಯ ದೊರೆಗಳ ವಿರುದ್ಧ ತಿರುಗಿ ಬದ್ದಿದ್ದ. ತಂತ್ರ, ಪ್ರತಿತಂತ್ರಗಳ ಅಧಿಕಾರದ ಜಗತ್ತು ತನ್ನಂತಹ ಹಕೀಮನಿಗೆ ಹೇಳಿಸಿದ್ದಲ್ಲ ಎಂದು ದೆಹಲಿಯಿಂದ ದೂರವಿದ್ದ ಅಲಾವಿ ಖಾನ್ ಬಡತನದಲ್ಲೂ ಅವನ ಅಸ್ಮಿತೆಯನ್ನು ಮುಡಿಪಾಗಿ ಬಳಸಿಕೊಂಡವ. ನಾದಿರ್ ಶಾನ ರೋಗ ವಾಸಿಯಾಗುವುದು ಯಾರಿಂದಲಾದರೂ ಸಾಧ್ಯವಿದ್ದರೆ ಅದು ಅಧಿಕಾರದ ತರ್ಕವನ್ನೂ, ಭಾಷೆಯನ್ನೂ ತಿರಸ್ಕಾರದಿಂದ ಕಂಡ ಈ ಅಲಾವಿಖಾನನಿಂದ ಮಾತ್ರ. ನಾಟಕದ ಮೂರನೆಯ ದೃಶ್ಯದಲ್ಲಿ ನಾದಿರ್‌ಶಾ ಚಿಕಿತ್ಸೆಗೆಂದು ಬಂದ ಅಲಾವಿಖಾನ್, ಅವನಿಗೆ 'ನೀನು ಯಾರು? ನನಗೆ ಗೊತ್ತಿಲ್ಲ, ನಿನ್ನ ಹೆಸರು ಹೇಳು' ಎಂದು ಸಂಭಾಷಣೆ ಪ್ರಾರಂಭಿಸುವುದು ಧ್ವನಿ ಪೂರ್ಣವಾಗಿದೆ. ನಾದಿರ್ ಶಾನಿಗೆ ಚಕ್ರವರ್ತಿಯೂ ಒಬ್ಬ ಮನುಷ್ಯ ಎಂಬ ಸರಳ ಸತ್ಯ ಮರೆತು ಹೋಗಿದೆ. ಅವನ ರೋಗದ ಶುಶ್ರೂಷೆ ಈ ಆತ್ಮಜ್ಞಾನದಿಂದ ಪ್ರಾರಂಭವಾಗಬೇಕಿದೆ. ಚಕ್ರವರ್ತಿಯಾಗಿ ತಾನು ದೆಹಲಿಯಲ್ಲಿ ವರ್ತಿಸಿದ ರೀತಿ ಶರೀರ ಧರ್ಮಕ್ಕೂ, ರಾಜಧರ್ಮಕ್ಕೂ ವಿರುದ್ಧವಾದದ್ದು

ಬುದ್ಧಿಜೀವಿಗಳ ಆದ್ಯ ಕರ್ತವ್ಯ ಎಂದು ಸಯೀದ್ ತನ್ನ ಈ ಪ್ರಬಂಧದಲ್ಲಿ ಪ್ರತಿಪಾದಿಸುತ್ತಾರೆ (**Representation of the Intellectual-** ಲಂಡನ್ **1994.** ಪುಟ **63-75**). ಸಯೀದ್‌ರ ಈ ವಿಚಾರದ ಬಗ್ಗೆ ನೋಮ್ ಚೋಮ್‌ಸ್ಕಿ ಸಣ್ಣದೊಂದು ಆಕ್ಷೇಪವೆತ್ತುತ್ತಾರೆ. "ಅಧಿಕಾರಕ್ಕೆ ಸತ್ಯ ಏನು ಎಂದು ಹೇಳುವ ಅಗತ್ಯ ವಾದರೂ ಏನು? ಸತ್ಯ ಏನು ಎಂದು ಅಧಿಕಾರಕ್ಕೆ ಗೊತ್ತಿದೆ. ಸತ್ಯ ಹೇಳಬೇಕಾಗಿರುವುದು ಜನರಿಗೆ" ಎಂದು ಚೋಮ್‌ಸ್ಕಿ ಸೂಚಿಸುತ್ತಾರೆ. ಗುಣ ಮುಖ ನಾಟಕದಲ್ಲಿ ಆಲಾವಿಖಾನ್ ನಾದಿರ್ ಶಾನ ಎದುರು ನಿಂತು ಮಾತ್ರ ಸತ್ಯವನ್ನು ಹೇಳಬಲ್ಲವನಾಗಿದ್ದ. ಅಧಿಕಾರದ ಸತ್ಯವನ್ನು ಜನರಿಗೆ ಹೇಳುವ ಮಾರ್ಗಗಳು ಅವನಿಗೆ ತೆರೆದುಕೊಂಡಿರಲಿಲ್ಲ. ಆದರೆ ನಮ್ಮ ಕಾಲದಲ್ಲಿ ಅಧಿಕಾರವನ್ನು ಸಂಬೋಧಿಸಿ ಬುದ್ಧಿಜೀವಿ ಆಡುವ ಮಾತು, ಜನರನ್ನೂ ಉದ್ದೇಶಿಸಿರುತ್ತದೆ. ಸ್ವತಃ ಎಡ್ವರ್ಡ್ ಸಯೀದ್ ಮತ್ತು ನೋಮ್ ಚೋಮ್‌ಸ್ಕಿ ಈ ಪ್ರಕ್ರಿಯೆಯ ಅತ್ಯುತ್ತಮ ಉದಾಹರಣೆಗಳು. ಕನ್ನಡದಲ್ಲಿ ಹೀಗೆ ಅಧಿಕಾರ ಮತ್ತು ಜನತೆ -ಎರಡೂ ವಲಯಗಳನ್ನು ಉದ್ದೇಶಿಸಿ ದಿಟ್ಟವಾಗಿ ತಾನು ಕಂಡ ಸತ್ಯವನ್ನು ಹೇಳಿದ ಬುದ್ಧಿಜೀವಿ ಲಂಕೇಶ್. ಅವರು ಕರ್ನಾಟಕದ ರಾಜ



ಜಿ.ರಾಜಶೇಖರ

[illegible] ತನ್ನ ಬದುಕಿನ ಕೊನೆಯ ವರ್ಷಗಳಲ್ಲಿ ಸುಬ್ಬಣ್ಣ ಹಿಂದುತ್ವ ರಾಜಕೀಯವನ್ನು ತೀವ್ರವಾಗಿ ವಿರೋಧಿಸಿದ್ದರು. ಅದಕ್ಕೋಸ್ಕರ ಜನರನ್ನು ಎದುರು ಹಾಕಿಕೊಳ್ಳಲೂ ಅವರು ಹಿಂದು ಮುಂದೆ ನೋಡಲಿಲ್ಲ. 1989ರಲ್ಲಿ ಉಡುಪಿಯಲ್ಲಿ ಅಡ್ವಾಣಿ ರಥಯಾತ್ರೆಯನ್ನು ವಿರೋಧಿಸಿ ನಡೆದ ಒಂದು ರ್‍ಯಾಲಿಯಲ್ಲಿ ಅವರು ಮುಖ್ಯ ಅತಿಥಿಯಾಗಿ ಕಲ್ಲು ತೂರಾಟಕ್ಕೆ ಎದೆಯೊಡ್ಡಿ "ನೀವು ಎಷ್ಟೇ ಕಲ್ಲು ಎಸೆದರೂ ನಾನು ಈ ಸಭೆಯನ್ನು ನಿಲ್ಲಿಸುವುದಿಲ್ಲ" ಎಂದು ಘೋಷಿಸಿದ್ದರು. ಇನ್ನೊಮ್ಮೆ ಉಡುಪಿಯಲ್ಲೇ ಒಂದು ನಾಟಕ ಪ್ರದರ್ಶನದ ಮಧ್ಯೆ ಹಿಂದೂತ್ವವಾದಿಗಳು ಗದ್ದಲ ಎಬ್ಬಿಸಿದಾಗ ಪ್ರೇಕ್ಷಕರ ನಡುವೆಯೇ ಇದ್ದ ಸುಬ್ಬಣ್ಣ ಎದ್ದು ನಿಂತು "ಈ ಪ್ರದರ್ಶನಕ್ಕೆ ತಡೆ ಉಂಟಾದರೆ, ಇನ್ನು ಮುಂದೆ ಎಂದೂ ಉಡುಪಿಯಲ್ಲಿ ನಾನು ನೀನಾಸಂ ನಾಟಕಗಳನ್ನು




# ಅಧಿಕಾರದ ಎದುರು ಸತ್ಯವನ್ನು ಹೇಳುವುದು


ಗುಣ ಮುಖ ನಾಟಕದಲ್ಲಿ ಆಲಾವಿಖಾನ್ ನಾದಿರ್ ಶಾನ ಎದುರು ನಿಂತು ಮಾತ್ರ ಸತ್ಯವನ್ನು ಹೇಳಬಲ್ಲವನಾಗಿದ್ದ. ಅಧಿಕಾರದ ಸತ್ಯವನ್ನು ಜನರಿಗೆ ಹೇಳುವ ಮಾರ್ಗಗಳು ಅವನಿಗೆ ತೆರೆದುಕೊಂಡಿರಲಿಲ್ಲ. ಆದರೆ ನಮ್ಮ ಕಾಲದಲ್ಲಿ ಅಧಿಕಾರವನ್ನು ಸಂಬೋಧಿಸಿ ಬುದ್ಧಿಜೀವಿ ಆಡುವ ಮಾತು, ಜನರನ್ನೂ ಉದ್ದೇಶಿಸಿರುತ್ತದೆ. ಸ್ವತಃ ಎಡ್ವರ್ಡ್ ಸಯೀದ್ ಮತ್ತು ನೋಮ್ ಚೋಮ್‌ಸ್ಕಿ ಈ ಪ್ರಕ್ರಿಯೆಯ ಅತ್ಯುತ್ತಮ ಉದಾಹರಣೆಗಳು. ಕನ್ನಡದಲ್ಲಿ ಹೀಗೆ ಅಧಿಕಾರ ಮತ್ತು ಜನತೆ -ಎರಡೂ ವಲಯಗಳನ್ನು ಉದ್ದೇಶಿಸಿ ದಿಟ್ಟವಾಗಿ ತಾನು ಕಂಡ ಸತ್ಯವನ್ನು ಹೇಳಿದ ಬುದ್ಧಿಜೀವಿ ಲಂಕೇಶ್.

ಲಂಪಟನಾಗಿದ್ದ; ಅವನ ಆಸ್ಥಾನಿಕರು ಸಮಯ ಸಾಧಕರಾಗಿದ್ದರು. ಪ್ರಜೆಗಳು ದಿಕ್ಕೆಟ್ಟಿದ್ದರು. ಕೇಂದ್ರವೇ ಟೊಳ್ಳಾಗಿರುವ ಇಂತಹ ಸಾಮ್ರಾಜ್ಯವನ್ನು ವಶಪಡಿಸಿಕೊಂಡು ತಾನು ಸಾಧಿಸಿದ್ದಾದರೂ ಏನು ಎಂದು ನಾದಿರ್ ಶಾ ದಿಗ್ಭ್ರಮೆಗೊಂಡಿದ್ದಾನೆ. ಸಾಮ್ರಾಜ್ಯದಿಂದ ಮರ್ಯಾದೆಯಲ್ಲಿ ನಿರ್ಗಮಿಸುವ ಮಾರ್ಗಗಳೂ ಅವನಿಗೆ ಮುಚ್ಚಿಕೊಂಡಿವೆ. ತಾನು ಪ್ರಾರಂಭಿಸಿದ [illegible] ತನಗೆ ಬಿಡುಗಡೆ ಇಲ್ಲ ಎಂದು ಅವನಿಗೆ ಅಗ [illegible] ಆಗಿದೆ; ಆಕ್ರಮಣ [illegible] ಆಕ್ರಮಣಕ್ಕೆ ಒಳಗಾಗಿದ್ದಾನೆ.

ನಾದಿರ್ ಶಾನ ಆತ್ಮ ಮತ್ತು ಶರೀರಗಳೆರಡೂ [illegible]. ಅವನನ್ನು ಅಧಿಕಾರ ಮತ್ತು ಹಿಂಸೆಯ [illegible]

ಎಂದು ನಾದಿರ್ ಶಾನಿಗೆ ಆಲಾವಿಖಾನ್ ಮನದಟ್ಟು ಮಾಡುತ್ತಾನೆ. ನಾಟಕದಲ್ಲಿ ನಾದಿರ್ ಶಾನ ತದ್ರೂಪವೂ ಆಕಸ್ಮಿಕವೂ ಆಗಿರುವ ಪಾತ್ರವೊಂದಿದೆ-ತನ್ವೀರ್. ಈತ ನಾದಿರ್ ಶಾನ ಸೈನ್ಯದ ಅಡಿಗೆಯವ. ದೆಹಲಿಗೆ ಬಂದ ಶುರುವಿಗೆ, ಅವನು ಮಿಣ್ಣಗಿದ್ದ; ಅಡಿಗೆಯವನಿಗೆ ತಕ್ಕಂತೆ. ಆದರೆ ಎಷ್ಟೆಂದರೂ ವಿಜಯಿ ಸೈನ್ಯದ ಅಡಿಗೆಯವನಲ್ಲವೇ? ದೆಹಲಿಯ ಭಟ್ಟಂಗಿತನದ ತನ್ವೀರ್‌ನಲ್ಲಿ ಇನ್ನಿಲ್ಲದ ಆತ್ಮವಿಶ್ವಾಸವನ್ನು ಮೂಡಿಸಿದೆ. ಅವನೂ ಹುಚ್ಚು ಹಿಂಸೆಯಲ್ಲಿ ತೊಡಗಿದ್ದಾನೆ. ನಾಟಕದಲ್ಲಿ ನಾದಿರ್ ಶಾ ದೃಶ್ಯದಿಂದ ದೃಶ್ಯಕ್ಕೆ ಹೆಚ್ಚು ಹೆಚ್ಚು ಅಸ್ಥಿರನಾಗುತ್ತಾ ನಡೆದಿದ್ದಾನೆ; ಆದರೆ ಅವನದ್ದೇ ಪ್ರತಿರೂಪದಂತಿರುವ ತನ್ವೀರ್ ಹೆಚ್ಚು ಹೆಚ್ಚು ಆತ್ಮವಿಶ್ವಾಸದಿಂದ ತನ್ನ ಹಿಂಸೆ ಮುಂದುವರಿಸಿ ನಾಟಕದ ಕೊನೆಯಲ್ಲಿ ಧರ್ಮದುರಂಧರನಾಗಿ ಬೆಳೆದು ನಿಂತಿದ್ದಾನೆ. ಹಿಂಸೆಗೆ ಈಗ ಅವನ ಬಳಿ ಸೈದ್ಧಾಂತಿಕ ಕಾರಣಗಳಿವೆ.





ನಾದಿರ್ ಶಾ ಜೊತೆ ಆಲಾವಿಖಾನ್ ವ್ಯವಹರಿಸುವುದು ಕೇವಲ ತತ್ವಜ್ಞಾನಿ ಅಥವಾ ಹಕೀಮನಂತಲ್ಲ, ಅವನು ಹಿಂಸೆಗೆ ಬಲಿಯಾಗಿರುವ ದೆಹಲಿಯ ಸಾಮಾನ್ಯ ಜನರ ಪ್ರತಿನಿಧಿ ಆಗಿಯೂ ನಾದಿರ್ ಶಾನಿಗೆ ಅವನ ರಾಜಧರ್ಮವನ್ನು ನೆನಪಿಸುತ್ತಾನೆ. ನಾದಿರ್ ಶಾನ ಸೈನಿಕರು ದೆಹಲಿಯ ಜನ ಸಾಮಾನ್ಯರು, ಮುದುಕರು, ಹೆಂಗಸರು, ಮಕ್ಕಳು ಮತ್ತು ರೋಗಿಗಳನ್ನೂ ಹಿಂಸಿಸಿದ್ದರ ಕುರಿತು ಹೇಳುತ್ತಾನೆ. ಆಲಾವಿಖಾನ್ ನಾಟಕದಲ್ಲಿ ಹೇಳುವ ಮತ್ತು ಆ ಮುಖಾಂತರ ಅಧಿಕಾರವನ್ನು ಎಚ್ಚರಿಸುವ ನಾಗರಿಕನೂ ಆಗಿದ್ದಾನೆ. ಅಧಿಕಾರದ ಎದುರು ಸತ್ಯವನ್ನು ಹೇಳುವುದು- **Speaking truth to power,** ಇದು ಎಡ್ವರ್ಡ್ ಸಯೀದ್‌ರ ಒಂದು ಪ್ರಬಂಧದ ಶೀರ್ಷಿಕೆ. ಅಧಿಕಾರಕ್ಕೆ ತಲೆಬಾಗದೆ, ಅದರ ಜೊತೆ ಶಾಮೀಲಾಗದೆ ಅವಶ್ಯಬಿದ್ದರೆ ಸ್ವಹಿತವನ್ನೂ ಮರೆತು ಅಧಿಕಾರದ ಎದುರು ಸತ್ಯ [illegible]


ಕಾರಣಿಗಳ ಬಗ್ಗೆ-ಅದರಲ್ಲೂ ವಿಶೇಷವಾಗಿ ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್. ಪಟೇಲ್ ಬಗ್ಗೆ-ಪತ್ರಿಕೆಯಲ್ಲಿ ಬರೆದದ್ದನ್ನು ಒಂದು ಕ್ಷಣ ಮನಸ್ಸಿಗೆ ತಂದುಕೊಳ್ಳಿ. ಈ ರೋಗಗ್ರಸ್ತ ಮಹನೀಯರಿಗೆ ಆಲಾವಿಖಾನ್ ಹೇಳಬಹುದಾಗಿದ್ದ ಪಥ್ಯದಂತ ಮಾತುಗಳು ಅವು. ಅಧಿಕಾರ ಮತ್ತು ಸತ್ಯವನ್ನು ಹೇಳುವುದರ ಜೊತೆಗೆ ಲಂಕೇಶರ ಬರವಣಿಗೆಗೆ ಮೂರನೆಯ ಆಯಾಮವೂ ಒಂದಿದೆ. ಲೇಖಕನಾಗಿ ಅವರು ಎಂದೂ ಈ ಸಮಾಜದ ಹಿಂಸೆ ಮತ್ತು ಕ್ಷುದ್ರತೆಗಳಿಂದ ತಾನು ಪ್ರತ್ಯೇಕ ಎಂದು ಭಾವಿಸಿದವರಲ್ಲ. ಅವರ ಟೀಕೆಟಿಪ್ಪಣಿಯ ಗದ್ಯವನ್ನು ಸೂಕ್ಷ್ಮವಾಗಿ ಗಮನಿಸಿ; ಜನರನ್ನು ಸಂಬೋಧಿಸಿ ಅವರು ಹೇಳುವ ಮಾತುಗಳು, ತನಗೆ ತಾನೇ ಹೇಳಿಕೊಂಡಂತಿದೆ.


ಲಂಕೇಶರಂತೆ, ಕನ್ನಡದಲ್ಲಿ ಸತ್ಯವನ್ನು ನಿರ್ಭೀತಿಯಿಂದ ಅಧಿಕಾರ, ಜನತೆ ಮತ್ತು ತನ್ನ ಸ್ವಂತಕ್ಕೆ ಹೇಳಿಕೊಂಡ ಇನ್ನೊಬ್ಬ ಬುದ್ಧಿಜೀವಿ. ಇತ್ತೀಚೆಗೆ ನಿಧನರಾದ ಕೆ.ವಿ. ಸುಬ್ಬಣ್ಣ. ಸುಬ್ಬಣ್ಣನದ್ದು ಮೂಲತಃ ಒಬ್ಬ ಸಂಸಾರ ವಂದಿಗನ ತಾಳ್ಮೆ ಮತ್ತು ಹೊಂದಾಣಿಕೆಯ ನಿಲುವು. ರಾಜಕೀಯ ಸಿದ್ಧಾಂತಗಳ ಅತಿರೇಕಗಳನ್ನು ಅದರಿಂದ ಹುಟ್ಟುವ ಹಿಂಸೆಯನ್ನು ಅವರು ವಿರೋಧಿಸಿದ್ದು ಸಹಜವೇ ಆಗಿತ್ತು. ಅವರಿಗೆ ಸಾಹಿತ್ಯದಲ್ಲಿ ಶ್ರೇಷ್ಠತೆಯ ಕಲ್ಪನೆ ಕೂಡ ಒಂದು ಅತಿರೇಕವಂತೇ ಅನ್ನಿಸಿತ್ತು. ಶ್ರೇಷ್ಠತೆಯ ಬಯಕೆಯಲ್ಲಿಯೇ ಮುಕ್ಕಾಗಿರುವುದರ ಬಗ್ಗೆ ಆತಂಕ ಇದೆ. ಈ ಲೋಕದ ಬದುಕಿನಲ್ಲಿ ಎಲ್ಲರೂ ಪರಿಪೂರ್ಣವಾಗಿರಬೇಕು ಎಂದು ನಾವು ಹಠ ಹಿಡಿದರೆ ಕೊನೆಗೆ ಇಲ್ಲಿ ಉಳಿಯುವುದಾದರೂ ಏನು? ಸುಬ್ಬಣ್ಣ ಎಂದೂ ಈ ಬಗೆಯ ಹಠವಾದಿಯಾಗಿರಲಿಲ್ಲ [illegible]

ಆಡಿಸುವುದಿಲ್ಲ" ಎಂದು ಸಾರಿದ್ದರು. ಗುಜರಾತ್ ನರಮೇಧದ ಬಗ್ಗೆ ನೀನಾಸಂ ತ್ರೈ ಮಾಸಿಕ 'ಮಾತುಕತೆ' ಒಂದು ಸಂಚಿಕೆಯನ್ನೇ ಪ್ರಕಟಿಸಿತು. ಹೀಗೆ ಹಿಂದೂತ್ವವಾದದ ವಿರುದ್ಧ ಸುಬ್ಬಣ್ಣ ಬುದ್ಧಿಜೀವಿಯೊಬ್ಬನಿಗೆ ಲಭ್ಯವಿರುವ ಎಲ್ಲಾ ವಿಧಾನಗಳಲ್ಲೂ ಪ್ರತಿಭಟಿಸುವುದರ ಜೊತೆಗೆ ಆ ಬಗ್ಗೆ ಆಳವಾದ ಆತ್ಮಶೋಧನೆಯಲ್ಲೂ ತೊಡಗಿಕೊಳ್ಳುತ್ತಾರೆ. ಅವರು ತೀರಿಕೊಳ್ಳುವುದಕ್ಕೆ ಕೆಲವೇ ತಿಂಗಳ ಮೊದಲು, ನನಗೆ ನೀಡಿದ ಸಂದರ್ಶನವೊಂದರಲ್ಲಿ ಸುಬ್ಬಣ್ಣ ಹೇಳಿದರು: "ಗುಜರಾತ್ ಹಿಂಸೆ ನಡೆಸಿದ ಜನಕ್ಕೆ ಆ ಹಿಂಸೆ ಕೂಡದು ಎನ್ನಿಸಬೇಕು. ಅವರು ಮನಸ್ಸು ಬದಲಾಯಿಸದೆ ನಾವು ನೀವು ಮಧ್ಯೆ ಪ್ರವೇಶಿಸಿ ಏನು ಪ್ರಯೋಜನ? ಗುಜರಾತ್‌ನ ಜನ ದೇಶದ ಉಳಿದ ಜನಕ್ಕಿಂತ ಯಾವ ರೀತಿಯಲ್ಲಿ ಬೇರೆ? ಆ ಬಗೆಯ ಹಿಂಸೆ ಅಲ್ಲಿನ ಸಾಮಾನ್ಯ ಜನರಿಗೆ ಸಾಧ್ಯವಾದರೆ, ಅವರಿಗೆ ಅದು ಸಹ್ಯ ಎಂದು ಕಂಡರೆ ಅದರ ಅರ್ಥ ಇಷ್ಟೆ. ನಾಳೆ, ನಾವೂ ಅದನ್ನೆಲ್ಲ ಮಾಡಿಬಿಡಬಹುದು..." ಗುಜರಾತ್ ಹಿಂಸೆ, ತನಗೆ ಹೊರಗಿನಿಂದ ಬಂದ ಸುದ್ದಿಯಲ್ಲ; ಅದು ಪ್ರತ್ಯಭಿಜ್ಞಾನ - ತನ್ನ ಒಳಗೇ ಇರುವ ಹಿಂಸೆಯ ಸಾಧ್ಯತೆಯನ್ನು ತನಗೆ ನೆನಪಿಸುವಂತಹದ್ದು ಎಂದೂ ಅವರು ಹೇಳುತ್ತಾರೆ. ಸುಬ್ಬಣ್ಣನವರ ಕೊನೆಯ ದೀರ್ಘ ಲೇಖನ ಕೂಡಾ ಗುಜರಾತ್ ಕುರಿತಾಗಿದ್ದು ಅದನ್ನು ಅವರು "ಗುಜರಾತ್ ಸ್ವಗತ" ಎಂದು ಕರೆದಿರುವುದು ಅರ್ಥ ಪೂರ್ಣವಾಗಿದೆ. ಲಂಕೇಶ್ ಮತ್ತು ಸುಬ್ಬಣ್ಣ ಇಬ್ಬರೂ ಹಿಂಸೆಯನ್ನು ತಮಗೆ ಹೊರತಾದ 'ಅನ್ಯ' ಎಂದು ಭಾವಿಸಲಿಲ್ಲ.

ನಾಗರಿಕರಾಗಿ ಹಿಂಸೆಯನ್ನು ಪ್ರತಿಭಟಿಸುತ್ತಲೇ ಹಿಂಸೆಯ [illegible] 'ಮಧುರಯಾತನೆ' ಎಂಬಷ್ಟೇ ಆಗಿರುವ ಕನ್ನಡದಲ್ಲಿ ಇಂತಹ ಬರವಣಿಗೆಯ ಇನ್ನೊಂದು ಉದಾಹರಣೆ [illegible] ನಾವು ಅರಸುತ್ತ ಹೊರಟರೆ ಬಹುಶಃ [illegible]

# ಕೋಮುವಾದಿ ಸಿದ್ಧಾಂತದಿಂದ ಸೆಕ್ಯುಲರ್ ಅಭಿವೃದ್ಧಿ ಸಾಧ್ಯವೇ?





ಶಿವಸುಂದರ್

ಕೋಮುವಾದವೆಂದರೆ ಜಾತಿ ಹಾಗೂ ಧರ್ಮದ ಆಧಾರಗಳ ಮೇಲೆ ಒಂದು ಶ್ರೇಷ್ಠ ಮತ್ತೊಂದು ಕನಿಷ್ಠ ಎಂದು ಬೋಧಿಸುವ, ಜಾತಿ, ಧರ್ಮಗಳ ಆಧಾರದಲ್ಲಿ ತಾರತಮ್ಯ ಬೋಧಿಸುವ ಸಿದ್ಧಾಂತ. ಸೆಕ್ಯುಲರಿಸಮ್ ಎಂದರೆ ಜಾತಿ, ಧರ್ಮಗಳ ಆಧಾರದಲ್ಲಿ ಯಾರ ನಡುವೆಯೂ ಯಾವ ಕಾರಣಕ್ಕೂ ಬೇಧಭಾವ ಎಣಿಸಬಾರದೆನ್ನುವ ಸಿದ್ಧಾಂತ. ಆದರೆ ಈಗ ಜನತೆಯ ನಡುವೆ ತಾರತಮ್ಯ ಪೋಷಿಸುವ ಸಿದ್ಧಾಂತ, ಅಭಿವೃದ್ಧಿ ಹಾಗೂ ಆಡಳಿತದ ಪ್ರಶ್ನೆ ಬಂದಾಗ ಜಾತಿ, ಧರ್ಮಗಳ ತಾರತಮ್ಯವಿಲ್ಲದೆ ಸೆಕ್ಯುಲರ್ ಅಭಿವೃದ್ಧಿಯನ್ನು ಕೊಡಬಲ್ಲದೇ ಎಂಬುದು. ಪ್ರಶ್ನೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಬೇವು ಬಿತ್ತಿ ಮಾವು ಬೆಳೆಯಲು ಸಾಧ್ಯವೇ ಎನ್ನುವುದು.!

ಈ ಪ್ರಶ್ನೆ ಉದ್ಭವಿಸಲು ಪ್ರಧಾನ ಕಾರಣವೆಂದರೆ ಈವರೆಗೆ ಧರ್ಮಾಧಾರಿತ ತಾರತಮ್ಯವನ್ನು, ಜಾತಿ ಆಧರಿತ ಶ್ರೇಣೀಕರಣವನ್ನು ಉಸಿರಾಡುತ್ತಲೇ ಬಂದಿದ್ದ ಹಿಂದೂತ್ವವಾದಿಗಳು ಅಧಿಕಾರಕ್ಕೆ ಬಂದ ತಕ್ಷಣ ತಾವು ಹಿಂದೂ ಕೋಮುವಾದಿಗಳೆ ಆಗಿದ್ದರೂ ಆಡಳಿತದಲ್ಲಿ ಸೆಕ್ಯುಲರ್ ಅಭಿವೃದ್ಧಿಯನ್ನು ಸಾಧಿಸಿ ತೋರಿಸುವುದಾಗಿ ಹೇಳುತ್ತಿರುವುದರಿಂದ.. ಮತ್ತೊಂದು ಕಡೆ ಪದ್ದೇ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗಿರುವ ಕುಮಾರಸ್ವಾಮಿಯವರು ತನಗೆ ಜಾತ್ಯತೀತ ಇತ್ಯಾದಿ ಯಾವುದೇ ಸಿದ್ಧಾಂತಗಳ ಅರ್ಥವು ನಿಘಂಟಿನಲ್ಲಾಗಲೀ, ಬುದ್ಧಿಜೀವಿಗಳ ಬಳಿಯಾಗಲೀ ದೊರೆಯಲಿಲ್ಲವೆಂದೂ, ಅಭಿವೃದ್ಧಿಗೆ ಯಾವುದೇ ಸಿದ್ಧಾಂತದ ಅಗತ್ಯವಿಲ್ಲವಾದ್ದರಿಂದ ತಮ್ಮ ಸರ್ಕಾರ ಯಾವುದೇ ಸಿದ್ಧಾಂತದ ಹಂಗಿಲ್ಲದೇ ಅದನ್ನು ಸಾಧಿಸಿಯೇ ತೀರುತ್ತೇವೆಂದೂ ಪ್ರತಿಜ್ಞೆ ಮಾಡಿದ್ದಾರೆ. ಅದು ಒಂದು ಕಡೆಯಾದರೆ ಮತ್ತೊಂದೆಡೆ ಉಪಮುಖ್ಯಮಂತ್ರಿ ಚಡ್ಡಿ ಶಿಖಾಮಣಿ ಯಡಿಯೂರಪ್ಪನವರು ಹಿಂದೂತ್ವ ಸಿದ್ಧಾಂತವೇ ಬೇರೆ- ಅಭಿವೃದ್ಧಿಯೇ ಬೇರೆ ಎಂದು ಪ್ರತಿಪಾದಿಸಿದ್ದಾರೆ. ಈ ವಾದವನ್ನು ಬಹುಪಾಲು ಸಮ್ಮಿಶ್ರ ಸರ್ಕಾರದ ಹಿತೈಷಿಗಳು ಒಪ್ಪಿಕೊಂಡಿದ್ದಾರೆ ಮಾತ್ರವಲ್ಲ ಈ ಸಮ್ಮಿಶ್ರ ಸರ್ಕಾರವನ್ನು ವಿರೋಧಿಸುತ್ತಿರುವವರೂ ಸಹ ಹಿಂದುತ್ವವನ್ನು ಕೋಮುವಾದಿ ಕಾರಣಗಳಿಗಾಗಿ ವಿರೋಧಿಸುತ್ತಿದ್ದಾರೆಯೇ ವಿನಃ ಹಿಂದೂತ್ವವಾದಿಗಳು ಸರ್ಕಾರದಲ್ಲಿರುವುದರಿಂದ ಅಭಿವೃದ್ಧಿ ಕುಂಟಿತವಾಗಬಹುದೆಂದಲ್ಲ. ಬಿ.ಜೆ.ಪಿ. ಯವರಂತೂ "ಗುಜರಾತನ್ನು ನೋಡಿ, ಅಲ್ಲಿ ಹಿಂದೂತ್ವದ ಅಭಿವೃದ್ಧಿಯೂ ಆಗಿದೆ, ಗುಜರಾತೂ ಅಭಿವೃದ್ಧಿ ಆಗಿದೆ" ಎಂದು ವಾದಿಸುತ್ತಿದ್ದಾರೆ.

ಹೀಗೆ ಎಲ್ಲರೂ ಹಿಂದೂತ್ವ ಸಿದ್ಧಾಂತವಿದ್ದಾಗಲೂ ಅಭಿವೃದ್ಧಿಯೂ ಸಾಧ್ಯವೆಂದು ಪ್ರತಿಪಾದಿಸುತ್ತಿದ್ದಾರೆ.

ಅರ್ಥಾತ್ ಅಭಿವೃದ್ಧಿಗೂ ಜನಪರ ಸಿದ್ಧಾಂತಗಳಿಗೂ ಯಾವುದೇ ಸಂಬಂಧವಿಲ್ಲವೆಂದು ವಾದಿಸುತ್ತಿದ್ದಾರೆ. ಇದೇನು ಕೇವಲ ಕುಮಾರಸ್ವಾಮಿಯವರ ಸಿದ್ಧಾಂತ ಮಾತ್ರವಲ್ಲ, ಅಲ್ಲಿ ದೆಹಲಿಯಲ್ಲಿ ಪ್ರಪಂಚದ ಬಡಜನತೆಯ ಅಭಿವೃದ್ಧಿಯ ಪ್ರಥಮ ಶತ್ರು ಜಾರ್ಜ್ ಬುಷ್‌ನ ವಿರುದ್ಧ ದೇಶದ ಜನತೆಯೆಲ್ಲ ಒಕ್ಕೊರಲಿನಿಂದ ವಿರೋಧಿಸುತ್ತಿದ್ದರೂ ನಮ್ಮ ಪ್ರಧಾನಿ ಮನಮೋಹನಸಿಂಗರೂ ಹಾಗೂ ದೇಶದ ಖ್ಯಾತ ಗಣ್ಯಾತಿಗಣ್ಯ ಬುದ್ಧಿಜೀವಿಗಳೂ ಇತಿಹಾಸದಿಂದ ಪಾಠ ಕಲಿಯಬೇಕೆ ವಿನಃ ಅದಕ್ಕೆ ಜೋತು ಬೀಳಬಾರದೆಂದು ಬುದ್ಧಿವಾದ ಬೋಧಿಸುತ್ತಿದ್ದಾರೆ. ಇಂದಿನ ಜಗತ್ತಿನ ಪರಿಸ್ಥಿತಿಯಲ್ಲಿ ಅಮೆರಿಕ ಎಷ್ಟೇ ದುಷ್ಟನಾಗಿದ್ದರೂ ನಾವು ಇಂದು ಅಮೆರಿಕದ ಜೊತೆಗೆ ಏಗುವುದೇ ಬುದ್ಧಿವಂತಿಕೆ ಹಾಗೂ ಭಾರತದ ಅಭಿವೃದ್ಧಿಗೆ ಪೂರಕವೆಂದು ಅಧಿಕೃತವಾಗಿ ಪ್ರತಿಪಾದಿಸಲಾಗುತ್ತಿದೆ.

## ರಾಜಕೀಯ ರಹಿತ ಅಭಿವೃದ್ಧಿ

ಇಂದು ಇಡೀ ಪ್ರಪಂಚಕ್ಕೂ ವಿಶ್ವಬ್ಯಾಂಕ್ ಇದನ್ನೇ ಬೋಧಿಸುತ್ತಿದೆ. ಸಮಾಜವಾದ, ಕಮ್ಯುನಿಸಮ್ ಇನ್ನಿತ್ಯಾದಿ ಇಸಮ್‌ಗಳಿಗೆ ಬಲಿಯಾಗಿ ಅಭಿವೃದ್ಧಿಯಿಂದ ವಂಚಿತರಾಗಬಾರದೆಂದು ಅದು ಇಡೀ ಜಗತ್ತಿಗೆ ಆದೇಶ ನೀಡುತ್ತಿದೆ. ಅದನ್ನೇ ಅದು ಗುಡ್ ಗವರ್ನೆನ್ಸ್-ಅಂದರೆ ಒಳ್ಳೆ ಆಡಳಿತವೆಂದೂ ನಾಮಕರಣ ಮಾಡಿದೆ. ಯಾರು ಅದರ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೋ ಅವರೆಲ್ಲಾ ಒಳ್ಳೆ ಆಡಳಿತಗಾರರು. ಅವರು ದೇಶದ ಬಡಜನತೆಯನ್ನು ಎಷ್ಟೇ ಬೀದಿ ಪಾಲು ಮಾಡಿದ್ದರೂ, ಎಷ್ಟೇ ದಮನ, ದೌರ್ಜನ್ಯ ನಡೆಸಿದ್ದರೂ ಅದು ಒಳ್ಳೆ ಆಡಳಿತವೇ.

ಆದರೆ ಅಭಿವೃದ್ಧಿಯ ಬಗ್ಗೆ ಜನರ ಮಾನದಂಡವೇ ಬೇರೆ ಇರುತ್ತದೆ. ವಿಶ್ವಬ್ಯಾಂಕಿನ ಮುದ್ದಿನ ಶಿಶು ಆಂಧ್ರದ ಚಂದ್ರಬಾಬು ನಾಯ್ಡು ತನ್ನ ರಾಜ್ಯದಲ್ಲಿ ಎಷ್ಟೇ ಅಭಿವೃದ್ಧಿ ಮಾಡಿದ್ದೇನೆಂದು ತುತ್ತೂರಿ ಬಜಾಯಿಸಿದರೂ ಆತನ ಕಾರ್ಯಾವಧಿಯಲ್ಲಿ ನೇಣು ಹಾಕಿಕೊಂಡ ಸಾವಿರಾರು ರೈತರ ಕುಟುಂಬಗಳ ಪಾಲಿಗೆ ಅದು ಅಭಿವೃದ್ಧಿಯಾಗಿರಲಿಲ್ಲ. ಅದೇ ರೀತಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಹಿಂದೂತ್ವವಾದಿ ಎನ್.ಡಿ.ಎ. ಸರ್ಕಾರ ಹಿಂದೂ ಅಭಿವೃದ್ಧಿ ದರವನ್ನು ಸಾಧಿಸಿದ್ದೇವೆಂದು ಕೊಚ್ಚಿಕೊಂಡು ಭಾರತ ಪ್ರಕಾಶಿಸುತ್ತಿದೆ ಎಂದು ಅಬ್ಬರಿಸಿದ್ದರೂ ಅವರ ಆಡಳಿತಾವಧಿಯಲ್ಲಿ ಜನ ಸಡಬಾಸದ ಪಾಡು ಅನುಭವಿಸಿದ್ದರು. ಈ ದೇಶದ ಕೂಲಿ ಕಾರ್ಮಿಕ ಜನತೆ ಅವರ ಆಡಳಿತವನ್ನು ತಮ್ಮ ಅಭಿವೃದ್ಧಿಯಾಗಿರಲಿಲ್ಲವೆಂದು ಸ್ಪಷ್ಟ ತೀರ್ಪು ಕೊಟ್ಟರು.

ಅದರೆ ಒಂದು ವಿಷಯ ಸ್ಪಷ್ಟವಾಗಿದೆ ವಿಶ್ವಬ್ಯಾಂಕಿನ ಗುಡ್ ಗವರ್ನೆನ್ಸ್ ಆಗಲೀ ಹಿಂದೂ ಅಭಿವೃದ್ಧಿ ದರವಾಗಲೀ ಸಾಮಾನ್ಯರ ಅಭಿವೃದ್ಧಿಯ ಪರವಾಗಿಲ್ಲವೆಂಬುದು ಸ್ಪಷ್ಟವಾಗಿದೆ.

ಏಕೆಂದರೆ ಸಿದ್ಧಾಂತಗಳಿಗೂ ಅಭಿವೃದ್ಧಿಯ ಪರಿಗೂ ನೇರ ಸಂಬಂಧವಿದೆ.

## ಅಭಿವೃದ್ಧಿಯ ರಾಜಕೀಯ ಸಿದ್ಧಾಂತ


ಈ ಅಭಿವೃದ್ಧಿ ಎಂದರೇನು? ಅದು ಯಾವುದೇ ರಾಜಕೀಯದ ಸೋಂಕಿಲ್ಲದೆ ಆಕಾಶದಲ್ಲಿ ಸಂಭವಿಸುತ್ತದೆಯೆ? ಅಭಿವೃದ್ಧಿಯಾಗದಿರುವುದಕ್ಕೆ ಸಂಪನ್ಮೂಲದ ಕೊರತೆ ಮಾತ್ರ ಕಾರಣವೇ?

ವಿಶ್ವಬ್ಯಾಂಕಿನ ಪ್ರಕಾರ ಅಭಿವೃದ್ಧಿಯೆಂಬುದು ಒಂದು ರಾಜಕೀಯ ಹಾಗೂ ಸೈದ್ಧಾಂತಿಕ ವಿಷಯವೇ ಅಲ್ಲ. ಅಭಿವೃದ್ಧಿಹೀನತೆಗೆ ಕಾರಣ ಸಂಪನ್ಮೂಲದ ಕೊರತೆ, ಅದನ್ನು ಬಳಸುವ ತಿಳುವಳಿಕೆಯ ಕೊರತೆ, ತಂತ್ರಜ್ಞಾನದ ಕೊರತೆ. ಅವೆಲ್ಲವನ್ನೂ ವಿಶ್ವಬ್ಯಾಂಕಿನ ಬಳಿ ಯಾರು ಬೇಕಾದರೂ ಸಾಲ ಪಡೆಯಬಹುದು..! ಅಬ್ಬಬ್ಬಾ ಅಂದರೆ ಆಡಳಿತದಲ್ಲಿ ಭ್ರಷ್ಟತೆಯಿಂದಾಗಿ ಒಂದಷ್ಟು ಅಭಿವೃದ್ಧಿ ಆಗದೆ ಇರುವುದಕ್ಕೆ ಕಾರಣವಾಗಿರಬಹುದೇ ವಿನಃ ಬೇರೇ ಯಾವುದೇ ಕಾರಣವಿರಲು ಸಾಧ್ಯವಿಲ್ಲ. ಹೊಸ ಸರ್ಕಾರದ ಪಂಡಿತರು ಹೇಳುತ್ತಿರುವುದು ಇದನ್ನೇ.

ಆದರೆ ಅಭಿವೃದ್ಧಿಯೆಂಬುದು ಆ ಬಗೆಯಲ್ಲಿ ರಾಜಕೀಯ ರಹಿತವಾಗಿರುವುದಿಲ್ಲ. ಬಡತನಕ್ಕೆ ಕಾರಣ ಸಂಪನ್ಮೂಲದ ಕೊರತೆ ಅಥವಾ ಪ್ರತಿಭೆಯ ಕೊರತೆ ಕಾರಣವಲ್ಲ. ಲಭ್ಯವಿರುವ ಸಂಪನ್ಮೂಲಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವ ಅಧಿಕಾರ ಹಾಗೂ ಹಕ್ಕು ಇಲ್ಲದಿರುವುದೇ ಬಡತನಕ್ಕೆ, ಅದು ಶಾಶ್ವತವಾಗಿ ಮುಂದುವರೆಯುವುದಕ್ಕೆ ಮೂಲ ಕಾರಣ. ಈ ಅಧಿಕಾರವೆಲ್ಲಾ ನಮ್ಮ ಸಮಾಜದಲ್ಲಿ ಉಳ್ಳವರ ಬಳಿಯೇ ಕೇಂದ್ರೀಕರಣಗೊಂಡಿದೆ. ಜಾಗತಿಕವಾಗಿ ವಿಶ್ವದ ಸಂಪನ್ಮೂಲಗಳು ಒಂದೋ ನೇರ ಯುದ್ಧದ ಮೂಲಕ ಅಥವಾ ಪೇಟೆಂಟ್ ಇತ್ಯಾದಿ ಅನ್ಯಮಾರ್ಗಗಳ ಮೂಲಕ ಅಮೆರಿಕದ ಬಳಿ ಕೇಂದ್ರೀಕರಣಗೊಂಡಿದೆ. ಹೀಗಾಗಿ ವಿಶ್ವದಲ್ಲಿ ಅಮೆರಿಕ ಶ್ರೀಮಂತ ರಾಷ್ಟ್ರವಾಗುಳಿಯಲು ಯುದ್ಧದಂತ ರಾಜಕೀಯ ನೀತಿಗಳೆ ಕಾರಣ. ಯುದ್ಧ ಮಾಡಲು ಅದು ಬಳಸುತ್ತಿರುವ ಇಸ್ಲಾಮ್ ವಿರೋಧಿ, ವರ್ಣಭೇದ, ಜನಾಂಗೀಯವಾದಿ ರಾಜಕೀಯ ಸಿದ್ಧಾಂತಗಳೇ ಕಾರಣ. ಹೀಗಾಗಿ ಅಮೆರಿಕದ ಅಭಿವೃದ್ಧಿ ರಾಜಕೀಯ ರಹಿತ ಅಭಿವೃದ್ಧಿಯೇನಾಗಿರಲಿಲ್ಲ.

ಸಮಾಜವಾದ, ಕಮ್ಯುನಿಸಮ್ ಇನ್ನಿತ್ಯಾದಿ ಇಸಮ್‌ಗಳಿಗೆ ಬಲಿಯಾಗಿ ಅಭಿವೃದ್ಧಿಯಿಂದ ವಂಚಿತರಾಗಬಾರದೆಂದು ವಿಶ್ವಬ್ಯಾಂಕ್ ಇಡೀ ಜಗತ್ತಿಗೆ ಆದೇಶ ನೀಡುತ್ತಿದೆ.

ಅದೇ ರೀತಿ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕೆಲವರು ಉಳ್ಳವರಾಗಿಯೂ, ಕೆಲವರು ಅವರ ಜೀತ ಮಾಡುವ ದಾಸರಾಗಿಯೂ ಉಳಿದುಬಿಟ್ಟಿರಲು ಕಾರಣ ಅವರ ದಡ್ಡತನವೇನಲ್ಲ, ಬದಲಿಗೆ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಶ್ರೇಣೀಕರಣವನ್ನು ಶಾಶ್ವತಗೊಳಿಸಿದ ಕಠೋರ ಜಾತಿ ವ್ಯವಸ್ಥೆ, ಅದನ್ನು ಕಾಪಾಡಿಕೊಂಡು ಬಂದಿರುವ ಹಿಂದೂ ಧರ್ಮ.



ಇಂದು ಜಗತ್ತಿನಾದ್ಯಂತ ತಾರತಮ್ಯ [illegible] ಅಮೆರಿಕನ್ ಸಾಮ್ರಾಜ್ಯಶಾಹಿ ಸಾವಿರಾರು ವರ್ಷಗಳಿಂದ ತಾರತಮ್ಯವನ್ನೇ ಧಾರ್ಮಿಕ ಸಿದ್ಧಾಂತ ವನ್ನಾಗಿಸಿಕೊಂಡು ಹಿಂದೂ ಕೋಮುವಾದಿಗಳೊಂದಿಗೆ ಸಹಜ ಬಾಂಧವ್ಯವನ್ನು ಏರ್ಪಡಿಸಿಕೊಂಡಿದೆ. ಒಂದು ತಾರತಮ್ಯವಿರುವ ಸಮಾಜವನ್ನು ಕಾಪಾಡಿಕೊಂಡು ಬರಲು ತಾರತಮ್ಯವಾದಿ ಸಿದ್ಧಾಂತದ ಅಗತ್ಯವಿದೆ.

## ಕೋಮುವಾದ ಕೇವಲ ಸಾಮಾಜಿಕ ಸಿದ್ಧಾಂತವಲ್ಲ

ಏಕೆಂದರೆ ಜಾತ್ಯಾತೀತತೆ ಹಾಗೂ ಕೋಮುವಾದ ಎಂಬ ಸಿದ್ಧಾಂತಗಳು ಕೇವಲ ಸಾಮಾಜಿಕ ಸಿದ್ಧಾಂತಗಳಲ್ಲ. ಅದು ಕೇವಲ ಸಾಮಾಜಿಕ ಸಿದ್ಧಾಂತ ಮಾತ್ರವೇ ಆಗಿದ್ದರೆ ಹಿಂದೂ ಅಭಿವೃದ್ಧಿ ದರ ಎಂಬ ಮಾತೇಕೆ ಬರುತ್ತಿತ್ತು? ಅದೇ ರೀತಿ ವಿಶ್ವಬ್ಯಾಂಕ್ ಪ್ರತಿಪಾದಿಸುತ್ತಿರುವ ಗುಡ್ ಗವರ್ನೆನ್ಸ್ ಸಹಾ ಸಿದ್ಧಾಂತವೇ ಇಲ್ಲದ ಪರಿಶುದ್ಧ ಅಭಿವೃದ್ಧಿಯೇನಲ್ಲ.

ಕೋಮುವಾದ ಒಂದು ನಿರ್ದಿಷ್ಟ ಆರ್ಥಿಕ ಪರಿಸ್ಥಿತಿ ಹುಟ್ಟುಹಾಕುವ ಸಾಮಾಜಿಕ ಸಂಕ್ಷೋಭೆಯಿಂದಲೇ ಉದ್ಭವಿಸುತ್ತದೆ. ಹಾಗೂ ಅದಕ್ಕೆ ಆ ಬಗೆಯ ಆರ್ಥಿಕ ಚಿಂತನೆಯ ತಳಹದಿಯೂ ಇರುತ್ತದೆ. ಉದಾಹರಣೆಗೆ ಒಂದು ನಿಜವಾದ ಸಮಾಜವಾದಿ ಆರ್ಥಿಕತೆಯ ಅಡಿಪಾಯದ ಮೇಲೆ ಕೋಮುವಾದಿ ಸಿದ್ಧಾಂತ ಹುಲುಸಾಗಿ ಬೆಳೆಯಲು ಬೇಕಾದ ವಾತಾವರಣ ಸಿಗುವುದಿಲ್ಲ, ಏಕೆಂದರೆ ಒಂದು ನಿಜವಾದ ಸಮಾಜವಾದಿ ಆರ್ಥಿಕತೆ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ವಾತಾವರಣವನ್ನು ಹುಟ್ಟುಹಾಕಿರುತ್ತದೆ. ಅದರ ಮೂಲ ಸೆಲೆಯೇ ಎಲ್ಲರೂ ಒಂದೇ ಎಂಬ ತತ್ವವಾಗಿರುತ್ತದೆ. ಹೀಗಾಗಿ ಅಂತಹ ಸಾಮಾಜಿಕ, ಆರ್ಥಿಕ, ರಾಜಕೀಯ ಸನ್ನಿವೇಶದಲ್ಲಿ ನಾನು ಮಾತ್ರ ಶ್ರೇಷ್ಠ ಉಳಿದವರು ನನಗಿಂತ ಕನಿಷ್ಠ ಎಂಬ ಸಿದ್ಧಾಂತ ಬೆಳೆಯಲು ಭೌತಿಕ ತಳಹದಿಯೇ ಇರುವುದಿಲ್ಲ.

ಆದರೆ ಕೋಮುವಾದಿ ಸಿದ್ಧಾಂತದ ನೆಲೆ ಇರುವುದು ಕೆಲವರು ಶ್ರೇಷ್ಠ ಉಳಿದವರು ಗುಲಾಮರು ಎಂಬ ತಾರತಮ್ಯದಲ್ಲಿ. ಅಂತಹ ಸಿದ್ಧಾಂತ ತೀವ್ರ ತಾರತಮ್ಯವಿರುವ ಆರ್ಥಿಕ, ಸಾಮಾಜಿಕ ಪರಿಸರದಲ್ಲಿ ಹುಟ್ಟುತ್ತದೆ. ಹಾಗೂ ಅಂತಹ ತಾರತಮ್ಯವಾದೀ ವ್ಯವಸ್ಥೆಯನ್ನು ತಾತ್ವಿಕವಾಗಿ ಎಲ್ಲಾ ರಂಗಗಳಲ್ಲೂ ಪೋಷಿಸುತ್ತದೆ. ಎಲ್ಲರೂ ಅಭಿವೃದ್ಧಿಯಲ್ಲಿ ಸಮಪಾಲು ಪಡೆಯಲಾಗುವುದಿಲ್ಲ ಎಂಬುದೇ ಅದರ ಆರ್ಥಿಕ ತತ್ವ. ಅಷ್ಟು ಮಾತ್ರ ವಲ್ಲ. ಇಂದಿನ ಪರಿಸ್ಥಿಯಲ್ಲಿ ವಿಶ್ವಬ್ಯಾಂಕಿನ ಗುಡ್ ಗವರ್ನೆನ್ಸ್‌ಗೂ ನೇರವಾದ ಹಾಗೂ ಪೂರಕವಾದ ಸಂಬಂಧಗಳೇ ಇವೆ. ಆದ್ದರಿಂದಲೇ ಕೇಂದ್ರದಲ್ಲಿದ್ದ ಎನ್.ಡಿ.ಎ. ಸರ್ಕಾರವಾಗಲೀ, ಬಿ.ಜೆ.ಪಿ. ಹಾಗೂ ಅದರ ಮಿತ್ರ ಪಕ್ಷಗಳು ಅಧಿಕಾರದಲ್ಲಿದ್ದ ರಾಜ್ಯಗಳಲ್ಲಾಗಲೀ ಆಚರಣೆಯಲ್ಲಿ ಇದ್ದದ್ದು ವಿಶ್ವ ಬ್ಯಾಂಕ್ ಪ್ರಣೀತ ಆರ್ಥಿಕ ಸಿದ್ಧಾಂತಗಳೇ. ಅದನ್ನೇ ಬೇಕಾದರೇ ಹಿಂದೂವಾದಿ ಆರ್ಥಿಕ ಪ್ರಣಾಳಿಕೆ ಎಂದೂ ಕರೆಯಬಹುದು.

ಹಿಂದೂವಾದಿ ಆರ್ಥಿಕ ಪ್ರಣಾಳಿಕೆ ಹಾಗೂ ವಿಶ್ವಬ್ಯಾಂಕಿನ ಗುಡ್ ಗವರ್ನೆನ್ಸ್ ಎರಡೂ ಸಹ ದೈತ್ಯ ಕಾರ್ಪೊರೇಟ್ ಉದ್ಯಮಿಗಳ ಪರವಾದ ಆರ್ಥಿಕ ನೀತಿಗಳನ್ನು ಜಾರಿಗೆ ತರಬೇಕೆಂದು ಪ್ರತಿಪಾದಿಸುತ್ತವೆ. ಕೇಂದ್ರದಲ್ಲಿ ಎನ್.ಡಿ.ಎ ಸರ್ಕಾರ ಅಧಿಕಾರದಲ್ಲಿ ಇದ್ದ ಅವಧಿಯಲ್ಲಿ ಈ ದೇಶ ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ಈ ದೇಶದ ದೈತ್ಯ ಉದ್ಯಮಿಗಳಿಗೆ ಹರಾಜಾದಷ್ಟು ಬೇರೆ ಯಾವುದೇ ಅವಧಿಯಲ್ಲೂ ಆಗಿರಲಿಲ್ಲ. ಈ ದೈತ್ಯರು ಅಭಿವೃದ್ಧಿಯಾದರೆ ಅಭಿವೃದ್ಧಿಯ ಫಲ ತಾನಾಗಿಯೇ ತೊಟ್ಟಿಕ್ಕುತ್ತಾ ಎಲ್ಲರಿಗೂ ಹರಿದು ಬರುತ್ತದೆ ಎಂಬುದೇ ಆಗಿನ ಹಾಗೂ ಈಗಿನ ತಿಳುವಳಿಕೆ. ಈ ಕಾರ್ಪೊರೇಟ್ ಉದ್ಯಮಪತಿಗಳ ಲಾಭ ಹೆಚ್ಚಿಸಬೇಕೆಂದರೆ ಜನವಿರೋಧಿ ಅಭಿವೃದ್ಧಿ ನೀತಿ ಗಳನ್ನು ಜಾರಿಗೆ ತರಲೇ ಬೇಕಾ ಗಿತ್ತು, ಆದರೆ ಇಂತಹ ಆರ್ಥಿಕ ನೀತಿಗಳನ್ನು ಸರ್ವಾಧಿಕಾರ ವಿರುವ ರಾಷ್ಟ್ರಗಳಲ್ಲಿ ತಂದಷ್ಟು ಸುಲಭವಾಗಿ ತರಲು ಸಾಧ್ಯವಿರುವುದಿಲ್ಲ, ತೋರಿಕೆಗಾದರೂ ಅದಕ್ಕೆ ಜನರ ಒಪ್ಪಿಗೆಯ ಲೇಪನವನ್ನು ಪ್ರಜಾತಂತ್ರವಿರುವ ರಾಷ್ಟ್ರದಲ್ಲಿ ಹಚ್ಚಬೇಕಾಗುತ್ತದೆ.

## ತಾರತಮ್ಯವಾದಿ ಸಿದ್ಧಾಂತದ ಸೇವೆ

ಅಂತಹ ಸಂದರ್ಭಗಳಲ್ಲೇ ಕೋಮುವಾದಿ ಪಕ್ಷವೊಂದರ ಹಾಗೂ ಸಿದ್ಧಾಂತವೊಂದರ ಅಗತ್ಯ ಬೀಳುತ್ತದೆ. ಜನತೆಯೇ ಸ್ವಇಚ್ಛೆಯಿಂದ ತಮ್ಮ ಪ್ರಗತಿ ಹಾಗೂ ಅಭಿವೃದ್ಧಿಯನ್ನು ಬಲಿಗೊಟ್ಟು ಉದ್ಯಮಿಗಳ ಅಭಿವೃದ್ಧಿ ಮಾಡುವ ಅರ್ಥಿಕ ನೀತಿಗಳಿಗೆ ಒಪ್ಪಿಗೆ ಕೊಡುವಂತೆ ಅಭಿವೃದ್ಧಿಯ ಹೆಸರಲ್ಲಿ ಹುಸಿ ರಾಷ್ಟ್ರೀಯವಾದ ಹಾಗೂ ಹುಸಿ ಅಭಿಮಾನವನ್ನು ಹುಟ್ಟಿಹಾಕಲಾಗುತ್ತದೆ. ಗುಜರಾತಿನ ಹತ್ಯಾಕಾಂಡದ ನಂತರ ನಡೆದ ಚುನಾವಣೆಯಲ್ಲಿ ಮೋದಿ ಹುಟ್ಟಿಹಾಕಿದ್ದು ಇದೇ ಬಗೆಯ ಹುಸಿ ಗುಜರಾತಿ ಅಸ್ಮಿತೆಯನ್ನೇ . 2004ರ ಚುನಾವಣೆಯಲ್ಲಿ ಎನ್.ಡಿ.ಎ. ಸರ್ಕಾರ ಭಾರತ ಪ್ರಕಾಶಿಸುತ್ತಿದೆ ಎಂಬ ಹೆಸರಿನಲ್ಲಿ ಹುಟ್ಟುಹಾಕಲು ಯತ್ನಿಸಿದ್ದು ಇದೇ ಬಗೆಯ ಹುಸಿ ದೇಶಪ್ರೇಮವನ್ನೇ. ಇವರ ಸಿದ್ಧಾಂತಗಳಲ್ಲಿ ದೇಶವೆಂದರೆ ಮಣ್ಣು ಭೂಪಟಗಳೇ ಹೊರತು ಈ ದೇಶದ ಬಡ ಜನತೆಯಲ್ಲ. ಈ ದೇಶದ ಅಭಿವೃದ್ಧಿಯೆಂದರೆ ಕಾರ್ಪೊರೇಟ್ ಶಕ್ತಿಗಳ ಅಭಿವೃದ್ಧಿಯೇ ವಿನಹ ಈ ದೇಶದ ಜನರ ಅಭಿವೃದ್ಧಿಯಲ್ಲ.


ಸಕಲರ ಅಭಿವೃದ್ಧಿಯೆಂಬ ಬದಲಿಗೆ ಬಲವಿದ್ದವನು ಮಾತ್ರ ಬದುಕಬೇಕೆಂಬುದು ಇಂದು ವಿಶ್ವ ಮಟ್ಟದಲ್ಲಿ ಜಾರಿಯಲ್ಲಿರುವ ನವ ಉದಾರವಾದಿ ಆರ್ಥಿಕ ಸಿದ್ಧಾಂತದ ಹೂರಣವಾದರೆ, ಕೆಲವರು ತಮ್ಮ ಜನ್ಮಜಾತ ಹಕ್ಕಿನಂತೆ ಹೆಚ್ಚು ಅಭಿವೃದ್ಧಿ ಹೊಂದುವುದೂ ಕೆಲವರು ಅವರ ಗುಲಾಮರಾಗಿರುವುದೂ ಸಹಜವಾದದ್ದೇಎಂದು ಹಿಂದೂ ಆರ್ಥಿಕ ಚಿಂತನೆ ಪ್ರತಿಪಾದಿಸುತ್ತದೆ. ಅದರೊಡನೆ ಅದರ ತೀವ್ರ ದಲಿತ ವಿರೋಧಿ ಹಾಗೂ ಮುಸ್ಲಿಂ ವಿರೋಧಿ ಚಿಂತನೆಗಳು ಇದಕ್ಕೆ ಪೂರಕವಾಗಿ ಬರುತ್ತದೆ. ಆದ್ದರಿಂದಲೇ ಗುಜರಾತಿನಲ್ಲಿ ಭೂಕಂಪ ಸಂಭವಿಸಿದಾಗ ಸಾವಿರಾರು ಕೋಟಿ ಹಣ ಹರಿದು ಬಂದರೂ ಅದು ಸವರ್ಣೀಯ ಹಿಂದೂಗಳ ಪಾಲಾಯಿತೇ ವಿನಃ ದಲಿತರಿಗಾಗಲೀ, ಮುಸ್ಲಿಮರಿಗಾಗಲೀ ಸಿಗಲಿಲ್ಲ. ಅದೇ ರೀತಿ ಸ್ವದೇಶಿ ಎಂಬ ಹೆಸರಿನಲ್ಲಿ, ಗುಜರಾತಿ ಅಸ್ಮಿತೆಯ ಹೆಸರಿನಲ್ಲಿ ಗುಜರಾತಿಗಳನ್ನು ವಂಚಿಸಿಕೊಂಡು ಬರುತ್ತಿರುವ ಮೋದಿ ಸರ್ಕಾರ ಇಡೀ ದೇಶದ ಹಾಗೂ ಗುಜರಾತಿನ ಸ್ವಾಭಿಮಾನಕ್ಕೆ ಧಕ್ಕೆ ತರುವಂತೆ ಫ್ರಾನ್ಸಿನ ಅತ್ಯಂತ ಅಪಾಯಕಾರಿ ಕಲ್ನಾರಿನ ವಿಷಯುಕ್ತ ಕ್ಲೆಮೆನ್ಸು ಹಡಗನ್ನು ಗುಜರಾತಿನ ಬಂದರಿಗೆ ಬರ ಮಾಡಿಕೊಳ್ಳಲು ಸಿದ್ಧವಾಗಿತ್ತು. ಅದನ್ನು ವಿರೋಧಿಸಿದ ಕಾರ್ಮಿಕರನ್ನು ಹಾಗೂ ಪರಿಸರವಾದಿಗಳನ್ನು ದೇಶದ್ರೋಹಿಗಳೆಂದು ಕರೆಯಿತು.

ಈಗ ಅಧಿಕಾರಕ್ಕೆ ಬಂದೊಡನೆ ಅಂಬೇಡ್ಕರ್ ಭಾವಚಿತ್ರ ತೆಗೆಸಿ ತನ್ನ ದಲಿತ ವಿರೋಧಿ ಮನೋಭಾವವನ್ನು ಸ್ಪಷ್ಟವಾಗಿ ಬಿ.ಜೆ.ಪಿ. ತೋರಿಸಿಕೊಂಡಿದೆ. ವಿಧಾನ ಸೌಧದ ಗೋಡೆಯ ಮೇಲೆ ಈ ದೇಶದ ಮಹಾನ್ ನಾಯಕನಿಗೆ ದಲಿತನೆಂಬ ಕಾರಣಕ್ಕೆ ಜಾಗ ನಿರಾಕರಿಸಿದ ಈ ಕೋಮುವಾದಿಗಳು ಅಭಿವೃದ್ಧಿಯಲ್ಲಿ ದಲಿತರಿಗೆ ಜಾಗ ಕೊಡುವರೇ? ಬದಲಿಗೆ ಅಧಿಕಾರ ವಹಿಸಿಕೊಂಡ ಮರು ಕ್ಷಣದಿಂದಲೂ ಐ.ಟಿ., ಬಿ.ಟಿ, ಫ್ಯಾಬ್‌ಸಿಟಿಯ ಜಪ ಮಾಡುತ್ತಿರುವ ಸರ್ಕಾರ ವಿಧಾನಸೌಧವನ್ನು ದೈತ್ಯ ಕಾರ್ಪೊರೇಟ್ ಸಂಸ್ಥೆಗಳ ಒಕ್ಕಲಾಗಿಸಲು ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದೆ.

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಮುಸಲೋನಿಯನ್ನು ಫ್ಯಾಸಿಸಮ್ ಎಂದರೇನು ಎಂದು ಕೇಳಿದರಂತೆ. ಅದಕ್ಕೆ ಆತ-ಫ್ಯಾಸಿಸಮ್ ಎಂದರೆ ಕಾರ್ಪೊರೇಟ್ ಶಕ್ತಿಗಳ ಹಾಗೂ ಪ್ರಭುತ್ವದ ಮೈತ್ರಿ-ಎಂದನಂತೆ. ಆದ್ದರಿಂದ ವಿಷಯ ಸ್ಪಷ್ಟವಾಗಿದೆ. ಹಿಂದೂತ್ವ ಸಿದ್ಧಾಂತ ಬಡಜನರ ಅಭಿವೃದ್ಧಿ ವಿರೋಧಿಯೂ ಆಗಿದೆ. ಸಿದ್ಧಾಂತ ರಹಿತ ಅಭಿವೃದ್ಧಿ ಎಂಬುದೊಂದು ಇರಲು ಸಾಧ್ಯವಿಲ್ಲ. ತಾರತಮ್ಯವನ್ನೇ ಸಿದ್ಧಾಂತವಾಗಿ ಉಸಿರಾಡುವ ಪಕ್ಷ ಅಭಿವೃದ್ಧಿಯಲ್ಲಿ ತಾರತಮ್ಯ ರಹಿತ ಸಿದ್ಧಾಂತವನ್ನು ಪಾಲಿಸುತ್ತದೆಂದು ಭಾವಿಸುವುದು ಮುಠ್ಠಾಳತನ.

ತಾರತಮ್ಯದ ಕೆಸರಿನಲ್ಲಿ ಕೋಮುವಾದದ ಕಮಲ ಅರಳುತ್ತದೆ. ಸಮಾಜವಾದಿ ಆರ್ಥಿಕ ವ್ಯವಸ್ಥೆ ಸಾಕಾರವಾಗದೇ ಸೆಕ್ಯುಲರಿಸಮ್ ಅರಳಲು ಸಾಧ್ಯವಿಲ್ಲ.

# ಮಂಟೂ ಕತೆಗಳು: ಕರಾಳ ಟಿಪ್ಪಣಿಗಳು


ರಹಮತ್ ತರೀಕೆರೆ


ಈಚೆಗೆ 'ದಿ ಪಿಯಾನಿಸ್ಟ್' ಎಂಬ ಆಸ್ಕರ್ ಪ್ರಶಸ್ತಿ ಪಡೆದ ಸಿನಿಮಾವೊಂದು ಟಿವಿಯಲ್ಲಿ ಪ್ರಸಾರವಾಯಿತು. ಅದು ಜರ್ಮನಿಯ ನಾಜಿಗಳು ಪೋಲೆಂಡನ್ನು ಆಕ್ರಮಿಸಿಕೊಂಡಾಗ, ಒಂದು ಸಣ್ಣ ಊರಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ತೆಗೆದ ಸಿನಿಮಾ. ಊರಲ್ಲಿದ್ದ ಯಹೂದಿ ಗಂಡಸರನ್ನೆಲ್ಲ ನಾಜಿಗಳು ಹಿಡಿದು ಜೈಲಿನೊಳಗಿಕ್ಕುತ್ತಾರೆ. ಅವರಲ್ಲಿ ಪಿಯಾನೊ ವಾದಕನೂ ಒಬ್ಬ. ಅವನು ಜೈಲೊಳಗಿದ್ದ ಕೈದಿಗಳನ್ನು ದಂಗೆಗೆ ಪ್ರೇರೇಪಿಸ್ತಾನೆ. ಕೈದಿಗಳು ದಂಗೆಯೇಳುತ್ತಾರೆ. ನಾಜಿಗಳು ಪ್ರತೀಕಾರವಾಗಿ ಜೈಲಿನ ಸಮೇತ ಇಡೀ ಊರನ್ನೇ ಸುಡತೊಡಗುತ್ತಾರೆ. ಸಂಗೀತಗಾರ ಹೇಗೋ ತಪ್ಪಿಸಿಕೊಂಡು ಅರೆಸುಟ್ಟ ಮನೆಗಳಲ್ಲಿ ತೊಳಲುತ್ತ, ಹಸಿವಿನಿಂದ ಬಳಲುತ್ತ ಜೀವ ಹಿಡಿದು ಬದುಕಿರುತ್ತಾನೆ. ಅವನೊಮ್ಮೆ ಹಸಿವೆ ತಡೆಯಲಾರದೆ ಒಂದು ಸುಟ್ಟಮನೆಯಲ್ಲಿ ತಿನ್ನಲು ಹುಡುಕಾಟ ಮಾಡುವಾಗ, ಒಂದು ಸೀಲಾದ ಡಬ್ಬ ಸಿಗುತ್ತದೆ. ಅದನ್ನು ಓಪನ್ ಮಾಡಲು ಯತ್ನಿಸುತ್ತಾನೆ. ಅದರ ಸದ್ದು ಬೀದಿಯ ತನಕ ಹೋಗಿ, ದಾರಿಯಲ್ಲಿ ಹೋಗುತ್ತಿದ್ದ ನಾಜಿ ಸೇನಾಧಿಕಾರಿಗೆ ಕೇಳಿಸುತ್ತದೆ. ಆತ ಒಳಗೆ ಬಂದು ಯಾರು ನೀನು? ಎಂದು ತಣ್ಣಗೆ ಕೇಳುತ್ತಾನೆ. ನಾನೊಬ್ಬ ಪಿಯಾನೊ ವಾದಕ ; ಸೇನಾಧಿಕಾರಿಗೆ ಕುತೂಹಲವಾಗಿ ಹೌದೇನು! ಕೇಳೋಣ, ಈ ಮನೆಯಲ್ಲಿರುವ ಪಿಯಾನೊ ನುಡಿಸು ಎನ್ನುತ್ತಾನೆ. ಗಾಯಕ ಪಿಯಾನೊ ಮೇಲೆ ನೋವಿನ ಹಾಗೂ ಬಿಡುಗಡೆ ಹಂಬಲದ ರಾಗಗಳನ್ನು ನುಡಿಸುತ್ತಾನೆ. ದೇಶವೊಂದನ್ನು ಅದರ ಇಚ್ಛೆಗೆ ವಿರುದ್ಧವಾಗಿ ಆಕ್ರಮಿಸಿಕೊಂಡು, ಜನರನ್ನು ಹಿಂಸೆಗೆ ಗುರಿಮಾಡಿದ ಆಕ್ರಮಣಕಾರರ ಪ್ರತಿನಿಧಿಯಾಗಿದ್ದ ಆ ಸೇನಾಧಿಕಾರಿಯ ಸತ್ತ ಸಂವೇದನೆ ಗಳೆಲ್ಲ ಜಾಗ್ರತಗೊಳ್ಳುವಂತೆ ನುಡಿಸುತ್ತಾನೆ. ಈ ಸಂಗೀತದಿಂದ ಕರಗಿದ, ಜ್ಞಾನೋದಯಗೊಂಡ ಸೇನಾಧಿಕಾರಿ ಸಂಗೀತಗಾರನ ಅಭಿಮಾನಿಯಾಗುತ್ತಾನೆ. ಕದ್ದುಮುಚ್ಚಿ ಅವನಿಗೆ ಊಟ ತಂದುಕೊಡುತ್ತಾನೆ. ಚಳಿ ತಡೆಯಲು ತನ್ನ ಕೋಟನ್ನು ಬಿಚ್ಚಿ ಕೊಡುತ್ತಾನೆ. ಕೊನೆಗೊಂದು ದಿನ ರಷ್ಯನ್ ಸೇನೆ ಬರುತ್ತದೆ. ನಾಜಿಗಳನ್ನು ಸೋಲಿಸಿ ಪೋಲೆಂಡನ್ನು ಬಿಡುಗಡೆ ಮಾಡುತ್ತದೆ. ಆಗ ಜೈಲಿನೊಳಗಿಂದ ಸಂಗೀತಪ್ರಿಯ ಸೇನಾಧಿಕಾರಿ, ನಾನೊಬ್ಬ ಸಂಗೀತಗಾರನಿಗೆ ಸಹಾಯ ಮಾಡಿದ್ದೆ. ಅವನಿಗೆ ಸಾಧ್ಯವಾದರೆ ನನ್ನ ಬಗ್ಗೆ ತಿಳಿಸಿ ಎಂದು ಸಿಕ್ಕಸಿಕ್ಕವರಿಗೆಲ್ಲ ಹೇಳುತ್ತಾನೆ. ಆದರೆ ಸಂಗೀತಗಾರನಿಗೆ ಈ ಸುದ್ದಿ ತಲುಪುವುದೆ ಇಲ್ಲ!



ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಾಕ್ಷ್ಯಚಿತ್ರವೂ ಕೆಲವು ವರ್ಷಗಳ ಹಿಂದೆ ಪ್ರಸಾರವಾಗಿತ್ತು. ನಾಜಿಗಳ ಕ್ರೌರ್ಯವನ್ನು ನೇರವಾಗಿ ಅನುಭವಿಸಿದ ಜನರ ಸಂದರ್ಶನಗಳಿಂದ ತಯಾರಿಸಿದ ಚಿತ್ರವದು. ಅದರಲ್ಲೂ ಪೋಲೆಂಡಿನ ಒಂದು ಹಳ್ಳಿಯನ್ನು ನಾಜಿ ಸೈನ್ಯ ಆಕ್ರಮಿಸಿಕೊಳ್ಳುತ್ತದೆ. ಹಳ್ಳಿಯ ಎಲ್ಲ ಯಹೂದಿ ಗಂಡಸರನ್ನು ಊರಹೊರಗೆ ತಂದು, ಒಂದು ದೊಡ್ಡ ಗುಂಡಿಯ ದಡದಲ್ಲಿ ನಿಲ್ಲಿಸಿ, ಕೊಲ್ಲುವ ಕಾರ್ಯಕ್ರಮ ಮಾಡುತ್ತದೆ. ಯಹೂದಿಗಳನ್ನು ಹಿಡಿದು ಕೊಡಲು ಅಲ್ಲಿನ ಕೆಲವು ಕ್ರೈಸ್ತರು ಕೂಡ ನೆರವು ಕೊಟ್ಟಿರುತ್ತಾರೆ. ಊರಲ್ಲಿದ್ದ ಯಹೂದಿಗಳನ್ನು ಗುಂಡಿಕ್ಕಿ ಸಾಯಿಸಲು ಎಳೆದುಕೊಂಡು ಹೋಗುತ್ತಾರೆ. ಇದನ್ನು ನೋಡುತ್ತ ಬೀದಿಯಲ್ಲಿ ನಿಂತಿದ್ದ ಜನರನ್ನು ಕಂಡು ಯಹೂದಿಯೋರ್ವ ಒಬ್ಬನ ಬಳಿಗೆ ಹೋಗಿ "ಗೆಳೆಯಾ, ನನ್ನನ್ನಂತೂ ಕೊಲ್ಲುತ್ತಾರೆ. ಅದರ ಜತೆಯಲ್ಲಿ ಈ ಕೋಟಿಗೂ ಗುಂಡು ತಗುಲಿ ಅದು ತೂತಾಗುತ್ತದೆ. ನನ್ನ ಜತೆಯಲ್ಲೆ ವ್ಯರ್ಥವಾಗಿ ಹೋಗುತ್ತದೆ. ಇದು ನಿನ್ನ ಮೇಲಾದರೂ ಇರಲಿ. ಬಹಳ ಚಳಿಯಿದೆ" ಎಂದು ಕೋಟನ್ನು ಬಿಚ್ಚಿ ಕೊಡುತ್ತಾನೆ.

ಮೇಲಿನ ಎರಡೂ ಪ್ರಸಂಗಗಳಲ್ಲಿ ಕೋಟುಗಳ ದಾನವಿದೆ. ಒಂದು ಕಡೆ ತಾನು ಕೊಲ್ಲಬಹುದಾಗಿದ್ದ ವ್ಯಕ್ತಿಯನ್ನು ಕೊಲ್ಲದೆ, ಕರುಣೆ ತೋರಿಸಿ ಕೋಟನ್ನು ಕೊಟ್ಟು ಕಾಪಾಡುವ ನಾಜಿ ಸೈನ್ಯಾಧಿಕಾರಿ. ಇನ್ನೊಂದೆಡೆ, ಸಾಯುವ ಮೊದಲು ತನ್ನೂರ ವ್ಯಕ್ತಿಗೆ ಕೋಟನ್ನು ಕೊಟ್ಟು ಸಾವಿನ ಮನೆಗೆ ಹೋಗುವ ವ್ಯಕ್ತಿ. ಒಂದೆಡೆ ಜನ ತಮ್ಮ ದೇಶದ ಬಿಡುಗಡೆಗಾಗಿ ಹೋರಾಟ ಮಾಡುವ ಪ್ರಸಂಗ. ಇನ್ನೊಂದೆಡೆ ಕ್ರಿಸ್ತನನ್ನು ಶಿಲುಬೆಗೇರಿಸಿದ ಜನಾಂಗದವರು ಎನ್ನಲಾಗುವ ಯಹೂದಿ ವ್ಯಕ್ತಿ, [illegible] ಕ್ರಿಸ್ತನಂತೆ, ಸಾಯುವ ಹೊತ್ತಲ್ಲೂ [illegible], ತ್ಯಾಗದ ಸಹಾಯ ಮಾಡುವ ಘಟನೆ. [illegible] ಸಮುದಾಯದ ಜನ ಮತ್ತೊಂದು ಸಮುದಾಯವನ್ನು, ಅದರ ಧರ್ಮದ ಒಂದೇ ಕಾರಣಕ್ಕಾಗಿ ಕೊಲ್ಲುವ ಸಣ್ಣ ಪುಟ್ಟ ಸನ್ನಿವೇಶಗಳಲ್ಲಿ ಕೇವಲ ಕ್ರೌರ್ಯ ಪ್ರಕಟವಾಗುವುದಿಲ್ಲ, ಸಂಬಂಧ ಅಸಾಧ್ಯವಾದಂತಹ ಬಗೆಯಲ್ಲಿ ಮಾನವತೆಯೂ ಪ್ರಕಟವಾಗುತ್ತದೆ. ಅದು ಭಾವುಕವಾಗಿರುತ್ತದೆ. ನಾಟಕೀಯವಾಗಿರುತ್ತದೆ. ದಾರುಣವಾಗಿರುತ್ತದೆ. ಇದನ್ನು ಮೇಲಿನ ಈ ಸಿನಿಮಾ ಮತ್ತು ಸಾಕ್ಷ್ಯಚಿತ್ರಗಳು ಸೂಚಿಸುತ್ತವೆ.

20ನೇ ಶತಮಾನದಲ್ಲಿ ನಾಜಿಗಳು ಜನಾಂಗವಾದದ ಹೆಸರಲ್ಲಿ ಯಹೂದಿಗಳ ಮೇಲೆ ಮಾಡಿದ ಬಲಾತ್ಕಾರವನ್ನು ಬಿಟ್ಟರೆ, ಧರ್ಮದ ಹೆಸರಲ್ಲಿ ಬಲಾತ್ಕಾರವು ದೇಶವಿಭಜನೆಯ ಹೊತ್ತಲ್ಲಿ ಭಾರತದ ಉಪಖಂಡದಲ್ಲಿ ನಡೆಯಿತು ಎನ್ನಬಹುದು. ಇಲ್ಲೂ ಕೂಡ ಕೇವಲ ಕ್ರೌರ್ಯ ಪ್ರಕಟವಾಗಲಿಲ್ಲ, ನಾಟಕೀಯವಾದ ಮಾನವೀಯತೆಯ ಪ್ರಕರಣಗಳೂ ನಡೆದವು. ಈ ಹಿಂಸೆ ಹಾಗೂ ಮಾನವೀಯತೆಗಳಿಗೆ ಹಲವಾರು ಲೇಖಕರು ದನಿಗೊಟ್ಟರು. ಇದರಲ್ಲಿ ದೊಡ್ಡ ಹೆಸರು ಎಂದರೆ, ಸಾದತ್ ಹಸನ್ ಮಂಟೂವಿನದು. ಭಾರತ ಮತ್ತು ಪಾಕಿಸ್ತಾನಗಳ ಶ್ರೇಷ್ಠ ದಾರ್ಶನಿಕ ಬರಹಗಾರನಾದ ಮಂಟೂ ಕೂಡ ತನ್ನ ಕತೆಗಳಲ್ಲಿ ಮೇಲೆ ಕಾಣಿಸಿದ ನಾಟಕೀಯವೂ ದಾರುಣವೂ ಆದ ಪ್ರಸಂಗಗಳನ್ನು ಚಿತ್ರಿಸುತ್ತಾನೆ. ಮೋಜೆಲ್ ಎಂಬ ಒಂದು ಕತೆಯಲ್ಲಿ ಬಾಂಬೆಯಲ್ಲಿ ನಡೆಯುವ ಕೋಮುಗಲಭೆಗಳ ಒಂದು ಪ್ರಸಂಗವಿದೆ. ಯಹೂದಿ ಹುಡುಗಿ ಮೋಜೆಲ್, ತನ್ನ ಸಿಖ್ ಗೆಳೆಯನ ಪ್ರೇಮಿಯನ್ನು ಮುಸ್ಲಿಂ ಮತಾಂಧರಿಂದ ಉಳಿಸಲು ತನ್ನ ಬಟ್ಟೆಯನ್ನು ಕಳಚಿ ಬೆತ್ತಲೆಯಾಗಿ ಓಡಿಹೋಗುವ ಪ್ರಸಂಗ ಬರುತ್ತದೆ. ಅವಳು ಸಾಯುವ ಮುನ್ನ, ಪೇಟವು ತನ್ನ ಧಾರ್ಮಿಕ ಗುರುತೆಂದು ಸದಾ ಹೇಳುತ್ತಿದ್ದ ಸಿಖ್ ಗೆಳೆಯನ ಪೇಟದ ಬಟ್ಟೆಯನ್ನು ಮರಳಿ ಕೊಡುತ್ತಾ "ತಗೋ ನಿನ್ನ ಧರ್ಮ" ಎನ್ನುತ್ತಾಳೆ. ಪೋಲೆಂಡ್-ಬಾಂಬೆಗಳ ದೇಶ ಕಾಲ ಸನ್ನಿವೇಶಗಳು ಬೇರೆಯಾಗಿರಬಹುದು. ಆದರೆ ಮಾನವರ ವರ್ತನೆಯಲ್ಲಿ ವಿಚಿತ್ರವಾದ ಸಾಮ್ಯವಿದೆ.



ಧರ್ಮದ ಹೆಸರಲ್ಲಿ ಆಧುನಿಕ ಕಾಲವು ಹುಟ್ಟಿಸಿಕೊಂಡಿರುವ ಎಲ್ಲ ರಾಜಕೀಯ ಹಿಂಸೆಗಳು ಜಗತ್ತಿನಲ್ಲಿ ಹೀಗೆ ಪರಸ್ಪರ ಸಾಮ್ಯದ ಪ್ರಸಂಗಗಳನ್ನು ಹಡೆದಿವೆ. ಅವು ಏಕಕಾಲಕ್ಕೆ ಅಸಾಧಾರಣವಾದ ಕ್ರೌರ್ಯವನ್ನೂ ಅದನ್ನು ಮೆಟ್ಟಿ ನಿಲ್ಲುವ ಮಾನವತೆಯನ್ನೂ ಹೊಂದಿವೆ. ದೇಶವಿಭಜನೆಯ ಹೊತ್ತಿನ ಅಮಾನುಷ ಘಟನೆಗಳನ್ನು ಕಂಡು, ಕೇಳಿ ಅನುಭವಿಸಿ ಕ್ರುದ್ಧನಾಗಿ ಪ್ರಕ್ಷುಬ್ಧನಾಗಿ ಹೋದ ಮಂಟೂ, ತನ್ನ ಆತಂಕದ ಅನುಭವಗಳಿಗೆ ರೂಪವನ್ನು ಕೊಡುತ್ತ ಜಗತ್ತಿನ ಶ್ರೇಷ್ಠ ಕತೆಗಾರನಾಗಿ ಬಿಟ್ಟ. ರಾಷ್ಟ್ರ ಹಾಗೂ ಧರ್ಮಗಳ ಹೆಸರಲ್ಲಿ ನಡೆವ ಘೋರಕೃತ್ಯಗಳಿಗೆ ರೂಪು ಕೊಡುತ್ತ ಅವನ ಭಾಷೆಯೆ ಬದಲಾಯಿತು. ಇನ್ನಿಲ್ಲದ ವಿಷಾದ ಆವರಿಸಿಕೊಂಡಿತು. ತೀಕ್ಷ್ಣವಾದ ವ್ಯಂಗ್ಯ ಮತ್ತು ವಿಡಂಬನೆಗೆ ತಿರುಗಿತು. ಕತೆಗಳು ಗಾತ್ರದಲ್ಲಿ ಚಿಕ್ಕವಾದವು. ಇವೇನು ಕತೆಗಳೊ ಜೋಕುಗಳೊ ಎಂಬಷ್ಟು ಚಿಕ್ಕದಾದವು. ಮಾತು ಅನುಭವವನ್ನು ಹೇಳಲು ಸೋತು ದಣಿದು ನಾಚಿಕೊಂಡು ಮುದುರಿ ಕೊಂಡಿತು ಎಂಬಂತೆ ಚಿಕ್ಕದಾದವು. ಅವುಗಳಲ್ಲಿ 'ವಿಶ್ರಾಂತಿಯ ಸಮಯ' ಎಂಬ ಕತೆ ಹೀಗಿದೆ:

*ನೋಡು, ಅವನಿನ್ನೂ ಸತ್ತಿಲ್ಲ, ಇನ್ನೂ ಒಂದಿಷ್ಟು ಜೀವ ಇದೆ.*

*ಇನ್ನು ನನ್ನಿಂದ ಆಗುವುದಿಲ್ಲಪ್ಪ, ತೀರ ಸುಸ್ತಾಗಿಬಿಟ್ಟಿದೆ*


ಇಷ್ಟೆ ಕತೆ. ಕೊಲ್ಲುವವರಿಗೂ ದಣಿವಾಗುವಷ್ಟು ಹಿಂಸೆ ನಡೆದುಬಿಟ್ಟಿದೆ. '[illegible]'ಯಲ್ಲಿ [illegible] ಕಂಬಳಿ, ಕಟ್ಟಿಗಾರ [illegible] ಮೂರನೇ ರೌಂಡಿಗೆ ಸುಸ್ತಾಗಿ ಸುಧಾರಿಸಿಕೊಳ್ಳುವುದನ್ನು ಇದು ನೆನಪಿಸುತ್ತದೆ. ಮಂಟೂ ಕತೆಗಳಲ್ಲಿ ಅನೇಕ ಹುಚ್ಚರು ಬರುತ್ತಾರೆ. ಹೆಚ್ಚಿನವರು ಕಳೆದು ಹೋದ ತಮ್ಮ ಹೆಣ್ಣುಮಕ್ಕಳನ್ನು ಹುಡುಕುತ್ತ ಹುಚ್ಚರಾದ ತಂದೆತಾಯಂದಿರು. ಒಬ್ಬ ತಂದೆಯಂತೂ ('ಶರೀಫನ್' ಕತೆಯಲ್ಲಿ) ತನ್ನ ಮಗಳ ಅತ್ಯಾಚಾರ ಮತ್ತು ಸಾವಿನ ಸೇಡು ತೀರಿಸಿಕೊಳ್ಳಲು ತಾನೂ ಅತ್ಯಾಚಾರಿಯಾಗಿ ಬಿಡುತ್ತಾನೆ. ಅನ್ಯಾಯಕ್ಕೆ ಪ್ರತೀಕಾರ ತೀರಿಸಿಕೊಳ್ಳುವ ಕೆಲಸವು ಮತ್ತೊಂದು ಅನ್ಯಾಯ ಮತ್ತು ಅಮಾನವೀಯತೆಯನ್ನೆ ಹುಟ್ಟಿಸುತ್ತದೆ ಎಂದು ಕತೆ ಹೇಳುತ್ತದೆ. ಮಂಟೂ ಕತೆಗಳನ್ನು ಓದುವುದೆಂದರೆ ರಕ್ತಸಿಕ್ತವಾದ ಗಲ್ಲಿಯಲ್ಲಿ ಓಡಾಡಿದ ಹಾಗೆ; ದುಗುಡಗಳ ಹೊಳೆಯಲ್ಲಿ ಬಿದ್ದು ಸೆಳವಿಗೆ ಸಿಕ್ಕಿ ಹರಿದುಹೋದ ಹಾಗೆ; ಅಸಹಾಯಕತೆಯು ಮನುಷ್ಯರಲ್ಲಿ ಹುಟ್ಟಿಸುವ ನಿಷ್ಠುರ ವರ್ತನೆಯನ್ನು ಅವನಷ್ಟು ತಣ್ಣಗೆ ವಾಸ್ತವತೆಯಲ್ಲಿ ಕಂಡರಿಸುವವರು ಕಡಿಮೆ. ತನ್ನ ಮನೆಗೆ ಊಟ ಮಾಡಲು ಬರುವ ಗುಂಪಿಗೆ ಮನೆಯ ಮಾಲೀಕನೊಬ್ಬ ತನ್ನೆಲ್ಲ ವಸ್ತುಗಳನ್ನು ಲೂಟಿಕೋರರಿಗೆ ಹುಡುಕಿ ಕೊಡಲು ನೆರವಾಗುವ ಒಂದು ಕತೆಯಿದೆ. ಅದರ ಹೆಸರು 'ಶಾಂತಿ'. ಶಾಂತಿಯು ಯಾವಾಗ ಹುಟ್ಟುತ್ತದೆ? ತನಗೆ ಏನೂ ಮಾಡಲು ಸಾಧ್ಯವಿಲ್ಲ ಎಂಬ ಅಸಹಾಯಕತೆ ಮತ್ತು ವ್ಯಗ್ರತೆಯಲ್ಲೇನು? ಮನುಷ್ಯರು ಹಿಂಸೆಯ ಪಶುಗಳಾದಾಗ ಎಲ್ಲ ಧರ್ಮಗಳೂ ಒಂದೇ ಎಂದು ಮಂಟೂ ಕತೆಗಳು ತೋರುತ್ತವೆ. 'ಯಜೀದ್' ಎಂಬ ಕತೆಯಿದೆ. ಅದರಲ್ಲಿ ಒಮ್ಮೆ ಶತ್ರುಗಳು ತಮ್ಮ ದೇಶದಿಂದ ಹರಿದು ಬರುವ ನದಿಗಳನ್ನು ತಡೆದು ನೀರಿಲ್ಲದಂತೆ ಮಾಡುತ್ತಾರೆ ಎಂಬ ಸುದ್ದಿ ಊರಲ್ಲಿ ಹಬ್ಬುತ್ತದೆ. ಊರಿನ ಪಂಚರೆಲ್ಲ ಸೇರಿ ಆತಂಕದಲ್ಲಿ ಚರ್ಚಿಸುತ್ತಾರೆ. ಆಗ ಒಬ್ಬ ಹೇಳುತ್ತಾನೆ: "ಕೇವಲ ಅವರು ಮಾತ್ರ ನಮ್ಮ ವೈರಿಗಳಲ್ಲ, ನಾವೂ ಅವರ ವೈರಿಗಳಾಗಿದ್ದೇವೆ ಎನ್ನುವುದನ್ನು ಮರೆಯಬಾರದು. ನಮಗೆ ಸಾಧ್ಯವಾಗಿದ್ದರೆ ನಾವೂ ಅವರಿಗೆ ಅನ್ನ ನೀರು ಸಿಗದಂತೆ ಮಾಡುತ್ತಿದ್ದೆವು!"

ಧರ್ಮ ಮತ್ತು ರಾಜಕಾರಣದ ಮೂಲಕ ಹುಟ್ಟುವ ಕ್ರೌರ್ಯವನ್ನು ಮಾತ್ರ ಮಂಟೂ ಕತೆಗಳು ಹೇಳುವುದಿಲ್ಲ, ಅವು ಬದುಕಿನ ಚೆಲುವನ್ನು ಕುರಿತೂ ಮಾತಾಡುತ್ತವೆ. ಮಾನವೀಯತೆ ತೋರುವ ಪ್ರಸಂಗಗಳನ್ನು ಅತಿ ಭಾವುಕವಾಗುವ, ಕೃತಕವಾಗುವ ಅಪಾಯಗಳಿಂದ ಹೊರಗೆ ತೆಗೆದು, ಅವನ್ನು ಮಂಟೂ ಬದುಕಿನ ನಿಷ್ಠುರ ನೆಲೆಯಲ್ಲಿಟ್ಟು ನೋಡುತ್ತಾನೆ. ಆದರೂ ಅವನಿಗೆ ಮನುಷ್ಯರ ಒಳಗೆ ಅಡಗಿರುವ ಊಹಾತೀತವಾದ ಕ್ರೌರ್ಯದ ಬಗ್ಗೆ ಬಹಳ ಆತಂಕ. ಇದರಿಂದಾಗುವ ಮನುಷ್ಯತ್ವದ ಪತನವನ್ನು ನೋಡಲಾಗದೆ ಅವನು ತನ್ನ ಮಾನಸಿಕ ಸ್ಥಿಮಿತತೆ ಕಳೆದುಕೊಂಡನು. ಅವನ ಕೃತಿಗಳನ್ನು ಪಾಕಿಸ್ತಾನ ಸರಕಾರ ಬಹಿಷ್ಕರಿಸಿತು. ಅವನ 'ಬಿಚ್ಚು' ಕತೆಗೆ ಧಾರ್ಮಿಕ ಮೂಲಭೂತವಾದಿಗಳು ಕನಲಿ ಹೋಗಿದ್ದರು.

ಮಂಟೂ ಎಷ್ಟೋ ಕಾಲ ಅಕ್ಷರಶಃ ಹುಚ್ಚಾಸ್ಪತ್ರೆಯಲ್ಲಿದ್ದ. ತನ್ನ ಕೋಮಲವಾದ ಮನಸ್ಸಿನಿಂದ ಪ್ರಕ್ಷುಬ್ಧತೆಗೆ ಒಳಗಾದ ಮಂಟೂ ತನ್ನ ಸ್ವಂತ ಬದುಕನ್ನೇ ಬಲಿಕೊಟ್ಟ. ಅವನು (1912-1955) ಚಿಕ್ಕ ವಯಸ್ಸಿನಲ್ಲೇ ಕುಡುಕನಾಗಿ ತೀರಿಕೊಂಡ. ವ್ಯಂಗ್ಯವೆಂದರೆ ಅವನ ಜಗತ್ಪ್ರಸಿದ್ಧವಾದ ಕತೆ 'ತೋಬಟೇಕ್‌ಸಿಂಗ್' ಹುಚ್ಚರನ್ನೇ ಕುರಿತದ್ದು (ಕನ್ನಡದಲ್ಲಿ ಈ ಕತೆಯನ್ನು ಕೆ. ಮರುಳಸಿದ್ದಪ್ಪ, ಫಕೀರ್ ಮುಹಮದ್ ಕಟ್ಪಾಡಿ ಹಾಗೂ [illegible] ಸಹಿತ ಮೂರು ಜನ ಅನುವಾದಿಸಿದ್ದಾರೆ). ಈ ಹುಚ್ಚರ ಮೂಲಕ ಎರಡೂ ರಾಷ್ಟ್ರಗಳ ಗಡಿಗಳ ಕಲ್ಪನೆಯನ್ನೇ ಕತೆ ವ್ಯಂಗ್ಯ ಮಾಡುತ್ತದೆ. ಮಂಟೂ ಕತೆಗಳಲ್ಲಿ ಎರಡು ಬಗೆಯ ಹುಚ್ಚರು ಬರುತ್ತಾರೆ. ಒಂದು. ತಮ್ಮ ಮಕ್ಕಳನ್ನು, ತಾವು ಹುಟ್ಟಿದ ಊರನ್ನು ಕಳೆದುಕೊಂಡು ಹುಚ್ಚರಾದವರು. ಎರಡನೆಯದಾಗಿ ಪ್ರಾಣ ಹೋಗುವಂತಹ ಪ್ರಕ್ಷುಬ್ಧತೆಯಲ್ಲಿಯೂ ತಮ್ಮ ಸ್ನೇಹ ಪ್ರೇಮಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡುವವವರು. ಬಹುಶಃ ಈ ಎರಡನೆಯ ಬಗೆಯ ಹುಚ್ಚರ ಕಾರಣದಿಂದಲೇ ಜೀವನದಲ್ಲಿ ಏನಾದರೂ ಅರ್ಥ, ಆಸೆ ಉಳಿದುಕೊಂಡಿದೆ ಎಂದು ಕತೆಗಳು ಹೇಳುತ್ತವೆ.

ಮಂಟೂ ಕೇವಲ ಭಾವುಕನಲ್ಲ, ಮಹಾ ತಮಾಷೆಯ ಗುಣವುಳ್ಳವನು. ಪತ್ತೇದಾರಿ ಕುತೂಹಲವನ್ನು ಉಳಿಸಿಕೊಂಡು ಹೋಗುವ ಅವನ ಕತೆಗಳು ಕಡೆಯಲ್ಲಿ ಸತ್ಯವನ್ನು ಅನಾವರಣಗೊಳಿಸಿ ಶಾಕ್ ಕೊಡುತ್ತವೆ. ಚತುರ ಕತೆಗಾರನಾದ ಅವನು ಬದುಕಿನ ಸಣ್ಣಸಣ್ಣ ವಿವರಗಳ ಮೂಲಕ ಬರೆಯುತ್ತಾನೆ. 'ಬೆತ್ತಲೆ ಸದ್ದು' ಇಂತಹ ಕತೆ. ದೇಶವಿಭಜನೆಯಿಂದ ವಲಸೆ ಬಂದ ಜನರು ತಮ್ಮ ಮಡದಿಯರ ಜತೆ ಅಂಗಳಗಳಲ್ಲಿ ಗೋಣಿತಾಟು ಕಟ್ಟಿಕೊಂಡು ಮಲಗುವ ಕಷ್ಟವನ್ನು ಕುರಿತ ಕತೆಯಿದು. ಕ್ಷುದ್ರ ಮತ್ತು ಅಮುಖ್ಯ ಎನಿಸುವ ಸಂಗತಿಗಳನ್ನು ಇರಿಸಿಕೊಂಡು ಬಹುದೊಡ್ಡ ರಾಜಕೀಯ ಸಾಮಾಜಿಕ ಸತ್ಯಗಳನ್ನು ಹೇಳುವ ಲೇಖಕ ಮಂಟೂ. ಎರಡೂ ದೇಶಗಳ ಸೇನಾಧಿಕಾರಿಗಳು ಗಡಿಯನ್ನು ದಾಟಿ ಬರುವ ನಾಯಿಯನ್ನು ಅದು ಇನ್ನೊಂದು ದೇಶದ್ದು ಇರಬಹುದು ಎಂದು ಅದನ್ನು ಅಟ್ಟಾಡಿಸಿ ಕೊಲ್ಲುವ 'ನಾಯಿಪಾಡು' ಎಂಬ ಕತೆಯಿದೆ. ಇದು ಗಡಿಪ್ರೇಮ, ರಾಷ್ಟ್ರಭಕ್ತಿಗಳನ್ನು ಇನ್ನಿಲ್ಲದಂತೆ ಗೇಲಿ ಮಾಡುತ್ತದೆ. ರಾಷ್ಟ್ರಪ್ರೇಮ, ಧರ್ಮ ರಕ್ಷಣೆ ಇವೆಲ್ಲ ಜನಾಂಗವಾದಿಗಳೂ, ಮೂಲಭೂತವಾದಿಗಳೂ, ಆಳುವ ರಾಜಕಾರಣಿಗಳೂ ಆದವರ ಕೈಯಲ್ಲಿ ಸಿಕ್ಕು ಪಡೆದುಕೊಳ್ಳುವ ಜೀವವಿರೋಧಿತನವನ್ನು ಮಂಟೂವಷ್ಟು ದಾರ್ಶನಿಕ ಪ್ರಬುದ್ಧತೆಯಲ್ಲಿ ಕಾಣಿಸುವವರು ಕಡಿಮೆ. 20ನೇ ಶತಮಾನದಲ್ಲಿ ಧರ್ಮ ಮತ್ತು ಹಿಂಸೆಗಳಿಗೆ ಭಿನ್ನವಾದ ವ್ಯಾಖ್ಯೆಯನ್ನು ಬರೆಯುವ ಮಂಟೂ ಒಂದರ್ಥದಲ್ಲಿ ಒಬ್ಬ ಅರಾಜಕತಾವಾದಿ. ಎಲ್ಲ ಅಧಿಕಾರಸ್ಥ ಧರ್ಮ ಹಾಗೂ ರಾಷ್ಟ್ರಕಲ್ಪನೆಗಳು ಹುಟ್ಟಿಸುವ ಹಿಂಸೆಗಳ ಎದುರಿಗೆ ನಿತ್ಯ ಬದುಕಿನಲ್ಲಿ ಹೋರಾಟ ಮಾಡುವ ಸಾಮಾನ್ಯ ಜನರ ನೋವು ನಲಿವುಗಳನ್ನು ಮುಖಾಮುಖಿ ಮಾಡುವ ಬಗೆಯಿಂದ ಅವನೊಬ್ಬ ಮನುಕುಲದ ಕತೆಗಾರ. ಮಂಟೂ ಅಥವಾ ಅಮೃತಾ ಪ್ರೀತಮ್‌ರನ್ನು ಅವರ ಹುಟ್ಟಿನ ಹಿನ್ನೆಲೆಯಿಂದ ಮುಸ್ಲಿಂ ಎಂದೊ ಸಿಖ್ ಎಂದೊ ಕರೆಯಬಹುದು. ಆದರೆ ಕಲಾವಿದರಾಗಿ ಅವರು ತಂತಮ್ಮ ಧರ್ಮಗಳಿಗೆ ಅತೀತವಾದ ನೆಲೆ ಮುಟ್ಟಿದವರು. ಎಂತಲೇ ಮಂಟೂ ಕತೆಗಳಲ್ಲಿ ಬಹಳ ಸಲ ಪಾತ್ರಗಳಿಗೆ ಅವುಗಳ ಹೆಸರಿಂದ ಧಾರ್ಮಿಕ ಹಿನ್ನೆಲೆ ತಿಳಿಯುವುದೇ ಇಲ್ಲ. ಅವಕ್ಕೆ ಸಾಂಕೇತಿಕ ಹೆಸರನ್ನು ಕೊಡುತ್ತಾನೆ. ಮನುಷ್ಯತ್ವ ಮತ್ತು ಹಿಂಸೆ ಪ್ರಕಟಿಸುವಲ್ಲಿ ಎಲ್ಲ ಧರ್ಮಗಳೂ ಒಂದೆ ಎಂಬ ಅವನ ನಂಬಿಕೆಯಿಂದ ಹೀಗಾಗಿರಬಹುದು.

ಕನ್ನಡದಲ್ಲಿ ಸಾದತ್ ಹಸನ್ ಮಂಟೂ ಕತೆಗಳು ಬಂದಿವೆ. ಆದರೆ ಬಾಬರಿ ಮಸೀದಿ ಕೆಡವಿದ ಬಳಿಕ ಹಾಗೂ ಗೋಧ್ರಾ ಗಲಭೆಗಳಾದ ಬಳಿಕ ಹೆಚ್ಚಾಗಿ ಬರುತ್ತಿವೆ. ಕರ್ನಾಟಕದಲ್ಲಿ ಬಲಪಂಥೀಯರ ಸರಕಾರವೊಂದು ಕರ್ನಾಟಕವನ್ನು ಆಳುತ್ತಿರುವ ಸಂದರ್ಭದಲ್ಲಿ ಮಂಟೂ ಕತೆಗಳು ಬರುತ್ತಿರುವುದು ಮತ್ತಷ್ಟು ಮಾರ್ಮಿಕವಾಗಿದೆ. ಅಣ್ವಸ್ತ್ರಗಳಿಂದ ಸಜ್ಜಿತರಾಗಿರುವ ಭಾರತ ಪಾಕಿಸ್ತಾನಗಳ ನೂರ್ಕೋಟಿ ಜನರ [illegible] ತೂಗುಗತ್ತಿಯಂತೆ ದೇಶ[illegible] ನಾವು ತೂಗುತ್ತಿರುವಷ್ಟು ಕಾಲವೂ [illegible] ಕತೆಗಳಿಗೆ ಪ್ರಸ್ತುತತೆ ಇದ್ದೇ ಇರುತ್ತದೆ [illegible] ಮನುಷ್ಯತೆಗಳನ್ನು ಮುಖಾಮುಖಿ ಮಾಡ[illegible] [illegible] ನೋಡುವ ನಮ್ಮ [illegible] [illegible] ಸಮಾಜಗಳು [illegible] [illegible]






ಸಂಗೊಳ್ಳಿ ರಾಯಣ್ಣ

# ಗೆರಿಲ್ಲಾ ಯುದ್ಧದ ಹರಿಕಾರ

**ಸಂಗೊಳ್ಳಿ ರಾಯಣ್ಣನ ಹೋರಾಟ ಕೇವಲ ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಮಾತ್ರ ಇರಲಿಲ್ಲ. ರಾಯಣ್ಣನ ಹೋರಾಟ ಭೂಮಾಲೀಕ ವ್ಯವಸ್ಥೆಯ ವಿರುದ್ಧವೂ ಇದ್ದಿತು. ಆತನ ಗೆರಿಲ್ಲಾ ಯುದ್ಧ ಅಂತಸತ್ವದಲ್ಲಿ ಅತ್ಯಂತ ಜನಪರವಾಗಿದ್ದರಿಂದಲೇ ಅದಕ್ಕೆ ಅಷ್ಟೊಂದು ಬೆಂಬಲ ಸಿಕ್ಕಿದ್ದು. ಹುತಾತ್ಮ ಸಂಗೊಳ್ಳಿ ರಾಯಣ್ಣನ ಹೋರಾಟ ಕಥನ ಇಲ್ಲಿದೆ.**



ಸಾಕೇತ್ ರಾಜನ್

ಕಿತ್ತೂರು ಸಂಸ್ಥಾನಕ್ಕೆ ಸೇರಿದ್ದ ಸಂಗೊಳ್ಳಿ ಗ್ರಾಮದವನಾದ ರಾಯಣ್ಣ, ಕಿತ್ತೂರು ದೇಸಾಯಿಗಳ ಸಶಸ್ತ್ರ ಅನುಚರನಾಗಿದ್ದ ಹಾಗೂ ಸೈನ್ಯದಿಂದ ಹಲವು ಎಕರೆ ಜಮೀನನ್ನು ಗುತ್ತಿಗೆ ಮೇಲೆ ಪಡೆದಿದ್ದ ರೈತನಾಗಿದ್ದ. ಹಿಂದುಳಿದ ಕುರುಬ ಜನಾಂಗಕ್ಕೆ ಸೇರಿದ್ದ ಅವನು ತನ್ನ ಜಾತಿ ಕಾರಣಕ್ಕಾಗಿಯೇ ಹಳ್ಳಿಯ ಕಾವಲುಗಾರ ಕೂಡ ಆಗಿದ್ದ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಚೆನ್ನಮ್ಮ ದಂಗೆ ಎದ್ದಾಗ ಅದರಲ್ಲಿ ಭಾಗವಹಿಸಿದ್ದ ಐದು ಸಾವಿರ ಸಶಸ್ತ್ರ ಹೋರಾಟಗಾರರಲ್ಲಿ ಆಗಿನ್ನೂ 29 ವರ್ಷದವನಾಗಿದ್ದ ಸಂಗೊಳ್ಳಿ ರಾಯಣ್ಣ ಕೂಡ ಒಬ್ಬನಾಗಿದ್ದ. ಕಿತ್ತೂರು ಬಂಡಾಯ ಹತ್ತಿಕ್ಕಲ್ಪಟ್ಟಾಗ ರಾಯಣ್ಣ ಬಂಧಿತನಾಗಿದ್ದ. 1826 ರಲ್ಲಿ ಎಲ್ಲ ಬಂಧಿತರಿಗೂ ಸಾರ್ವತ್ರಿಕ ಕ್ಷಮೆ ನೀಡಿ, ಎಚ್ಚರಿಕೆಯೊಂದಿಗೆ ಬಿಡುಗಡೆ ಮಾಡಿದಾಗ ರಾಯಣ್ಣ ಕೂಡ ಹೊರಬಂದಿದ್ದ. ಬೈಲಹೊಂಗಲದಲ್ಲಿ ಚೆನ್ನಮ್ಮರನ್ನು ಸೆರೆಯಲ್ಲಿಟ್ಟಿದ್ದಾಗ ತಾನು ಆಕೆಯ ದೂರದ ಸಂಬಂಧಿ ಎಂಬ ನೆಪದಲ್ಲಿ ಸಂಗೊಳ್ಳಿ ಆಕೆಯನ್ನು ಜೈಲಿನಲ್ಲಿ ಭೇಟಿ ಕೂಡ ಆಗಿದ್ದ. ಕಿತ್ತೂರನ್ನು ಮತ್ತೆ ತಮ್ಮ ವಶಕ್ಕೆ ಪಡೆದುಕೊಳ್ಳಬೇಕೆಂಬ ಕಿಚ್ಚು ಆತನಲ್ಲಿ ಹುಟ್ಟಿದ್ದೇ ಚೆನ್ನಮ್ಮರನ್ನು ಜೈಲಿನಲ್ಲಿ ಕಂಡಿದ್ದರಿಂದ.

ಸಂಗೊಳ್ಳಿಗೆ ಹಿಂದಿರುಗಿದ ರಾಯಣ್ಣನಲ್ಲಿ ಜಮೀನ್ದಾರಿ-ಸಾಮ್ರಾಜ್ಯಶಾಹಿಗಳ ಬಗೆಗಿನ ಕೋಪ ದ್ವಿಗುಣಗೊಳ್ಳಲಾರಂಭಿಸಿತು. ಬಾಂಬೆ ವಲಯದ ಆಡಳಿತಕ್ಕೆ ಸಂಗೊಳ್ಳಿ ಗ್ರಾಮ ಸೇರಿದ ನಂತರ ಬ್ರಿಟಿಷ್ ಕಂಪನಿಯ ಖದೀಮರು ಭೂಕಂದಾಯ ಸುಲಿಯುವ ಕಾರ್ಯಕ್ಕೆ ಕೈ ಹಾಕಿದರು. ಜಮೀನ್ದಾರಿ ಪದ್ಧತಿಯ ಕ್ರೌರ್ಯಕ್ಕೂ-ಸಾಮ್ರಾಜ್ಯಶಾಹಿಗಳ ಷಡ್ಯಂತ್ರಕ್ಕೂ ಅವಿನಾಭಾವ ಸಂಬಂಧವಿದ್ದುದರಿಂದ ಕರ್ನಾಟಕದ ಬಡ ಜನತೆಯ ಮೇಲೆ ಊಳಿಗಮಾನ್ಯ ವ್ಯವಸ್ಥೆಯ ಹಿಡಿತ ಭದ್ರಗೊಂಡಿತ್ತು. ಸ್ಥಳೀಯ ಕುಲಕರ್ಣಿಯ ಕುತಂತ್ರದಿಂದಾಗಿ ರಾಯಣ್ಣನ ಅರ್ಧ ಜಮೀನು ಖಬ್ಜವಾದರೆ ಇನ್ನುಳಿದ ಅರ್ಧ ಜಮೀನಿನ ಮೇಲೆ ದೊಡ್ಡ ಮೊತ್ತದ ಕಂದಾಯವನ್ನು ವಿಧಿಸಲಾಯಿತು. ಸಂಗೊಳ್ಳಿಯ ಮುನ್ನಗುಟ್ಟೆ ಎಂಬ ಮತ್ತೋರ್ವ ಸಶಸ್ತ್ರ ಅನುಚರನ ಕತೆಯೂ ಅದೇ ಆಗಿದ್ದಿರಬಹುದು. ರಾಯಣ್ಣನೇ ದಾಖಲಿಸಿರುವಂತೆ "ಹಳ್ಳಿಯ ಕುಲಕರ್ಣಿಯೊಂದಿಗೆ ನಡೆದ ಜಗಳದಿಂದಾಗಿ ಬೇಸತ್ತು" ರಾಯಣ್ಣ ಮತ್ತು ಮುನ್ನಗುಟ್ಟೆ ತಮ್ಮ ಜಮೀನನ್ನು ಕಳೆದುಕೊಂಡರಲ್ಲದೇ, ಊರಿನಲ್ಲಿ ಸುರಕ್ಷಿತವಾಗಿ ಬದುಕುವುದೂ ಅಸಾಧ್ಯವಾಗಿ ಸಂಗೊಳ್ಳಿಯನ್ನೇ ಬಿಟ್ಟು ಹೋಗಬೇಕಾಯಿತು.

ಕಿತ್ತೂರು ಸಂಸ್ಥಾನವನ್ನು ಚೆನ್ನಮ್ಮನ ದತ್ತು ಪುತ್ರನಿಗೆ ನೀಡಬೇಕೆಂಬುದು ರಾಯಣ್ಣನ ರಾಜಕೀಯ ಹಕ್ಕೊತ್ತಾಯವಾಗಿದ್ದು ಅದು ಊಳಿಗಮಾನ್ಯ ವ್ಯವಸ್ಥೆಯ ಪರವಾಗಿದ್ದಂತೆ ಮೇಲುನೋಟಕ್ಕೆ ಕಂಡುಬಂದರೂ; ವಾಸ್ತವವಾಗಿ ಆತ ಆಗಿನ್ನೂ ಅಸ್ಪಷ್ಟವಾಗಿದ್ದ ಊಳಿಗಮಾನ್ಯ-ಸಾಮ್ರಾಜ್ಯಶಾಹಿ ವಿರುದ್ಧದ ಆಕಾಂಕ್ಷೆಗಳನ್ನು ವ್ಯಕ್ತಪಡಿಸಲಾರಂಭಿಸಿದ್ದ. ಕಂದಾಯ ಇಲಾಖೆ ರೈತರ ಮೇಲೆ ಹೇರಿದ್ದ ಸುಸ್ತಿ ಬಡ್ಡಿಯನ್ನು ವಿರೋಧಿಸುತ್ತಿದ್ದ ರಾಯಣ್ಣ ಬಡ ರೈತರಿಗೂ, ದಾರಿದ್ರ್ಯದಲ್ಲಿ ಮುಳುಗಿದ್ದ ಒಕ್ಕಲು ಜನರಿಗೂ ಭೂ ಹಂಚಿಕೆಯಾಗಬೇಕು ಎಂಬ ಧೋರಣೆ ತಾಳಿದ್ದ. ಜಮೀನ್ದಾರಿ ರಾಜ-ರಾಣಿಯರ ಹುಚ್ಚು ಸಾಹಸಗಳನ್ನೇ ಕೇಂದ್ರವಾಗಿರಿಸಿಕೊಂಡಿರುವ ನಮ್ಮ ಇತಿಹಾಸಕಾರರು ಆ ಕಾಲದ ಘಟನೆಗಳನ್ನು ವಿಶ್ಲೇಷಿಸುವಾಗ ಜನಸಾಮಾನ್ಯರ ಹೋರಾಟಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಡವುತ್ತಾರೆ. ಅದೇ ಕಾಲದಲ್ಲಿ ವರ್ಗ ವ್ಯವಸ್ಥೆಯ ವಿರುದ್ಧ ಐತಿಹಾಸಿಕ ಹೋರಾಟಗಳೂ ನಡೆಯುತ್ತಿದ್ದವು ಎಂಬುದನ್ನು ನಾವು ಪರಿಗಣಿಸಲೇಬೇಕು.

ರೈತ ಮತ್ತು ಸೈನಿಕ ಎರಡೂ ಆಗಿದ್ದ ರಾಯಣ್ಣ ಊಳಿಗಮಾನ್ಯ ವ್ಯವಸ್ಥೆಯ ಪರವಾಗಿ ಸಶಸ್ತ್ರನಾಗಿದ್ದರೂ, ಆತನ ಅಂತಃಸಾಕ್ಷಿ ಬಲಿಷ್ಠ ಜಮೀನ್ದಾರಿ ಪದ್ಧತಿ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧವೂ ಆಗಿದ್ದುದರಿಂದ ಆತನ ಹೋರಾಟ ಮೂಲಭೂತವಾಗಿ ಬಡ ಒಕ್ಕಲು ಸಮುದಾಯದ ಪರವಾಗಿತ್ತು. ಆತನ ಈ ಉದ್ದೇಶ ಮತ್ತು ನಿಷ್ಕರ್ಷೆಗಳು ಆತನ ಸಿದ್ಧಾಂತದ ಬುನಾದಿಯಾಗಿದ್ದರಿಂದಲೇ ಸಮುದಾಯದ ಅಂಚಿನಲ್ಲಿದ್ದವರೂ ಆತನೊಂದಿಗೆ ಕೈಗೂಡಿಸುವಂತಾದದ್ದು. ರಾಯಣ್ಣನ ಸಂಗ್ರಾಮ ಕೇವಲ ನಾಲ್ಕೇ ತಿಂಗಳು ನಡೆಯಿತಾದರೂ ಈ ಅಲ್ಪಾವಧಿಯಲ್ಲಿ ಯಾವ ರಾಜ-ರಾಣಿಯರಿಂದಲೂ ಸಾಧ್ಯವಾಗದನ್ನು ಜನರನ್ನು ಆತ ಒಗ್ಗೂಡಿಸಿ ಸಾಧಿಸಿದ.

ರಾಯಣ್ಣ ಮತ್ತು ಆತನ ಚಳವಳಿಯನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿದಾಗ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ಆತನ ಹೋರಾಟದ ಎರಡು ಪ್ರಮುಖ ಅಂಶಗಳು ಗೋಚರಿಸುತ್ತವೆ.

ಜನಸಾಮಾನ್ಯರಿಗೆ ಸಲ್ಲಬೇಕಾದ ನ್ಯಾಯದ ಬಗ್ಗೆ ರಾಯಣ್ಣನಲ್ಲಿ ಕಳಕಳಿ ಇತ್ತು. ಸಾಮಾನ್ಯ ಜನರ ಬಗ್ಗೆ ಆತನಲ್ಲಿ ಎಷ್ಟು ಅಭಿಮಾನವಿತ್ತೆಂದರೆ ಅವರನ್ನು ಆತ ಗೌರವದಿಂದ ಕಾಣುತ್ತಿದ್ದ. ತನ್ನ ನಾಯಕತ್ವವನ್ನು ಆತ ಎಷ್ಟು ಗಂಭೀರವಾಗಿ ಪರಿಗಣಿಸುತ್ತಿದ್ದನೆಂದರೆ ತನ್ನ ಸೈನ್ಯಾಧಿಕಾರಿಗಳಾಗಲೀ; ಸೈನಿಕರಾಗಲೀ ಜನರ ಮೇಲೆ ಅತ್ಯಾಚಾರಗಳನ್ನು ಎಸಗದಂತೆ ಎಚ್ಚರ ವಹಿಸುತ್ತಿದ್ದ; ಹಾಗೆ ಎಸಗಿದಾಗ ತನ್ನ ಸೈನಿಕರಿಗೇ ಶಿಕ್ಷೆಯನ್ನು ವಿಧಿಸುತ್ತಿದ್ದ. ಉದಾಹರಣೆಗೆ ಬಾಪು ಭಂಡಾರಿ ಎಂಬ ಸೈನ್ಯಾಧಿಕಾರಿ ಹಡಲಗಿ ಮೇಲೆ ದಾಳಿ ನಡೆಸಿದಾಗ, ಮುದುಕನೊಬ್ಬನ ಮಕ್ಕಳು ಮತ್ತು ಜಾನುವಾರುಗಳು ಬೆಂಕಿಯಲ್ಲಿ ಸಿಕ್ಕಿ ಭಸ್ಮವಾಗಿದ್ದರು. ಇದು ರಾಯಣ್ಣನಿಗೆ ಗೊತ್ತಾದ ತಕ್ಷಣ ಆ ಮುದುಕನಿಗೆ ಪರಿಹಾರಧನವನ್ನು ನೀಡಿದ್ದ. ಹಾಗೆಯೇ ಇನ್ನೊಮ್ಮೆ ಬ್ರಾಹ್ಮಣ ಮಹಿಳೆಯೊಬ್ಬಳು ಬಾಪು ಭಂಡಾರಿ ತನ್ನ ಗಂಡನನ್ನು ಕಟ್ಟಿ ಹಾಕಿ ಸಾಯಿಸುವುದಾಗಿ ಬೆದರಿಸುತ್ತಿದ್ದಾನೆ ಎಂದು ಕಣ್ಣೀರಿಟ್ಟಾಗ ತಕ್ಷಣವೇ ಆ ಬ್ರಾಹ್ಮಣನನ್ನು ಬಿಡುಗಡೆ ಮಾಡಬೇಕೆಂದು ರಾಯಣ್ಣ ಆದೇಶಿಸಿದ್ದ. ಆದರೆ ಈತನ ಆದೇಶ ಮುಟ್ಟುವ ಮುನ್ನವೇ ದುರಂತ ಸಂಭವಿಸಿತ್ತು. ಅದಾದ ನಂತರ ಬಾಪು ಭಂಡಾರಿಗೆ ಶಿಕ್ಷೆಯನ್ನು ವಿಧಿಸಲಾಗಿ ರಾಯಣ್ಣನ ಸಂಗಡಿಗನೊಬ್ಬ ಕೊಟ್ಟ ಹೊಡೆತದಿಂದಲೇ ಆತ ಅಸುನೀಗಿದ್ದ.


ರಾಯಣ್ಣ ಬಿಟ್ಟು ಹೋಗಿರುವ ಹೇಳಿಕೆಗಳಿಂದ ಆತ ಸಂಗ್ರಹಿಸಿದ್ದ ಅಥವಾ ವಶಪಡಿಸಿಕೊಂಡಿದ್ದ ಹಣದ ಲೆಕ್ಕವನ್ನು ದಕ್ಷತೆಯಿಂದ ನಿರ್ವಹಿಸಿದ್ದ ಎಂದು ಗೊತ್ತಾಗುತ್ತದೆ. ಹಾಗೆಯೇ ಆ ಹಣವನ್ನು ತನ್ನ ಸೈನಿಕರ ಆಹಾರಕ್ಕೆ ಮಾತ್ರ ವಿನಿಯೋಗಿಸಿದ್ದ ಎಂಬುದು ಕೂಡ ಮನದಟ್ಟಾಗುತ್ತದೆ. ರಾಯಣ್ಣ ಎಂದೂ ಕೊಳ್ಳೆ ಹೊಡೆಯಲಿಲ್ಲ, ಕದಿಯಲಿಲ್ಲ.

ರಾಯಣ್ಣನ ಹೋರಾಟದ ಮತ್ತೊಂದು ಪ್ರಮುಖ ಅಂಶ ಯಾವುದೆಂದರೆ ಆತನೊಂದಿಗೆ ಎಲ್ಲಾ ಜಾತಿಯ ಜನರಿದ್ದದ್ದು. ಆತನೊಂದಿಗೆ ಬಂಧಿತರಾಗಿದ್ದ ಹನ್ನೆರಡು ಮಂದಿಯಲ್ಲಿ, ಐವರು ಬೇಡ ಜನಾಂಗದವರು, ಇಬ್ಬರು ಲಿಂಗಾಯತರು, ಓರ್ವ ಪಂಚಮಸಾಲಿ, ಓರ್ವ ಮುಸ್ಲಿಂ, ಒಬ್ಬ ಮರಾಠ, ಒಬ್ಬ ನಾರ್ವೇಕರ, ಓರ್ವ ಜೈನ ಸಮುದಾಯಕ್ಕೆ ಸೇರಿದವರಾಗಿದ್ದರು. ರಾಯಣ್ಣ ಸ್ವತಃ ಕುರುಬ ಜಾತಿಗೆ ಸೇರಿದವನಾಗಿದ್ದ. ಹಾಗೆಯೇ ಜನಪದ ಹಾಡುಗಳಲ್ಲಿ ವ್ಯಕ್ತವಾಗಿರುವಂತೆ ಅವನೊಂದಿಗೆ ಬೋವಿ ಜಾತಿಯವರಲ್ಲದೆ, ಪೋರ್ಚುಗೀಸರು ಮೊಜಾಂಬಿಕ್‌ನಿಂದ ಗೋವಾಗೆ ಅಡಿಯಾಳುಗಳಾಗಿ ತಂದಿದ್ದ ಸಿದ್ಧಿ ಜನಾಂಗದವರೂ ಇದ್ದರು. ಕಿತ್ತೂರಿನ ಪಶ್ಚಿಮ ಭಾಗದಲ್ಲಿ ವಾಸಿಸುತ್ತಿದ್ದ ಈ ಸಿದ್ಧಿಗಳು ರಾಯಣ್ಣನ ಅಂಗರಕ್ಷಕರಾಗಿದ್ದರು. ಗಜಾವೀರಾ ಎಂಬ ಸಿದ್ಧಿಯಂತೂ ರಾಯಣ್ಣನ ಸಾವಿನ ಸುದ್ದಿ ಕೇಳಿ ಆತ್ಮಹತ್ಯೆ ಮಾಡಿಕೊಂಡ.

ಹೀಗೆ ಸಮುದಾಯದ ಎಲ್ಲಾ ವರ್ಗಗಳ ಜನರನ್ನು ರಾಯಣ್ಣ ಸೇರಿಸಿದ್ದರೂ, ಅವರ್ಯಾರೂ ಜಮೀನ್ದಾರರಾಗಿರಲಿಲ್ಲ ಎಂಬ ಅಂಶ ಆತನ ಹೋರಾಟವು ಯಾರ ಪರವಾಗಿತ್ತು ಎಂಬುದನ್ನು ಸೂಚಿಸುತ್ತದೆ; ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ಅಭಿಪ್ರಾಯ ಮತ್ತು ವ್ಯಾಪ್ತಿ ಅರ್ಥವಾಗುತ್ತದೆ.

ಆದರೆ ರಾಯಣ್ಣನ ಹೋರಾಟ ಕೇವಲ ಭೂರಹಿತರ ಪರವಾಗಿ ಇರಲಿಲ್ಲ. ಆತ ವರ್ಗ, ಜಾತಿ ಭೇದವನ್ನು ಅಳಿಸಲು ಅನ್ನ ದಾಸೋಹ ಪದ್ಧತಿಯನ್ನೂ ಜಾರಿಗೆ ತಂದಿದ್ದ. ಹೀಗೆ ಮಾಡುವ ಮೂಲಕ ಭೂರಹಿತರ ಹೋರಾಟಕ್ಕೆ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ತಿರುವನ್ನು ನೀಡಿದ ರಾಯಣ್ಣ. ಈ ಸಂಗ್ರಾಮ ಜಮೀನ್ದಾರಿ ಅಧಿಪತ್ಯದಲ್ಲಿದ್ದಿದ್ದರೆ ಅದರಲ್ಲಿ ಈ ಸಾಧ್ಯತೆಗಳಾಗಲೀ, ಅಂಶಗಳಾಗಲೀ ಅರಳಲು ಅಸಾಧ್ಯವಾಗುತ್ತಿತ್ತು.

ಹೀಗೆ, ಬಡ ರೈತಾಪಿಗಳಿಂದ ದೂರವೇ ಉಳಿಯುತ್ತಿದ್ದ ಜಮೀನ್ದಾರರನ್ನು ಹೊರತುಪಡಿಸಿ ರಾಯಣ್ಣ ಸಂಘಟಿಸಿದ ಹೋರಾಟ ರೈತಾಪಿಗಳ ಗೆರಿಲ್ಲಾ ಯುದ್ಧಕ್ಕೆ ನಾಂದಿ ಹಾಡಿತು. ಈ ಹೋರಾಟದ ಸಾಧನೆ ಎಂತಹದ್ದಾಗಿತ್ತು ಎಂಬುದನ್ನು ಈಗ ಗಮನಿಸೋಣ.



ಸಂಗೊಳ್ಳಿ ರಾಯಣ್ಣ ಹುತಾತ್ಮನಾದ ಜಾಗ ಮತ್ತು ಅಲ್ಲಿ ನೆಟ್ಟಿರುವ ಆಲದ ಮರ

## ಬೆಳೆದ ಸೈನ್ಯ

1830 ರ ಜನವರಿ 5 ರಂದು ಬಿಡಿ ಗ್ರಾಮದಲ್ಲಿದ್ದ ಸರ್ಕಾರಿ ಕಚೇರಿಗೆ ಬೆಂಕಿ ಹಚ್ಚುವ ಮೂಲಕ ತನ್ನ ಹೋರಾಟವನ್ನು ರಾಯಣ್ಣ ಪ್ರಾರಂಭಿಸಿದಾಗ ಅಂದು ಆತನೊಂದಿಗೆ ಇದ್ದವರ ಸಂಖ್ಯೆ ಕೇವಲ ನೂರು. ಆದರೆ ನಾಲ್ಕು ತಿಂಗಳ ನಂತರ ಏಪ್ರಿಲ್ 8 ರಂದು ರಾಯಣ್ಣನ ಬಂಧನವಾದಾಗ ಆತನೊಂದಿಗೆ ಒಂದು ಸಾವಿರ ಬಂಡಾಯಗಾರರಿದ್ದರು. ಈ ಅಂಶವನ್ನು ಧಾರವಾಡದ ಕಲೆಕ್ಟರ್ ಆಗಿದ್ದ ನಿಸ್ಬೆಟ್‌ರವರು ತಮ್ಮ ಪತ್ರದಲ್ಲಿ ಹೀಗೆ ದಾಖಲಿಸಿದ್ದಾರೆ; "ದಂಗೆಕೋರರ ಸಂಖ್ಯೆ ವೇಗವಾಗಿ ಹೆಚ್ಚಾಗುತ್ತಿದ್ದು, ಇದನ್ನು ತಕ್ಷಣವೇ ತಡೆಯದಿದ್ದರೆ ಇನ್ನೂ ಹೆಚ್ಚು ಜನ ಅವರನ್ನು ಸೇರುವುದರಲ್ಲಿ ಯಾವ ಸಂಶಯವೂ ಇಲ್ಲ..."

ಅಮಲ್ದಾರರ ಮುಂದೆ ರಾಯಣ್ಣ ನೀಡಿದ "ತಪ್ಪೊಪ್ಪಿಗೆ" ಹೇಳಿಕೆಯಲ್ಲಿ ಆತ ಹೇಗೆ ತನ್ನ ಹೋರಾಟಕ್ಕೆ ಜನರನ್ನು ಒಗ್ಗೂಡಿಸಿದ ಎಂದು ಕಾಣಬಹುದು: "ಮಲೆನಾಡು ಕ್ಷೇತ್ರದ ಒಂದು ಸಾವಿರ ಜನ ಸೇರಿದರು. ಅವರನ್ನು ಕರೆದೊಯ್ದು ನಾವು ಖಾನಾಪುರಕ್ಕೆ ಬೆಂಕಿ ಹಚ್ಚಿ ಅಲ್ಲಿ ಕೊಳ್ಳೆ ಹೊಡೆದು ಶಮ್‌ಶೇರ್‌ಗಡ್‌ಗೆ ಹಿಂದಿರುಗಿದೆವು. ಅಂದು ಮೂರು ಸಾವಿರ ಜನ ಸೇರಿಕೊಂಡರು. ಅವರನ್ನು ಇಟಗಿಗೆ ಕರೆದುಕೊಂಡು ಹೋದ ನಾವು ಅಲ್ಲಿನ ಜಮೀನ್ದಾರರಿಂದ ಐದು ಸಾವಿರ ರೂಪಾಯಿಗಳ ಚಂದಾ ಪಡೆದೆವು."

ಹೀಗೆ ರಾಯಣ್ಣನ ನಾಯಕತ್ವದ ಸಶಸ್ತ್ರ ಹೋರಾಟದಲ್ಲಿ ಜನರನ್ನು ಸಜ್ಜುಗೊಳಿಸಲಾಯಿತು. ಈ ಸೈನ್ಯ ನಡೆಸಿದ ಹಲವಾರು ದಾಳಿಗಳಿಗೆ ಸರ್ಕಾರಿ ಆಸ್ತಿಗಳು, ಭೂಕಂದಾಯ ದಾಖಲೆಗಳು ಗುರಿಯಾದವಲ್ಲದೇ, ಬ್ರಿಟಿಷ್ ಆಡಳಿತದಡಿ ಕುಪ್ರಸಿದ್ಧ ಭೂಮಾಲೀಕರು ಮತ್ತು ಅಧಿಕಾರಿಗಳು ಜನರಿಂದ ವಸೂಲಿ ಮಾಡಿದ್ದ ಹಣವನ್ನೂ ಹಿಂದೆ ಪಡೆಯಲಾಗಿತ್ತು. ಇಂತಹ ಪ್ರಕ್ರಿಯೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನಸಾಮಾನ್ಯರು ಪಾಲ್ಗೊಳ್ಳುತ್ತಿದ್ದರಲ್ಲದೆ, ಪ್ರತಿ ದಾಳಿಯ ನಂತರ ಅಲ್ಲಿನ ಜನ ರಾಯಣ್ಣನ ಸೈನ್ಯವನ್ನು ಸೇರುತ್ತಿದ್ದರು. ಅಂದರೆ, ಇದು ಬರಿ ಗೆರಿಲ್ಲಾಗಳ ಯುದ್ಧವಾಗಿರದೆ ಜನಸಾಮಾನ್ಯರ ಯುದ್ಧವಾಗಿ ಮಾರ್ಪಟ್ಟಿತ್ತು. ಇದಕ್ಕೆ ಸಂಪ್‌ಗಾಂವ್ ಮೇಲೆ ನಡೆದ ದಾಳಿ ಒಂದು ಉದಾಹರಣೆ ಮಾತ್ರ. ಇಂತಹ ಸಶಸ್ತ್ರ ದಾಳಿಗಳು ಜನಸಾಮಾನ್ಯರನ್ನು ಸುಸಜ್ಜಿತಗೊಳಿಸಿದ್ದರಿಂದಲೇ ರಾಯಣ್ಣನ ಸೈನ್ಯ ಬೆಳೆಯಲು ಸಾಧ್ಯವಾಯಿತು.

ರಾಯಣ್ಣನ ಸಶಸ್ತ್ರ ಸಂಗ್ರಾಮಕ್ಕೆ ಜನ ಸಮುದಾಯದ ಅಪಾರ ಬೆಂಬಲವಿತ್ತಲ್ಲದೆ, ಆತನ ಚಲನವಲನದ ಬಗ್ಗೆ ಯಾವ ಮಾಹಿತಿಯನ್ನೂ ಸರ್ಕಾರದ ದೂತರಿಗೆ ನೀಡದಂತೆ ಇತರೆ ಅನುಚರರೂ ಸಹಕರಿಸಿದ್ದರು. ಸಂಪ್‌ಗಾಂವ್ ಮೇಲೆ ದಾಳಿ ನಡೆಸಿದ ನಂತರ, ರಾಯಣ್ಣನನ್ನು ಹಿಂಬಾಲಿಸಲು ಬ್ರಿಟಿಷರು ಯತ್ನಿಸಿ ವಿಫಲರಾಗಿದ್ದನ್ನು ಕುರಿತು ಕಲೆಕ್ಟರ್ ನಿಸ್ಬೆಟ್‌ನವರು ಹೀಗೆ ದಾಖಲಿಸಿದ್ದಾರೆ:

"ಅಮಲ್ದಾರ್ ಮತ್ತು ಇತರರು ಹೇಳುವುದೇನೆಂದರೆ ಆ ಕ್ಷೇತ್ರದಲ್ಲಿನ ಹಳ್ಳಿಗಳ ಜನ ಬಂಡಾಯಗಾರರ ವಿರುದ್ಧ ಯಾವುದೇ ಮಾಹಿತಿಯನ್ನು ನೀಡಲು ತಯಾರಿಲ್ಲ. ಅಷ್ಟೇ ಅಲ್ಲ, ಆ ಹಳ್ಳಿಗರು ಬಂಡಾಯಗಾರರೊಂದಿಗೆ ಸಹಕರಿಸಿ, ಅವರಿಗೇ ಮಾಹಿತಿ ನೀಡುತ್ತಿದ್ದಾರಲ್ಲದೇ ಅವರ ದಾಳಿಗಳನ್ನೂ ಬೆಂಬಲಿಸುತ್ತಿದ್ದಾರೆ..."

-ಹೀಗೆ ಮುಂದುವರಿಸಿದ ನಿಸ್ಬೆಟ್: "ಈ ಕ್ಷೇತ್ರದಾದ್ಯಂತ ಎಲ್ಲಾ ಅನುಚರರು ದಂಗೆಕೋರರೊಂದಿಗೆ ಕೈಜೋಡಿಸಿದ್ದಾರೆ" ಎಂದೂ ವರದಿ ಮಾಡುತ್ತಾರೆ. ಜನವರಿ 14 ರಂದು ನಿಸ್ಬೆಟ್ ಬರೆದ ಮತ್ತೊಂದು ಪತ್ರದಲ್ಲಿ ರಾಯಣ್ಣನ ಹೋರಾಟಕ್ಕೆ ಜನ ಸಮುದಾಯದ ಬೆಂಬಲವಿದೆಯೆಂದು ಸಾಬೀತು ಪಡಿಸಿ "ಈ ಬಂಡುಕೋರರನ್ನು ಕಂಡವರ್‍ಯಾರೂ ನಮಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ. ಬದಲಾಗಿ ತಪ್ಪು ಮಾಹಿತಿ ನೀಡಿ ನಮ್ಮ ದಾರಿ ತಪ್ಪಿಸುತ್ತಿದ್ದಾರೆ.... ನಮ್ಮ ಚಲನವಲನಗಳ ಬಗ್ಗೆ ಬಂಡುಕೋರರಿಗೆ ಯಾರು ಮಾಹಿತಿ ನೀಡುತ್ತಿದ್ದಾರೆ ಎಂದು ಪತ್ತೆಹಚ್ಚಲು ಇನ್ನೂ ಸಾಧ್ಯವಾಗಿಲ್ಲ" ಎಂದೂ ಹೇಳಿದ್ದಾರೆ.

ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ವ್ಯಾಪಿಸಿದ ಕಿತ್ತೂರು ಭೂಪ್ರದೇಶವನ್ನು ರಾಯಣ್ಣ ತನ್ನ ಗೆರಿಲ್ಲಾ ಯುದ್ಧಕ್ಕೆ ಸೂಕ್ತವಾಗಿ ಬಳಸಿಕೊಂಡನು. ಮಲೆನಾಡಿನ ಕಾಡುಗಳಂತೂ ರಾಯಣ್ಣನ ಸೈನ್ಯಕ್ಕೆ ಭದ್ರಕೋಟೆಯಂತಾಯಿತು.

ಜನ ವಿರೋಧಿಗಳಾಗಿದ್ದ ಭೂಮಾಲೀಕರು.

ಧಿಕಾರಿಗಳು ಮತ್ತು ವಸಾಹತುಶಾಹಿ ಸೈನ್ಯವನ್ನು ತ ರಾಯಣ್ಣ ಗುರಿಯಾಗಿಟ್ಟದ್ದರಿಂದ ಆತನಿಗೆ ಅಪಾರ ಬೆಂಬಲ ಸಿಕ್ಕಿತ್ತು. ಈ ಕಾರಣದಿಂದಾಗಿಯೇ ರಾಯಣ್ಣನನ್ನು ಯುದ್ಧದ ಮೂಲಕ ಮುಗಿಸಲಾಗುವುದಿಲ್ಲವೆಂದು ಅರಿತ ಕಾರ, ಆತನನ್ನು ಮೋಸದಿಂದಲೇ ಸೆರೆಹಿಡಿಯುವ ಜು ರೂಪಿಸಿತು.

ಇದಕ್ಕೆ ಭೂಮಾಲೀಕರ ಮತ್ತು ಮುಖ್ಯ ಅಧಿಕಾರಿಗಳ ಬೆಂಬಲ ಸಿಕ್ಕಿತು. ರಾಯಣ್ಣನ ಸೈನ್ಯ ಸೇರಿ ಒಳಗಿಂದಲೇ ಈ ರೈತ ಸಂಗ್ರಾಮವನ್ನು ನಾಶ ಮಾಡುವ ಜವಾಬ್ದಾರಿಯನ್ನು ಅಮಲ್ದಾರ ಕೃಷ್ಣರಾವ್‌ಗೆ ವಹಿಸಲಾಯಿತು. ಯದ್ದಾಪುರದ ಪಟೇಲ ಲಿಂಗಣ್ಣ ಗೌಡ ತಾನೂ 300 ಜನರೊಂದಿಗೆ ರಾಯಣ್ಣನ ಸೈನ್ಯ ಸೇರುವುದಾಗಿ ಘೋಷಿಸಿದ. ಇದಕ್ಕೆ ರಾಯಣ್ಣ ಒಪ್ಪಿ ಮಾರ್ಚ್ ತಿಂಗಳ ಹದಿನೈದು ದಿನಗಳ ಕಾಲ ಲಿಂಗಣ್ಣ ಗೌಡ ಎಲ್ಲ ಗೆರಿಲ್ಲಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ. ಸ್ಟೋಕ್ಸ್ ದಾಖಲಿಸಿರುವಂತೆ: "ಒಂದು ದಿನ, ರಾಯಣ್ಣ ತನ್ನ ಶಸ್ತ್ರಾಸ್ತ್ರಗಳನ್ನು ಬದಿಗಿಟ್ಟು ಸ್ನಾನ ಮಾಡುತ್ತಿದ್ದ. ಆಗ ನೇಗಿನಹಾಳದ ಸನಾದಿ ಲಕ್ಕಪ್ಪ ಎಂಬಾತ ಇದ್ದಕ್ಕಿದ್ದಂತೆ ರಾಯಣ್ಣನ ಮೇಲೆರಗಿ ಅವನನ್ನು ಬಂಧಿಸಿದ. ಅದೇ ವೇಳೆಗೆ ಇತರರು ಅವನ ಶಶ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ರಾಯಣ್ಣನ ಕೈಕಾಲುಗಳನ್ನು ಕಟ್ಟಿ ಹಾಕಿ ಆತನನ್ನು ಧಾರವಾಡಕ್ಕೆ ಕರೆತಂದರು."

ರಾಯಣ್ಣನನ್ನು ಬಂಧಿಸಲು ಸಹಾಯ ಮಾಡಿದ್ದಕ್ಕೆ ಕೃಷ್ಣರಾವ್‌ಗೆ ನಗದು ಬಹುಮಾನ ನೀಡಲಾಯಿತು. ರೈತರ ಸಂಗ್ರಾಮಕ್ಕೆ ದ್ರೋಹ ಬಗೆದ ಭೂಮಾಲೀಕರಿಗೂ ಪ್ರಶಸ್ತಿಗಳನ್ನು ನೀಡಲಾಯಿತು. ಅವರೆಲ್ಲರಿಗೆ ಮುನ್ನೂರು ರೂಪಾಯಿಗಳ ನಗದು ಸೇರಿದಂತೆ ಇಡೀ ಹಳ್ಳಿಗಳನ್ನೇ ಇನಾಮಾಗಿ ನೀಡಿತು ಬ್ರಿಟಿಷ್ ಸರ್ಕಾರ. ಲಿಂಗಣ್ಣ ಗೌಡನಿಗೆ ಕಿತ್ತೂರು ಸಮೀಪದ ಕಲ್ಲೊಲಿ ಗ್ರಾಮ ಸಿಕ್ಕಿದರೆ, ಯೆಂಕನ ಗೌಡನಿಗೆ ಧಾರವಾಡದ ಹತ್ತಿರದ ಧೋಂ ಗ್ರಾಮ ದಕ್ಕಿತು.

ಆದರೆ ಕುರುಬ, ಬೇಡ, ಜೈನ, ಲಿಂಗಾಯತ, ಸಿದ್ದಿ, ಮುಸ್ಲಿಂ, ಪಂಚಮಸಾಲಿ ಸೇರಿದಂತೆ ವಿವಿಧ ಜಾತಿಗಳಿಂದ ಬಂದಿದ್ದ ರಾಯಣ್ಣ ಮತ್ತು ಸಂಗಡಿಗರಿಗೆ ದಕ್ಕಿದ್ದು ಮರಣದಂಡನೆ.

ಆದರೂ 1837-38ರಲ್ಲಿ ಕಿತ್ತೂರಿನಲ್ಲಿ ಬಂಡಾಯವೊಂದು ಸಣ್ಣದಾಗಿ ತಲೆ ಎತ್ತಿತ್ತು. ಕಿತ್ತೂರನ್ನು ಅಲುಗಾಡಿಸಿದ ಐದನೇ ಮತ್ತು ಕೊನೆಯ ಬಂಡಾಯ ಅದಾಗಿತ್ತು. ಈ ಬಂಡಾಯವನ್ನೂ ಹತ್ತಿಕ್ಕಲಾಯಿತು. ಆದರೆ ಬಂಡಾಯಕೋರರು ರಾಯಣ್ಣನಿಗೆ ದ್ರೋಹ ಬಗೆದಿದ್ದ ಯದ್ದಾಪುರದ ಪಟೇಲ ಲಿಂಗಣ್ಣ ಗೌಡನನ್ನು ಕೊಂದು ಹಾಕಿದರು.

ಸೋಲಿನ ದವಡೆಯಲ್ಲಿದ್ದರೂ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಜನಸಮುದಾಯ ಆಕ್ರೋಶಭರಿತವಾಗಿದ್ದರೂ ಹೇಗೆ ತಾಳ್ಮೆಯಿಂದ ಕಾದಿದ್ದು ತಮ್ಮ ಹಠ ಸಾಧಿಸುತ್ತಾರೆ ಎಂದು ಮತ್ತೊಮ್ಮೆ ಕರ್ನಾಟಕದ ಇತಿಹಾಸ ಸಾಬೀತುಪಡಿಸಿತು.

ತಾನು ನಿರಪರಾಧಿ ಎಂದೇ ಹೇಳಿದ ಸಂಗೊಳ್ಳಿ ರಾಯಣ್ಣ ತನ್ನ ಕಾರ್ಯಗಳನ್ನು ಸಮರ್ಥಿಸಿಕೊಳ್ಳುತ್ತಾ ಕರ್ನಾಟಕದ ಜನತೆಗೆ ಒಂದು ಸಂದೇಶವನ್ನು ಬಿಟ್ಟು ಹೋಗಿದ್ದಾನೆ. ನಂದಗಡ್‌ದಲ್ಲಿ "ಕಳ್ಳತನ" ಮಾಡಿದ್ದಕ್ಕೆ ಅಲ್ಲೇ ಆತನನ್ನು ನೇಣು ಹಾಕಬೇಕೆಂದು ನಿರ್ಧರಿಸಲಾಯಿತು. ಸ್ಟೋಕ್ಸ್ ಹೇಳಿರುವಂತೆ "ರಸ್ತೆಯಲ್ಲಿ ರಾಯಣ್ಣ ನೇಣುಗಂಬದತ್ತ ಹಾದು ಹೋಗುತ್ತಿದ್ದಾಗ ಒಂದು ಸ್ಥಳವನ್ನು ತೋರಿಸಿ ಅಲ್ಲೇ ತನ್ನ ಹೆಣವನ್ನು ಹೂಳಬೇಕೆಂದು ಹೇಳಿದ. ಹಾಗೆಯೇ ಆಲದ ಮರವನ್ನು ನೆಡಬೇಕೆಂದೂ ರಾಯಣ್ಣ ಹೇಳಿದ. ಈಗ ನಂದಗಡ್ ಕೆರೆಯ ಬದಿಯಲ್ಲಿರುವ ಬೃಹದಾಕಾರದ ಆಲದ ಮರವೇ ರಾಯಣ್ಣನ ಸಮಾಧಿಯ ಮೇಲೆ ಬೆಳೆದದ್ದು ಎಂದು ಜನ ಹೇಳುತ್ತಾರೆ."

ರಾಯಣ್ಣನ ಕೊನೆ ಆಸೆಯೂ ಒಂದು ಸಾಧಾರಣ ರೈತನ ಆಸೆಯೇ ಆಗಿತ್ತು, ಹಾಗೆಯೇ ವಸಾಹತುಶಾಹಿ ವಿರೋಧಿಯೂ ಆಗಿತ್ತು. ನೇಣುಗಂಬವನ್ನೇರಿದ ಸಂಗೊಳ್ಳಿ ರಾಯಣ್ಣನ ಕೊನೇ ಮಾತುಗಳು ಇವಾಗಿದ್ದವು: "ನನ್ನ ಕೊನೆ ಆಸೆ ಯಾವುದೆಂದರೆ ಮತ್ತೆ ನಾನು ಈ ದೇಶದಲ್ಲಿ ಜನ್ಮತಾಳಿ, ಈ ಪುಣ್ಯ ಭೂಮಿಯಿಂದ ಬ್ರಿಟೀಷರ ವಿರುದ್ಧ ಹೋರಾಟವನ್ನು ಮುಂದುವರಿಸುವುದು."

ಸಂಗೊಳ್ಳಿ ರಾಯಣ್ಣ ಜನಪರ ಹೋರಾಟಕ್ಕಾಗಿ ಹುತಾತ್ಮನಾದ. ಜನರ ಕಣ್ಮಣಿಯಾದ. ಆತನ ಬಗ್ಗೆ ಜನ ನೂರಾರು ಕಾವ್ಯಗಳನ್ನು ರಚಿಸಿದರು. ಅಸಹಾಯಕರ, ವರ್ಗಭೇದದ ವಿರುದ್ಧದ ಜನರ ಹೋರಾಟಕ್ಕೆ ಸಂಗೊಳ್ಳಿ ರಾಯಣ್ಣ ಸಂಕೇತವಾದ. ನಂದಗಡ್‌ನಲ್ಲಿ ಬಿತ್ತಿದ್ದ ಬೀಜ ಮೊಳಕೊಡೆಯುವ ಮುನ್ನವೇ ನಗರದಲ್ಲಿ ಗೆರಿಲ್ಲಾ ಯುದ್ಧ ಪ್ರಾರಂಭವಾಯಿತು. ಆ ಗಿಡದ ರೆಂಬೆ, ಕೊಂಬೆಗಳು ರೂಪಗೊಳ್ಳುವ ಮುನ್ನವೇ ಸಂಗೊಳ್ಳಿ ರಾಯಣ್ಣನ ತ್ಯಾಗ, ಬಲಿದಾನ ಕ್ರಾಂತಿ ಕರ್ನಾಟಕದ ಪ್ರತಿ ಹುಡುಗ ಹುಡುಗಿಯರಿಗೂ ಹಬ್ಬ ರೈತಾಪಿ ಜನರಿಗೂ ಸ್ಫೂರ್ತಿ ನೀಡಿತು.

ಅನುವಾದ : ಗೌರಿ ಲಂಕೇಶ್

'…… ಹಿಸ್ಟರಿ–ಭಾಗ 2' ಪುಸ್ತಕದಿಂದ

# ಭೋಜನಪ್ರಿಯರ ಬಗ್ಗೆ

ಬ್ರಾಹ್ಮಣರು ಭೋಜನಪ್ರಿಯರು. ಹೀಗೆಂದವರು ಅವರಿಗೆ ಎಲ್ಲವನ್ನು ಸರಬರಾಜು ಮಾಡುತ್ತಿದ್ದ ಶೂದ್ರರೆ. ಇವತ್ತಿಗೂ ಈ ಮೂದಲಿಕೆ ಮಾತಿನಿಂದ ಯಾವ ಬ್ರಾಹ್ಮಣರೂ ಸಿಟ್ಟಾಗಿಲ್ಲ. ಬದಲಿಗೆ ಯಾವ ತರದ ಭಕ್ಷ್ಯ ಭೋಜನಗಳನ್ನು ಕಂಡರೆ ತಮಗಿಷ್ಟ ಎಂಬುದನ್ನು ವಿವರಿಸಿ ನಮ್ಮ ಬಾಯಲ್ಲಿ ನೀರೂರಿಸಿ ನಗುತ್ತ ಮುಂದೆ ಹೋಗುತ್ತಾರೆ.

ನಿಜಕ್ಕೂ ನಮ್ಮ ಶೂದ್ರರಿಗೆ ಕುಂಬಳಕಾಯಲ್ಲಿ ಏನೇನು ಮಾಡಿಕೊಂಡು ತಿನ್ನಬಹುದೆಂದು ಗೊತ್ತೆಯಿಲ್ಲ. ಹೆಚ್ಚೆಂದರೆ ತಾಳದ ಮಾಡಿಕೊಂಡು ರೊಟ್ಟಿಯೊಂದಿಗೆ ತಿನ್ನಬಲ್ಲರು ಅಷ್ಟೇ. ಹಿಂದೆ, ಕುಂಬಳಕಾಯಿ ಸಿಕ್ಕ ಕೂಡಲೇ ತೆಗೆದುಕೊಂಡು ಹೋಗಿ ಶ್ಯಾನುಭೋಗರ ಮನೆಗೆ ಕೊಡುತ್ತಿದ್ದರು. ಅವರು ಅದರಿಂದ ಮಾಡುವ ಹುಳಿಯನ್ನೇನಾದರೂ ಈಸಿಕೊಂಡು ನೆಕ್ಕಿದ್ದರೆ ಕುಂಬಳ ಕಾಯನ್ನು ಎಂದೂ ಅವರ ಮನೆಗೆ ಮುಟ್ಟಿಸುತ್ತಿರಲಿಲ್ಲ.



ನಿಜಕ್ಕೂ ಬಾಯಿಗಿಟ್ಟ ಕೂಡಲೇ ಮನುಷ್ಯನ ಹಲವು ಇಂದ್ರಿಯಗಳು ಅನಿರ್ವಚನೀಯ ಆನಂದಕ್ಕೆ ತುತ್ತಾಗುವುದು ಈ ಬ್ರಾಹ್ಮಣರು ಕಂಡು ಹಿಡಿದಿರುವ ಸಸ್ಯಹಾರವೇ ಹೊರತು ಮಾಂಸಾಹಾರವಲ್ಲ. ಮಾಂಸಹಾರ ಸೇವಿಸಿದರೆ ಒಂದು ರೀತಿಯ ಹಸಿವಿನ ರೋಷ ಶಮನವಾಗುತ್ತೆ. ಆದರೆ ಸಸ್ಯಹಾರ ಸೇವಿಸಿದರೆ ಸಂತೃಪ್ತವಾಗಿ ಬೀಸಣಿಗೆ ಜೊತೆಯಲ್ಲಿ ಹರಟಬಹುದು. ನಮ್ಮ ದೇಶದ ಹಲವು ಪುರಾಣಗಳು ಸೃಷ್ಟಿಯಾಗಿರುವುದು ಹೀಗೆ.

ನಾನು ಗಮನಿಸಿದಂತೆ ಅನ್ನ, ಸಾರು, ಪಾಯಸದ ಊಟದಲ್ಲಿ ಇದುವರೆಗೆ ಯಾವ ಗಲಾಟೆಯೂ ನಡೆದಿಲ್ಲ. ಆದರೆ ಬಲಿಯಿಂದ ನಡೆಯುವ ಬಾಡೂಟದಲ್ಲಿ ಮಾರಾಮಾರಿಯೇ ನಡೆದು ಹೋಗಿವೆ. ಬಡಿಸುವ ಸೌಟು, ಬಕೀಟುಗಳೇ ಕತ್ತಿ ಗುರಾಣಿಯಾಗಿ ಬಳಕೆಯಾಗಿವೆ. ಇದೇಕೆಂದು ಗಮನಿಸಿದರೆ ಮಾಂಸದೂಟಕ್ಕೆ ರೆಡಿಯಾಗುವ ಮನಸ್ಸೇ ಬೇರೆ, ಪಾಯಸ ಕೋಸಂಬರಿ ಊಟಕ್ಕೆ ರೆಡಿಯಾಗುವ ಮನಸ್ಸುಗಳೇ ಬೇರೆ. ಮಾಂಸದೂಟದಲ್ಲಿನ ಮನಸ್ಸು ಅತ್ಯಂತ ಸೂಕ್ಷ್ಮವಾಗಿ ಮತ್ತು ಸಣ್ಣತನದ ಪರಮಾವಧಿಯಲ್ಲೂ ವರ್ತಿಸುತ್ತವೆ. ಇತ್ತೀಚಿಗೆ ಮಾಂಸದೂಟಕ್ಕೆ ಮದ್ಯ ಸೇವನೆ ಕಡ್ಡಾಯವಾಗಿರುವುದರಿಂದ ಹೆಚ್ಚುಕಮ್ಮಿಯಾದರೆ ಹೊಡೆದಾಟ ಗ್ಯಾರಂಟಿ!

ನನ್ನ ಗೆಳೆಯನೊಬ್ಬ ಮಾರ್ನವಮಿ ಪಕ್ಷವನ್ನು ಅಪ್ಪನ ತಿಥಿ ಮಾಡಿದಷ್ಟೇ ಭಕ್ತಿಯಿಂದ ಸರಿಯಾದ ಕುರಿ ಕುಯ್ದು ಮಾಡುತ್ತಿದ್ದ. ಕಳೆದ ಬಾರಿ ಆತನ ಬಾವಂದಿರೂ ಬಂದು ಹಬ್ಬಕ್ಕೆ ಕಳೆತಂದರು. ಎಲ್ಲವೂ ಸಾಂಗವಾಗಿ ನಡೆದು ಊಟಕ್ಕೆ ಕುಳಿತಿರುವಾಗ ಒಬ್ಬನಿಗೆ ಎಣ್ಣೆ ಏಟು ಜೋರಾಗಿ ರಾಂಗಾದ. ಮಾತಿಗೆ ಮಾತು ಬೆಳೆದು ಕೈಲಿದ್ದ ಮುದ್ದೆ ಕ್ರಿಕೆಟ್ ಬಾಲಾದವು. ಬಾಡಿನ ಇಲುಕು ಇಟ್ಟಾಡಿ ಹೋದವು.

ಈ ಗಲಭೆಗೆ ಕಾರಣರಾದವರನ್ನು ನನ್ನ ಗೆಳೆಯ ಹಿಡಿದು ಜೊತೆಯಾಗಿ ನಿಲ್ಲಿಸಿ, ಇಬ್ಬರ ಕಾಲಿಗೂ ನಮಸ್ಕಾರ ಮಾಡಿ "ಅಪ್ಪಾ ತಂದೆಗಳ, ಇನ್ನ ನಾನು ಬದುಕಿರೋವರಿಗೂ ಈ ಹಬ್ಬನೂ ಮಾಡದಿಲ್ಲ, ನಿಮ್ಮನ್ನೂ ಕರಿಯದಿಲ್ಲ, ದಯಮಾಡಿ ನಿಮ್ಮ ಯಕ್ಕಡ ಕೊಡಿ, ಪಡಕತ್ತಿನಿ" ಎಂದು ಅಳತೊಡಗಿದ. ಆದರೆ ಗಲಭೆಕೋರರಿಗೆ ಏನೂ ಅನ್ನಿಸಲಿಲ್ಲ, ಸ್ವಗೊಂದು ಖಂಡೊಂದು ಎಂಬಂತಿದ್ದ ಮಾಂಸದೂಟ ಬಿಟ್ಟು ಹೋಗುವಂತಹ ಯಾವ ತೊಂದರೆಯೂ ಅವರಿಗಾಗಿರಲಿಲ್ಲ. ಅಮಲೇರಿದ ಪೋಲಿ ಗಡದ್ದಾಗಿ ಉಂಡು, ಎಲೆಯಡಿಕೆ ಹಾಕಿ, ಜೊತೆಗೆ ಬೀಡಿ ಹಚ್ಚಿಕೊಂಡು ಸಣ್ಣ ಸಣ್ಣ ಇಂಜಿನ್‌ಗಳ ಥರ ಹೊರಟು ಹೋದರು. ಆದರೆ ಗೆಳೆಯ ಇನ್ನೊಂದೂ ಹಬ್ಬ ಮಾಡದಂತ ಶಪಥವನ್ನು ಕಠೋರವಾಗಿಯೇ ಮಾಡಿದ್ದ.

ಸಾಮಾನ್ಯವಾಗಿ ನಮ್ಮ ಶೂದ್ರರು ಹಬ್ಬ ಮಾಡಿದ ಮರುದಿನದಿಂದಲೇ ಆಸ್ಪತ್ರೆ ದಾರಿ ಹಿಡಿದು ಹೋಗುತ್ತಿರುತ್ತಾರೆ. ಇದ್ಯಾಕೆಂದು ಕೇಳಿದರೆ ಹೊಟ್ಟೆಲ್ಲಿ "ಕಾಯ್ಲ" ಎಂದು ಉತ್ತರಿಸುತ್ತಾರೆ. ನಿಜವಾದ ವಿಷಯ ಹೇಳುವುದಿಲ್ಲ. ನಿಜಕ್ಕೂ ಸಂಭವಿಸಿರಬಹುದಾದ ಘಟನೆ ಏನೆಂದರೆ ಏನನ್ನು ಎಷ್ಟು ತಿನ್ನಬೇಕೆಂಬುದೇ ಗೊತ್ತಿಲ್ಲದೆ ಹಟ್ಟಾಗಿ ಉಂಡುಬಿಟ್ಟಿರುತ್ತವೆ. ಹಾಗಾಗಿ ಸರ್ಕಾರಿ ಆಸ್ಪತ್ರೆ ಬಾಗಿಲಲ್ಲಿ ಸಾಲಾಗಿನಿಂತಿರುತ್ತವೆ. ಆದರೆ ಬ್ರಾಹ್ಮಣರ್‍ಯಾರೂ ಉಂಡ ಕಾರಣಕ್ಕೆ ಆಸ್ಪತ್ರೆ ಬಾಗಿಲಲ್ಲಿ ಕೂತಿರುವುದಿಲ್ಲ. ಏನನ್ನು ಎಷ್ಟು ತಿನ್ನಬೇಕು, ಹೇಗೆ ತಿನ್ನಬೇಕೆಂದು ಗೊತ್ತು ಮಾಡಿಕೊಂಡಿರುವ ಜನ ಅವರು.

ಸಮಯಕ್ಕೆ ಸರಿಯಾಗಿ ಊಟ ಮಾಡಬೇಕೆಂಬುದನ್ನು ಅವರಿಂದ ಕಲಿಯಬೇಕು.

ನಮ್ಮ ಕಟ್ಟೆ ಪುರಾಣದ ನಾಟಕದ ಟೀಮಿನೊಳಗಡೆ ಒಂದಿಬ್ಬರು ವಿಪ್ರ ಮಿತ್ರರು ಸೇರಿಕೊಂಡಿದ್ದರು. ನಾಟಕದ ಟೀಮು ಅಲ್ಲಿ ಇಲ್ಲಿ ನಾಟಕ ಮಾಡಲು ವ್ಯಾನ್ ಹೊರಡಬೇಕಾದರೆ ವ್ಯಾನೊಳಗಿನ ಯಾವುದೋ ಮೂಲೆಯಿಂದ "ತಿಂಡಿ ಎಲ್ಲಿ ತಿನ್ನದ್ರಪ್ಪ" ಎಂಬ ದನಿ ಬಂತೆಂದರೆ ಆತ ಇನ್ನಾರೂ ಆಗಿರದೆ ವಿಪ್ರ ಮಿತ್ರನಾಗಿರುತ್ತಿದ್ದ. ತಿಂಡಿ ತಿಂದ ನಂತರ ಮಧ್ಯಾಹ್ನದ ಊಟ ಎಲ್ಲಿ ಮತ್ತು ಯಾವ ತರದ ಊಟ ಎಂಬ ಮಾಹಿತಿಯನ್ನು ಆಗಲೇ ಪಡೆದುಕೊಳ್ಳುತ್ತಿದ್ದರು. ಹಾಗೂ ರಾತ್ರಿ ಊಟದ ಕರಾರುವಾಕ್ಕಾದ ಮಾಹಿತಿಯೂ ಅವರಿಗೆ ಆಗಲೇ ಬೇಕಿತ್ತು. ನನಗೆ ಈ ಮಿತ್ರರು ಊಟ ತಿಂಡಿ ಬಗ್ಗೆ ತೆಗೆದುಕೊಳ್ಳುತ್ತಿದ್ದ ಭವಿಷ್ಯದ ತೀರ್ಮಾನಗಳ ಬಗ್ಗೆ ತುಂಬಾ ಕುತೂಹಲವಾಯ್ತು.

ನಾವು ಎಲ್ಲಾದರು ಹೋಗಬೇಕೆಂದರೆ ಸುಮ್ಮನೆ ಹೊರಟುಬಿಡುತ್ತೇವೆ. ತಲುಪುವ ಸಮಯ, ಉಳಿಯುವ ಜಾಗ, ಊಟಕ್ಕೇನು ಮಾಡುವುದು ಎಂಬ ಯಾವ ಪೂರ್ವ ನಿರ್ಧಾರವೂ ಇಲ್ಲದೆ ಹೊರಟು ಫಜೀತಿ ಪಡುವುದು ನಮ್ಮ ಜಾಯಮಾನ. ಆದರೆ ನಮ್ಮ ವಿಪ್ರ ಮಿತ್ರರು ಅವರ ಪ್ರಯಾಣ ಮತ್ತು ಮಾರ್ಗ ಹಾಗೂ ವಸತಿ ಈ ಎಲ್ಲಾ ಚರ್ಚೆಯಲ್ಲಿ ಪ್ರಧಾನವಾಗಿ ಊಟದ ಮುಖಾಂತರ ತೆಗೆದುಕೊಂಡ ನಿರ್ಣಯಗಳೇ ಪಾಸಾಗಿರುತ್ತವೆ.

ಶೆಟ್ಟರು ತಮ್ಮೆಲ್ಲಾ ಬದುಕಿನ ವ್ಯವಹಾರಗಳನ್ನು ಹಣದ ಮುಖಾಂತರ ನೋಡುವಂತೆ ಬ್ರಾಹ್ಮಣರು ಊಟದ ಮುಖಾಂತರ ನೋಡುತ್ತಾರೆ. ಈ ನಡವಳಿಕೆ ಇವೆರಡೇ ಜನಾಂಗದ ಹುಟ್ಟುಗುಣವಾದರೂ, ಇತ್ತೀಚೆಗೆ ಎಲ್ಲಾ ಜಾತಿಗಳೆಲ್ಲಾ ಬ್ರಾಹ್ಮಣೀಕರಣ ಮತ್ತು ಶೆಟ್ಟೀಕರಣವಾಗುತ್ತಿದ್ದರೂ ಈ ಜಾತಿಗಳಿಗಿನ್ನೂ ಈ ರೂಪದ ಆರ್ಥಿಕ ಮತ್ತು ಭೋಜನದ ಸಿಸ್ತು ಬಂದಿಲ್ಲ, ಮುಂದೆ ಬರಬಹುದು!

[illegible]

ಸಾಹಿತ್ಯಪುರದ ಮಠದಲ್ಲಿ ಗಂಡು ಸ್ವಲ್ಪ ಅಧಿಕಾರಿಯಾಗಿದ್ದರಿಂದ ನಮ್ಮನ್ನು ಕರೆದಿದ್ದ. ಊಟದ ಸಮಯದಲ್ಲಿ ಬ್ರಾಹ್ಮಣರೆಲ್ಲಾ ಭೋಜನ ಮಾಡುವುದನ್ನು ನೋಡಿ ಅಚ್ಚರಿಗೊಂಡಿದ್ದ, ಅಲ್ಲದೆ ಒಬ್ಬ ಹಾಡೇಳುತ್ತಲೇ ಊಟ ಮಾಡುತ್ತಿದ್ದ. ಅದನ್ನು ನೋಡಿದ ನಾನು ಊಟ ಮತ್ತು ಹಾಡಿನ ನಡುವೆ ಸಮನ್ವಯ ಸಾಧಿಸಿರುವ ಆತನ ಪ್ರತಿಭೆ–ಲಂಕೇಶ್ ಹೇಳುವಂತೆ–ಒಂದು ಜನಾಂಗದ ಪರಂಪರಾಗತ ಕೃಷಿಯಿಂದ ಬಂದಿರಬೇಕು ಎಂದುಕೊಂಡೆ. ಬಹುಶಃ ಅಂದಿನಿಂದಲೇ ನಾನು ವಿಪ್ರ ಗೆಳೆಯರನ್ನು ಗಮನಿಸುತ್ತ ಬಂದೆ ಅನ್ನಿಸುತ್ತದೆ.

ಅದರ ಫಲವಾಗಿ ಒಂದೆರಡು ಸ್ಯಾಂಪಲ್‌ಗಳನ್ನು ದಾಖಲಿಸುವುದಾದರೆ, ಶಿವಮೊಗ್ಗದ ಕರ್ನಾಟಕ ಸಂಘದವರು ಸುವರ್ಣ ಮಹೋತ್ಸವ ಕುಂಬದ ಕೊಡುಗೆ ಒಂದು ವಿಶೇಷ ಸಂಚಿಕೆ ತಂದಿದ್ದಾರೆ. ಅದರಲ್ಲಿನ ಲೇಖನಗಳನ್ನು ಗಮನಿಸುತ್ತ ಹೋದಂತೆ, ಕೆಲವು ವಿಪ್ರ ಸಾಹಿತಿಗಳು, ಪ್ರಖ್ಯಾತ ಸಾಹಿತಿಗಳು ತಮ್ಮ ಮನೆಗೆ ಬಂದಾಗ ಅವರ ಜೊತೆ ರುಚಿಕರವಾದ ಭೋಜನ ಸವಿಯುತ್ತ ಸಾಹಿತ್ಯದ ಚರ್ಚೆ ಮಾಡಿದ್ದನ್ನು ದಾಖಲಿಸಿದ್ದಾರೆ. ನನಗೆ ಇದೇನು ಅಂತಹ ವಿಶೇಷವಾಗಿ ಕಾಣಲಿಲ್ಲ. ಅಂತಹ ಅನಂತಮೂರ್ತಿಯವರೇ ರಾಮಕೃಷ್ಣ ಹೆಗಡೆ ತೀರಿಕೊಂಡಾಗ ಬರೆದ ಒಂದು ಲೇಖನದಲ್ಲಿ, "ಹೆಗಡೆಯವರ ಮನೆಯಲ್ಲಿ ನಡೆಯುವ ಊಟದ ಗೋಷ್ಠಿಯಲ್ಲಿ ನಾನೂ ಭಾಗವಹಿಸಿದ್ದೆ" ಎಂದಿದ್ದಾರೆ. ಹೀಗಾಗಿ ನನ್ನ ವಿಪ್ರ ಗೆಳೆಯರ ಮತ್ತು ಸಾಹಿತಿಗಳ ಯಾವುದೇ ಮಾತು ಅಥವಾ ಲೇಖನ ಬಂದು ನಿಲ್ಲುವುದು ಆ ದಿನ ಉಂಡಿರಬಹುದಾದ ರುಚಿಕರವಾದ ಊಟದ ನೆನಪಿಗೆ ಎಂಬುದೊಂದು ವಿಶೇಷ.

ಭದ್ರಾವತಿ ಆಕಾಶವಾಣಿಯವರು ನಿಮ್ಮ ಮೆಚ್ಚಿನ ಚಿತ್ರಗೀತೆಗಳನ್ನು ನೀವೇ ಆಯ್ಕೆ ಮಾಡಿ ಒಂದು ಕಾರ್ಯಕ್ರಮ ನಡೆಸಿಕೊಡಿ ಎಂದು ಕರೆದಿದ್ದರು. ನಾನು ಬಾಲ್ಯದಲ್ಲಿ ಕೇಳಿದ್ದ ಹಲವಾರು ಹಾಡುಗಳನ್ನು ನೆನೆಸಿಕೊಂಡು ಒಂದು ಕಾರ್ಯಕ್ರಮ ರೂಪಿಸಿದೆ. ಆದೇ ನನ್ನ ವಿಪ್ರಮಿತ್ರ "ಶ್ರಾದ್ಧದೂಟ ಸುಮ್ಮನೆ ನೆನೆಸಿಕೊಂಡ್ರೆ ಜುಮ್ಮನೆ"



ಎಂಬ ಹಾಡಿನಿಂದ ಶುರು ಮಾಡಿ "ವಿವಾಹ ಭೋಜನವಿದು ವಿಚಿತ್ರ ಭಕ್ಷ್ಯಗಳಿವು" ಎಂಬ ಹಾಡಿನೊಂದಿಗೆ ಮುಗಿಸಿದಾಗ ನನಗೆ ನಗು ತಡೆಯಲಾಗಲಿಲ್ಲ.

ಹೀಗೆ ವಿಪ್ರೋತ್ತಮರ ಬದುಕಿನಲ್ಲಿ ಭೋಜನ ಹಾಸು ಹೊಕ್ಕಾಗಿದೆ. ಬರೀ ರಾಗಿರೊಟ್ಟಿ ಮುದ್ದೆಯನ್ನೇ ತಿನ್ನುತ್ತ ಬಂದ ನಮಗೆ ಊಟದ ಬಗ್ಗೆ ಯಾವ ಸ್ವಾರಸ್ಯವೂ ಕಂಡಿಲ್ಲದಿರಬಹುದು. ಆದರೆ ಊಟದಿಂದ ಊಟಕ್ಕಾಗಿ ಬದುಕಿದ ಗೆಳೆಯರ ಬಗ್ಗೆ ಆಡಿಕೊಳ್ಳುವುದಕ್ಕಿಂತ ಅವರಂತೆ ಸಮಯಕ್ಕೆ ಸರಿಯಾಗಿ ಉಣ್ಣುವುದೇ ಶ್ರೇಯಸ್ಕರ. ಬ್ರಾಹ್ಮಣರನ್ನು ಆಡಿಕೊಂಡವರು ಯಾರೂ ಉದ್ಧಾರವಾಗಿಲ್ಲ ಎಂಬುದನ್ನು ನೆನೆದು ಸುಮ್ಮನಾಗುವ ಮುನ್ನ, ಇನ್ನೊಂದು ಪ್ರಸಂಗ ಜ್ಞಾಪಕಕ್ಕೆ ಬಂತು.

ನಮ್ಮ ಟಿ.ಎನ್. ಸೀತಾರಾಂ ಕೂಡ ತಮ್ಮ ಟಿವಿ ಧಾರಾವಾಹಿಗಳಲ್ಲಿ ಊಟದ ಸನ್ನಿವೇಶ ತಂದು ಒಂದೊಂದು ಎಪಿಸೋಡ್ ಎಳೆದು ಮುಗಿಸುತ್ತಾರೆ. ಪಾತ್ರಧಾರಿಗಳನ್ನೆಲ್ಲಾ ಪಂಕ್ತಿಯಲ್ಲಿ ಕೂರಿಸಿ ಹೋಳಿಗೆ, ಪಾಯಸ, ಹುಳಿ ಬಡಿಸುವುದನ್ನು ನೋಡುವುದೇ ಚಂದ. [illegible] ಧಾರಾವಾಹಿ ನಿರ್ದೇಶಕನಿಗೂ ಇದು ಹೊಳೆಯದಿರುವುದೊಂದು ವಿಶೇಷ!

–ಪಿ. ಚಂದ್ರೇಗೌಡ

ಬಡತನವೇ ಕ್ರಾಂತಿ ಮತ್ತು ಅಪರಾಧಗಳಿಗೆ ಜನ್ಮ ನೀಡುವುದು. –ಅರಿಸ್ಟಾಟಲ್

ಕತೆ

# ಕಪ್ಪು ಮಲ್ಲಿಗೆ

[illegible] ಬ್ಲ್ಯಾಕ್. ನೆನಪಿದ್ದೀನಾ? [illegible] ಆಕೆಯ ಧ್ವನಿ ಕಿವಿಯಲ್ಲಿತ್ತು ಖಂಡಿತವಾಗಿಯೂ ಅಮೆರಿಕನ್ ನೀಗ್ರೊ ಧ್ವನಿಯಾಗಿತ್ತು.

"ಮಾರ್ಥಾ!" ಎಂದು ಬ್ಯಾನರ್ಜಿ ಉತ್ಸಾಹದಿಂದ ಫೋನಿನಲ್ಲಿ ನುಡಿದ. "ಖಂಡಿತವಾಗಿಯೂ ನಿನ್ನ ನೆನಪಿದೆ! [illegible] ನೀನು ಏನು ಮಾಡುತ್ತಿದ್ದೀಯಾ? ನೀನು ಇಲ್ಲಿಗೆ ಬಂದಿದ್ದೀಯ ಅಂತ ಯಾಕೆ [illegible] ತಿಳಿಸ[illegible]?"

"[illegible] ನ್ಯೂಯಾರ್ಕ್ [illegible] ಕೊನೆ ಕ್ಷಣದವರೆಗೂ ನನಗೇ ಗೊತ್ತಿರಲಿಲ್ಲ. ಈಗ ಹೋಟೆಲ್ ಅಶೋಕದಲ್ಲಿದ್ದೇನೆ. ನಿನ್ನನ್ನು ಮತ್ತೆ ನೋಡಲು ಕಾಯುತ್ತಿದ್ದೇನೆ."

"ಒಂದ ನಿಮಿಷ ಮಾರ್ಥ" ಎಂದು ಫೋನ್‌ನ ಬಾಯಿಯನ್ನು ತನ್ನ ಕೈಯಿಂದ ಮುಚ್ಚಿದ ಆತ ತನ್ನ ಹೆಂಡತಿಯೊಂದಿಗೆ ಚರ್ಚಿಸಿ ಮತ್ತೆ ಮಾರ್ಥಾಳೊಂದಿಗಿನ ಸಂಭಾಷಣೆಗೆ ಮರುಳಿದ. "ನನ್ನ ಮನೆಗೆ ಊಟಕ್ಕೆ ಬಂದು ನಮ್ಮ ಮನೆಯವರನ್ನೆಲ್ಲ ಭೇಟಿಯಾಗು," ಎಂದು ಆಹ್ವಾನಿಸಿದ.

"ಸಂತೋಷವಾಗಿ. ನಿನಗೆ ಸಂಸಾರ ಇದೆ ಅಂತ ಗೊತ್ತಿರಲಿಲ್ಲ."

"ಹೆಂಡತಿ ಮತ್ತು ಬೆಳೆದು ನಿಂತಿರುವ ಇಬ್ಬರು ಮಕ್ಕಳಿದ್ದಾರೆ. ಮಗನಿಗೆ ಇಪ್ಪತ್ತು, ಮಗಳಿಗೆ ಹದಿನೈದು ವರ್ಷ ವಯಸ್ಸು. ತುಂಬಾ ವರ್ಷಗಳು ಕಳೆದು ಹೋಗಿವೆ! ಮೂವತ್ತು ವರ್ಷ! ನೀ ಹೇಗಿದ್ದೀ?"

"ಈಗ ಸಂಸಾರ ಎಂಬುದಂತೂ ಇಲ್ಲ, ಇಬ್ಬರು ಗಂಡಂದಿರನ್ನು ದಾಟಿ ಬಂದಿದ್ದೇನೆ. ಈಗ ನಾನೊಬ್ಬಳೇ ಇದ್ದೇನೆ. ಇದೇ ಚೆನ್ನಾಗಿದೆ" ಎಂದು ನಕ್ಕಳು.

"ನಾನು ಏಳು ಗಂಟೆಗೆ ಹೋಟೆಲ್‌ಗೆ ಬಂದು ನಿನ್ನನ್ನು ಮನೆಗೆ ಕರೆದುಕೊಂಡು ಬರುತ್ತೇನೆ. ನಿನಗೆ ನನ್ನ ಗುರುತು ಸಿಗುತ್ತದೋ ಇಲ್ಲವ್ವೋ... ನನ್ನ ಕೂದಲು ಸ್ವಲ್ಪ ಬಿಳಿಯಾಗಿದೆ, ಸ್ವಲ್ಪ ದಪ್ಪಗಾಗಿದ್ದೇನೆ."

"ಏನೂ ಯೋಚನೆ ಮಾಡಬೇಡ, ಚಿನ್ನಾ, ಎಲ್ಲರಿಗೂ ವಯಸ್ಸಾಗುತ್ತೆ, ದಪ್ಪಗಾಗುತ್ತೇವೆ" ಎಂದು ಉತ್ತರಿಸಿದ ಆಕೆ "ಹಾಗಾದರೆ ಏಳು ಗಂಟೆಗೆ ನಮ್ಮ ಭೇಟಿ. ನಮಸ್ತೆ! ನೋಡು, ನಾನು ಅದನ್ನು ಇನ್ನೂ ಮರೆತಿಲ್ಲ."

ಫೋನನ್ನು ಕೆಳಗಿಟ್ಟ ಬ್ಯಾನರ್ಜಿ ತುಂಬಾ ಬೋರ್ ಆಗಿರುವವನಂತೆ ನಟಿಸಿದ. ಅದನ್ನು ಗಮನಿಸಿದ ಅವನ ಹೆಂಡತಿ "ಏನು ಹಳೇ ಗರ್ಲ್‌ಫ್ರೆಂಡಾ?" ಎಂದು ನಗುಮುಖ ಹೊತ್ತೇ ಕೇಳಿದಳು. "ಗರ್ಲ್‌ಫ್ರೆಂಡ್ ಏನಲ್ಲ ಮೂವತ್ತು ವರ್ಷಗಳ ಹಿಂದೆ ನಾನು ಪ್ಯಾರಿಸ್‌ನ ಸಾರ್ಬೋನಿನಲ್ಲಿದ್ದಾಗ ಪರಿಚಯವಾಗಿದ್ದ ಹೆಂಗಸು."

"ಆಕೆಯನ್ನು ನೀನು ಮೊದಲು ಹೀಗೆ ಬಣ್ಣಿಸಿರಲಿಲ್ಲ. ನಿನ್ನ ಆಲ್ಬಮ್‌ನಲ್ಲಿರುವ ಚಿತ್ರ ಅವಳದ್ದೇ ಅಲ್ವಾ? ತುಂಬಾ ಸುಂದರವಾಗಿರಬೇಕು ಆಕೆ."

"ಆಕೆ ಕೆಟ್ಟದಾಗೇನಿರಲಿಲ್ಲ, ಆದರೆ ನೀಗ್ರೋ. ದಪ್ಪನೆ ತುಟಿ, ಗುಂಗುರು ಕೂದಲು. ನಮ್ಮ ಕ್ಲಾಸ್‌ನಲ್ಲಿ ನಾವಿಬ್ಬರೆ ಬಿಳಿಯರಾಗಿರಲಿಲ್ಲ, ಆದ್ದರಿಂದ ಒಂದು ರೀತಿಯಲ್ಲಿ ಬಲವಂತವಾಗಿ ಜೊತೆಗಿದ್ದೆವು."

ಹಾಗೆ ಹೇಳುತ್ತಿದ್ದಾಗ ತಾನು ಸತ್ಯ ಹೇಳುತ್ತಿಲ್ಲ ಎಂದು ಅವನಿಗೇ ಗೊತ್ತಾಯಿತು. ತನ್ನ ಹೆಂಡತಿಯ ಮುಖಕ್ಕೆ ಮುಖ ಕೊಡದೆ "ಆಕೆಯನ್ನು ಹೋಟೆಲ್‌ನಿಂದ ಕರೆದುಕೊಂಡು ಬರಬೇಕಿದೆ" ಎಂದು ಹೇಳಿ ತನ್ನ ಓದುವ [illegible].

ಇದೆಲ್ಲ ವಿಚಿತ್ರ ಅನ್ನಿಸಿತು ಆತನಿಗೆ. ಏಕೆಂದರೆ [illegible]

ಕೇವಲ ಪರಿಚಿತಳಾಗಿದ್ದಳು ಎಂಬಂತೆ ನಟಿಸಬೇಕಾಗಿದೆ. ಮದುವೆಯಾದರೆ ಹೀಗೇ ಆಗುತ್ತದೆ: ಒಂದು ನಿಷ್ಕಳಂಕ ಸಂಬಂಧದ ಬಗ್ಗೆಯೂ ಸುಳ್ಳು ಹೇಳಬೇಕಾಗುತ್ತದೆ ಎಂದು ತನಗೇ ತಾನೇ ಅಂದುಕೊಂಡ.

ನಿಷ್ಕಳಂಕ? ಸಂಪೂರ್ಣವಾಗಿ ನಿಜವಲ್ಲದಿದ್ದರೂ ಸತ್ಯ. ಸಾರ್ಬೋನಿನಲ್ಲಿ ಹೊಸಬರಿಗೆ ಫ್ರೆಂಚ್ ಸಾಹಿತ್ಯ ಕುರಿತು ರಜೆ ದಿನಗಳಲ್ಲಿ ನಡೆಯುತ್ತಿದ್ದ ವಿಶೇಷ ತರಬೇತಿಗಳ ಬಗ್ಗೆ ನೆನಪಿಸಿಕೊಳ್ಳಲಾರಂಭಿಸಿದ. ಹೆಚ್ಚಾಗಿ ಅಮೆರಿಕಾ ಮತ್ತು ಸ್ಕಾಂಡಿನೇವಿಯಾದಿಂದ ಬಂದಿದ್ದ ಮೂವತ್ತು ವಿದ್ಯಾರ್ಥಿಗಳಲ್ಲಿ ಇವರಿಬ್ಬರೆ ಕರಿಯರಾಗಿದ್ದರು.

ಮೊದಲ ದಿನವೇ ಮಾರ್ಥ ಎಲ್ಲರ ಗಮನ ಸೆಳೆದಿದ್ದಳು. ಪುರುಷರಿಗಿಂತಲೂ ಎತ್ತರವಾಗಿದ್ದ ಆಕೆ ಕಪ್ಪಾಗಿದ್ದರೂ ತುಂಬಾ ಸುಂದರವಾಗಿದ್ದಳು. ಎರಡನೆಯ ದಿನ ಹಲವು ಹುಡುಗರು ಅವಳ ಪರಿಚಯ ಮಾಡಿಕೊಂಡು ಆಕೆಯ ಪಕ್ಕ ಕೂತಿದ್ದರು. ಮೂರನೇ ದಿನ ಆಕೆಯೇ ಬ್ಯಾನರ್ಜಿ ಕೂತಿದ್ದಲ್ಲಿಗೆ ಬಂದು "ನಿಮ್ಮ ಪಕ್ಕ ಕೂರಬಹುದಾ? ನನ್ನ ಹೆಸರು ಮಾರ್ಥ. ನಾನು ಅಮೆರಿಕನ್" ಎಂದು ಕೈ ಚಾಚಿದ್ದಳು. ಅರ್ಧ ಎದ್ದು ನಿಂತ ಬ್ಯಾನರ್ಜಿ "ನಾನು ಬ್ಯಾನರ್ಜಿ. ಭಾರತೀಯ" ಎಂದು ಅವಳ ಕೈ ಕುಲುಕಿದ್ದ.

ಆದಾದ ನಂತರ ಅವರಿಬ್ಬರೂ ಕ್ಲಾಸ್‌ನಲ್ಲಿ ಅಕ್ಕಪಕ್ಕ ಕೂರುತ್ತಿದ್ದರು.

ಕ್ಲಾಸ್‌ಗೆ ಎಲ್ಲರಿಗಿಂತಲೂ ಬೇಗನೆ ಹಾಜರಾಗುತ್ತಿದ್ದ ಬ್ಯಾನರ್ಜಿ ತನ್ನ ಪಕ್ಕದ ಸೀಟಿನಲ್ಲಿ ಪುಸ್ತಕವೊಂದನ್ನು ಇಟ್ಟು ಆಕೆಗಾಗಿ ಕಾಯುತ್ತಿದ್ದ. ವಿದ್ಯಾರ್ಥಿಗಳ ನಡುವೆ ಎತ್ತರವಿದ್ದ ಆಕೆಯ ಗುಂಗುರು ಕೂದಲೇ ಅವಳ ಆಗಮನವನ್ನು ಸೂಚಿಸುತ್ತಿತ್ತು, ಆಕೆ ನಿಧಾನಕ್ಕೆ ನಡೆಯುತ್ತಾ ಸೊಂಟವನ್ನು ತೂಗಾಡಿಸುತ್ತಾ ಬಂದು "ಇವತ್ತು ಹೇಗಿದ್ದೀಯಾ?" ಎಂದು ಕೇಳಿ, "ನಾನು ಬಂದಾಗಲೆಲ್ಲ ಎದ್ದು ನಿಲ್ಲುವುದನ್ನು ನಿಲ್ಲಿಸುತ್ತೀಯಾ? ದಯವಿಟ್ಟು" ಎಂದು ರೇಗಿ ಅವನ ಪಕ್ಕದಲ್ಲಿ ಮೆಲ್ಲಗೆ ಕೂರುತ್ತಿದ್ದಳು.

ಅವಳ ದೇಹ ಮಲ್ಲಿಗೆಯ ಸುವಾಸನೆಯನ್ನು ಪಸರಿಸುತ್ತಿತ್ತು. ಅವಳ ಅಪ್ಪ-ಅಮ್ಮ ಯಾಕೆ ಅವಳಿಗೆ ಮಲ್ಲಿಗೆ (ಜಾಸ್ಮಿನ್/ಯಾಸ್ಮಿನ್) ಎಂದು ಹೆಸರಿಡಲಿಲ್ಲವ್ವೋ? ಆ ಸುಂದರ ಹೆಸರು ಅವಳಿಗೆ ಎಷ್ಟು ಹೊಂದುತ್ತಿತ್ತು, ಮಾರ್ಥ ಎಂಬ ಹೆಸರಿಗಿಂತ! ಪಾಠಗಳು ನಡೆಯುತ್ತಿದ್ದರೂ ಆಕೆಯತ್ತ ಹಲವೊಮ್ಮೆ ಬ್ಯಾನರ್ಜಿಯ ಕಣ್ಣುಗಳು ಹೊರಳುತ್ತಿದ್ದವು. ಚಿನ್ನದ ನಾಣ್ಯಗಳನ್ನು ಹೊಂದಿದ್ದ ಬಳೆ ಝುಣ ಝುಣ ಶಬ್ದ ಮಾಡುತ್ತಾ ಬರೆಯುತ್ತಿದ್ದ ಅವಳ ಶಕ್ತಿಯುತ ಕೈಗಳು, ಕಪ್ಪನೆ ತೋಳುಗಳು, ಮಾವಿನ ಹಣ್ಣಿನಂತಿದ್ದ ಅವಳ ಮೊಲೆಗಳು. ಅವಳು ಹೊರ ನಡೆದಾಗ ಅವಳ ಬಳ್ಳಿಯಂತಹ ದೇಹ, ಬಳುಕುವ ನಿತಂಬಗಳನ್ನೇ ಬ್ಯಾನರ್ಜಿ ನೋಡುತ್ತಿದ್ದ. ಅವಳ ಬಗ್ಗೆ ಬ್ಯಾನರ್ಜಿಗಿದ್ದ ಮೆಚ್ಚುಗೆ ವ್ಯಕ್ತಿಗತವಾಗಿರಲಿಲ್ಲ. ಆದರೂ ಬೇರೆ ಹುಡುಗರು "ನೀನು ಅದೃಷ್ಟವಂತಾ ಕಣೋ. ನಿನ್ನೊಬ್ಬನನ್ನೇ ಆಕೆ ಗಮನಿಸೋದು" ಎಂದು ಅವನನ್ನು ಚುಡಾಯಿಸಲಾರಂಭಿಸಿದರು. ಆದರೆ ಬ್ಯಾನರ್ಜಿಗೆ ಅವಳ ಬಗ್ಗೆ ಆ ರೀತಿ ಚಿಂತಿಸಲಾಗಲಿಲ್ಲ, ಅವಳು ಅವನಿಗಿಂತಲೂ ಎತ್ತರವಾಗಿದ್ದಳು. ಗಾಢವಾದ ಬಣ್ಣಗಳ ಬಟ್ಟೆ ಧರಿಸುತ್ತಿದ್ದಳು. ಅವರಿಬ್ಬರೂ ಜೊತೆಯಾಗಿ ನಡೆಯುತ್ತಿದ್ದರೆ ಜನ ನಿಸ್ಸಂದೇಹವಾಗಿ ಆಡಿಕೊಳ್ಳುತ್ತಿದ್ದರು. ಅಷ್ಟಕ್ಕೂ ಯೂರೋಪಿನವರೆಗೂ ಬಂದು ತನಗಿಂತಲೂ ಕಪ್ಪಗಿರುವ ಮಹಿಳೆಯೊಂದಿಗೆ ಚಕ್ಕಂದ ಆಡುವುದು ಹಾಸ್ಯಾಸ್ಪದವಾಗಿರುತ್ತಿತ್ತು!

ಮಾರ್ಥಾಳೆ ಒಂದು ದಿನ ಮೊದಲ ಹೆಜ್ಜೆ ಇಟ್ಟಳು. ಒಂದು ದಿನ ಅವರಿಬ್ಬರೂ ಕ್ಲಾಸಿನಿಂದ ಹೊರನಡೆಯುತ್ತಿದ್ದಾಗ "ಕಾಫಿ ಕುಡಿಯೋಣವೇ?" ಎಂದು ಕೇಳಿದಳು. ಕಾಫಿ ಕುಡಿದ ನಂತರ ವೈಟರ್ ಬಿಲ್‌ನೊಂದಿಗೆ ಬಂದಾಗ ಬ್ಯಾನರ್ಜಿ ತನ್ನ ಜೇಬಿಗೆ ಕೈಹಾಕಿದ. ಆದರೆ ಅವನ ಕೈಯನ್ನು ಗಟ್ಟಿಯಾಗಿ ಹಿಡಿದ ಮಾರ್ಥ "ಬೇಡ. ನಾನು ನಿನ್ನನ್ನು ಕರೆದದ್ದು. ಆದ್ದರಿಂದ ನಾನೇ ಕೊಡುವೆ. ಮುಂದಿನ [illegible] ಅಂದಳು. ವೈಟರ್ [illegible]

ಪ್ರತಿ ದಿನ ಕಾಫಿ ಕುಡಿಯಲು ಹೋಗುವುದು ರೂಢಿಯಾಗಿ ಒಮ್ಮೆ ಈತ, ಮತ್ತೊಮ್ಮೆ ಆಕೆ ಬಿಲ್ ಭರಿಸುತ್ತಿದ್ದರು. ಆದರೂ ಪ್ರತಿ ಬಾರಿ ಬ್ಯಾನರ್ಜಿ ತನ್ನ ಜೇಬಿಗೆ ಕೈ ಹಾಕುವುದು. ಅವಳು ಅವನ ಕೈಹಿಡಿದು ತಡೆಯುವುದು ನಡೆದೇ ಇತ್ತು.

ಮಾರ್ಥ ಎರಡನೆ ಹೆಜ್ಜೆ ಇಟ್ಟಳು. "ಮಾರಾಯ, ನನ್ನನ್ನು ಮಿಸ್ ಸ್ಮಾಕ್ ಎಂದು ಕರೆಯುವುದನ್ನು ನಿಲ್ಲಿಸು. ನನ್ನ ಹೆಸರು ಮಾರ್ಥ. ನಿನ್ನ ಮೊದಲ ಹೆಸರೇನು?" ಎಂದು ಕೇಳಿದಳು.

"ನನ್ನ ನಿಜವಾದ ಹೆಸರು ನಿರೇನ್. ಆದರೆ ಮನೆಯಲ್ಲಿ ಎಲ್ಲರೂ ನನ್ನನ್ನು ಗುಲ್ಲೂ ಅಂತ ಕರೆಯುತ್ತಾರೆ."

"ನಾನೂ ನಿನ್ನನ್ನು ಗುಲ್ಲೂ ಎಂದೇ ಕರೆಯುತ್ತೇನೆ" ಎಂದು ಮಾರ್ಥ ಅವನ ಕೈಯನ್ನು ಬಿಗಿಯಾಗಿ ಒತ್ತಿದಳು.

ತಾನು ಅವಳಿಗೆ ಭಾರತೀಯ ಹೆಸರು ಇಟ್ಟಿರುವುದಾಗಿ ಬ್ಯಾನರ್ಜಿ ಹೇಳಿದ. ಆಗ ಮತ್ತೊಮ್ಮೆ ಅವನ ಕೈಯನ್ನು ಬಿಗಿಯಾಗಿ ಒತ್ತಿದ ಮಾರ್ಥ "ಎಷ್ಟು ಮುದ್ದಾಗಿದೆ. ಮಲ್ಲಿಗೆ ಹೆಸರು ನನಗಿಷ್ಟವಾಯಿತು. ಈ ಜಗತ್ತಿನಲ್ಲಿ ನೀನೊಬ್ಬನೇ ನನ್ನನ್ನು ಮಲ್ಲಿಗೆ ಎಂದು ಕರೆಯತಕ್ಕದ್ದು" ಎಂದು ಹೇಳಿದಳು. ಆಕೆ ಹತ್ತಿರ ಸರಿದಾಗ ಅವಳ ವಾಸನೆ ಅವನನ್ನು ಆವರಿಸಿತು. ಅವನ ಸ್ನೇಹಿತರು ನೀಗ್ರೋಗಳ ವಾಸನೆಯನ್ನು ವಿವರಿಸಿದ್ದಂತೆಯೇ ಅವಳ ವಾಸನೆ ಬೆಚ್ಚಗಿತ್ತು. ಬಿಳಿ ಹೆಂಗಸರು ಸೂಸುವ ಕೆಟ್ಟ ಹಾಲಿನ ವಾಸನೆಗಿಂತಲೂ ಚೆನ್ನಾಗಿತ್ತು.

"ಈಗ ನಾನು ಫ್ರೆಂಚ್ ಭಾಷೆಯನ್ನು ಅಭ್ಯಾಸ ಮಾಡಬೇಕಿದೆ... ನಾನು ಪ್ರೀತಿ, ನಿನ್ನ ಪ್ರೀತಿ, ನಮ್ಮ ಪ್ರೀತಿ....." ಎಂದು ಹೇಳುತ್ತಾ ಆಕೆ ಬೇರೆತ್ತಲೋ ನೋಡಿದಳು.

ಮಾರ್ಥಾಳನ್ನು ಹೇಗೆ ವಶಪಡಿಸಿಕೊಳ್ಳಬಹುದು ಎಂಬ ಹಗಲು ಕನಸಿನಲ್ಲೇ ಬ್ಯಾನರ್ಜಿ ಹಲವಾರು ದಿನಗಳನ್ನು ಕಳೆದ. ಆದರೆ ಆಕೆಯೇ ಹಲವಾರು ಬಾರಿ ಸೂಚನೆಗಳನ್ನು ಕೊಟ್ಟಾಗ ಆತ ಹಿಂಜರಿಯುತ್ತಿದ್ದ ಅವರ ಕೋರ್ಸ್ ಮುಗಿಯಲು ಇನ್ನು ಹತ್ತೇ ದಿನಗಳು ಉಳಿದಿದ್ದವು.

ಮಾರ್ಥ ಅವನಿಗೆ ಮತ್ತೊಂದು ಅವಕಾಶ ನೀಡಿದಳು. "ನಮ್ಮ ಕಾಲೇಜಿನ ಕೊನೆ ವಾರದ ರಜೆಗಳು!" ಎಂದಳು. "ಹೌದು. ಸಮಯ ಎಷ್ಟು ವೇಗವಾಗಿ ಹಾರುತ್ತೆ" ಎಂದ. ಇದೆಲ್ಲದಕ್ಕೂ ಒಂದು ದಿಕ್ಕು ಕಾಣಿಸಬೇಕು ಎಂಬಂತೆ ಆಕೆ "ಬಾ, ಎಲ್ಲಿಗಾದರೂ ಹೋಗೋಣ. ನಾವಿಬ್ಬರು ಮತ್ತೆ ಎಂದೂ ಭೇಟಿ ಆಗದೆ ಇರಬಹುದು. ಬಾ, ದೂರದ ಊರಿಗೆ ಹೋಗೋಣ. ಸೈನ್ ನದಿಯ ದಡದಲ್ಲಿ ಸೂರ್ಯನ ಕಿರಣಗಳಲ್ಲಿ ಸ್ನಾನ ಮಾಡೋಣ" ಎಂದು ಬೇಡಿದಳು.

ಅದು ಬೇಸಿಗೆಯ ಆಗಸ್ಟ್ ತಿಂಗಳ ಒಂದು ದಿನ. ಪ್ಯಾರಿಸ್‌ನಿಂದ ಟ್ರೈನ್ ಹಿಡಿದು ಹೊರಟರು. ಅವರಿದ್ದ ಬೋಗಿ ಹೆಚ್ಚುಕಡಿಮೆ ಖಾಲಿ ಇತ್ತು, ಮಾರ್ಥ ತಂದಿದ್ದ ಅಮೆರಿಕನ್ ಮ್ಯಾಗಜೀನ್‌ಗಳಲ್ಲಿ ಮುಳುಗಿ ಹೋದ ಬ್ಯಾನರ್ಜಿ. ಅವಳು ಕಾಲೇಜಿನ ಬಗ್ಗೆ, ತನ್ನನ್ನು ಚುಡಾಯಿಸಿದ ಹುಡುಗರ ಬಗ್ಗೆ, ಅಪ್ಪ-ಅಮ್ಮನ ಬಗ್ಗೆ ಹರಟುತ್ತಿದ್ದರೂ ಅವನು ಏನನ್ನೂ ಕೇಳಿಸಿಕೊಳ್ಳಲಿಲ್ಲ, ಅವರ ಪ್ರಯಾಣ ಮುಗಿದರೂ ಅವರಿಬ್ಬರು ಒಂದಿಷ್ಟೂ ಹತ್ತಿರವಾಗಿರಲಿಲ್ಲ, ಸೈನ್ ನದಿಯ ದಡಕ್ಕೆ ಬಂದಾಗ ಅಲ್ಲಿ ಜನ ಕಿಕ್ಕಿರಿದಿದ್ದರು.

ಮಾರ್ಥ ತಕ್ಷಣವೇ ಎಲ್ಲರ ಗಮನದ ಕೇಂದ್ರಬಿಂದುವಾದಳು. ಅವಳು ಧರಿಸಿದ್ದ ಎರಡು ಭಾಗಗಳ ಈಜುಡುಗೆ ಅವಳ ಅಂಗ ಸೌಂದರ್ಯವನ್ನು ಎತ್ತಿ ತೋರುತ್ತಿತ್ತು, ಕೆತ್ತಿದಂತಿದ್ದ ಅವಳ ದೇಹದಲ್ಲಿ ಸೌಂದರ್ಯದ ದೇವತೆ ಆರ್ಟೆಮಿಸ್‌ಳ ಶಕ್ತಿ ಮತ್ತು ರಮ್ಯತೆ ಇತ್ತು, ಯುವಕರ ತಂಡವೊಂದು ಅವಳತ್ತ ರಬ್ಬರ್ ಫುಟ್‌ಬಾಲ್ ಅನ್ನು ಎಸೆದರು. ಅದನ್ನು ಹಿಡಿದ ಮಾರ್ಥ ಡಿಸ್ಕಸ್ ಎಸೆಯುವವಳಂತೆ ಅದನ್ನು ಅವರತ್ತ ತೂರಿದಳು. ಆದರೆ ಆ ಚೆಂಡು ಹುಡುಗರ ಮೇಲೆ ಹಾರಿ ದೂರದಲ್ಲಿ [illegible]. ಮಾರ್ಥ ಈಜಿದಳು. [illegible] ಬೋರ್ಡ್ ಏರಿ [illegible]

ಆಟವಾಡಿದಳು. ಮರಳಲ್ಲಿ ಮಲಗಿ ಸೂರ್ಯನ ಕಿರಣಗಳಿಗೆ ತನ್ನ ದೇಹವನ್ನು ಒಡ್ಡಿದಳು. ಆದರೆ ಬ್ಯಾನರ್ಜಿ ಮಾತ್ರ ಅಮೆರಿಕದ ಮ್ಯಾಗಜೀನುಗಳಲ್ಲಿ ಮುಳುಗಿ ಹೋಗಿದ್ದ.

ಪ್ಯಾರಿಸ್‌ಗೆ ಹಿಂದಿರುಗುವ ಟ್ರೈನ್ ಕಿಕ್ಕಿರಿದಿತ್ತು, ಅಕ್ಕಪಕ್ಕ ಕೂರಲೂ ಜಾಗವಿಲ್ಲದಿರುವಷ್ಟು ಜನ ಅದರಲ್ಲಿದ್ದರು, ಕೆಲವೇ ನಿಮಿಷಗಳಲ್ಲಿ ಮತ್ತಷ್ಟು ಜನ ಟ್ರೈನ್ ಹತ್ತಿ ನೂಕು ನುಗ್ಗಲಾಯಿತು. ಜನರ ಹರಟೆ, ನಗು, ಸಿಗರೇಟ್ ಹೊಗೆ ಬೋಗಿಯನ್ನು ತುಂಬಿತು. ಬ್ಯಾನರ್ಜಿಯ ಮೊಣಕಾಲ ಮೇಲಿದ್ದ ಆತನ ಕೈಹಿಡಿದ ಮಾರ್ಥ ಮೆಲ್ಲಗೆ ಅದುಮಿದಳು.

ಪ್ಯಾರಿಸ್ ಹತ್ತಿರವಾಗುತ್ತಿದ್ದಂತೆ ನಿಧಾನವಾಗಿ ಟ್ರೈನ್ ಖಾಲಿಯಾಯಿತು. ಇಳಿಯಬೇಕಿದ್ದ ಸ್ಟೇಷನ್ ಬರುವ ಮುನ್ನ ಟ್ರೈನಿನಲ್ಲಿ ಅವರಿಬ್ಬರೇ ಉಳಿದಿದ್ದರು. ಬ್ಯಾನರ್ಜಿ ಹೊರಗಿದ್ದ ಬೂದುಬಣ್ಣದ ಮನೆಗಳನ್ನು ನೋಡುತ್ತಾ ಕೂತಿದ್ದ. ಆಕೆ ಹಿಡಿದಿದ್ದ ಅವನ ಕೈಯನ್ನು ಬಿಟ್ಟ ಮಾರ್ಥ ಅವನ ಕತ್ತಿನ ಸುತ್ತ ಕೈ ಬಳಸಿ ಅವನ ಕಿವಿಗೆ ಮುತ್ತಿಟ್ಟಳು. ಬ್ಯಾನರ್ಜಿ ತನ್ನ ಕೈಲಿದ್ದ ಮ್ಯಾಗಜೀನ್ ಅನ್ನು ಕೆಳಗಿಟ್ಟು ಅವಳತ್ತ ತಿರುಗಿದ. ಅವನನ್ನು ತನ್ನ ತೋಳುಗಳಲ್ಲಿ ಅಪ್ಪಿದ ಆಕೆ ತನ್ನ ದಪ್ಪ ತುಟಿಗಳನ್ನು ಅವನ ತುಟಿಗಳ ಮೇಲಿಟ್ಟಳು. ಅವನ ಕಣ್ಣು, ಗಲ್ಲ



ಕಿವಿಗಳಿಗೆ ಮುತ್ತಿಟ್ಟಳು. ಅವನ ಕತ್ತನ್ನು ಕಚ್ಚಿದಳು. ಅವಳ ಲಿಪ್‌ಸ್ಟಿಕ್ ಮತ್ತು ಹಲ್ಲುಗಳು ಗುರುತು ಬಿಟ್ಟವು. ಈ ಆಕ್ರಮಣಕ್ಕೆ ಬ್ಯಾನರ್ಜಿ ತನ್ನನ್ನು ಒಪ್ಪಿಸಿಕೊಂಡ. ಅವಳ ಬಿಸಿ ಉಸಿರು ಅವನ ಮುಖ, ಕತ್ತು ಎಲ್ಲೆಡೆ ಹರಡಿ ಅವಳ ನೀಗ್ರೊ ದೇಹದ ಸ್ವೇಚ್ಛಾಚಾರದ ವಾಸನೆಯನ್ನು ಸೂಸುತ್ತಿತ್ತು. ಟ್ರೈನ್ ನಿಧಾನವಾಗಿ ಚಲಿಸುತ್ತಿತ್ತು. ಬ್ಯಾನರ್ಜಿಯನ್ನು ತನ್ನ ಹಿಡಿತದಿಂದ ಮಾರ್ಥ ಬಿಡುಗಡೆ ಮಾಡಿದಳು. ತನ್ನ ಬ್ಯಾಗಿನಿಂದ ಪೇಪರ್ ಕರ್ಚೀಫ್‌ಗಳನ್ನು ತೆಗೆದು "ಏ ಗುಲ್ಲೂ, ನಿನ್ನ ಮುಖವನ್ನು ಒರೆಸಿಕೊ ತಗೊ," ಎಂದಳು. ಬ್ಯಾನರ್ಜಿ ತನ್ನ ತುಟಿ, ಗಲ್ಲ, ಕಣ್ಣು ರೆಪ್ಪೆಗಳ ಮೇಲಿದ್ದ ಅವಳ ಲಿಪ್‌ಸ್ಟಿಕ್ ಗುರುತುಗಳನ್ನು ಒರೆಸಿಕೊಳ್ಳುತ್ತಿರುವಾಗ, ಮಾರ್ಥ ತನ್ನ ತುಟಿಗಳಿಗೆ ಲಿಪ್‌ಸ್ಟಿಕ್ ಹಚ್ಚಿಕೊಂಡು, ಗಲ್ಲಗಳಿಗೆ ಬಣ್ಣ ಲೇಪಿಸಿಕೊಂಡಳು. ಟ್ರೈನ್ ಅವರ ಸ್ಟೇಷನ್ ತಲುಪಿತು.

ವಿದ್ಯಾರ್ಥಿಗಳ ಹೋಟೆಲ್‌ನಲ್ಲಿ ತಿಂಡಿ ತಿನ್ನುತ್ತಾ ಮೈಮುರಿಯುತ್ತಾ, ಆಕಳಿಕೆಯನ್ನು ತಡೆಯುತ್ತಾ "ನನಗೆ [illegible]

...ಗಾಗಿದೆ. ಊದಿದ್ದರಿಂದ, ಆಟ ಆಡಿದ್ದರಿಂದ ಮೈ ...ಣಿವಿದೆ. ನೀನು ನನ್ನ ರೂಮಿಗೆ ಬಂದರೆ ನಿನಗೊಂದು ...ಂಕ್ ಕೊಡುವೆ. ಆಯಾಸವನ್ನು ಅದು ನಿವಾರಿಸುತ್ತೆ" ...ದವಳು

ಆಕೆಯ ರೂಮಿಗೆ ಹೋದರೆ ಏನಾಗಲಿದೆ ಎಂದು ...ರಿತಿದ್ದ ಬ್ಯಾನರ್ಜಿ ಅದನ್ನು ತನ್ನಿಂದ ನಿಭಾಯಿಸಲಾದೀತೆ ...ಎಂದು ಚಿಂತಿಸಿದ.

ಒಂದು ಮಂಚ, ಕುರ್ಚಿ ಮತ್ತು ಟೇಬಲ್ ಇದ್ದ ಪುಟ್ಟ ಕೊಠಡಿ ಅದು. ಟೇಬಲ್ ಮೇಲೆ ಅವಳ ತಂದೆ-ತಾಯಿ, ಇಬ್ಬರು ಅಣ್ಣಂದಿರು ಮತ್ತು ಇಬ್ಬರು ಸಹೋದರಿಯರು ಇದ್ದ ಪುಟ್ಟ ಫೋಟೋ ಇತ್ತು. ಅವರಲ್ಲಿದ್ದ ಎಲ್ಲರೂ ದೊಡ್ಡ ಆಕಾರದವರಾಗಿದ್ದು ಎಲ್ಲರೂ ಕಪ್ಪಗಿದ್ದರು. ನೆಲದ ಮೇಲೆ ಮ್ಯಾಗಜೀನ್‌ಗಳು, ಮಂಚದ ಮೇಲೆ ಬಟ್ಟೆಗಳು ಹರಡಿದ್ದವು.

ಎರಡು ಗ್ಲಾಸ್‌ಗಳಿಗೆ ಸಿಂಜಾನೋ ಸುರಿದ ಮಾರ್ಥ ಒಂದನ್ನು ಬ್ಯಾನರ್ಜಿಗೆ ನೀಡಿದಳು. "ಗುಲ್ಲೂ, ನಮ್ಮಿಬ್ಬರಿಗೂ cheers" ಎಂದು ಹೇಳಿ ಅವನ ಬಾಯಿಗೆ ಮುತ್ತಿಟ್ಟಳು.

"ನಮ್ಮಿಬ್ಬರಿಗೂ cheers ಮಾರ್ಥ" ಎಂದು ಬ್ಯಾನರ್ಜಿ ಹೇಳಿದಾಗ ಅವಳು ಮತ್ತೆ ಮುತ್ತಿಟ್ಟಳು.

ತನ್ನ ಗ್ಲಾಸ್‌ನಲ್ಲಿದ್ದದ್ದನ್ನು ಒಂದೇ ಗುಟುಕಿನಲ್ಲಿ ಮುಗಿಸಿದ ಮಾರ್ಥ ಅದನ್ನು ಕೆಳಗಿಟ್ಟು ಅವನ ಹೆಗಲ ಮೇಲೆ ತನ್ನ ಎರಡೂ ಕೈಗಳನ್ನು ಇಟ್ಟು, "ಗುಲ್ಲೂ ನಾನು ನಿನ್ನನ್ನು ತುಂಬಾ ಮಿಸ್ ಮಾಡುತ್ತೇನೆ" ಎಂದಳು.

"ನಾನೂ ಕೂಡ" ಎಂದ ಬ್ಯಾನರ್ಜಿ ಸ್ವಲ್ಪ ಕಷ್ಟಪಟ್ಟು. ಅವನ ಕಣ್ಣುಗಳು ಅವಳ ಸ್ತನಗಳ ಮೇಲೆ ನೆಟ್ಟಿದವು. "ನೀನು ಏನನ್ನು ಹಾಗೆ ದಿಟ್ಟಿಸಿ ನೋಡುತ್ತಿದ್ದೀಯಾ" ಎಂದು ಮಾರ್ಥ ಚುಡಾಯಿಸಿದಳು ತನ್ನ ಕೈಗಳನ್ನು ಅವನ ಹೆಗಲಿನಿಂದ ತೆಗೆಯದೆ. "ನಿನಗೆ ಗೊತ್ತಾ ಮಾರ್ಥ, ನೀನು ವೀನಸ್‌ಳನ್ನು ನೆನಪಿಸುತ್ತೀಯ. ಸಮುದ್ರದಿಂದ ಎದ್ದು ಬರುತ್ತಿರುವ ವೀನಸ್!"

"ವೀನಸ್‌ಳ ಜನನವನ್ನು ಬಾಟಿಚೆಲ್ಲಿ ಚಿತ್ರಿಸಿದ್ದಾನಲ್ಲ, ಆ ವೀನಸ್‌ಳಾ? ನನಗೆ ಇಲ್ಲಿಯವರೆಗೂ ಬಂದಿರುವ ಮೆಚ್ಚುಗೆಗಳಲ್ಲಿ ಇದೇ ತುಂಬಾ ಸುಂದರವಾದದ್ದು. ಆ ಸಂತೋಷಕ್ಕಾಗಿ ಮತ್ತೊಂದು ಡ್ರಿಂಕ್" ಎಂದು ಹೇಳುತ್ತಾ ಮತ್ತೆ ಎರಡೂ ಗ್ಲಾಸ್‌ಗಳನ್ನು ತುಂಬಿಸಿದಳು. ಅವನ ಹಣೆಯ ಮೇಲೊಂದು ಮುತ್ತಿಟ್ಟು ಹಾಸಿಗೆಯ ಮೇಲೆ ತನ್ನ ಮೈ ಚೆಲ್ಲಿದಳು. ಬ್ಯಾನರ್ಜಿಯ ಕಣ್ಣುಗಳು ಅವಳ ದೇಹದ ಮೇಲೆ ಹರಿದಾಡಿದವು.

"ಈಗ ಏನನ್ನು ದಿಟ್ಟಿಸಿ ನೋಡುತ್ತಿದ್ದೀಯಾ ಎಂದು ಕೇಳಬಹುದಾ? ನಿನ್ನನ್ನು ನೋಡಿದರೆ ನಿನ್ನ ಜೀವನದಲ್ಲೇ ಹುಡುಗಿಯೊಬ್ಬಳನ್ನು ನೀನು ಕಂಡಿಲ್ಲ ಎನ್ನಬಹುದು" ಎಂದಳು.

ತನ್ನ ಗಂಟಲನ್ನು ಸರಿ ಮಾಡಿಕೊಂಡ ಬ್ಯಾನರ್ಜಿ "ಇಷ್ಟು ಸುಂದರವಾದ ಹುಡುಗಿಯನ್ನಂತೂ ಕಂಡಿರಲಿಲ್ಲ" ಎಂದ.

ಇಬ್ಬರೂ ಮೌನ ವಹಿಸಿದರು. ಸ್ವಲ್ಪ ಹೊತ್ತಿನ ನಂತರ ತನ್ನ ಗ್ಲಾಸ್‌ನಲ್ಲಿದ್ದದ್ದನ್ನು ಮುಗಿಸಿದ ಮಾರ್ಥ "ನನ್ನನ್ನು ಮುಟ್ಟುವುದಿಲ್ಲ ಅಂತ ಮಾತು ಕೊಟ್ಟರೆ, ನೀನು ನನ್ನ ನಗ್ನ ದೇಹವನ್ನು ನೋಡಬಹುದು. ನನ್ನ ಫಿಗರ್ ಚೆನ್ನಾಗಿದೆ," ಎಂದಳು.

"ಪ್ರಾಮಿಸ್."

ಹಾಸಿಗೆಯಿಂದ ಎದ್ದ ಮಾರ್ಥ ಲೈಟ್‌ಗಳನ್ನು ಆರಿಸಿದಳು. ಕತ್ತಲೆಯಲ್ಲಿ ಬಟ್ಟೆ ಬಿಚ್ಚುತ್ತಿದ್ದ ಶಬ್ದ ಕೇಳಿಸಿತು. "ಈಗ ನೀನು ಲೈಟ್‌ಗಳನ್ನು ಹಚ್ಚಬಹುದು."

ಬ್ಯಾನರ್ಜಿ ಕುರ್ಚಿಯಿಂದ ಎದ್ದ. ರಸ್ತೆ ದೀಪದ ಬೆಳಕಿನಲ್ಲಿ ಮಬ್ಬುಮಬ್ಬಾಗಿ ಕಾಣಿಸುತ್ತಿದ್ದ ಅವಳ ನಗ್ನ ದೇಹದಿಂದ ಅವನ ಕಣ್ಣು ಅಲುಗಾಡಲಿಲ್ಲ, ನಡುಗುತ್ತಿದ್ದ ಕೈಗಳನ್ನು ಗೋಡೆಯ ಮೇಲೆ ಹರಿಸಿ, ಸ್ವಿಚ್ ಸಿಕ್ಕಾಗ ಲೈಟನ್ನು ಹಚ್ಚಿದ. ಬೆಳಕು ಕೊಠಡಿಯನ್ನು ಆವರಿಸಿತು. ಮಾರ್ಥಳ ದೊಡ್ಡದಾದ ಸ್ತನಗಳು, ಅವುಗಳ ತುದಿಯಲ್ಲಿ ಕಪ್ಪಗಿದ್ದ ತೊಟ್ಟುಗಳನ್ನು ಕಂಡು ವಿಸ್ಮಯಗೊಂಡ. ಕಷ್ಟಪಟ್ಟು ...ದಂತಿದ್ದ ಅವಳ ಕಾಲುಗಳತ್ತ ಅದರ ನಡುವಿದ್ದ ಗುಂಗುರು ಕೂದಲತ್ತ ತನ್ನ ಕಣ್ಣು ಹರಿಸಿದ.

"[illegible]" ಎಂದು ಕೇಳಿದ ಮಾರ್ಥ ತನ್ನ ತಲೆಯ ಮೇಲೆ ಕೈಗಳನ್ನು ಎತ್ತಿ ಹಿಡಿದು ಬ್ಯಾಲೆ ಡ್ಯಾನ್ಸರ್‌ನಂತೆ ತುದಿಗಾಲಲ್ಲಿ ನಿಂತು ಒಂದು ಸುತ್ತು ...ದಳು.

ತನ್ನ ಗಂಟಲಲ್ಲಿ ಸೇರಿದ ಎಂಜಲನ್ನು ನುಂಗಿದ ಬ್ಯಾನರ್ಜಿ "ಸುಂದರವಾಗಿದೆ" ಎಂದು ಹೇಳಿ ಗೋಡೆಗೆ ...ಗಿ ನಿಂತ.

"ಬಾ, ನನಗೆ ಮುತ್ತು ಕೊಡು" ಎಂದು ಮಾರ್ಥ ...ವನತ್ತ ಕೈ ಚಾಚಿದಳು. ಗೊಂದಲದಲ್ಲಿಯೇ ಅವಳತ್ತ ... ಬ್ಯಾನರ್ಜಿ ಅವಳನ್ನು ಅಪ್ಪಿ ಹಿಡಿದ. [illegible] ... ಈಗ... ಬ್ಯಾನರ್ಜಿ ಅವಳನ್ನು ಕಾಮಪರವಶನಾಗಿ ... ಅವಳ ಸ್ತನಗಳು, ಹೊಟ್ಟೆ, ಹೊಕ್ಕಳಿಗೆ ಮುತ್ತಿಟ್ಟ. ... ಒಂದು ಮೇಲಕ್ಕೆತ್ತಿದ ಮಾರ್ಥ

"ಥ್ಯಾಂಕ್ಸ್" ಎಂದು ಆದೇಶಿಸಿದಳು. ತನ್ನ ಕಾಲುಗಳನ್ನು ಅವನ ಸುತ್ತ ಹರಿಸಿ, ಆತನ ತುಟಿಗಳನ್ನು ಹಸಿವೆಯಿಂದ ತನ್ನ ತುಟಿಗಳೊಳಗೆ ಹೀರಿಕೊಂಡಳು. ಬ್ಯಾನರ್ಜಿಯ ದೇಹದಲ್ಲಿ ಉಕ್ಕಿ ಬಂದ ಕಾಮ ಹೊರ ಹರಿಯಿತು. ಅವಳ ತೋಳುಗಳ ಬಂಧನದಲ್ಲೇ ಆತ ಕುಸಿದ. ಆ ಕೂಡಲೇ ಅವಳ ದೇಹದ ವಾಸನೆ ಅವನಲ್ಲಿ ಅಸಹ್ಯ ಹುಟ್ಟಿಸಿತು.

"ಏನಾಯಿತು ಚಿನ್ನಾ" ಎಂದು ಮಾರ್ಥ ಕೇಳಿದಳು.

"ನನ್ನಿಂದ ಆಗಲ್ಲ, ನಾನು ಹೋಗುತ್ತೇನೆ."

"ನಿನಗೆ ಹೋಗಬೇಕನ್ನಿಸಿದರೆ ಹೋಗು" ಎಂದಳು ಮಾರ್ಥ ತನ್ನ ನಗ್ನತೆಯ ಸುತ್ತ ಬಟ್ಟೆ ತೊಡುತ್ತಾ. ಅವಳ ಮುಖ ಗಂಟು ಹಾಕಿದ್ದು ಅವಳು ಸಿಗರೇಟ್ ಹಚ್ಚಿದಾಗ ಗೊತ್ತಾಯಿತು.

"ಅಲ್ಲ ಮಾರ್ಥ, ಅದು ಹಾಗಲ್ಲ, ನಿನಗೆ ಬೇಡ ಅನ್ನಿಸಿದರೆ ನಾವಿಬ್ಬರೂ..." ಎಂದೆಲ್ಲ ಬ್ಯಾನರ್ಜಿ ತಡಬಡಿಸಿದ.


"ಹಾಗೇ ಅಂದುಕೊ."

ಇಬ್ಬರೂ ಮೌನ ವಹಿಸಿ ಕೂತರು. ಬ್ಯಾನರ್ಜಿ ಅವಳ ಕೈ ಹಿಡಿದ. ಅದು ತಣ್ಣಗಿತ್ತು. ಅವಳು ಸಿಗರೇಟ್ ಆರಿಸಿ "ನನಗೆ ಸುಸ್ತಾಗಿದೆ, ಚಿನ್ನಾ" ಎಂದು ಹೇಳುತ್ತಾ ಎದ್ದು ನಿಂತಳು. "ಈ ದಿನ ಚೆನ್ನಾಗಿತ್ತು, Thank you" ಎಂದು ಹೇಳಿ ಅವನ ಹಣೆಗೆ ತಣ್ಣನೆಯ ಮುತ್ತಿಟ್ಟಳು. ಅವನನ್ನು ಕೊಠಡಿಯಿಂದ ಹೊರಗೆ ಕಳುಹಿಸಿ ಬೀಗ ಹಾಕಿಕೊಂಡಳು.

ಅದಾದ ಮೂರು ದಿನಗಳ ನಂತರ ಆಕೆಯನ್ನು ಸೇಂಟ್ ಲಜಾರೆ ಸ್ಟೇಷನ್‌ನಲ್ಲಿ ಬೀಳ್ಕೊಟ್ಟಿದ್ದ. ಇದೆಲ್ಲ ನಡೆದದ್ದು ಮೂವತ್ತು ವರ್ಷಗಳ ಹಿಂದೆ.

ಆದರೂ ಅದೆಷ್ಟೋ ವರ್ಷಗಳ ಕಾಲ ಆ ಕೊಠಡಿಯಲ್ಲಿ ಮಾರ್ಥ ನಗ್ನಳಾಗಿ ನಿಂತಿದ್ದ ಚಿತ್ರ ಅವನಿಗೆ ಉತ್ತೇಜನ ನೀಡಿತ್ತು. ಮಾರ್ಥಾಳ ಎದಿರು ತಾನು ಸೋತಿದ್ದು ಅವನಲ್ಲಿ ಮುಜುಗರ ಉಂಟು ಮಾಡಿದ್ದರೂ, ತನ್ನ ಹೆಂಡತಿಯ ಅವಶ್ಯಕತೆಗಳನ್ನು ಪೂರೈಸಲು ಅವನು ಅದೇ ಮಾರ್ಥಾಳ ನೆನಪುಗಳಿಗೆ ಮೊರೆ ಹೋಗಿದ್ದ. ಹಾಗೆ ನೋಡಿದರೆ ಆತನ ಹೆಂಡತಿ ಮನೋರಮಾ ಬ್ಯಾನರ್ಜಿಗಿಂತಲೂ ಮಾರ್ಥ ಸ್ಟಾರ್ಕ್‌ಳೇ ಆತನ ಕಾಮದ ಕೊಡುಗೆಯನ್ನು ಪಡೆದಿದ್ದು ಎಂದೇ ಹೇಳಬಹುದು.

ಇಲ್ಲಿನ ಸೆಕೆ, ದಿನಕ್ಕೆ ಎಂಟು ಗಂಟೆಗಳಂತೆ ವಾರಕ್ಕೆ ಆರು ದಿನದ ದುಡಿಮೆ ಅವನ ದೇಹದ ಮೇಲೆ ಪರಿಣಾಮ ಬೀರಿತ್ತು. ವರ್ಷಗಳು ಉರುಳಿದಂತೆ, ಚಾಕಲೇಟ್ ಬಣ್ಣದ ಆ ದೇಹ, ಕಪ್ಪು ತೊಟ್ಟುಗಳನ್ನು ಹೊಂದಿದ್ದ ಆ ದೊಡ್ಡ ಸ್ತನಗಳು, ಕಾಲುಗಳ ನಡುವಿನ ಗುಂಗುರ ಕೂದಲ ನೆನಪು ಕೂಡ ಅವನಲ್ಲಿ ಉತ್ತೇಜನ ಮೂಡಿಸುವಲ್ಲಿ ಸೋತಿದ್ದವು. ಕೊನೆ ಬಾರಿ ತನ್ನ ಹೆಂಡತಿ ತನ್ನನ್ನು ಆಶಿಸಿದ್ದು, ಅದನ್ನು ಪೂರೈಸಲು ತಾನು ಹೆಣಗಿದ್ದು.... ನೆನಪಿಸಿಕೊಂಡನು. ಅದಾಗಿ ಹಲವಾರು ತಿಂಗಳು, ಅಥವಾ ಒಂದು ವರ್ಷವೇ ಆಗಿದ್ದಿರಬಹುದು.



# ಕಪ್ಪು ಮಲ್ಲಿಗೆ

"ಚಿಂತಿಸಬೇಡ ಚಿನ್ನಾ, ಎಲ್ಲರಿಗೂ ವಯಸ್ಸಾಗುತ್ತೆ" ಎಂದಿದ್ದಳು ಮಾರ್ಥ.

* * * * * *

ಅಶೋಕಾ ಹೋಟೆಲ್‌ನ ಲಾಬಿಗೆ ಹೋದಾಗ ಯಾವ ನೀಗ್ರೋ ಮಹಿಳೆಯೂ ಕಂಡುಬರಲಿಲ್ಲ. ಅವಳ ರೂಮಿಗೆ ಫೋನ್ ಮಾಡಿದಾಗ "ಒಂದೇ ನಿಮಿಷದಲ್ಲಿ ಕೆಳಗೆ ಬರುತ್ತೇನೆ. ಈಗ ತಾನೇ sight-seeing ನಿಂದ ಹಿಂದಿರುಗಿದೆ. ಬಟ್ಟೆ ಬದಲಾಯಿಸಿ ಬರುತ್ತೇನೆ" ಎಂದು ಆಕೆ ಉತ್ತರಿಸಿದಳು.

ಎಲಿವೇಟರ್‌ಗಳು ಮೇಲಿಂದ ಕೆಳಕ್ಕೆ, [illegible] ... ಕೊನೆಗೂ ಒಂದು ಎಲಿವೇಟರ್ [illegible] ಕೆಳಗಿಳಿಯಿತು. ಏಕೆಂದರೆ ಅದರಲ್ಲಿ ಮಹಿಳೆಯರಿಗೆ ... ಎಲಿವೇಟರ್ ಅನ್ನು ಮಾರ್ಥಾಳ ... ದೇಹ ತುಂಬಿತ್ತು. ಬ್ಯಾನರ್ಜಿ ಆಕೆಯಷ್ಟು ದೊಡ್ಡ ದೇಹದ ಮಹಿಳೆಯನ್ನು ತನ್ನ ಜೀವನದಲ್ಲೇ ನೋಡಿರಲಿಲ್ಲ. ಎಲಿವೇಟರ್‌ನಿಂದ ನೀರಾನೆಯಂತೆ ಹೊರಬಂದ ಮಾರ್ಥ ತನ್ನ ದಪ್ಪನೆ ಕೈಯನ್ನು ಚಾಚಿ "ಚಿನ್ನಾ, ನೀನು ದಪ್ಪಗಾಗಿದ್ದಿ" ಎಂದಳು. ಶಕ್ತಿಯೇ ಉಡುಗಿದಂತಿದ್ದ ಕೈಯನ್ನು ಚಾಚಿದ ಬ್ಯಾನರ್ಜಿ "ಮಾರ್ಥ, ನೀನೂ ಬದಲಾಗಿಲ್ಲ ಎಂದು ಹೇಳಲಾರೆ" ಎಂದು ಉತ್ತರಿಸಿದ್ದ.



ತನ್ನ ಬೊಜ್ಜಿನ ಮೇಲೆ ಕೈ ಇರಿಸುತ್ತಾ "ಏನಿದು? ಹಳೇ ಸ್ನೇಹಿತರನ್ನು ಹೀಗಾ ಭೇಟಿಯಾಗುವುದು?" ಎಂದು ಹೇಳಿ ಜೋರಾಗಿ ನಕ್ಕಳು. "ಸ್ವಲ್ಪ ದಪ್ಪಗಾಗಿದ್ದೇನೆ ಅಲ್ವಾ? ನಾನು ಮನೆಗೆ ಹಿಂದಿರುಗುವ ಮುನ್ನ ಈ ಬೊಜ್ಜನ್ನು ಇಳಿಸುತ್ತೇನೆ. ಒಂದು ನಿಮಿಷ ನನ್ನ ರೂಮಿನ ಕೀಲಿಕೈ ಕೊಟ್ಟು ಬರುತ್ತೇನೆ" ಎಂದು ಹೊರಟಳು.

ಅವಳಲ್ಲಾಗಿದ್ದ ಬದಲಾವಣೆ ಕಂಡು ಬ್ಯಾನರ್ಜಿ ತತ್ತರಿಸಿದ. ಅವಳ ನಿತಂಬಗಳು ಮಾಂಸದ ಮುದ್ದೆಯಂತಾಗಿದ್ದವು. ಅವಳ ಸೊಂಟಕ್ಕೂ, ನಿತಂಬಗಳಿಗೂ, ಸ್ತನಗಳಿಗೂ ವ್ಯತ್ಯಾಸವೇ ಇಲ್ಲವೆನ್ನುವಂತೆ ಊದಿಕೊಂಡಿದ್ದವು. ಹಿಂದೊಮ್ಮೆ ಉದ್ದವಾಗಿದ್ದ ಅವಳ ಕತ್ತಿನ ಸುತ್ತಲೂ ಮಾಂಸ ತುಂಬಿಕೊಂಡಿತ್ತು. ಕೆತ್ತಿದಂತಿದ್ದ ಅವಳ ಕಾಲುಗಳು ಕೂಡ ಆನೆಕಾಲುಗಳಂತಾಗಿದ್ದವು.

ಬ್ಯಾನರ್ಜಿಯ ಕೈಯಲ್ಲಿ ತನ್ನ ಕೈ ಇರಿಸಿದ ಮಾರ್ಥ ಹೊರ ನಡೆದಳು. ಸೂಟ್‌ಕೇಸ್‌ಗಳನ್ನು ಎತ್ತಿಡುವ ಹುಡುಗರು ಅವರಿಬ್ಬರನ್ನು ನೋಡಿ ಮುಸಿಮುಸಿ ನಕ್ಕರು. ಬಾಗಿಲನ್ನು ತೆರೆದವನು ಕೂಡ ವಾಚ್‌ಮ್ಯಾನ್‌ಗೆ ಅದೇನೋ ಹೇಳಿ ನಕ್ಕನು. ಬ್ಯಾನರ್ಜಿಯ ಪುಟ್ಟ ಫಿಯೆಟ್ ಕಾರಿನ ಮುಂದಿನ ಸೀಟಿಗೆ ಕಷ್ಟಪಟ್ಟು ಹತ್ತಿದ ಮಾರ್ಥ "ದೊಡ್ಡ ಆಕೃತಿಯ ಅಮೆರಿಕನ್ನರಿಗಲ್ಲ ಈ ಕಾರ್" ಎಂದು ನಕ್ಕಳು.

ಬ್ಯಾನರ್ಜಿ ಮನೆಯಲ್ಲಿ ಆಕೆಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಆತಿಥ್ಯ ದೊರಕಿತು. "ಏ ಕಳ್ಳಾ, ನೀನು ಎಲ್ಲಿಂದ ಇಷ್ಟು ಸುಂದರ ಹೆಂಡತಿಯನ್ನು ಪಡೆದೆ" ಎಂದು ಆಕೆ ಕೇಳಿದ ಪ್ರಶ್ನೆಯಿಂದಾಗಿ ಅವಳು ಇನ್ನಷ್ಟೂ ಹತ್ತಿರವಾದಳು.

ಮನೆಯವರಿಗೆಲ್ಲ ಪುಟ್ಟ ಉಡುಗೊರೆಗಳನ್ನು ನೀಡಿದಳು: ಬ್ಯಾನರ್ಜಿ ಮಗಳಿಗೊಂದು ಲಿಪ್‌ಸ್ಟಿಕ್, ಮಗನಿಗೊಂದು ಪೆನ್, ಹೆಂಡತಿಗೊಂದು ಪೌಡರ್. ಶ್ರೀಮತಿ ಬ್ಯಾನರ್ಜಿಯ ನಡವಳಿಕೆ ತಿರಸ್ಕಾರದಿಂದ ಕೂಡಿತ್ತು. ಹಿಂದೊಮ್ಮೆ ತನ್ನ ಗಂಡ ಈಕೆಗಾಗಿ ಹಂಬಲಿಸಿದ್ದರೂ, ಈಗ ಆಕೆಯಲ್ಲಿ ಯಾವ ರೀತಿಯ ಆಕರ್ಷಣೆ ಉಳಿದಿಲ್ಲದಿರುವುದು ಬ್ಯಾನರ್ಜಿ ಹೆಂಡತಿಗೆ ಸಂತಸ ತಂದಿತ್ತು. ಊಟ, ಹರಟೆ ಎಲ್ಲವೂ ಸರಾಗವಾಗಿ ಮುಗಿಯಿತು.

ತನ್ನ ಗಡಿಯಾರದತ್ತ ನೋಡಿದ ಮಾರ್ಥ, "ನಾನು ಮುಂಜಾನೆ ಎದ್ದು ಪ್ಲೇನ್ ಹಿಡಿಯಬೇಕು. ನಾನು ಹೋಟೆಲ್‌ಗೆ ಹಿಂದಿರುಗುತ್ತೇನೆ. ಒಂದು ಟ್ಯಾಕ್ಸಿ ಕರೆಯುತ್ತೀರಾ?" ಎಂದಳು.

"ಬೇಡ ನಮ್ಮ ಮನೆಯವರೇ ನಿಮ್ಮನ್ನು ವಾಪಸ್ಸು ಬಿಡುತ್ತಾರೆ" ಎಂದು ಶ್ರೀಮತಿ ಬ್ಯಾನರ್ಜಿ ಒತ್ತಾಯ ಮಾಡಿದರು. ಆಕೆ ಆಕರ್ಷಕ ಮಹಿಳೆಯಾಗಿದ್ದರೆ ತಾನೂ ಜೊತೆಗೆ ಬರುತ್ತೇನೆಂದೋ, ಅಥವಾ ಮಕ್ಕಳಿಗೆ "ಸ್ವಲ್ಪ [illegible]

"ಆಕೆ ಕಣ್ಣ [illegible] ... ಉತ್ತರಿಸಿದ

ಹೋಟೆಲ್ ತಲುಪಿದಾಗ ಆತ ದಪ್ಪನಾಗಿದ್ದ ಅವಳ ಕೈ ಹಿಡಿದು [illegible] ... ಮಾರ್ಥ "ನಿನಗೆ ಒಂದು ಡ್ರಿಂಕ್ ಬೇಕಿದ್ದರೆ ನನ್ನ ರೂಮಿನಲ್ಲಿ ಕೊಡುವೆ. ... [illegible] ಎಂದಳು.

"ಹಳೇ ಕಾಲದ ನೆನಪಿಗಾಗಿ" ಎಂದ ಬ್ಯಾನರ್ಜಿ ಅವಳೊಂದಿಗೆ ಎಲಿವೇಟರ್ ಏರಿದ. ಆಕೆಯನ್ನು ತನ್ನ ಮನೆಯವರೆಲ್ಲ ತಿರಸ್ಕರಿಸಿದ ರೀತಿ ನೋಡಿ ತಾನು ಆಕೆಯನ್ನು ಚೆನ್ನಾಗಿ ನಡೆಸಿಕೊಳ್ಳಬೇಕು ಅನ್ನಿಸಿತು.

ಬಾತ್‌ರೂಮಿನಿಂದ ಎರಡು ಗ್ಲಾಸ್‌ಗಳನ್ನು ತಂದ ಮಾರ್ಥ ಬೀರುವಿನಿಂದ ವಿಸ್ಕಿ ಬಾಟಲನ್ನು ತೆಗೆದಳು. ಅರ್ಧ ಖಾಲಿಯಾಗಿದ್ದ ಅದನ್ನು ನೋಡಿ "ಇದನ್ನು ಮುಗಿಸಿದರೆ ಒಳ್ಳೆಯದು. ಇದನ್ನು ಯಾರು ಹೊತ್ತುಕೊಂಡು ಹೋಗಕ್ಕಾಗುತ್ತೆ. ನಿನಗೆ ನೀರು ಬೇಕೋ ಅಥವಾ ಸೋಡನೊ?" ಎಂದು ಕೇಳಿದಳು.

"ಸ್ವಲ್ಪ ಸೋಡಾ, ಪ್ಲೀಸ್". ಎದ್ದು ತನ್ನ ಗ್ಲಾಸನ್ನು ಪಡೆದ ಬ್ಯಾನರ್ಜಿ ಅದನ್ನು ಆಕೆಯ ಗ್ಲಾಸಿಗೆ ತಾಕಿಸುತ್ತಾ ಅವಳ ತುಟಿಯ ಮೇಲೆ ತನ್ನ ತುಟಿಯನ್ನು ಮೆತ್ತಗೆ ಒತ್ತಿದ.

"ಇದು ಎಂದೋ ನಡೆದ ಘಟನೆಯನ್ನು ನೆನಪಿಸುತ್ತಿದೆ. ಆದರೆ ಅನಂತರ ಆದದ್ದನ್ನಲ್ಲ, ಈಗ ಅಂತಹದಕ್ಕೆಲ್ಲ ನಾನು ತುಂಬಾ ದಪ್ಪಗಾಗಿದ್ದೇನೆ" ಎಂದು ಮಾರ್ಥ ನಕ್ಕಾಗ ಅವಳ ದವಡೆ ಕೆಂಪು ರಬ್ಬರ್‌ನಂತೆ ಕಂಡವು. "Thank you, ಚಿನ್ನಾ. ನಾನು ಇಷ್ಟು ದೂರ ಬಂದದ್ದೂ ಸಾರ್ಥಕವಾಯಿತು. ನೀನು ಎಂದಾದರೂ ಮತ್ತೆ ನನಗೆ ಮುತ್ತಿಡುತ್ತೀಯೋ ಇಲ್ಲವೋ ಅಂದುಕೊಂಡಿದ್ದೆ."

ಇನ್ನೊಂದು ಡ್ರಿಂಕ್ ಸುರಿದುಕೊಂಡ ಆಕೆ ಒಂದು ಕುರ್ಚಿಯಲ್ಲಿ ಕುಸಿದು ಬ್ಯಾನರ್ಜಿ ತನ್ನ ಮುಂದಿದ್ದ ಕುರ್ಚಿಯಲ್ಲಿ ಕೂರಬೇಕೆಂದು ಸನ್ನೆ ಮಾಡಿದಳು. ಬ್ಯಾನರ್ಜಿಯನ್ನು ಬೇಕಂತಲೇ ದೂರವಿಡುವಂತೆ ಆತನಿಗೆ ಅಲ್ಲಿ ಕೂರಲು ಹೇಳಿದಂತಿತ್ತು. ಆಕೆಯ ಕತ್ತಿನಲ್ಲಿ ನೇತಾಡುತ್ತಿದ್ದ ಚಿನ್ನದ ಚೈನಿನಲ್ಲಿನ ಕ್ರಾಸ್‌ಅನ್ನು ಬ್ಯಾನರ್ಜಿ ಗಮನಿಸಿದ. ಪ್ರಾಯಶಃ ಆಕೆ ಈಗ ಧರ್ಮದಲ್ಲಿ ಆಸಕ್ತಿ ಹೊಂದಿರಬಹುದು. ಅಥವಾ ತನ್ನಂತೆ ವಯಸ್ಸಾಗಿರುವುದರಿಂದ ಲೈಂಗಿಕತೆಯಲ್ಲಿ ಆಸಕ್ತಿ ಕಳೆದುಕೊಂಡಿರಬಹುದು ಎಂದು ಅನಿಸಿತು ಅವನಿಗೆ. ಬ್ಯಾನರ್ಜಿ ನಿಧಾನವಾಗಿ ತನ್ನ ವಿಸ್ಕಿ ಹೀರಿದ. ಆಕೆಗೆ ಮುಖ ಕೊಟ್ಟು ಮಾತನಾಡುವುದು ಅವನಿಂದ ಸಾಧ್ಯವಾಗಲಿಲ್ಲ. ಆದರೂ ತನಗಾಗಿದ್ದ ನಿರಾಶೆಯನ್ನು ತೋರಿ ಆಕೆಯನ್ನು ನೋಯಿಸಬಾರದೆನಿಸಿತು. ತನಗೆ ಮತ್ತೊಂದು ಡ್ರಿಂಕ್ ಸುರಿದುಕೊಂಡು ಅವಳು ಕೂತಿದ್ದ ಕುರ್ಚಿಯ arm rest ಮೇಲೆ ಕೂತ. ಅವಳ ಹಣೆ ಮೇಲೆ ಕೈ ಇಟ್ಟ. ಅದು ಜಿಡ್ಡು ಜಿಡ್ಡಾಗಿತ್ತು. ಅವಳ ಕೂದಲಲ್ಲಿ ಕೈಯಾಡಿಸಲು ನೋಡಿದ. ಅದು ವೈರ್ ಮೆಶ್‌ನಂತಿತ್ತು. ಅವಳ ಮುಖವನ್ನು ನೋಡಿದ. ಅವಳ ಕಣ್ಣು ಮುಚ್ಚಿಕೊಂಡು ನಿರಾಸಕ್ತಳಂತೆ ಕೂತಿದ್ದಳು. ಬ್ಯಾನರ್ಜಿ ಅವಳ ಮುಖವನ್ನು ಮೇಲಕ್ಕೆತ್ತಿ ಮೆತ್ತಗೆ ಅವಳ ತುಟಿಗಳಿಗೆ ಮುತ್ತಿಟ್ಟ. ಅವಳು ತನ್ನ ತುಟಿಗಳನ್ನು ತೆರೆಯದೆ ಸುಮ್ಮನಿದ್ದಳು. ಆಕೆ ತನ್ನ ಸ್ವಾಭಿಮಾನವನ್ನೇ ಕಳೆದುಕೊಂಡಿರುವುದು ಬ್ಯಾನರ್ಜಿಗೆ ಗೊತ್ತಾಯಿತು. ಅವಳ ತೊಡೆಗೆ ಜಾರಿದ ಬ್ಯಾನರ್ಜಿ ಅವಳಿಗೆ ಮೃದುವಾಗಿ ಮುತ್ತಿಟ್ಟ.

[illegible] ... ತನ್ನ ಬೆನ್ನ ಮೇಲೆ [illegible] ... ಮಾರ್ಥ ಯಾವ [illegible] ... ತನ್ನ [illegible]

# ಸಂವಿಧಾನದ ಸಮಾಧಿ

### ಆದಿಪರ್ವ

ಲಾಂಗ್ ಲಕ್ಕ ಉರುಫ್ ಲಕ್ಕೇಗೌಡರ ನಸೀಬೇ ಖೋಟಾ. ನಾನ ಸಭೆ ಚುನಾವಣೆ ಬಂದು ಮನೆಯ ಬಾಗಿಲಲ್ಲಿ ನಿಂತಿದೆ. ಅವರು ಏನೇನೋ ಕನಸು ಕಂಡಿದ್ದರು. ನಾಸಾಭೆ ಸದಸ್ಯ... ಆಮೇಲೆ ಶಾಸಕ.... ಮಂತ್ರಿ.. ಹೀಗೆ ಏನೇನೋ ಆಗಬೇಕು ಎಂದು ಇದ್ದರು. ಇವರ ಹಾಳಾದ ಕಾನೂನು ಅಡ್ಡ ಬಂದಿತು. ಒಟ್ಟಿನಲ್ಲಿ ಅವರ ಗ್ರಹಗತಿಗಳೇ ಸರಿ ಇರಲಿಲ್ಲ. ಹಾಗಂತ ಸುಮ್ಮನೆ ಕೂರುವಂತೆಯೂ ಇರಲಿಲ್ಲ. ಈ ಸಮಸ್ಯೆಗೆ ಪರಿಹಾರ ಹುಡುಕಲೇಬೇಕೆಂದು ಶಾಸ್ತ್ರಿಗಳನ್ನು ಕಂಡರು. ಪಾಪ ಅವರು ಲಕ್ಕಣ್ಣ ಚುನಾವಣೇಲಿ ಜಯಭೇರಿ ಹೊಡೆಯಲಿ ನಂಬಿಕೆ ಇತ್ತು. ಹೋಮ ಮಾಡಿ ಗ್ರಹಗತಿ ಬದಲಾಯಿಸುತ್ತಾರೆ ಎಂಬುದರಲ್ಲಿ ಸಂಶಯವೇ ಇರಲಿಲ್ಲ. ಆದರೆ ಈ ಗ್ರಹಗತಿಗಳು ಕಾನೂನನ್ನು ಹೇಗೆ ಬದಲಾಯಿಸುತ್ತವೆ ಎಂಬುದೇ ಅವರ ಸಮಸ್ಯೆ ಆಗಿತ್ತು. ಯಾಕೆಂದರೆ ಯಾವುದೋ ಮರ್ಡರ್ ಕೇಸಲ್ಲಿ ಶಿಕ್ಷೆಗೆ ಒಳಗಾಗಿದ್ದು ಪೆರೋಲ್ ಮೇಲೆ ಹೊರಬಂದಿದ್ದರು ಅವರು. ಕ್ರಿಮಿನಲ್‌ಗಳು ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂಬ ಕಾನೂನೇ ಅವರಿಗೆ ತೊಡಕಾಗಿತ್ತು.

ಲಾಂಗ್ ಲಕ್ಕ ಮಹಾಶಯರು ಶಾಸ್ತ್ರಿಗಳ ಅಂತರ್ ದೃಷ್ಟಿಗೆ ಹೇಗೆ ಗೋಚರಿಸುತ್ತಿದ್ದರೋ ತಿಳಿಯದು. ಆದರೆ ಬಹಿರ್‌ದೃಷ್ಟಿಗೆ ಅವರು ನಿರಪರಾಧಿಯಂತೆ





ತೋರುತ್ತಿದ್ದರು. ಲಕ್ಕಣ್ಣ ಏನು ಮಹಾ ಅಪರಾಧ ಮಾಡಿರುವುದು? ಮಾಂಜ ಮಾಡಿದನಾ? ಗುನ್ನ ಹೊಡೆದನಾ? ಇಲ್ಲವಲ್ಲ. ಏನೋ ಒಂದು ಡಿಚ್ಚ ಹೊಡೆದ. ಆ ಪರಮಾತ್ಮ ಅವನ ಆಯುಷ್ಯ ಇಷ್ಟೇ ಅಂತ ಬರೆದಿದ್ದ. ಅವನು ಸ್ವಾಮಿ ಪಾದ ಸೇರಿಕೊಂಡ. ಇದೇ ಮಹಾ ಅಪರಾಧಾನಾ ಎಂಬುದು ಅವರ ಬಹಿರಂಗ ತರ್ಕವಾಗಿತ್ತು.

... ಅಂತ ಪ್ರತಿನಿತ್ಯ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುತ್ತಿದ್ದಾರಂತೆ. ಹಾಗಂತ ಅವರೇ ಹೇಳಿದರು. ಗ್ರಹಗತಿಗಳ ಬಗ್ಗೆ ಅವರು ಭಯಾನೆ ಬೀಳಲಿಲ್ಲ. ಇವತ್ತೇ ಒಂದು ಹೋಮ ಮಾಡಿ ವಿರೋಧವಾಗಿರುವ ಗ್ರಹಗಳನ್ನು ಪರವಾಗಿರುವಂತೆ ತಿರುಗಿಸೋಣ ಅಂತ ಭರವಸೆ ನೀಡಿದರು.

ಶಾಸ್ತ್ರಿಗಳಲ್ಲಿ ಲಾಂಗ್ ಲಕ್ಕ ಅವರಿಗೆ ವಿಶೇಷ ಗೌರವ,

ಶಾಸ್ತ್ರಿಗಳ ತರ್ಕ ಒಂದು ಕಡೆ ಇರಲಿ. ಪ್ರಜಾಪ್ರಭುತ್ವ ಅಂದ ಮೇಲೆ ಕಾನೂನು ಅಂತ ಇರಬೇಕು. ಅದು ಇದ್ದರೇ ಅದಕ್ಕೊಂದು ಇದು. 'ಇಲ್ಲಿ ಉಗುಳಬಾರದು' ಅಂತ ಬೋರ್ಡ್ ಹಾಕಿರ್ತಾರೆ. ಅದನ್ನು ಓದಿ ಜನ ಏನೋ ನೆನಪಾದವರಂತೆ ಅದರ ಕೆಳಗೆ ಕ್ಯಾಕರಿಸಿ ಉಗೀತಾರೆ. 'ಹಿರಿಯ ನಾಗರೀಕರಿಗೆ' ಅಂತ ಬಸ್‌ನಲ್ಲಿ ಬರ್ದಿರ್ತಾರೆ. ಅದರ ಕೆಳಗೆ ಸೀಟನಲ್ಲಿ ದಢೂತಿ ಕಾಲೇಜು ಹುಡುಗರು ಕುಳಿತು ವಯಸ್ಸಾದವರನ್ನು ಅಪಹಾಸ್ಯ ಮಾಡ್ತಿರ್ತಾರೆ. ಸರ್ಕಾರಿ ಕಚೇರಿಗಳಲ್ಲಿ 'ಇಲ್ಲಿ ಲಂಚ ನೀಡುವುದು ಪಡೆಯುವುದು ಅಪರಾಧ' ಅಂತ ಬರೆದಿರುತ್ತೆ. ಹಾಗಾದರೆ ಅಲ್ಲಿ ಭ್ರಷ್ಟಾಚಾರ ನಡೆಯುವುದೇ ಇಲ್ಲ ಅಂತ ಅರ್ಥನಾ. ಪ್ರಜಾಪ್ರಭುತ್ವ ಅಂದ ಮೇಲೆ ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು. ನೈರ್ಮಲ್ಯದ ಕಡೆ ಗಮನವೇ ಇಲ್ಲ ಅಂತ


ಎಚ್.ಎಲ್.ಕೇಶವಮೂರ್ತಿ

ಕೆಲವರು ಕೂಗಾಡ್ತಾರೆ. ಅದಕ್ಕೆ ಏನು ಮಾಡುತ್ತೆ ಸರ್ಕಾರ... 'ಇಲ್ಲಿ ಉಗುಳಬೇಡಿ' ಅನ್ನೋ ಬೋರ್ಡ್ ತಗಲಿಸುತ್ತೆ. ವಯಸ್ಸಾದವರ ಬಗ್ಗೆ ಸರ್ಕಾರಕ್ಕೆ ಕಾಳಜೀನೆ ಇಲ್ಲ ಅಂತ ಕೆಲವರು ಮುಷ್ಕರ ಹೂಡ್ತಾರೆ. ಅವರ ಬಾಯಿ ಬಂದ್ ಮಾಡೋಕೆ 'ಹಿರಿಯ ನಾಗರೀಕರಿಗೆ' ಅಂತ ಬಸ್ಸಿನ ಒಳಗೆ ಬರೆಸುತ್ತೆ. 'ಭ್ರಷ್ಟಾಚಾರ ನಿರ್ಮೂಲನಾ ಸಮಿತಿ' ಅಂತ ಕೆಲವರು ಮಾಡಿಕೊಳ್ತಾರೆ. ಪಾಪ ಅವರಿಗೆ ಯಾಕೆ ತೊಂದರೆ ಕೊಡಬೇಕು ಅಂತ ಕಚೇರಿಗಳಲ್ಲಿ 'ಇಲ್ಲಿ ಲಂಚ ನೀಡುವುದು ಪಡೆಯುವುದು ಅಪರಾಧ' ಅಂತ ಬರೆಸುತ್ತೆ. ಕಾನೂನಿನ ಪಾಡಿಗೆ ಕಾನೂನು ಇದೆ. ನಮ್ಮ ಪಾಡಿಗೆ ನಾವು ಇಷ್ಟ ಬಂದ ರೀತಿ ಬದುಕುತ್ತಾ ಇದ್ದೀವಿ.

ಗ್ರಹಗತಿಗಳನ್ನೇ ತಮ್ಮ ಹಾದಿಗೆ ತರುವ ಶಾಸ್ತ್ರಿಗಳಿಗೆ ಈ ಕಾನೂನು ಅಂತ ಇರೋದು ದುರ್ಬಲರಿಗೆ, ಇದನ್ನು ಮಾಡಿರೋರು ದಡ್ಡರಲ್ಲ, ಲಾಂಗ್ ಲಕ್ಕ ಅವರಂತಹವರಿಗೆ ಅನುಕೂಲ ಆಗಲಿ ಅಂತ ಅದರಲ್ಲಿ ಜಾರಿಕೊಳ್ಳುವ ಹಾದೀನೂ ಇಟ್ಟಿರುತ್ತಾರೆ ಎಂಬುದು ತಿಳಿಯದ ವಿಷಯವೇನೂ ಅಲ್ಲ. ಪಾತಕಿ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಅನ್ನುತ್ತೆ ಕಾನೂನು. ಆದರೆ ಪಾತಕಿ ಹೆಂಡತಿ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂದು ಹೇಳುವುದಿಲ್ಲವಲ್ಲ, ನಿನ್ನ ಹೆಂಡತಿಯನ್ನು ನಿಲ್ಲಿಸು ನೀನು ಗೆಲ್ಲು ಎಂಬ ಗುರುಗಳ ಮಾತಿಗನು ಗುಣವಾಗಿ ಲಾಂಗ್ ಲಕ್ಕ ಅವರ ಧರ್ಮಪತ್ನಿ ಚುನಾವಣಾ ಗಂಧಗಾಳಿ ಗೊತ್ತಿಲ್ಲದ ಪಾರ್ವತಮ್ಮ ಚುನಾವಣಾ ಅಭ್ಯರ್ಥಿಯಾಗಿ ಘೋಷಣೆ ಆಯಿತು.

### ಚುನಾವಣಾ ಪರ್ವ

ಚುನಾವಣೆ ಪ್ರಚಾರ ಬಿರುಸಿನಿಂದ ಕೂಡಿದೆ. ಎಲ್ಲ ಕಡೆ ಬ್ಯಾನರ್, ಪೋಸ್ಟರ್ ಮೆರದಾಡುತ್ತಿದೆ. ಅವುಗಳಲ್ಲಿ ಲಾಂಗ್ ಲಕ್ಕ ಕೈ ಮುಗಿದು ನಿಂತಿರುವ ಚಿತ್ರ ಬೃಹದಾಕಾರವಾಗಿದೆ. ಲಕ್ಕೇಗೌಡರ ಪತ್ನಿ ಪಾರ್ವತಮ್ಮಗೆ ಮತನೀಡಿ ಎಂಬ ಬರಹ ಇದ್ದು ಲಕ್ಕೇಗೌಡರ ಹೆಸರು ಎದ್ದು ಕಾಣುತ್ತಿದ್ದು ಪಾರ್ವತಮ್ಮನ ಹೆಸರು ಕಂಡೂ ಕಾಣದಂತೆ ಇದೆ.

ಲಾಂಗ್ ಲಕ್ಕ ಅವರು ವಿನಯವೇ ಮೈವೆತ್ತಂತೆ ಹಾದಿಯಲ್ಲಿ ಕೈಮುಗಿಯುತ್ತಾ ಹೋಗುತ್ತಿದ್ದರೆ... ಆ ಮಹಾಶಯರ ಶಿಷ್ಯವೃಂದ 'ಲಕ್ಕಣ್ಣನವರಿಗೆ ಜಯವಾಗಲಿ', 'ಲಕ್ಕಣ್ಣಾಕಿ...ಜೈ', 'ಲಕ್ಕಣ್ಣನವರಿಗೆ ಮತನೀಡಿ', 'ಲಕ್ಕಣ್ಣನವರಿಗೆ... ನಿಮಗೆ ಹಿತ' ಮುಂತಾದ ಘೋಷಣೆಗಳನ್ನು ಮುಗಿಲು ಮುಟ್ಟುವಂತೆ ಕೂಗುತ್ತಿವೆ. ಯಾವುದೋ ದಿಗ್ವಿಜಯಕ್ಕೆ ಹೊರಬಂದಿರುವ ಈ ಸೈನ್ಯದ ಅಧಿಕಾರವನ್ನು ಲಾಂಗ್ ಲಕ್ಕ ಮಹಾಶಯರು ಹೊತ್ತಿರುವಂತೆ ಭಾಸವಾಗುತ್ತಿತ್ತು. ಅವರು ಒಂದು ಮನೆಯ ಮುಂದೆ ನಿಂತು ಕರೆಯುತ್ತಿದ್ದಾರೆ... 'ಸಿದ್ದಣ್ಣಾ... ಸಿದ್ದಣ್ಣಾ....'

'ಯಾರೋ ಬಂದೇ'...ಒಳಗಿನ ದನಿ ಹೊರಬಂದದ್ದೇ ತನ್ನ ಮನೆಯ ಬಾಗಿಲಿಗೇ ಬಂದು ನಿಂತಿರುವ ಮಹಾಶಯರನ್ನು ಕಂಡು ಗಾಬರಿಯಿಂದ 'ಅಣ್ಣಾ ನೀನು... ಹೇಳಿಕಳ್ಸಿದ್ರೆ ನಾನೇ ಬರ್ತಿದ್ದೆ... ಏನಿಷ್ಟು ದೂರ' ಎಂದು ಬಡಬಡಿಸಿತು.

'ಚುನಾವಣೆ ಬಂತಲ್ಲಪ್ಪಾ.'

'ನೀನು ನಿಂತಿದ್ದೀಯಾ ಅಣ್ಣ.'

'ನನ್ನ ಹೆಂಡ್ತಿ ನಿಂತವ್ಳೆ.'

'ನಿನ್ನ ಹೆಂಡ್ತೀನ ಅಣ್ಣ?'

'ಹೂಂ ನನ್ನ ಹೆಂಡ್ತಿ ಪಾರ್ವತಿ.'

'ಪಾರ್ವತಮ್ಮನಾ.... ಅದ್ಯಾರೋ ಲಕ್ಕೇಗೌಡ ಅನ್ನೋರ ಹೆಂಡತಿಯಂತೆ.'

ನಂಬಿಕೆ ಬರುವುದು ಹೇಗೆ? ಕರಪತ್ರ ನೀಡಿದರು ಮಹಾಶಯರು.

'ಇದರಲ್ಲೂ ಹಂಗೇ ಅದಲ್ಲ ಅಣ್ಣ.'

'ಹೆಂಗದೋ?'

'ಅದೇ ಲಕ್ಕೇಗೌಡರ ಹೆಂಡತಿ ಅಂತಾವ.'

'ನಾನೇ ಕಣೊ ಸಿದ್ದಣ್ಣ ಲಕ್ಕೇಗೌಡ ಅಂದರೆ.'

'ಹೆಹೆಹೆ... ತಮಾಸಿ ಮಾಡ್ತಿದಿಯಾ ಅಣ್ಣ.'

'ಇಲ್ಲಾ ಸಿದ್ದಣ್ಣ ಲಕ್ಕೇಗೌಡ ಅಂದರೆ ನಾನೇಯ.'

'ಹೆಸರು ಬದಲಾಯಿಸಿಕೊಂಡು ಬಟ್ಟ ಅಣ್ಣ.'

'ಇಲ್ವಲ್ಲ?'

'ಮಂತೆ...ಮಂತೆ ನಿನ್ನ ಹೆಸರು ಲಾಂಗ್ ಲಕ್ಕ ಅಲ್ವ ಅಣ್ಣ... ನಾವೆಲ್ಲ ಹಂಗೇ ತಿಳಿಕೊಂಡಿದ್ದೀವಪ್ಪ.. ಲಕ್ಕೇಗೌಡ ಅಂದರೆ ನೀನು ಅಂತ ಯಾರಿಗೂ ತಿಳಿಯಾಕಿಲ್ಲ ಬುಡು.. ಲಾಂಗ್ ಲಕ್ಕ ಅಂದರೆ ಪರ್ ಅಂತ ಗೊತ್ತಾಯ್ತದೆ.'

ಲಾಂಗ್ ಲಕ್ಕ ಉರುಫ್ ಲಕ್ಕೇಗೌಡರಿಗೆ ಜ್ಞಾನೋದಯ ಆಯಿತು. ಇದೇ ಹೆಸರಿದ್ದರೆ ಚುನಾವಣೆಯಲ್ಲಿ ಸೋಲುಂಟಾಗಬಹುದು ಎಂಬ ಭಯ ಕೋಪಕ್ಕೆ ತಿರುಗಿತು. ತನ್ನ ಪಟಾಲಂ ಕಡೆ ತಿರುಗಿ 'ಎಯ್ ನನ್ ಮಕ್ಳಾ ನಾನು ಬದ್ಕಂಡೆ... ಲಕ್ಕೇಗೌಡ ಅಂದರೆ

## ಕತ್ತಲೆಯೇ ಸರಿಯಾದ ಸಂಗಾತಿ

ಪ್ರಿಯೆ,
ಕಿಟಕಿ ಬಾಗಿಲುಗಳನ್ನು
ಭದ್ರವಾಗಿ ಮುಚ್ಚಿಬಿಡು
ನಿಟ್ಟುಸಿರೂ ಹೊರಗೆ ಹೋಗದಿರಲಿ
ಇದು ಬೇಹುಗಾರರ ನಾಡು.

ದೀಪವನ್ನು
ನಿಧಾನವಾಗಿ ಆರಿಸಿಬಿಡು
ಇದು
ಬೆಳಕಿನಲ್ಲಿ ಮಾತನಾಡುವಂಥ ವಿಷಯವಲ್ಲ.

ಪ್ರಜಾಪ್ರಭುತ್ವದ ಪವಿತ್ರ ಗದ್ದುಗೆ
ಮಲಿನಗೊಂಡಿದೆ,
ಮಾರಾಟವೂ ಆಗಿದೆ
ನರಿಗಳ ಪರಿವಾರದ ನಡುವೆ
ಹದ್ದುಗಳು ಗದ್ದುಗೆಯನೇರಿವೆ.
ಅತ್ತ ಕಡೆ ಹಸಿರು ಇತ್ತ ಕಡೆ ಕೇಸರಿ
ಬಿಳಿಯ ಬಣ್ಣದ ಮೇಲೆ ನೆತ್ತರಿನ ಓಕುಳಿ
ಅಶೋಕ ಚಕ್ರವೀಗ ಶೋಕವೃಕ್ಷ
ಮೈತುಂಬ ಆಕ್ರಂದನಗಳ ಕುಸುಮ.







ಪ್ರಭುಗಳ 'ನೆಟ್‌ವರ್ಕ್'
ಸದಾ ಕಾರ್ಯನಿರತವಾಗಿದೆ
ಪ್ರಜೆಗಳು ಮಾತ್ರ
'ವ್ಯಾಪ್ತಿ ಪ್ರದೇಶ'ದ ಹೊರಗಿದ್ದಾರೆ.

ಬಾ ಪ್ರಿಯೆ,
ನಮಗೀಗ
ಕತ್ತಲೆಯೇ ಸರಿಯಾದ ಸಂಗಾತಿ
ಬೆಳಕಿನ ದಾರಿ ಹುಡುಕಲು
ಪ್ರಣಯ ಕಮರಿಹೋಗಿರುವ
ಈ ವಿಷಾದದ ರಾತ್ರಿ

ಎದೆ ಮೇಲೆ ತಲೆ ಇಟ್ಟು
ಒರಗು-
ಹೊತ್ತಿಕೊಂಡೀತು
ನಿನ್ನುಸಿರ ತಿದಿಗೆ
ನನ್ನೆದೆಯ ಬೆಂಕಿ.

-ಎಂ.ಡಿ.ಒಕ್ಕುಂದ

ಮಹಿಳೆಯೋರ್ವಳ ಸ್ಥಿತಿಯ ಉತ್ಕೃಷ್ಟ ಯಾವ ಉತ್ಥಾನಗಳಿಗೂ ಅರ್ಥವಾಗುವುದಿಲ್ಲ. -ಜೇನ್ ಆಸ್ಟನ್



...ರಿಗೂ ತಿಳಿಯಾಕಿಲ್ಲ...ಲಾಂಗ್ ಲಕ್ಕ ಅಂತ ಇರ್ಲಿ ...ತಾನ ನನ್ನ ಮಾತಲ್ಲಿ ಕೇಳೀರಿ. ಈಗ ಈಸ್ಳೀ.. ...ದಲಾಯಿಸಿರೋ ಎಲ್ಲಾನೂದೆ' ಎಂಬುದಾಗಿ ಅರ್ಥ ...ವಿಸಿ.

'ಇವನ್ನು ಇನ್ನು ಲಂಬಿಸದೆ ಲಕ್ಕೇಗೌಡರ ಹೆಸರಿನ ...ಂದೆ ಉ॥ ಲಾಂಗ್ ಲಕ್ಕ ಸೇರಿ ಚುನಾವಣೆ ...ಂದೆರಡು ಕೊಲೆ, ಅಲ್ಲೊಂದು ಇಲ್ಲೊಂದು ದೊಂಬಿ, ...ರಡು ಮೂರು ಸ್ಥಳಗಳಿಗೆ ಬೆಂಕಿ. ಕಂಡೂ ಕಾಣದಂತೆ ...ತ್ ಕ್ಯಾಪ್ಚರಿಂಗ್ ಇವುಗಳನ್ನು ಬಿಟ್ಟರೆ ಉಳಿದಂತೆ ...ಂತಯುತವಾಗಿ ನಡೆಯಿತು. ಚುನಾವಣೆಯಲ್ಲಿ ...ರುಫ್ ಹೆಸರಿನವರೇ ಗೆಲುವು ಪಡೆಯುವುದು ...ಹಜವಾದುದರಿಂದ ಲಾಂಗ್ ಲಕ್ಕ ಅವರ ಧರ್ಮ ...ತ್ನಿಯ ಹೆಸರಿನಲ್ಲಿ ಚುನಾಯಿತರಾದರೆಂದು ಪ್ರತ್ಯೇಕ ...ಳಿಸಬೇಕಿಲ್ಲವಷ್ಟೇ..

ವಿಜಯೀ ಅಭ್ಯರ್ಥಿಗಳೇ ಪ್ರಮಾಣ ವಚನ ...ೀಕರಿಸಿದ್ದನ್ನು ವಿವರಿಸಬೇಕಾಗಿಲ್ಲ ಎಂದು ಭಾವಿಸಿದ್ದೇವೆ. ...ರುಫ್ ಹೆಸರಿನ ಗಣ್ಯ ಪ್ರಮಾಣ ವಚನ ಸ್ವೀಕಾರ ...ಮಾರಂಭದಲ್ಲಿ ನಡೆಯುವ ಅಂದರೆ ಬಳಿಕಾರುಗಳ ...ರ್ ಭರ್ ಓಡಾಟ... 'ಅಣ್ಣ ಬಂದ್ರು', 'ಅಣ್ಣ ಬಂದ್ರು'... ...ೀಜು ಗಲಭೆ... ಇವುಗಳೆಲ್ಲ ಟಿವಿ ವೀಕ್ಷಕರಿಗೆ ...ರಿಚಯವಾದದ್ದೆ. ಅವರೆಲ್ಲ ಸಂವಿಧಾನದ ಆಶಯಗಳಿಗೆ ...ದ್ಧರಾಗಿರುವುದಾಗಿ ಪ್ರಮಾಣವಚನ ಸ್ವೀಕರಿಸಿದರಂತೆ. ...ಚಕ ಮಹಾಶಯರೆ ಅಂತಹ ಒಬ್ಬ ಗೌರವಾನ್ವಿತ ...ದಸ್ಯರನ್ನು ಭೇಟಿ ಮಾಡೋಣ ಬನ್ನಿ.

'ಅಕ್ಕ ಅಂತೂ ಮೆಂಬರಾದೆ.'

'ನಂದೇನಿದ್ದತ್ತು ಮಗ, ಎಲ್ಲ ಆಸಿವನಿಚ್ಚೆ, ಆ ಲಕ್ಕಣ್ಣನ್ನ ...ನು ಸತ್ತರೂ ಮರೆಯೋ ಹಂಗಿಲ್ಲ ಬಿಡು. ಅವನಾಗೋ ...ೋತ್ಗೆ ಖರ್ಚು ವೆಚ್ಚ ಎಲ್ಲಾನು ನಿಭಾಯಿಸಿದ.'

'ಎಷ್ಟಾಗಿರಬಹುದು ಹಂಗಾರೆ ಖರ್ಚು.'

'ಏನಿಲ್ಲ ಅಂದ್ರೂ ಹತ್ತತ್ರ ಲಕ್ಷ ಆಗದೆ ಬುಡು... ...ನು ಇಂತಾ ಜನಾವ ನೋಡಿರ್ಲಿಲ್ಲ ಮಗಾ... ಅಲ್ಲಾ ...ಡೀತಿನಿ ಅಂದರೆ ಹಿಂಗಾ ಕುಡಿಯೋದು.. ಮೂಗಂಡ ...ವ.. ಅಯ್ಯೋ ಸಿವನೆ ಹೋಗತ್ಲಾಗಿ.'

'ಹಂಗೆ ಕುಡಿಸಿದ್ದಕ್ಕೆ ಅಲ್ವ ಮತ್ತೆ ನೀನು ಮೆಂಬ ...ದ್ದು.. ಇವತ್ತು ಪ್ರಮಾಣವಚನ ಸ್ವೀಕಾರ ಸಮಾರಂಭ ...ಲ್ಲಿ ಅದೇನೋ ಸಂವಿಧಾನ ಅಂತ ಓದಿದಲ್ಲಕ್ಕ.. ...ಂಗಂದರೇನು?'

'ಯಾರು ಕಂಡಿದ್ದಾರು ಮಗ.. ಅದೇನೋ ಬಾಬಾ ...ಹೇಬರು ಬರ್ದಿದಾರಂತೆ... ಆ ಪುಣ್ಯಾತ್ಮ ಅದೇನು ...ರ್ದಿಟ್ಟವ್ನೋ ಏನೋ....'

'ಅಲ್ಲಿರೋ ಹಂಗೆ ನಡಿತಿಯಾ ಅಕ್ಕ?'

'ಅದರೊಳಗೆ ಏನಿದ್ದಾತು ಅಂತ ಯಾರು ಕಂಡಿ...ದ್ದಾರು?'

'ಮತ್ತೆ ನಡ್ಕತೀನಿ ಅಂತ ಓದ್ದೆ'

'ಅವರು ಇದು ಓದು ಅಂದ್ರು ಓದ್ದೆ!'

ಓದುಗ ಮಹಾಶಯ, ಮತ್ತೆ ಚುನಾವಣೆಯ ...ಮಾಕ್ಸ್ ದೃಶ್ಯದ ಕಡೆ ಗಮನ ಹರಿಸೋಣ. ಯಾರೇ ...ಧ್ಯಕ್ಷರಾಗಬೇಕಾದರೂ ಸದಸ್ಯರನ್ನು ವಿಹಾರಕ್ಕೆ, ಯಾತ್ರೆಗೆ, ...ಂದರ ತಾಣಗಳಿಗೆ, ದೇವಾಲಯಗಳಿರುವ ಊರು ...ಳಿಗೆ ಕರೆದುಕೊಂಡು ಹೋಗಿ, ಅವರುಗಳನ್ನು ಹವಾ ...ಯಂತ್ರಣ ಕೊಠಡಿಗಳಲ್ಲಿ ಉಳಿಸಿ, ಅವರೆಲ್ಲರ ಬೇಕು ...ಡಗಳನ್ನು ನೋಡಿಕೊಳ್ಳುವುದು ನಮ್ಮ ಪ್ರಜಾಪ್ರಭುತ್ವದ ...ತಿಯೇ ಆಗಿದೆ. ಎದುರಾಳಿ ಪಕ್ಷದ ಸದಸ್ಯರನ್ನೋ ...ವರ ಪತಿದೇವರನ್ನೋ ಒಲಿಸಿಕೊಳ್ಳುವುದು ಹಿರಿಯ ...ದ ನಾವು ಕಲಿತ ಚುನಾವಣಾ ತಂತ್ರ ಆಗಿದೆ. ...ಧ್ಯಕ್ಷ ಆಕಾಂಕ್ಷಿ ಲಾಂಗ್ ಲಕ್ಕ ಮಹಾಶಯರೂ ತಮ್ಮ ...ಂಡತಿಯ ಹೆಸರಿನಲ್ಲಿ ಇವೆಲ್ಲವನ್ನೂ ಸಮರ್ಪಕವಾಗಿ ...ರ್ವಹಿಸಿದರು ಎಂದ ಮೇಲೆ ಅವರು ಅಧ್ಯಕ್ಷ ...ಸ್ಥಾನವನ್ನಲಂಕರಿಸಿದರು ಎಂದು ಹೇಳಬೇಕಾಗಿಲ್ಲವಷ್ಟೇ.

## ಅಧಿಕಾರ ಪರ್ವ

ಇತ್ತ ಇವರು ಅಧಿಕಾರದ ಕುರ್ಚಿ ಬಿಸಿ ಮಾಡು ...ವಾಗ.. ಅತ್ತ ... ಯುವ ಮನಸ್ಸುಗಳು ಕುದಿದವು: ...ೀಪದಿಂದ ಪರಳಿದವು. ಹಾಗಾಗುವುದು ನ್ಯಾಯವೇ ...ತ್ತು, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ ಭ್ರಷ್ಟಾ ...ರದಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿ ಇರುವುದನ್ನು ...ೀ ವಿಶ್ವಕ್ಕೆ ಜಾಹೀರು ಪಡಿಸಿತ್ತು, ತಮ್ಮ ದೇಶಕ್ಕೆ ...ಟಿರುವ ಕಳಂಕವನ್ನು ತೊಳೆಯಬೇಕು, ಭ್ರಷ್ಟಾಚಾರ ...ನ್ನು ಬೇರು ಸಹಿತ ಕಿತ್ತೆಸೆದು ದೇಶದ ಕೀರ್ತಿಯನ್ನು ...ಲ್ಲಿಸ ಬೆಳಗಬೇಕು ಎಂಬುದಾಗಿ ಯುವ ತಂಡ ...ಕ್ಕೆ ಗ್ಗೆದಿತು. ಆ ತಂಡದ ಸದಸ್ಯರೆಲ್ಲರೂ ಶಿಫಾರಸ್ಸಿಸ ...ಗಿಲ್ಲದೆ, ಲಂಚದ ಆಮಿಷ ಒಡ್ಡದೆ, ಅರ್ಹತೆಯ ...ರ ಮೇಲೆ ಅಧಿಕಾರಿ ಹುದ್ದೆಗಳಿಗೆ ಆಯ್ಕೆ... [illegible]

ವೀರ ಮಹಿಳೆಯೂ ಈ ತಂಡದ ಸದಸ್ಯರಾಗಿದ್ದರು ಎಂದರೆ ಆಕೆಯ ಹಿನ್ನೆಲೆಯನ್ನು ಮತ್ತೆ ಹೇಳಬೇಕಾಗಿಲ್ಲ,

ನಮ್ಮ ಆಧುನಿಕ ಝಾನ್ಸಿ ರಾಣಿಯು ನಗರಸಭೆಯ ಕಮೀಷನರ್ ಆಗಿ ನೇಮಕಗೊಂಡು ನಗರಸಭೆ ಆವರಣ ಹೊಕ್ಕಾಗ, ಅವರು ಕಂಡದ್ದೇನು... ಅಧ್ಯಕ್ಷರ ಛೇಂಬರ್ಸ್ ಮುಂದೆ ಪಾರ್ವತಮ್ಮ ಅಧ್ಯಕ್ಷರು ಅನ್ನುವ ನಾಮಫಲಕ ಮೆರೆಯುತ್ತಿದೆ. ಅಧ್ಯಕ್ಷರ ಕೊಠಡಿ ಒಳಗೂ ಅದೇ ತರಹ... ಆದರೆ ಪಾರ್ವತಮ್ಮ? ಅವರಿರಲಿ.. ಒಂದು ಮಹಿಳಾ ಪಿಳ್ಳೆಯೂ ಇಲ್ಲ.. ಅಧ್ಯಕ್ಷರ ಸ್ಥಾನದಲ್ಲಿ ಒಬ್ಬ ಧಾಂಡಿಗ... ಅವನ ಮುಂದೆ ಅದೇ ಮೈಕಟ್ಟಿನ ಉಂಡಾಡಿಗಳು... 'ಅಧ್ಯಕ್ಷರೂ...' ಅಂತ ಅನುಮಾನದಲ್ಲಿ ಕೇಳಿದರು ಆಧುನಿಕ ಝಾನ್ಸಿ ರಾಣಿ.

'ಇವರೇ ಲಕ್ಕೇಗೌಡರು ಅಂತ... ರಾಜಕೀಯವಾಗಿ ಬಹಳ ಸ್ಟ್ರಾಂಗು.. ಎಂಎಲ್‌ಎ ಸಾಹೇಬರು ಇವರು ಹಾಕಿದ ಗೆರೆ ದಾಟುವುದಿಲ್ಲ' ಶಾಸ್ತ್ರಿಗಳ ಪ್ರವರ.

ಅರೆ ಇವನ್ಯಾವ್ನೋನು ಇವನ್ನೆಲ್ಲ ಹೇಳೋಕೆ ಅಂತ ಝಾನ್ಸಿ ರಾಣಿ. ಪಾರ್ವತಮ್ಮ ಅಲ್ಲವೇ ಅಧ್ಯಕ್ಷರು? ಆಕೆಯ ಪ್ರಶ್ನೆ.

ಪಾರ್ವತಮ್ಮ ಗೆದ್ದಿರೋದು ರಿಸರ್ವ್ ಸೀಟಲ್ಲಲ್ಲ, ಜನರಲ್ ಸೀಟಲ್ಲಿ. ಜನ ಓಟು ಕೊಟ್ಟಿದ್ದು ಆಯಮ್ಮನಿಗಲ್ಲ, ಲಾಂಗ್ ಲಕ್ಕ ಅವರಿಗೆ. ತಾಂತ್ರಿಕವಾಗಿ ಆಕೆ ಗೆದ್ದಿದ್ದರೂ ನೈತಿಕವಾಗಿ ಗೆದ್ದಿರೋದು ಇವರು ಅನ್ನೋದು ಶಾಸ್ತ್ರಿಗಳ ವಾದ. ಅದು ಝಾನ್ಸಿ ರಾಣಿಯ ತಲೇಗೆ ಹೋಗಲೊಲ್ಲದು. ಆಕೆಯದ್ದು ಒಂದೇ ಹಟ 'ಲಕ್ಕೇಗೌಡರು ಆ ಕುರ್ಚಿಯಲ್ಲಿ ಕೂರಬಾರದು, ಅದೇನಿದ್ದರೂ ಅಧ್ಯಕ್ಷರಿಗೆ ಮೀಸಲು.'

ಈ ವಾದ ವಿವಾದ, ತಾಂತ್ರಿಕತೆ, ನೈತಿಕತೆ ಇವನ್ನೆಲ್ಲ ಕೇಳಿ ಕೇಳಿ ಲಾಂಗ್ ಲಕ್ಕ ಮಹಾಶಯರ ತಲೆ ಬಿಸಿ ಆಯಿತು. 'ಅಮ್ಮೋ, ಇದರ ಮೇಲೆ ಕುಂತ್ಕಬಾರ್ದು ಅಂತಾನೆ ನೀನೇಳ್ತಿರೋದು.. ಹಂಗೇ ಆಗ್ಲಿ.. ಲೋ ಯಾರ್ಲಾ ಅಲ್ಲಿ ತಂಗಬನ್ರಲ್ಲಾ ಬ್ಯಾರೆ ಕುರ್ಚಿಯ' ಅಂತ ಕೂಗಿದರು.

ಹಾಗೆ ಅವರು ಹೇಳಿದ್ದೆ ತಡ. ಅದು ಯಾವ ಸಮಯದಲ್ಲೋ ಅಧ್ಯಕ್ಷರ ಕುರ್ಚಿಗಿಂತಲೂ ಸೊಗಸಾದ ಕುರ್ಚಿ ಅದರ ಪಕ್ಕದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಲಾಂಗ್ ಲಕ್ಕ ಮಹಾಶಯರು ಅದನ್ನು ಅಲಂಕರಿಸಿದಾಗ.. ಆಧುನಿಕ ಝಾನ್ಸಿ ಮುಖ ಪಾಪ ಹೇಗಾಗಿರಬೇಕು ಹೇಳಿ...

ಇಲ್ಲಿಂದ ಮುಂದುವರೆಯೋಣ. ವೀರ ಮಹಿಳೆ ಅಧಿಕಾರ ವಹಿಸಿಕೊಂಡು ಒಂದು ವಾರ ಕಳೆದಿರಬಹುದು. ಊಟದ ಸಮಯ. ಆಕೆಗೆ ಏನೋ ಅನುಮಾನ, ತನ್ನ ತಾಯಿಗೆ ವಯಸ್ಸಾಗಿದೆ, ಬಾಯಿಯ ಚಪಲ ಜಾಸ್ತಿ ಆಗ್ತಿದೆಯೇನೋ ಅಂತ. ಪ್ರತಿ ದಿನವೂ ಮಾಂಸದ ಅಡಿಗೆ ಎಂದರೆ ಯಾರಿಗಾದರೂ ಅನುಮಾನ ಬರುವಂತಹದ್ದೇ.

'ಅಮ್ಮಾ ಈ ಊರಿಗೆ ಬಂದಾಗಿನಿಂದ ಎನ್‌ವಿನೇ ಮಾಡ್ತಿದೀಯಲ್ಲಮ್ಮಾ' ಅನುಮಾನಿಸುತ್ತಾ ಕೇಳಿದರು.

'ನಾನೇನು ಮಾಡಲೇ ತಾಯಿ, ನೀನು ಕಳುಸ್ದೆ ನಾನು ಮಾಡಿ ಹಾಕಿದೆ.'

ಹಾಗಾದರೆ ತಾಯಿ ತಪ್ಪಲ್ಲ, ನಾನು ಕಳುಹಿಸಿಲ್ಲ. ಮಾಂಸ ಹೇಗೆ ಬಂದಿತು? ಕಮೀಷನರ್ ಸಾಹೇಬರು ತಲೆ ಕೊರೆಯಿತು.

'ಬುಡನ್ ತಂದುಕೊಟ್ಟ' ತಾಯಿಯ ಉತ್ತರ.

ಈ ಬುಡನ್ ಯಾಕೆ ತಂದು ಕೊಟ್ಟ? ಅವನನ್ನೇ ಕರೆದು ಕೇಳಿದರು. 'ಮಾಂಸ ಯಾರು ತಂದದ್ದು?'

'ನಾನೇ ಮೇಡಂ.'

'ತರಲು ಯಾರು ಹೇಳಿದ್ದು?'

'ಯಾರೂ ಹೇಳಬೇಕಾಗಿಲ್ಲ, ಮೇಡಂ, [illegible] ಮಾಡುತ್ತೀರಿ ಮೇಡಂ.'

'ಏನು ಸಾಹೇಬರೆ ಹಾಗಂದರೆ?'

'ಹೌದು ಮೇಡಂ, ಕಮೀಷನರ್ ಒಬ್ಬರಿಗೆ ಅಲ್ಲ... ಅಧ್ಯಕ್ಷರ, ಉಪಾಧ್ಯಕ್ಷರ ಮನೆಗೂ ಸಪ್ಲೈ ಆಗುತ್ತೆ.'

ತಮ್ಮ ಅರಿವಿಗೇ ಬಾರದಂತೆ ಆಧುನಿಕ ಝಾನ್ಸಿ ರಾಣಿಯವರು ಭ್ರಷ್ಟಾಚಾರದ ಬಲೆಗೆ ಬದ್ದಿದ್ದರು! ಅವರ ಬಗ್ಗೆ ಅವರಿಗೇ ಹೇಸಿಗೆ ಆಯಿತು. ಕೆಂಡಾಮಂಡಲ ಆದರು. 'ಸಾಹೇಬರೆ ಇಂತಹದ್ದೆಲ್ಲ ಇನ್ನು ಮುಂದೆ ನಡೆಯಬಾರದು. ನಾಳೆಯಿಂದ ಇಂತಹ ಮಾಂಸ ಮನೆಗೆ ತರಕೂಡದು' ಎಂದು ಕೋಪಾವಿಷ್ಟರಾಗಿ ಹೇಳಿದ ನಂತರ 'ಏನು' ಎನ್ನುವಂತೆ ಬುಡನ್ ಕಡೆ ದುರುಗುಟ್ಟಿ ನೋಡಿದರು.

'ಆಯ್ತು ಮೇಡಂ ನಮ್ಮ ಮನೇಗೆ ತಗೊಂಡೋಯ್ತೀನಿ' ಅಂದರು ಬುಡನ್ ಸಾಹೇಬರು!

ವಾಚಕ ಮಹಾಶಯರೇ ಮತ್ತೆ ಕಚೇರಿಯತ್ತ ಗಮನಹರಿಸೋಣ. ಕಮೀಷನರ್ ಸಾಹೇಬರು ಕಾಮಗಾರಿಗಳ ಫೈಲ್ ನೋಡುತ್ತಿದ್ದರು. ಏನು ಪವಾಡ ಅಂತೀರಿ. ಹದಿನಾಲ್ಕನೆ ವಾರ್ಡ್ ಆರನೇ ಕ್ರಾಸ್ ರಾಮಯ್ಯನ ಮನೆಯಿಂದ ನಿಂಗೇಗೌಡನ ಮನೆಯವರೆಗೆ ಅರ್ಧ ಕಿಲೋ ಮೀಟರ್ ರಸ್ತೆ ನಿರ್ಮಾಣ. ಅಂದಾಜು ವೆಚ್ಚ ಐವತ್ತು ಸಾವಿರ ರೂಪಾಯಿಗಳು ಅಂತಿದೆ. ಅದೇ ವಾರ್ಡ್, ಅದೇ ಕ್ರಾಸು, ಅದೇ ದೂರ ನಿಂಗೇಗೌಡನ ಮನೆಯಿಂದ ರಾಮಯ್ಯನ ಮನೆಯವರೆಗೆ ರಸ್ತೆ ನಿರ್ಮಾಣ [illegible] ಹೇಗೆ ಸಾಧ್ಯ?

'ರೇಟೆಲ್ಲ ಎಸ್ಕಲೇಟ್ ಆಗಿದೆ ಮೇಡಂ' ಇಂಜಿನಿಯರ್ ಸಾಹೇಬ ಉತ್ತರ.

'ಅದಲ್ಲಾರಿ ನಾನು ಕೇಳ್ತಿರೋದು.. ರಾಮಯ್ಯನ ಮನೆಯಿಂದ ನಿಂಗೇಗೌಡನ ಮನೆ, ನಿಂಗೇಗೌಡನ ಮನೆಯಿಂದ ರಾಮಯ್ಯನ ಮನೆ.... ಎರಡೂ ಬೇರೆ ಬೇರೇನಾ?'

'ಹೌದು ಮೇಡಂ. ಅದು ರಾಮಯ್ಯನ ಮನೆಯಿಂದ ಶುರುವಾಗುತ್ತೆ, ಇದು ನಿಂಗೇಗೌಡನ ಮನೆಯಿಂದ ಶುರುವಾಗುತ್ತೆ' ಇಂಜಿನಿಯರ್ ಕೈ ಹೊಸೆತ.

'ಹುಡುಗಾಟ ಆಡ್ತಿರೇನ್ರಿ, ಏನ್ರಿ ನಿಮ್ಮ ಮಾತಿನ ಅರ್ಥ?' ಗುಡುಗಿದರು ಝಾನ್ಸಿ ರಾಣಿ.

'ಸಾರಿ ಮೇಡಂ ಕೈತಪ್ಪಿನಿಂದ ಹೀಗಾಗಿದೆ.'

'ಏನ್ರಿ, ಹಾಗಂದರೆ?'

'ರಾಮಯ್ಯ-ನಿಂಗೇಗೌಡ, ನಿಂಗೇಗೌಡ-ರಾಮಯ್ಯ ಅಂತ ಅದೇ ಹೆಸರು ಬಂದವೆ.'

'ಏನು ಮಾಡ್ತೀರಿ ಈಗ?'

'ಒಂದು ಎಸ್ಟಿಮೇಟಿಗೆ ಅವರ ಎದುರು ಮನೆಯವರ ಹೆಸರಾಕಿಬಿಡ್ತೀನಿ ಮೇಡಂ!'

ಇತ್ತೀಚೆಗೆ ತಿಳಿದು ಬಂದಿರುವುದು ಏನು ಅಂದರೆ [illegible] ಆಧುನಿಕ ಝಾನ್ಸಿ ರಾಣಿಯವರು ಭ್ರಷ್ಟ [illegible] ನಗರಸಭೆಯಿಂದಿಗೆ [illegible] ಹೋಗಬೇಕೋ ಅನ್ನುವ ಚಿಂತೆಯ [illegible]

# ಸಮಾಧಿಯಾದ ಪ್ರೇಮಪತ್ರ

ನಾನು ಬರೆದ 'ಮೊದಲ ಪ್ರೇಮಪತ್ರ'ವೇ ನನ್ನ ಭಾವಲೋಕದ ಮೊದಲ ಲಿಖಿತ ಅಭಿವ್ಯಕ್ತಿ ಇದ್ದಿರಬೇಕು. ನಾನಾಗ ಪ್ರಾಥಮಿಕ ಶಾಲೆಯ 7ನೇ ಕ್ಲಾಸ್‌ನಲ್ಲಿದ್ದೆ ಅಂದರೆ ಹದಿಹರೆಯದ ಹದಿಮೂರರ ಆಸುಪಾಸಿನ ಪ್ರಾಯ.

ಹುಡುಗಿಯರ ಗುಂಪು ನಮ್ಮ ತೋಟದ ದಾರಿಯಲ್ಲೇ ಶಾಲೆಗೆ ಹೋಗುತ್ತಿತ್ತು, ಬಿಂಕದ ಸಿಂಗಾರಿಯೊಬ್ಬಳು ಪಿಳಿಪಿಳಿ ನನ್ನನ್ನು ದಿಟ್ಟಿಸುತ್ತಿದ್ದಳು. ತನ್ನ ಗೆಳತಿಯರಿಗೆ ಗೊತ್ತಾಗದಂತೆ ಕದ್ದುನೋಡುವ ಅವಳ ಚಾಣಾಕ್ಷ ತಂತ್ರಕ್ಕೆ ನಿಬ್ಬೆರಗಾಗಿದ್ದೆ. ಆಕೆಯ ದುಂಡು ಮೊಗದ ಮೇಲೆ ನಗಿನವಿಲೊಂದು ಆಡುತ್ತಿತ್ತು. ಮೊನಾಲಿಸಾಳ ಮಂದಹಾಸದಂತೆ ಅವಳ ನಗೆ ಹೊಸ ಬಯಕೆ-ಕಲ್ಪನೆ, ಭಾವನೆಗಳು ಪುಟಿಯುವಂತೆ ಮಾಡಿತ್ತು. ಶಾಲೆಯಿಂದ ಮನೆಗೆ ಹೊರಟಾಗಲೂ ಕಣ್ಣಿನಿಂದಲೇ ಎಷ್ಟೊಂದು ಬಾಣಗಳನ್ನು ಬಿಡುತ್ತಿದ್ದಳೆಂದರೆ ಅವುಗಳಿಂದ ತಪ್ಪಿಸಿಕೊಳ್ಳುವುದೇ ಕಷ್ಟಸಾಧ್ಯವಾಗುತ್ತಿತ್ತು, ಈ ಬಯಲಾಟ ಮೂರು ವರ್ಷಗಳ ಕಾಲ ನಿರಂತರವಾಗಿ ನಡೆದಿತ್ತು. ಈ ದೀರ್ಘಾವಧಿಯಲ್ಲಿ ನಾವು ಪರಸ್ಪರವಾಗಿ ಒಂದು ಮಾತನ್ನೂ ಆಡಲಿಲ್ಲ, ಕೈ ಸಹ ಕುಲುಕಿರಲಿಲ್ಲ, ಆದರೆ ಕಣ್ಣುಗಳು ಪರಸ್ಪರ ಸಂಧಿಸದೇ ಇರದ ದಿನಗಳೇ ಇರಲಿಲ್ಲ, ಆಕೆಯ ತೀಕ್ಷ್ಣವಾದ ನೋಟದಲ್ಲಿ ಏನಿತ್ತು? ಎಂದು ಯೋಚಿಸಿದಾಗಲೆಲ್ಲ ನಾನು ಮೂಕನಾಗುತ್ತೇನೆ.


ನನ್ನ ಮಿತ್ರನೊಬ್ಬ ಪ್ರೀತಿಪ್ರೇಮದ ವಿಷಯದಲ್ಲಿ ಮಹಾನ್ ಅನುಭವಿಯಂತೆ, ನುರಿತ ತಜ್ಞನಂತೆ ಪ್ರೇಮಪತ್ರ ಬರೆಯುವ ಸಲಹೆ ನೀಡಿದ. ಹಗಲು-ರಾತ್ರಿ ಕುಳಿತರೂ ಒಂದಕ್ಷರವೂ ಮೂಡಲಿಲ್ಲ, ಏನೆಂದು ಮತ್ತು ಹ್ಯಾಗೆ ಬರೆಯೋದು ಎಂಬುದೇ ದೊಡ್ಡ ಒಗಟಾಗಿತ್ತು. ಅಂತೂ ಜಗವೆಲ್ಲ ನಿದ್ದೆಗೆ ಜಾರಿದ ಒಂದು ನಿಶ್ಶಬ್ದ ರಾತ್ರಿಯ ಲಾಟೀನಿನ ಮಂದಬೆಳಕಿನಲ್ಲಿ 'ಮೊದಲ ಪ್ರೇಮಪತ್ರ' ಜೀವ ತಳೆಯಿತು; ಸೃಷ್ಟಿಯ ನಿಗೂಢದಂತೆ. ಆ ಪ್ರೇಮಪತ್ರ ಎರಡು ಜೀವಗಳನ್ನು, ಎರಡು ಪವಿತ್ರ ಆತ್ಮಗಳನ್ನು ಬೆಸೆಯುವ, ಒಂದುಗೂಡಿಸುವ ರಾಯಭಾರಿಯಂತೆ ಕಂಡಿತು. ಮರುದಿನ ಈ ಪತ್ರವನ್ನೂ ಚೆಡ್ಡಿಕಿಸೆಯಲ್ಲಿ ಜೋಪಾನವಾಗಿ ಇರಿಸಿಕೊಂಡು ಅತಿ ಹುರುಪಿನಿಂದ ಶಾಲೆಗೆ ಹೋದೆ. ಅಂದು ಕಾಕತಾಳೀಯ ಎಂಬಂತೆ ಒಂದು ಅವಾಂತರ ಘಟಿಸಿತ್ತು, ನನ್ನ ಸಹಪಾಠಿ ಮಿತ್ರನೊಬ್ಬ ತಾನು ಪ್ರೀತಿಸಿದ್ದ ಹುಡುಗಿಗೆ ಪ್ರೇಮಪತ್ರವನ್ನು ಕೊಟ್ಟಿದ್ದ. ಹುಡುಗಿ ಪೋಲೀಸರಿಗೆ ಸಾಕ್ಷಿ ನೀಡುವಂತೆ ಅದನ್ನು ನೇರವಾಗಿ ಮಾಸ್ತರರಿಗೆ ತಲುಪಿಸಿದ್ದಳು.

ನಾನೊಂದು ಮೌನದ ಶಿಲಾಮೂರ್ತಿಯಂತಾದೆ. ಪ್ರೇಮಪತ್ರವನ್ನು ನನ್ನ ಒಲವಿನ ಹುಡುಗಿಗೆ ಕೊಡುವುದೇ ಒಂದು ಮಹಾ ಅಪರಾಧದಂತೆ ಕಾಡತೊಡಗಿತು. ಅದನ್ನ ಹರಿದುಹಾಕುವ ಮನಸ್ಸಾಗಲಿಲ್ಲ, ಮೊದಲ ಚುಂಬನದಂತೆ ಈ ಮೊದಲ ಪ್ರೇಮಪತ್ರಕ್ಕೂ ಒಂದು ರಮ್ಯವಾದ, ಭವ್ಯವಾದ, ಹಿರಿದಾದ ಅರ್ಥವಿದ್ದಂತೆ ಮಹತ್ವವಿದ್ದಂತೆ ತೋರಿತು. ನನ್ನಲ್ಲಿ ಮೊದಲ ಸಲ ಪ್ರೀತಿ-ಪ್ರೇಮ ಕುರಿತು ಸುಪ್ತಭಾವನೆಗಳನ್ನು ಗರಿಗೆದರುವಂತೆ ಮಾಡಿದ ಆ 'ನಗಿನವಿಲಿನ ಹುಡುಗಿ'ಗೆ ನನ್ನ ಮೊದಲ ಪ್ರೇಮಪತ್ರವನ್ನು ಕೊಡಲಿಕ್ಕೂ ಆಗದೆ ಅದನ್ನು ನಿರ್ನಾಮ ಮಾಡಲಿಕ್ಕೂ ಆಗದೆ ಎಷ್ಟೋ ದಿನಗಳವರೆಗೆ ತಳಮಳಿಸಿದೆ.

ಒಂದು ರಾತ್ರಿಯ ನಿದ್ದೆಗಣ್ಣಲ್ಲಿ ನನ್ನ ಕಾಲುಗಳು ಪಿಶಾಚಿಯಂತೆ ನಡೆಯತೊಡಗಿದವು. ಎಚ್ಚರವಾದಾಗ ನೀರಿನಲ್ಲಿ ನಿಂತಿದ್ದೆ. ಕೈಯಲ್ಲಿದ್ದ ಪ್ರೇಮಪತ್ರ ಕಂಡು ಅಚ್ಚರಿ, ಹಳ್ಳದ ದಂಡೆಯ ಮೇಲೆ ಒಂದು ಗುಂಡಿಯನ್ನು ತೋಡಿ ನನ್ನ ಮೊದಲ ಪ್ರೇಮಪತ್ರವನ್ನು ಜೀವಂತವಾಗಿ ಸಮಾಧಿ ಮಾಡಿದೆ. ಕ್ರೈಸ್ತರು ತಮ್ಮ ಸಮಾಧಿಯ ಮೇಲೆ ನಿಲ್ಲಿಸುವ ಗುರುತಿನಂತೆ, ಯೋಧನೊಬ್ಬ ದೇಶಕ್ಕಾಗಿ ಮಡಿದಾಗ ನಿಲ್ಲಿಸುವ ಸ್ಮಾರಕದಂತೆ, ಆ ಪ್ರೇಮಪತ್ರ ಸಮಾಧಿಯ ಸಂಕೇತವಾಗಿ ಎತ್ತರದ ಕಲ್ಲನ್ನು ನಿಲ್ಲಿಸಿ ಅಂತಿಮ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಪ್ರೇಮಪತ್ರ ಎಂದಾಗಲೆಲ್ಲಾ ಆ ಬೆಳದಿಂಗಳ ಬಾಲೆಯ ಆ ಪರಿಯ ಕಣ್ಣಿನ ಪರಿಭಾಷೆಯ ಸಂವಾದದ ಸೂಕ್ಷ್ಮತೆ, ಅದನ್ನರಿಯದ ನನ್ನ ದಡ್ಡತನ ಹಾಗೂ ಭೂತದಂತೆ ಕಾಡುವ ಆ ಸಮಾಧಿಯ ನೆನಪಾದಾಗಲೆಲ್ಲ ನನ್ನಿಂದ ಮಾತಿಲ್ಲ! ಮಾತಿಲ್ಲ!! ಮಾತಿಲ್ಲ!!!

-ಸುಭಾಷ್ ರಾಜಮಾನೆ,
ಅಥಣಿ



# ದಲಿತರಿಗೆ ಕ್ರಿಕೆಟ್ 'ಲಗಾನ್' ಬ್ರಾಹ್ಮಣರ ಮ್ಯಾಚ್ ಫಿಕ್ಸಿಂಗ್

**ಸ್ವಾತಂತ್ರ್ಯ ನಂತರ ಒಬ್ಬನೇ ಒಬ್ಬ ದಲಿತ ಕ್ರಿಕೆಟಿಗನೂ ರಾಷ್ಟ್ರ ತಂಡದಲ್ಲಿ ಸ್ಥಾನ ಪಡೆಯಲಿಲ್ಲವೇಕೆ? ಬೆವರಿಳಿಸುವ ಕ್ರೀಡೆಗಳಾದ ಹಾಕಿ, ಫುಟ್‌ಬಾಲ್‌ಗಳಲ್ಲಿ ದಲಿತ ಆದಿವಾಸಿ ಹುಡುಗರು ಮಿಂಚುತ್ತಿದ್ದರೆ ಕ್ರಿಕೆಟ್ ಮಾತ್ರ ಬ್ರಾಹ್ಮಣರ ಸ್ವತ್ತಾಗಿ ಹೋಗಿದೆ.**

ರಾಜು ಬಗಾಡೆ... ಈ ಹೆಸರು ನೆನಪಿದೆಯಾ? ಕ್ರಿಕೆಟ್ ಜ್ವರದಲ್ಲಿರುವ ಕ್ರೀಡಾಭಿಮಾನಿಗಳಿಗೆ ಗೊತ್ತಿರಲಿಕ್ಕಿಲ್ಲ; ಕಳೆದ ದಶಕದಲ್ಲಿ ಭಾರತ ಹಾಕಿ ತಂಡದಲ್ಲಿ ಹಲವಾರು ಉತ್ತಮ ಅಂತರರಾಷ್ಟ್ರೀಯ ಪ್ರದರ್ಶನವನ್ನು ನೀಡಿದ ರಾಜು ಬಗಾಡೆ ಈಗ ಟಾಟಾ ಸ್ಪೋರ್ಟ್ಸ್ ಟೀಮ್‌ನ ಬೆನ್ನೆಲುಬಿನಂತೆ ಆಡುತ್ತಾ, ಮತ್ತೆ ರಾಷ್ಟ್ರೀಯ ತಂಡದ ಬಾಗಿಲು ತಟ್ಟುತ್ತಿರುವ ಹುಡುಗ.

ಹಲವಾರು ಹಾಕಿ ಆಟಗಾರರಿರುವಾಗ ರಾಜು ಬಗಾಡೆ ಕುರಿತು ಚರ್ಚಿಸುತ್ತಿರುವುದು ಆತ ಕನ್ನಡಿಗನೆಂಬ ಕಾರಣಕ್ಕೆ ಅಲ್ಲ. ಯಾವುದೇ ಸವಲತ್ತುಗಳಿಲ್ಲದೇ, ಕೋಚಿಂಗ್ ಇಲ್ಲದೇ ಗದಗ-ಬೆಟಗೇರಿಯ ಸ್ಲಂ ಪಕ್ಕದ ಬಯಲಿನಲ್ಲಿ ಹಾಕಿ ಕಲಿತ ಈ ದಲಿತನಂತೆ ಹಲವು ದಲಿತ ಹಾಗೂ ಆದಿವಾಸಿ ಆಟಗಾರರು ಹಾಕಿ, ಫುಟ್‌ಬಾಲ್‌ನಂತಹ ಬೆವರಿಳಿಸುವ ಕ್ರೀಡೆಗಳಲ್ಲಿ ಯಶಸ್ವಿ ಆಗಿದ್ದಾರೆ. ಆದರೆ ಭಾರತ ಕ್ರಿಕೆಟ್‌ನಲ್ಲಿ ದಲಿತರಿಗೆ ಅದೇ ಅಸ್ಪೃಶ್ಯತೆಯ ಟ್ರೀಟ್‌ಮೆಂಟ್ ಕಾಡುತ್ತಿದೆ.

ಇವತ್ತು ಗದಗಿನ ಸುನೀಲ್ ಜೋಶಿ ಎಲ್ಲ ಕನ್ನಡಿಗರಿಗೂ ಗೊತ್ತು. ಆದರೆ ಬಗಾಡೆ? ಹಾಕಿ ಜನಪ್ರಿಯವಲ್ಲ ಎಂಬುದು ಒಂದು ಕಾರಣವಾದರೆ, ಅದಕ್ಕಿಂತ ಮುಖ್ಯವಾದದ್ದು ಬಗಾಡೆ ಸ್ಲಮ್ ಹುಡುಗನೆಂಬುದು.


ಸ್ವಾತಂತ್ರ್ಯ ನಂತರ ಒಬ್ಬನೇ ಒಬ್ಬ ದಲಿತ ಆಟಗಾರ ಭಾರತ ಕ್ರಿಕೆಟ್ ತಂಡದಲ್ಲಿ ನೆಲೆ ಕಾಣಲಿಲ್ಲವೇಕೆ? ದಲಿತ ವರ್ಗಗಳಲ್ಲೇ ಬರುವ ಮುಂಬೈನ ವಿನೋದ್ ಕಾಂಬ್ಳಿ, ಕನ್ನಡದ ಹುಡುಗ ದೊಡ್ಡ ಗಣೇಶರನ್ನು ಅದೆಷ್ಟು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಯಿತು ಎಂಬುದು ಬಹುತೇಕರಿಗೆ ಗೊತ್ತಿಲ್ಲ. ದಲಿತರು ಕ್ರಿಕೆಟ್‌ನತ್ತ ಆಸಕ್ತಿಯನ್ನು ತೋರಲಿಲ್ಲವೆ? ಹಾಗಾದರೆ ಅಲ್ಪಸಂಖ್ಯಾತ ಸಮೂಹದ ಆಟಗಾರರಿಗೆ ನ್ಯಾಯ ಸಿಕ್ಕಿದೆಯೇ?

ಇಲ್ಲಿ ಸಚಿನ್, ದ್ರಾವಿಡ್, ಕುಂಬ್ಳೆ ಪ್ರತಿಭಾವಂತರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅವರ ಆರಂಭಿಕ ಕ್ರಿಕೆಟ್ ಜೀವನದಲ್ಲಿ 'ಬ್ರಾಹ್ಮಣತನ' ಅವರ ನೆರವಿಗೆ ನಿಂತಿದೆ. ಇದು ಸಚಿನ್, ಕುಂಬ್ಳೆ, ದ್ರಾವಿಡ್‌ಗಳಿಗೆ ಗೊತ್ತೋ ಇಲ್ಲವೋ.. ಅದು ಬಿಡಿ...


ಸ್ವಾತಂತ್ರ್ಯಪೂರ್ವದಲ್ಲಿ ಆಡಿದವರ ಪೈಕಿ ಇವತ್ತಿಗೂ ರಣಜಿ, [illegible] ಹೆಸರುಗಳು ಪ್ರಚಾರದಲ್ಲಿವೆ. ಅವರ ಹೆಸರಲ್ಲಿ ಟ್ರೋಫಿಗಳೂ ಇವೆ. ಆದರೆ ಇವರಿಬ್ಬರಿಗಿಂತ ಶ್ರೇಷ್ಠ ಆಟಗಾರನಾಗಿದ್ದ ಬಾಲೂ ಪಾಲ್ವನ್‌ಕರ್ ಎಂಬ ಕ್ರಿಕೆಟಿಗನ ಹೆಸರನ್ನು ಯಾರೂ ಕೇಳಿರುವುದಿಲ್ಲ. ಇತ್ತೀಚೆಗಷ್ಟೇ ಇತಿಹಾಸಕಾರ, ಕ್ರಿಕೆಟ್ ತಜ್ಞ, ಕನ್ನಡಿಗ ರಾಮಚಂದ್ರ ಗುಹಾ ಪಾಲ್ವನ್‌ಕರ್ ಕುರಿತು ತಮ್ಮ ಪುಸ್ತಕದಲ್ಲಿ ಬರೆದಾಗಲಷ್ಟೇ ನಮ್ಮ ಇವತ್ತಿನ ಕ್ರಿಕೆಟ್ ತಾರೆಗಳಿಗೆ ಆ ವಿಷಯ ತಿಳಿದದ್ದು. ಯಾಕೆ ಇತಿಹಾಸಕಾರರು ಪಾಲ್ವನ್‌ಕರ್ ಬಗ್ಗೆ ನಿರ್ಲಕ್ಷ್ಯ ತೋರಿದರು? ಕೇವಲ ಕ್ರಿಕೆಟರ್ ಅಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟಗಾರ, ದಲಿತರ ಹಕ್ಕುಗಳ ಹೋರಾಟಗಾರ, ಗಾಂಧಿ ಒಡನಾಡಿ ಆಗಿದ್ದ ಬಾಲೂ ಪಾಲ್ವನ್‌ಕರ್ ಹೆಸರನ್ನು ಇತಿಹಾಸದ ಪುಟಗಳಿಂದ ದೂರವೇ ಇಟ್ಟವರಾರು? ಅದಕ್ಕೆ ಕಾರಣ? ನಮ್ಮ ಧಾರವಾಡದಲ್ಲಿ ಜನಿಸಿದ ಪಾಲ್ವನ್‌ಕರ್ ಹೊಲೆಯನಾಗಿದ್ದರಿಂದ.... ಚಪ್ಪಲಿಗಳನ್ನು ತಯಾರಿಸುವ ಚಮ್ಮಾರನಾಗಿದ್ದರಿಂದ... ಆರಂಭದಲ್ಲಿ ಡಾ. ಅಂಬೇಡ್ಕರರೇ ಪಾಲ್ವನ್‌ಕರರನ್ನು ಆದರ್ಶ ಎಂದು ತಿಳಿದಿದ್ದರಲ್ಲದೇ, ತಾವು ಅಧ್ಯಾಪಕರಿದ್ದಾಗ ದಲಿತರಿಗೆಲ್ಲ ಪಾಲ್ವನ್‌ಕರ್‌ರಂತೆ ಕೆಚ್ಚಿನಿಂದ ಮುಂದೆ ಬರಲು ಹೇಳುತ್ತಿದ್ದರು (ಬಾಕ್ಸ್ ನೋಡಿ).


**ಪಿ.ಕೆ. ಮಲ್ಲನಗೌಡರ್**

ಎಲ್ಲೋ ಒಬ್ಬ ಕರ್ಣಂ ಮಲ್ಲೇಶ್ವರಿಗೆ ಕಂಚು (2000 ಒಲಿಂಪಿಕ್ಸ್)... ಹಿಂದೆಂದೋ ಪಿ.ಟಿ. ಉಷಾಗೊಂದು ಕಂಚು... ಇತ್ತೀಚೆಗೆ ರಾಜವರ್ಧನ ರಾಥೋಡ್ ಎಂಬ ಬೆಳ್ಳಿ ಹುಡುಗ... ಮರೆತು ಹೋದ ಹಾಕಿಯ ಸುವರ್ಣ ಸಂಭ್ರಮಗಳು... ಇದಿಷ್ಟು ಹೆಮ್ಮೆಯ ಮಧ್ಯೆ ಇಲ್ಲಿ ಕ್ರಿಕೆಟ್ ಮಾತ್ರ ನಿತ್ಯದ ಚರ್ಚೆ. ಕೇವಲ 12 ರಾಷ್ಟ್ರಗಳು- ಹಿಂದಿನ ಬ್ರಿಟಿಷ್ ವಸಾಹತುಗಳು!- ಆಡುವ ಕ್ರಿಕೆಟ್ ಒಂದು ಅಂತರರಾಷ್ಟ್ರೀಯ ಕ್ರೀಡೆ ಹೌದೆ? ಈಗ ನಮ್ಮ ಚಿತ್ರರಂಗಕ್ಕೆ ಬನ್ನಿ. ಬರುತ್ತಿರುವ ಕಮರ್ಷಿಯಲ್, ಜನಪ್ರಿಯ ಚಿತ್ರಗಳಿಗೆ ಹೋಲಿಸಿದರೆ 'ಲಗಾನ್' ಒಳ್ಳೆ ಚಿತ್ರವಾಗಿತ್ತು, OK.... ಆದರೆ ಜನಪ್ರಿಯ ಸಿನಿಮಾ ಮಾಧ್ಯಮದಲ್ಲಿ 'ಜನಪ್ರಿಯ' ಕ್ರಿಕೆಟ್ ತೋರಿಸಿ ಲಾಭ ಹೊಡೆದುಕೊಳ್ಳುವಾಗಲೂ ಅದ್ಹೇಗೆ ಸಾಮಾಜಿಕ ಅಂಗವಿಕಲತೆ (ಅಸ್ಪೃಶ್ಯತೆ), ದೈಹಿಕ ಅಂಗವಿಕಲತೆಗಳನ್ನು ಬ್ರಾಹ್ಮಣ್ಯ ಬಳಸಿಕೊಂಡಿತು ಎಂಬುದು ಸೂಕ್ಷ್ಮವಾಗಿ ಅವಲೋಕಿಸಿದಾಗ ಮಾತ್ರ ತಿಳಿಯುತ್ತದೆ.



1893 ರ ವೇಳೆಯಲ್ಲಿ ಚಂಪಾನೇರ್ ಎಂಬ ಹಳ್ಳಿಯ ಜನ ಮೂರು ತಿಂಗಳಲ್ಲಿ ಕ್ರಿಕೆಟ್ ಕಲಿತು, ಬ್ರಿಟಿಷ್ ಕಂಟೋನ್ಮೆಂಟ್ ಟೀಮ್‌ನ್ನೇ ಸೋಲಿಸಿ ಸ್ವಾಭಿಮಾನ, ಸ್ವಾತಂತ್ರ್ಯದ ಕ್ಷಣಗಳನ್ನು ಅನುಭವಿಸುವ ಚಿತ್ರಕತೆ ಇರುವ 'ಲಗಾನ್' ನಿರ್ದೇಶಿಸಿದ್ದು (ಸದ್ಯಕ್ಕೆ) ಪ್ರತಿಭಾವಂತ ಆದರೆ ಅಂತರಾಳದಲ್ಲಿ ಬ್ರಾಹ್ಮಣ್ಯ ಆರಾಧಿಸುವಂತೆ ಕಾಣುವ ಆಶುತೋಶ್ ಗೌವ್ರೀಕರ್. ಚಿತ್ರದಲ್ಲಿ ನಡೆಯುವ ಮ್ಯಾಚ್‌ನಲ್ಲಿ ಹಳ್ಳಿಗರು ಗೆದ್ದರೆ, ಅವರ ಮೇಲೆ ಹಾಕಲಾಗುತ್ತಿದ್ದ ಮೂರು ವರ್ಷದ ತೆರಿಗೆಯನ್ನು ತೆಗೆದು ಹಾಕಬೇಕೆಂಬ ಪರತ್ತಿನೊಂದಿಗೆ ಅಲ್ಲಿ ಕ್ರಿಕೆಟ್ ಹೋರಾಟ(!) ಆರಂಭವಾಗುತ್ತದೆ. ಭುವನ್ (ಅಮೀರ್‌ಖಾನ್) ನೇತೃತ್ವದಲ್ಲಿ ಸಿದ್ಧಗೊಳ್ಳುವ ನಮ್ಮ ಚಂಪಾನೇರ್ IXI ಟೀಮ್‌ಗೆ 10 ಜನರ ಆಯ್ಕೆ ಯಾಗುತ್ತದೆ. ಈ ಹತ್ತು ಜನ ಪ್ರಾಕ್ಟೀಸು ಮಾಡುವಾಗ ದೂರದಲ್ಲಿ ನೋಡುತ್ತಾ ನಿಂತಿದ್ದ 'ಕೊಳಕು' ಮನುಷ್ಯ ಕಚ್ರನ ಹತ್ತಿರ ಚೆಂಡು ಹೋಗುತ್ತದೆ. ನಮ್ಮ ಹೀರೋ ಭುವನ್ ಕಚ್ರನಿಗೆ ಚೆಂಡನ್ನು ಮರಳಿಸಲು ಹೇಳುತ್ತಾನೆ. ಎಡಗೈ ಅಂಗವಿಕಲತೆಗೊಳಗಾದ ಕಚ್ರ ಬೆವರುತ್ತಾನೆ. ಕಚ್ರ ತನ್ನ ಎಡಗೈಯಿಂದಲೇ ಒಗೆಯುವಂತೆ ಭುವನ್ ಅಪೇಕ್ಷಿಸುತ್ತಾನೆ. ಕಚ್ರ ಒಗೆದ ಚೆಂಡು ಅದ್ಭುತ ತಿರುವು (spin) ತೆಗೆದುಕೊಂಡಿದ್ದನ್ನು ಕಂಡ ಭುವನ್ ಕಚ್ರನನ್ನು 11 ನೇ ಆಟಗಾರನಾಗಿ ಆಯ್ಕೆ ಮಾಡಲು ನಿರ್ಧರಿಸುತ್ತಾನೆ.





ಗ್ರಾಮದ ಮುಖ್ಯಸ್ಥ ವೈದ್ಯ ಜ್ಯೋತಿಷಿ (ಬ್ರಾಹ್ಮಣರಲ್ಲದೇ ಇನ್ಯಾರಿರಲು ಸಾಧ್ಯ?) ಗಳೆಲ್ಲ "ಬ್ರಿಟಿಷರ ವಿರುದ್ಧ ಹೋರಾಟಕ್ಕೆ, ಕ್ರಿಕೆಟ್‌ನಂತಹ ಸಿಲ್ಲಿ ಆಟ ಆಡಿ... ಪರವಾಗಿಲ್ಲ... ಆದರೆ ಕಚ್ರನಂತಹ ಹೊಲೆಯನನ್ನು ಸೇರಿಸಿಕೊಂಡು ಧರ್ಮ ಭ್ರಷ್ಟಗೊಳಿಸದಿರಿ" ಎಂದು ಕಿರಿಯರಿಗೆ ಸಲಹೆ ಕೊಡುತ್ತಾರೆ. 'ಬ್ರಿಟಿಷರ ವಿರುದ್ಧ' ಇರುವ ಈ ಹಳ್ಳಿ ಮುಂದಾಳುಗಳಿಗೆ, ಮುಂದೆ ಕಚ್ರನ ಆಟ ಸುಧಾರಿಸುವ ಎಲಿಜಬೆತ್‌ಳು ಮಾತ್ರ ಸಮಸ್ಯೆ ಎನಿಸುವುದಿಲ್ಲ! ಕಚ್ರನ ಪರ ನಿಲ್ಲುವ ಹೀರೋ ಭುವನ್ "ಶ್ರೀರಾಮನು ಶಬರಿ ಕಚ್ಚಿದ ಹಣ್ಣು ತಿಂದಿದ್ದ" ಪುರಾಣವನ್ನು ಹೇಳಿ, ಗ್ರಾಮಸ್ಥರನ್ನು ಒಪ್ಪಿಸುತ್ತಾನೆ. ಕಚ್ರನಿಗೆ ಟೀಮ್‌ನಲ್ಲಿ ಸ್ಥಾನ ದೊರಕುತ್ತದೆ. ಟೀಮೊಳಕ್ಕೆ ಬಂದರೂ ಈ ಕಚ್ರ ದೈನೇಸಿಯಾಗಿ ಮೂಕನಂತೆ ಇರಬೇಕಾಗುತ್ತದೆ. ಈ ಕಚ್ರನ ಪಾತ್ರದ ಪ್ರವೇಶದ ನಂತರ ಚಿತ್ರದಲ್ಲೆಲ್ಲೂ ಆ ಹಳ್ಳಿ ಜೀವನದಲ್ಲಿ ದಲಿತ ಅಥವಾ ಜಾತಿ ವ್ಯವಸ್ಥೆಯ ಚರ್ಚೆಯೇ ಇಲ್ಲ; ಅರ್ಚಕ... ನೊಬ್ಬನನ್ನು ಬಿಟ್ಟರೆ 'ಬ್ರಾಹ್ಮಣ'ನ ಗೈರು ಹಾಜರಿ... ಆದರೆ 'ಬ್ರಾಹ್ಮಣ್ಯ' ಗುಪ್ತಗಾಮಿನಿಯಂತೆ ಚಿತ್ರದುದ್ದಕ್ಕೂ ಹರಿಯುತ್ತಲೇ ಇರುತ್ತದೆ. ಉಳಿದ... ಪಾತ್ರಗಳೆಲ್ಲ ಜಾತಿ ಐಡೆಂಟಿಟಿ ಇಲ್ಲದ... 'ಮಾದರಿ' ಪಾತ್ರಗಳಂತೆಯೂ, ಕಚ್ರನ... ಪಾತ್ರ ಜಾತಿ ವ್ಯವಸ್ಥೆಯ ಕ್ರೂರತನವನ್ನೆಲ್ಲ ಹೊತ್ತಂತಹ... ಪಾತ್ರದಂತೆಯೂ ಗೋಚರಿಸುತ್ತದೆ. ಭುವನ್, ಲಾಖಾ... ಹಾಗೂ ಇತರರೆಲ್ಲರೂ ಒಮ್ಮೆಯೂ ಕೃಷಿ... ಚಟುವಟಿಕೆಯಲ್ಲಿ ತೊಡಗದಿದ್ದರೂ... ಕೃಷಿಕರೆಂದು ತೋರಿಸಲ್ಪಡುತ್ತಾರೆ... ಗೆಲುವಿನ ಕ್ಷಣಗಳು ಹತ್ತಿರ ಬಂದಾಗ... ಬ್ಯಾಟಿಂಗ್ ತುದಿಯಲ್ಲಿ ಕಚ್ರನಿರುತ್ತಾನೆ... ನಂತರದ ಎಸೆತ ನೊ-ಬಾಲ್... ನಂತರ... ಕಚ್ರನಿಂದ ಸಿಂಗಲ್ ರನ್...ಏಕೆಂದರೆ... ಬ್ಯಾಟಿಂಗ್ ತುದಿಗೆ ಭುವನ್ ಬಂದು... ಸಿಕ್ಸರ್ ಹೊಡೆದು winning shot... ಶ್ರೇಯಸ್ಸು ಪಡೆಯಬೇಕಲ್ಲ?


ಅಸ್ಪೃಶ್ಯತೆ, ಅಂಗವಿಕಲತೆ ಎರಡನ್ನೂ ಅಶುತೋಶ್‌ನಂತಹ ನಿರ್ದೇಶಕ ಬಳಸಿಕೊಳ್ಳುವ ರೀತಿಯೇ ಇದು? ಕಚ್ರ ಎಸೆಯುವ ಸ್ಪಿನ್‌ಗಳಿಗೆ ಅವನ ಕುಶಲತೆ...

## ಧಾರವಾಡದ 'ಬಾಲೂ': ಕಪ್ಪು ಹವಳದ ಸ್ಪಿನ್!

ಸಾಕಷ್ಟು ಅವಮಾನ ಅನುಭವಿಸಿದ ನಂತರ ಬಾಬೂಜಿ ಪಾಲ್ವನ್‌ಕರ್‌ಗೆ ಯೂರೋಪಿಯನ್ನರ ವಿರುದ್ಧದ ಹಿಂದೂ ತಂಡದಲ್ಲಿ ಸ್ಥಾನ ಸಿಕ್ಕಿತು. ಫೀಲ್ಡ್‌ನಲ್ಲಿ ಎಲ್ಲರೊಂದಿಗೆ ಸೇರಿ ಅದ್ಭುತ ಪ್ರದರ್ಶನ ನೀಡುತ್ತಿದ್ದ ಪಾಲ್ವನ್‌ಕರ್‌ರನ್ನು ವಿಶ್ರಾಂತಿ, ಊಟದ ವಿರಾಮಗಳ ವೇಳೆ ಅಸ್ಪೃಶ್ಯನಂತೆ ನೋಡಲಾಗುತ್ತಿತ್ತು. ಉಳಿದವರೆಲ್ಲ ಪೆವಿಲಿಯನ್‌ನಲ್ಲಿ ತಿನ್ನುತ್ತಿದ್ದರೆ, ಪಾಲ್ವನ್‌ಕರ್ ಮಾತ್ರ ಹೊರಗಡೆ ಮಣ್ಣಿನ ಪಾತ್ರೆಗಳಲ್ಲಿ ತಿನ್ನುತ್ತಾ ಕಾಲ ಕಳೆಯಬೇಕಾಗಿತ್ತು. ಆದರೆ ಛಲಬಿಡದ ಪಾಲ್ವನ್‌ಕರ್ ತನ್ನ ಸ್ಪಿನ್ ಪ್ರತಿಭೆಯಿಂದಲೇ ಯೂರೋಪಿಯನ್ ತಂಡಕ್ಕೆ ಸಿಂಹಸ್ವಪ್ನನಾಗಿ ಹಿಂದೂ ತಂಡದಲ್ಲಿ ಗೌರವ ಗಳಿಸಿ 'ಪಾಲ್ವನ್‌ಕರ್ ಬಾಲೂ' ಎಂದು ಖ್ಯಾತನಾಗಿದ್ದ.

ಅಂದಂತೆ ಈ 'ಬಾಲೂ' ನಮ್ಮ ಧಾರವಾಡದವನು. 1876ರ ಮಾರ್ಚ್ 19ರಂದು ಧಾರವಾಡದ ಚಮ್ಮಾರ ಕುಟುಂಬದಲ್ಲಿ ಜನಿಸಿದ ಈ ಬಾಲೂನ ಆರಂಭಿಕ ವಿದ್ಯಾಭ್ಯಾಸ ಧಾರವಾಡದಲ್ಲೇ ನಡೆಯಿತು. ನಂತರ ಹೊಟ್ಟೆಪಾಡಿಗಾಗಿ ಪೂನಾ ಸೇರಿದ. ಪಾರ್ಸಿಗಳು ಆಡುತ್ತಿದ್ದ ಪಿಚ್‌ನ್ನು ಸ್ವಚ್ಛಗೊಳಿಸುವ ಕೆಲಸ ಮಾಡಿ, ನಂತರ ಯೂರೋಪಿಯನ್ನರ ಕ್ರಿಕೆಟ್ ಕ್ಲಬ್ ಪೂನಾ ಕ್ಲಬ್‌ನಲ್ಲಿ ಕೆಲಸಕ್ಕೆ ಸೇರಿಕೊಂಡ. ಟ್ರಾಸ್ ಎನ್ನುವ ಯುರೋಪಿಯನ್ ನೆಟ್ ಪ್ರಾಕ್ಟೀಸ್ ಮಾಡುವಾಗ 'ಬಾಲೂ'ಗೆ ಬೌಲ್ ಮಾಡಲು ಉತ್ತೇಜಿಸುತ್ತಿದ್ದ. ನಂತರ ಕ್ಯಾಪ್ಟನ್ ಜೆ.ಸಿ. ಗ್ರೇಗ್ 'ಬಾಲೂ'ಗೆ ಟ್ರೇನ್ ಮಾಡಿದ. 'ಬಾಲೂ'ನ ಸ್ಪಿನ್ ಕಲೆ ನೋಡಿದ ಉಳಿದವರು ತಮಗೂ ಬೌಲ್ ಮಾಡಲು ಹೇಳುತ್ತಿದ್ದರು. ಎಡಗೈ ಆಫ್‌ಸ್ಪಿನರ್ ಆಗಿ 'ಬಾಲೂ' ರೂಪುಗೊಳ್ಳತೊಡಗಿದ. ಯೂರೋಪಿಯನ್ನರಿಗೆ ನೂರಾರು ತಾಸು ಬೌಲ್ ಮಾಡಿದರೂ ಒಮ್ಮೆಯೂ 'ಬಾಲೂ'ಗೆ ಬ್ಯಾಟ್ ಮಾಡಲು ಅವಕಾಶ ನೀಡಲಿಲ್ಲ!

ಪೂನಾದಲ್ಲಿ ಹಿಂದೂ ಕ್ಲಬ್, ಯೂರೋಪಿಯನ್ನರ ಮಧ್ಯೆ ಮ್ಯಾಚ್ ನಡೆಯುವುದರಲ್ಲಿತ್ತು, 'ಬಾಲೂ'ನನ್ನು ಹಿಂದೂ ತಂಡದಲ್ಲಿ ಸೇರಿಸಿಕೊಳ್ಳಬಹುದೇ ಎಂಬ ಚರ್ಚೆ ನಡೆದು, ಬ್ರಾಹ್ಮಣ ಆಟಗಾರರೆಲ್ಲ ಬಾಲೂ ಸೇರ್ಪಡೆಯನ್ನು ವಿರೋಧಿಸಿದರು. ಆದರೆ ಕೆಲ ತೆಲುಗು ಮೂಲದ ಆಟಗಾರರ ಬೆಂಬಲ ಸಿಕ್ಕು 'ಬಾಲೂ' ಹಿಂದೂ ತಂಡ ಸೇರುವಂತಾಯ್ತು. ಎಡಗೈಯಿಂದ ನಿಖರ ಆಫ್‌ಸ್ಪಿನ್‌ಗಳನ್ನು ಎಸೆಯುತ್ತಿದ್ದ ಬಾಲೂ, ಎರಡು ಕಡೆಗೂ ಚೆಂಡನ್ನು ತಿರುಗಿಸಬಲ್ಲವನಾಗಿದ್ದನಲ್ಲದೇ, ಕೆಳಹಂತದಲ್ಲಿ ಚೆನ್ನಾಗಿ ಬ್ಯಾಟ್ ಮಾಡುತ್ತಿದ್ದ. ನಂತರ 1896 ರಲ್ಲಿ ಬಾಂಬೆಗೆ ಹೋಗಿ ಪರಮಾನಂದ್ ದಾಸ್ ಹಿಂದೂ ಜಿಮ್‌ಖಾನಾ ಕ್ಲಬ್ ಪರ ಆಡಿದ. ಅಲ್ಲೂ ಬ್ರಾಹ್ಮಣರ ಕಾಟ ಶುರುವಾಗಿ, ಬಾಲೂ ಇಂಡಿಯನ್ ರೈಲ್ವೆಸ್‌ನಲ್ಲಿ ಕೆಲಸಕ್ಕೆ ಸೇರಿ, ಆ ತಂಡದ ಪರ ಆಡಿದ.



1906, 1907 ರಲ್ಲಿ ಹಿಂದೂ ಟೀಮ್ ಪರ ಆಡಿದ ಬಾಲೂ, ಯೂರೋಪಿಯನ್ ತಂಡವನ್ನು 109 ಮತ್ತು 238 ರನ್‌ಗಳಿಂದ ಎರಡೂ ಮ್ಯಾಚ್‌ಗಳಲ್ಲಿ ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ. 1911 ರಲ್ಲಿ ಎಲ್ಲ ಧರ್ಮದವರಿದ್ದ ಭಾರತ ತಂಡದೊಂದಿಗೆ ಇಂಗ್ಲೆಂಡ್ ಪ್ರವಾಸ ಮಾಡಿದ ಬಾಲೂ, ಭಾರತ ಸೋತರೂ ವೈಯಕ್ತಿಕವಾಗಿ ಮಿಂಚಿದ. ಆ ಸರಣಿಯಲ್ಲಿ 18.84 ಸರಾಸರಿಯಂತೆ 114 ವಿಕೆಟ್ ಪಡೆದಿದ್ದು ಒಂದು ಸಾಧನೆಯೇ! 1946 ರಲ್ಲಿ ವಿನೋದ್ ಮಂಕಡ್ ಇಂಗ್ಲೆಂಡ್ ಪ್ರವಾಸದಲ್ಲಿ 100 ವಿಕೆಟ್ ಪಡೆದದ್ದು ಬಿಟ್ಟರೆ, ಇಂಗ್ಲೆಂಡ್ ಪ್ರವಾಸ ಒಂದರಲ್ಲಿ ಇಲ್ಲಿವರೆಗೆ ಯಾರೂ 100 ವಿಕೆಟ್ ಪಡೆದಿಲ್ಲ! ಎಲ್ಲ ಕಷ್ಟಗಳ ನಡುವೆಯೂ ತನ್ನ ಸಹೋದರರಾದ ಶಿವರಾಮ್, ಗಣಪತ್, ವಿಠಲ್‌ರನ್ನು ಕ್ರಿಕೆಟಿಗರನ್ನಾಗಿ ರೂಪಿಸಿದ. ಕೊನೆಗೆ ವಿಠಲ್ ಪಾಲ್ವನ್‌ಕರ್ ಹಿಂದೂ ಟೀಮ್‌ನ ನಾಯಕನೂ ಆದ.

ಅಂಬೇಡ್ಕರರು 'ಬಾಲೂ'ನ ಈ ದಿಟ್ಟ ಹೋರಾಟ ನೋಡಿ 'ಬಾಲೂ'ನನ್ನು ಆದರ್ಶ ಎಂದುಕೊಂಡಿದ್ದರು. ಗಾಂಧಿ ದಲಿತರನ್ನೆಲ್ಲ ಭಾರತೀಯ ಸಮಾಜದೊಳಗಿನ ಭಾಗವಾಗಿ ಮಾರ್ಪಡಿಸುವ ಪ್ರಯತ್ನದಲ್ಲಿದ್ದಾಗ, ಬಾಲೂ ಗಾಂಧಿ ಜೊತೆ ಸೇರಿದ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಡಾ. ಅಂಬೇಡ್ಕರ್ ದಲಿತರಿಗೆ ಶಾಸನ ಸಭೆಯಲ್ಲಿ ಪ್ರತ್ಯೇಕ ಪ್ರತಿನಿಧಿತ್ವ ಬೇಕೆಂದು ಹೇಳಿ, ದಲಿತರಿಗೆ ದಲಿತರಿಂದಲಷ್ಟೇ ಮತ ಹಾಕುವ ವ್ಯವಸ್ಥೆಗಾಗಿ ಒತ್ತಾಯಿಸುತ್ತಿದ್ದರು. ಕೊನೆಗೆ ಪರಿಸ್ಥಿತಿಯ ಅನಿವಾರ್ಯತೆಗೆ ಅಂಬೇಡ್ಕರ್ ಸಹ ಗಾಂಧಿಯ ವಿಚಾರ ಲಹರಿ ಒಪ್ಪಿ, ದಲಿತ ಅಭ್ಯರ್ಥಿಗಳಿಗೆ ಎಲ್ಲ ಜನಾಂಗದವರೂ ಮತ ಹಾಕುವ ವ್ಯವಸ್ಥೆ ಬಂದಿತು.

1937 ರಲ್ಲಿ ಅಂಬೇಡ್ಕರ್ ವಿರುದ್ಧ ಕಾಂಗ್ರೆಸ್ ಪರವಾಗಿ ಬಾಂಬೆ ಮುನ್ಸಿಪಾಲಿಟಿ ಇಲೆಕ್ಷನ್‌ಗೆ ನಿಂತ ಬಾಲೂ ಸ್ವಲ್ಪ ಅಂತರದಲ್ಲಿ ಸೋತ. ಜುಲೈ 1955 ರಲ್ಲಿ ಬಾಂಬೆಯಲ್ಲಿ ಬಾಲೂ ನಿಧನರಾದಾಗ ಸಾವಿರಾರು ಜನರೊಂದಿಗೆ ಇಡೀ ಬಾಂಬೆ ಶಾಸನಸಭೆಯೇ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿತ್ತು. 33 ಫಸ್ಟ್‌ಕ್ಲಾಸ್ ಮ್ಯಾಚ್ ಆಡಿದ ಬಾಲೂ 15.21 ಸರಸರಿಯಲ್ಲಿ 179 ವಿಕೆಟ್ ಪಡೆದಿದ್ದ.

ಬರೀ ಕ್ರಿಕೆಟ್ ಅಷ್ಟೇ ಅಲ್ಲದೇ, ಸಮಾಜ ಸೇವೆಯಲ್ಲೂ ಛಾಪು ಮೂಡಿಸಿದ ಧಾರವಾಡದ ಈ ಚಮ್ಮಾರನನ್ನು ಇಲ್ಲಿವರೆಗೂ ಇತಿಹಾಸಕಾರರು ಉಪೇಕ್ಷೆ ಮಾಡುತ್ತಲೇ ಬಂದಿದ್ದರು.

ಬಾಲೂ ನಂತರ ಭಾರತ ಕ್ರಿಕೆಟ್ ತಂಡದಲ್ಲಿ ಮತ್ತೆ ದಲಿತರಾರೂ ಶಾಶ್ವತವಾಗಿ ನಿಲ್ಲಲೇ ಇಲ್ಲ.


# ದಿ ಬಿ-ಟೀಮ್... ದಿ 'ಬ್ರಾ' ಟೀಮ್!

ಇಲ್ಲಿ ಬಿ-ಟೀಮ್ ಎಂದರೆ ಇಂಡಿಯಾ-ಬಿ ತಂಡ ಎಂದುಕೊಳ್ಳಬೇಡಿ. ಇದು ಬ್ರಾಹ್ಮಣ ಟೀಮ್ ಎಂದರ್ಥ. 1970, 1980, 1990 ರ ದಶಕಗಳ ಭಾರತ ತಂಡದ ಮೂರು ಸ್ಯಾಂಪಲ್‌ಗಳಿವೆ ಇಲ್ಲಿ...

| 1996 | 1982 | 1978 |
| --- | --- | --- |
| ವಿಕ್ರಮ್ ರಾಥೋಡ್ (ಮೇಲ್ಜಾತಿ) | ಗಾವಸ್ಕರ್ (ಬ್ರಾಹ್ಮಣ) | ಗಾವಸ್ಕರ್ (ಬ್ರಾಹ್ಮಣ) |
| ಅಜಯ್ ಜಡೇಜಾ (ಮೇಲ್ಜಾತಿ) | ಪಾರ್ಕರ್ (ಮೇಲ್ಜಾತಿ) | ಚೌಹಾಣ್ (ಮೇಲ್ಜಾತಿ) |
| ಸಂಜಯ್ ಮಂಜ್ರೇಕರ್(ಬ್ರಾಹ್ಮಣ) | ವೆಂಗ್‌ಸರ್‌ಕರ್ (ಬ್ರಾಹ್ಮಣ) | ಎಂ.ಅಮರ್‌ನಾಥ್ (ಮೇಲ್ಜಾತಿ) |
| ತೆಂಡೂಲ್ಕರ್ (ಬ್ರಾಹ್ಮಣ) | ಜಿ.ಆರ್.ವಿಶ್ವನಾಥ್ (ಬ್ರಾಹ್ಮಣ) | ಜಿ.ಆರ್. ವಿಶ್ವನಾಥ್ (ಬ್ರಾಹ್ಮಣ) |
| ಅಜರುದ್ದೀನ್ (ಮುಸ್ಲಿಮ್) | ಯಶಪಾಲ್‌ಶರ್ಮಾ(ಬ್ರಾಹ್ಮಣ) | ವೆಂಗಸರ್‌ಕರ್ (ಬ್ರಾಹ್ಮಣ) |
| ನಯನ್ ಮೋಂಗಿಯಾ (ಮೇಲ್ಜಾತಿ) | ಒ. ಮಲ್ಹೋತ್ರಾ (ಮೇಲ್ಜಾತಿ) | ಕೀರ್ಮಾನಿ (ಮುಸ್ಲಿಂ) |
| ಕುಂಬ್ಳೆ (ಬ್ರಾಹ್ಮಣ) | ಕಪಿಲ್ ದೇವ್ (ಜಾಟ್) | ಕಪಿಲ್‌ದೇವ್ (ಜಾಟ್) |
| ಜೆ. ಶ್ರೀನಾಥ್ (ಬ್ರಾಹ್ಮಣ) | ರವಿಶಾಸ್ತ್ರಿ (ಬ್ರಾಹ್ಮಣ) | ಕರ್ಸನ್ ಘಾವ್ರಿ (ಮೇಲ್ಜಾತಿ) |
| ವೆಂಕಟೇಶ್ ಪ್ರಸಾದ್ (ಬ್ರಾಹ್ಮಣ) | ಕಿರ್ಮಾನಿ (ಮುಸ್ಲಿಂ) | ವೆಂಕಟ್‌ರಾಘವನ್ (ಬ್ರಾಹ್ಮಣ) |
| ಮದನ್‌ಲಾಲ್ (ಬ್ರಾಹ್ಮಣ) | ಬಿಷನ್‌ಸಿಂಗ್ ಬೇಡಿ (ಸಿಖ್) | ದುಲೀಪ್ ದೋಶಿ (ಬ್ರಾಹ್ಮಣ) |
| ಬಿ.ಎಸ್. ಚಂದ್ರಶೇಖರ್ (ಬ್ರಾಹ್ಮಣ) | | |


ಸರಾಸರಿ 6 ಬ್ರಾಹ್ಮಣರು ತಂಡದಲ್ಲಿದ್ದೇ ಇದ್ದಾರೆ!





ಕಾರಣವಲ್ಲ; ಬದಲಿಗೆ ಅವನ ಅಂಗವಿಕಲತೆಯಿಂದಲೇ ಅದು ಸಾಧ್ಯ ಎಂಬಂತೆ ಚಿತ್ರಿತವಾಗುತ್ತದೆ. ನಮ್ಮದೇ ರಾಜ್ಯದ ಚಂದ್ರಶೇಖರ್ (ಬ್ರಾಹ್ಮಣರೂ ಹೌದು) ಸ್ಪಿನ್ ಕುಶಲತೆಗೆ ಅವರ ಅಂಗವಿಕಲತೆಯನ್ನೇ ಕಾರಣ ಮಾಡಿದರೆ, ಚಂದ್ರಶೇಖರ್ ಕುಶಲತೆಗೆ ಅವಮಾನ ಮಾಡಿದಂತಲ್ಲವೆ?


ದಿಯೋಧರ್

ಕಲ್ಪನೆಯ ಇತಿಹಾಸದ ತುಂಡನ್ನು **recreate** ಮಾಡುವುದಾಗಿ ಸಾರುವ 'ಲಗಾನ್' ಬ್ರಾಹ್ಮಣ್ಯದ ಕತೆಯಾಗಿ ನಿಲ್ಲಲಷ್ಟೇ ಸಾಧ್ಯವಾಗುತ್ತದೆ. ಇವತ್ತು ದಲಿತ ಕ್ರಿಕೆಟರ್‌ಗಳೆಲ್ಲ ಕಚ್ರನಂತಾಗಿ ಹೋಗಿದ್ದಾರೆ. ಬಾಲೂ ಪಾಲ್ವನ್‌ಕರ್ ಸ್ವಾತಂತ್ರ್ಯಪೂರ್ವ ದಲ್ಲಿ ಕಚ್ರನ ದುರಂತಗಳನ್ನು ಅನುಭವಿಸಿ ಕೊನೆಗೂ ಗೆಲ್ಲುತ್ತಾನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾವಿರಾರು ಕಾಂಬ್ಳಿಗಳು, ದೊಡ್ಡ ಗಣೇಶ್‌ಗಳು ಹೇಳ ಹೆಸರಿಲ್ಲದಂತಾಗುತ್ತಾರೆ.




ಇಷ್ಟು ಮಟ್ಟದಲ್ಲಿ ಬ್ರಾಹ್ಮಣ ಕ್ರಿಕೆಟಿಗರು ಇವತ್ತು ತುಂಬಾ ಪ್ರಬಲರು. ಸ್ವಾತಂತ್ರ್ಯಕ್ಕೂ ಮೊದಲು ಬಾಂಬೆ ಕ್ವಾಂಟಾಗುಲರ್ (ಆಗ ಕಮ್ಯುನಲ್ ಆಧಾರದ ಮೇಲೆ ಐದು ತಂಡಗಳು-ಹಿಂದೂ ತಂಡ, ಮಹಮ್ಮದಿಯನ್ಸ್, ಪಾರ್ಸಿ, ಯುರೋಪಿಯನ್ಸ್ ಮತ್ತು ಇತರರು) ಎಂಬ ಕಮ್ಯುನಲ್ ಕ್ರಿಕೆಟ್ ಇದ್ದರೆ ಸ್ವಾತಂತ್ರ್ಯಾ ನಂತರ ಭಾರತ ಕ್ರಿಕೆಟ್ ಬ್ರಾಹ್ಮಣರ, ಬ್ರಾಹ್ಮಣ್ಯದ ಮೇಲ್ವರ್ಗಗಳ ಸಕಸ್ವಾಮ್ಯಕ್ಕೊಳಗಾಗಿ ಹೋಗಿತು.

ಹಾಕಿ, ಫುಟ್‌ಬಾಲ್‌ಗಳಂತೆ ಕ್ರಿಕೆಟ್‌ಗೆ ಹೆಚ್ಚು [illegible] ದೈಹಿಕ ಚಟುವಟಿಕೆಯ ಅಗತ್ಯವೇ ಇಲ್ಲ, [illegible] ಮಾಡುವ ಒಬ್ಬ ಆಟಗಾರ [illegible] ಹೊತ್ತು idle ಆಗಿ ಕಾಲ [illegible]ಬಹುದು. ಈ ಒನ್‌ಡೇ [illegible]ಗಳಲ್ಲಿ ಫಾಸ್ಟ್ ಬೌಲರ್ ಸಹ [illegible]ಗಳಲ್ಲಿ ಒಂದಿಷ್ಟು ಶಕ್ತಿ [illegible], ಬೌಂಡರಿ ಲೈನ್ ಬಳಿ [illegible]ಸುತ್ತಾ ಓಡಬಹುದು. ಜಾಟ್ [illegible] ನಂತರ ಬಂದ ನಿಜವಾದ [illegible] ಬೌಲರ್ ಅಂದರೆ [illegible] ಒಬ್ಬನೇ ಅನ್ನುತ್ತ,

ಗವಾಸ್ಕರ್, ತೆಂಡೂಲ್ಕರ್‌ಗಳೆಲ್ಲರ ರೆಕಾರ್ಡ್ಸ್ ನಿಂತಿರುವುದು ಭಾರತ ತಂಡದ ನೂರಾರು ಅವಮಾನಕಾರಿ ಸೋಲುಗಳೆಂಬ ಹೆಣಗಳ ಮೇಲೆ!

ಸ್ಲಿಪ್‌ಗಳಲ್ಲಿ ಫಿಲ್ಡಿಂಗ್ (ಸ್ಲೀಪಿಂಗ್?) ಮಾಡುತ್ತಲೇ ಬೆವರಿಳಿಸದೇ ಆಡುತ್ತಾ ಬಂದಿದ್ದ ಗವಾಸ್ಕರ್, ಜಿ.ಆರ್. ವಿಶ್ವನಾಥ್‌ರಂತಹ ಆಟಗಾರರಿಗೆ ಹಾಕಿ, ಫುಟ್‌ಬಾಲ್‌ನಲ್ಲಿ ಐದು ನಿಮಿಷ ಫೀಲ್ಡ್‌ನಲ್ಲಿರಲು ಆಗುತ್ತದೆಯೆ? ಅದಕ್ಕೇ ಹಾಕಿಯ ಅತ್ಯಮೂಲ್ಯ ಆಟಗಾರರು ಬಂದಿರುವುದು ದಲಿತ, ಆದಿವಾಸಿ, ಸಿಖ್ ಹಾಗೂ ನಮ್ಮ ಕೊಡವ ಸಮುದಾಯಗಳಿಂದಲೇ ಅಲ್ಲವೆ? ಎರಡು ತಾಸುಗಳಲ್ಲಿ ರೋಮಾಂಚಕ ಫಲಿತಾಂಶ ನೀಡುವ ರಾಷ್ಟ್ರೀಯ ಕ್ರೀಡೆ ಹಾಕಿಯನ್ನು ತುಳಿದವರು ಬ್ರಾಹ್ಮಣ್ಯ ಮನಸ್ಸಿನ ಕ್ರೀಡಾಧಿಕಾರಿಗಳೇ.

ಒಮ್ಮೆ ನಮ್ಮ ಕರ್ನಾಟಕದಿಂದ ಏಳು ಜನ ಆಟಗಾರರಿದ್ದಲ್ಲ? ಅನಿಲ್ ಕುಂಬ್ಳೆ, ದ್ರಾವಿಡ್, ಸುನೀಲ್ ಜೋಶಿ, ಫೀಲ್ಡ್‌ನಲ್ಲಿ ಆಗಾಗ ಸುಸ್ತಾಗುತ್ತಲೇ ಇರುತ್ತಿದ್ದ 'ವೆಜಿಟೇರಿಯನ್' ಬೌಲರ್ ಶ್ರೀನಾಥ್, 10-15 ಅಡಿಗಳಿಂದ ಓಡಿ ಬಂದು 'ಆಫ್-ಸ್ಪಿನ್' ಎಸೆಯುತ್ತಿದ್ದ 'ಸ್ವಿಂಗ್ ಬೌಲರ್' ವೆಂಕಟೇಶ್‌ಪ್ರಸಾದ್- ಈ ಎಲ್ಲ ಬ್ರಾಹ್ಮಣರು ಪ್ರತಿಭಾವಂತರು ನಿಜ; ಆದರೆ ಅದೇ ವೇಳೆ ತಂಡದಲ್ಲಿದ್ದ ಡೇವಿಡ್ ಜಾನ್ಸನ್, ದೊಡ್ಡ ಗಣೇಶ್‌ರಿಗೆ ಇನ್ನು ಹೆಚ್ಚಿನ ಅವಕಾಶ ಸಿಕ್ಕಿದ್ದರೆ ಶ್ರೀನಾಥ್, ವೆಂಕಿಗಳಿಗಿಂತ ಮುಂದೆ ಹೋಗಿರುತ್ತಿದ್ದರು.



ಬರೀ ಮೆಟ್ರೋಗಳಿಗೆ ಸೀಮಿತವಾಗಿದ್ದ ಕ್ರಿಕೆಟ್ ನಲ್ಲೀಗ ಸಣ್ಣಪುಟ್ಟ ಊರುಗಳಿಂದಲೂ ಬ್ರಾಹ್ಮಣರಲ್ಲದ ಹೊಸ ಯುವ ಆಟಗಾರರು ಎಲ್ಲ **hurdles** ಗಳನ್ನು ದಾಟಿ ಮುಂದೆ ಬರುತ್ತಿರುವುದು ಸ್ವಾಗತಾರ್ಹ.

ಆದರೆ ನಾವು ಮತ್ತೊಬ್ಬ ಬಾಲೂ [illegible] ಸದ್ಯದಲ್ಲಿ ನೋಡಲು ಸಾಧ್ಯವೇ ಎಂಬುದು ಅನುಮಾನಾಗಿದೇ.

# ಸಂತಾನಾಭಿವೃದ್ಧಿಯ ಸಮರ


ಬಂಡೀಪುರ ಕಾಡಿನಲ್ಲಿ ಒಂದು ದಿನ ಕ್ಷುಧಾಕ್ಷ ಮೀರಿತ್ತು, ಪಶ್ಚಿಮದ ಪಡಸಾನೆಗೆ ಹೋಗಲು ಸೂರ್ಯ ಸಿದ್ಧತೆ ನಡೆಸಿದ್ದ, ತನ್ನ ನಿತ್ಯದ ಹಗಲಿನ ಚಟುವಟಿಕೆಯಿಂದ ಬೇಸತ್ತ ಕಾಡು ಕ್ರಮೇಣ ಸ್ತಬ್ಧಗೊಳ್ಳತೊಡಗಿತ್ತು, ಎಲ್ಲೋ ಕೆಲವು ಕಾಜಾಣಗಳು ಮಾತ್ರ ತಮ್ಮ ಆಲಾಪನೆಯನ್ನು ಮುಂದುವರಿಸಿದ್ದವು.

ದೈನಂದಿನ ಕೆಲಸಗಳನ್ನು ಮುಗಿಸಿ ವಾಪಸಾಗುತ್ತಿದ್ದ ನಮಗೆ ಮನೆಯ ಬಳಿ ಪವಾಡ ಸದೃಶ ದೃಶ್ಯವೊಂದು ಗೋಚರಿಸಿತು. ಮನೆಯ ಬಳಿ ಇದ್ದ ಹುತ್ತ ಈ ಪವಾಡದ ಕೇಂದ್ರವಾಗಿತ್ತು. ಈ ಹುತ್ತ ಅಲ್ಲಿಯವರೆಗೆ ನಮ್ಮ ಗಮನ ಸೆಳೆಯದ ರಚನೆಯಾಗಿತ್ತು. ಯಾವಾಗಲೋ ದಾರಿ ತಪ್ಪಿ ಮನೆಯ ಬಳಿಗೆ ಬರುತ್ತಿದ್ದ ಉಡಗಳನ್ನು ಬೊಮ್ಮನು ಬೆನ್ನಟ್ಟಿ ಹೋದಾಗ ಅವು ಹುತ್ತದೊಳಗೆ ನುಸುಳಿ ಅಡಗಿಕೊಳ್ಳುತ್ತಿದ್ದವು. ಅಷ್ಟು ಬಿಟ್ಟರೆ ಮುಂಜಾನೆ ಕೆಲವು ಗೆದ್ದಲು ಹುಳುಗಳು ಭೂಮಿಯ ಗರ್ಭದಿಂದ ಸಣ್ಣಸಣ್ಣ ಮಣ್ಣಿನ ಕಣಗಳನ್ನು ಹೊತ್ತು ತಂದು ಹುತ್ತದ ನೆತ್ತಿಯ ಮೇಲೆ ಇಟ್ಟು ಹೋಗುವುದನ್ನು ನೋಡುತ್ತಿದ್ದೆವು. ಗೆದ್ದಲು ಹುಳುಗಳ ಈ ನಿರಂತರ ಕಾರ್ಯ ಮುಂದುವರಿದಿದ್ದರು ಮಳೆ ಗಾಳಿಯ ಒತ್ತಡದಿಂದ. ಹುತ್ತ ಎತ್ತರಕ್ಕೂ ಬೆಳೆಯದೆ ನೆಲಕ್ಕೂ ಮುಟ್ಟದೆ, ಪಕ್ಕಕ್ಕೂ ವಿಸ್ತರಿಸದೆ ಸ್ಮಾರಕದಂತೆ ತನ್ನ ಅಸ್ತಿತ್ವವನ್ನಷ್ಟೇ ಉಳಿಸಿಕೊಂಡಿತ್ತು.


ಕೃಪಾಕರ-ಸೇನಾನಿ

ಆದರೆ ಈ ಸಂಜೆ ಹುತ್ತಕ್ಕೆ ಜೀವ ಬಂದಿತ್ತು. ಹುತ್ತದ ನೆತ್ತಿಯ 'ಚಿಮಣಿ'ಯ ಬಳಿ ಸಂಭ್ರಮ ಮನೆ ಮಾಡಿತ್ತು. ಹುತ್ತದ ಬಾಯಿಂದ ರೆಕ್ಕೆ ಕಟ್ಟಿಕೊಂಡ ಗೆದ್ದಲುಗಳು ನಿರಂತರವಾಗಿ ಹೊರ ಬಂದು ಮುಗಿಲಿಗೆ ಹಾರತೊಡಗಿದವು. ಒಂದೆರಡು ನಿಮಿಷಗಳಲ್ಲಿ ಅವುಗಳ ಸಂಖ್ಯೆ ಏರತೊಡಗಿ ಗುಣಾಕಾರ ಭಾಗಾಕಾರದ ವ್ಯಾಪ್ತಿಯನ್ನೂ ಮೀರಿ ಇಡೀ ವಾತಾವರಣವೇ ರೆಕ್ಕೆ ಹುಳುಗಳ ಮಂಜಾಗಿ ಹೋಯಿತು.

ಇದು ಗೆದ್ದಲು ಹುಳುಗಳು ಸಂತಾನಾಭಿವೃದ್ಧಿಗೆ ಮಾಡುವ ಪೀಠಿಕಾ ಹಾರಾಟ. ಹೊಸ ಬದುಕಿನ ತುಡಿತದಿಂದ ತಾತ್ಕಾಲಿಕ ರೆಕ್ಕೆ ಕಟ್ಟಿಕೊಂಡು ಅವು ಹೊರಬರುತ್ತಿದ್ದವು. ರೆಕ್ಕೆ ತೊಟ್ಟ ಗೆದ್ದಲುಗಳ ಮಂಜು ಮತ್ತಷ್ಟು ದಟ್ಟವಾಗ ತೊಡಗಿತು. ಹುತ್ತದ ನೆತ್ತಿಯೇರಿ ಜಿಗಿಯುತ್ತಿದ್ದ ಸಹಸ್ರ ಸಹಸ್ರ ಹುಳುಗಳು ಆಕಾಶದಲ್ಲಿ ಹಾರಾಡುವ ಸಮರ ಹೆಲಿಕಾಪ್ಟರ್ ಸಮೂಹದಂತೆ ಕಾಣತೊಡಗಿದವು. ಶತದಿಕ್ಕುಗಳತ್ತ ತೇಲಿ ಅಲ್ಲಲ್ಲಿ ಭೂಸ್ಪರ್ಶ ಮಾಡಿ ರೆಕ್ಕೆ ಕಳಚಿಟ್ಟು ಕಲ್ಲು, ಹುಲ್ಲು, ಸಣ್ಣಪುಟ್ಟ ಗುಡ್ಡಗಳನ್ನು ಏರಿಳಿದು ಓಡತೊಡಗಿದವು.



ಈ ದೃಶ್ಯ ಕೆಲ ನಿಮಿಷಗಳಲ್ಲಿ ಸುತ್ತಮುತ್ತಲಿನ ಹಕ್ಕಿಗಳ ಗಮನ ಸೆಳೆದು ಕಾಡಿಗೆ ಕಾಡೇ ಎಚ್ಚರಗೊಂಡಿತು. ಗೂಡಿಗೆ ಮರಳಿದ್ದ ಮರ ಕುಟುಗ, ಮಡಿವಾಳ ಪಿಕರಾಳ, ಕಾಜಾಣಗಳೆಲ್ಲ ಮೈಕೊಡವಿಕೊಂಡು ಹುತ್ತದ ಬಳಿ ದಾಳಿ ಇಟ್ಟವು. ಗಾಳಿಯಲ್ಲಿ ಹಾರಾಡುತ್ತಿದ್ದ ಹುಳುಗಳನ್ನು ಲಪಟಾಯಿಸುತ್ತಿದ್ದ ಹಕ್ಕಿಗಳ ಗದ್ದಲ ಮುಗಿಲುಮುಟ್ಟಿತು. ಈ ಗದ್ದಲದಿಂದ ಭೋಜನ ಕೂಟದ ಸುಳಿವು ಮತ್ತಿತರ ಹಕ್ಕಿಗಳಿಗೂ ಸಿಕ್ಕಿತು. [illegible]ದೂ ಧರೆಗಿಳಿಯದ ಕಾಮಳ್ಳಿ, ಓರಿಯಲ್, [illegible], ಮಿನಿವೆಟ್, ನಟ್ಯಾಚ್‌ಗಳು ಅಮಿಂತ[illegible] [illegible]ದ್ದರೂ ಭೋಜನದ ಸರ್ಧೆಗೆ ಇಳಿದವು. ಸರ್ಧೆ ಹೆಚ್ಚುತ್ತಾ ಸಾಗಿ ಹಕ್ಕಿಗಳು ಹುತ್ತದ ಬಾಯಿಗೆ ಮುತ್ತಿಗೆ ಹಾಕಿದವು.

ಹಕ್ಕಿಗಳ ತೀವ್ರ ದಾಳಿಯನ್ನು ತಪ್ಪಿಸಿಕೊಂಡು ಬದುಕುಳಿದ ಹುಳುಗಳು ಅಲ್ಲಲ್ಲಿ ನೆಲಕ್ಕಿಳಿದು ರೆಕ್ಕೆಯನ್ನು ಕಳಚಿಟ್ಟು ಹುಲ್ಲು ಕಡ್ಡಿಯನ್ನು ಏರಿಳಿಯುತ್ತಾ ಸಾಗಿದವು. ಈ ಸುದ್ದಿ ಇರುವೆ, ಗೊದ್ದಗಳಿಗೆಲ್ಲ ತಲುಪಿ ಭೂ ಸಮರಕ್ಕೆ ನಾಂದಿಯಾಯಿತು. ತುಸು ಸಮಯದಲ್ಲೇ ದೋಲುಗೈ ಪಡೆದ ಇರುವೆಗಳು ಹಲವಾರು ಗೆದ್ದಲು ಹುಳುಗಳನ್ನು ಕೊಂದು ಮತ್ತಷ್ಟನ್ನು ಸೆರೆಹಿಡಿದು ತಮ್ಮ ತಮ್ಮ ಸುರಂಗದ ಪಠಾರದತ್ತ ಎಳೆದೊಯ್ಯತೊಡಗಿದವು.

ಈ ಹೊತ್ತಿಗೆ ವೈರಿಗಳ ದಾಳಿಯಿಂದ ಪರಿಸ್ಥಿತಿ ಕೈಮೀರಿದ ಸಂಗತಿ ಹುತ್ತದೊಳಗೆ ತಲುಪಿರಬೇಕು. ಗೆದ್ದಲುಗಳ ಸೈನಿಕ ವರ್ಗ ಹುತ್ತದ ಬಾಯಿಗೆ ಬಂದು ಹತ್ತಿರ ಬಂದ ಹಕ್ಕಿಗಳ ಮೇಲೆರಗಿದವು. ಆದರೆ ಈ ದುರ್ಬಲ ದಾಳಿ ಹಕ್ಕಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಲಿಲ್ಲ. ಬದಲಾಗಿ ಅವೂ ಆಹಾರವಾಗತೊಡಗಿದವು.


ಈ ತಂತ್ರ ವಿಫಲವಾದ ನಂತರ 'ಆತ್ಮಾಹುತಿ ಸೈನಿಕ ದಳ' ಹೊರಬಂತು. ಇವು ಗೆದ್ದಲು ಗೂಡಿನ ತೀವ್ರಗಾಮಿಗಳು. ತಮ್ಮ ಶರೀರದಲ್ಲಿ ಒಂದು ಬಗೆಯ ಅಂಟು ವಿಷವನ್ನು ಸ್ರವಿಸಿಕೊಂಡು ಇವು 'ಸಜೀವ ಬಾಂಬ್'ಗಳಂತಿರುತ್ತವೆ. ಇವನ್ನು ಭಕ್ಷಿಸಿದ ವೈರಿಗಳಲ್ಲಿ ಆಲಸ್ಯವುಂಟಾಗುತ್ತದೆ. ಸ್ವಲ್ಪ ಸಮಯದಲ್ಲಿ ವೈರಿಗಳು ಕಾಲ್ತೆಗೆಯುತ್ತವೆ.

ಆದರೆ ಇಂದು ಹಾಗಾಗಲಿಲ್ಲ. ವಿಪರೀತ ಸಂಖ್ಯೆಯಲ್ಲಿದ್ದ ಹಕ್ಕಿಗಳಿಗೆ ಸೈನಿಕ ವರ್ಗದ ಹುಳುಗಳೂ ಆಹುತಿಯಾಗಲಾರಂಭಿಸಿದವು. ಕೊನೆಗೆ ಸೋಲನ್ನು ಮನಗಂಡ ಸೈನಿಕರು, ಕಾರ್ಮಿಕರು ಒಮ್ಮಿದೊಮ್ಮೆಗೆ ಹುತ್ತದ ಬಾಯಿಯನ್ನು ಮಣ್ಣಿನಿಂದ ಮುಚ್ಚಿ ಸೀಲ್ ಮಾಡಿದವು. ಅಲ್ಲಿಗೆ ನಾಟಕ ಅಂತ್ಯಗೊಂಡಿತು.

ಹೀಗೆ ಸಂತಾನೋತ್ಪತ್ತಿಯಂಥ ಸಂಭ್ರಮದ ಕ್ರಿಯೆ ಸಂಗ್ರಾಮವೊಂದಕ್ಕೆ ನಾಂದಿ ಹಾಡಿತು. ಅದರಲ್ಲಿ ಗೆದ್ದಲುಗಳು ಸಂಪೂರ್ಣ ಸೋತವೆಂದು ಅರ್ಥವಲ್ಲ. ಈ ಎಲ್ಲಾ ದಾಳಿಗಳಿಂದ ತಪ್ಪಿಸಿಕೊಂಡ ಒಂದೆರಡು ಜೋಡಿಯಾದರೂ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಯಶಸ್ವಿಯಾಗಿರಬಹುದು. ಈ ಹಿನ್ನೆಲೆಯನ್ನು ನಿರೀಕ್ಷಿಸಿಯೇ ಗೆದ್ದಲುಗಳು ಏಕಕಾಲದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹೊರಬರುತ್ತವೆ. ಇದೇ ಅವುಗಳ ಉಳಿವಿನ ರಹಸ್ಯ. ನೀವೂ ಇಂತಹ ಘಟನೆಯನ್ನು ಗಮನಿಸಿರಬಹುದಲ್ಲವೇ? ಜ್ಞಾಪಿಸಿಕೊಳ್ಳಿ. ಮುಂಗಾರಿನ ಯಾವುದೋ ಒಂದು ರಾತ್ರಿ ನಿಮ್ಮ ಮನೆಯಂಗಳದ ದೀಪದ ಲ್ಯಾಂಟೀನುಗಳಿಗೆ ರೆಕ್ಕೆ ತೊಟ್ಟ ಗೆದ್ದಲು ಮುತ್ತಿಗೆ ಹಾಕಿದ್ದ ಕ್ಷಣ. ಮರುದಿನ ಬೆಳಗೆ ಅವುಗಳು ಕಳಚಿಟ್ಟ ಸಾವಿರ ಸಾವಿರ [illegible] ರೆಕ್ಕೆಗಳನ್ನು ಗುಡಿಸಿ ಹೊರ ಹಾಕಿದ ನೆನಪು.

ಇವೂ ಸಹ ಸಂತಾನಾಭಿವೃದ್ಧಿಯ ಮಹಾಮುಹೂರ್ತದಿಂದ ಹೊರಟ ಗೆ[illegible] [illegible]





# ಅದೇ ಹಾಳೆ ಅದೇ ಸುದ್ದಿ

...ಯಾರಿನಲ್ಲಿ ಯಾವುದೇ ವೃತ್ತಪತ್ರಿಕೆಯನ್ನು ...ದ ಬದುಕುವ ಹತ್ತು ಸಾವಿರ ಮಂದಿಗಿಂತ ಆ ...ವರುಷದಲ್ಲಿ ವೃತ್ತಪತ್ರಿಕೆಯನ್ನು ಓದುವ ಒಂದೆರಡು ...ಮಂದಿಯ ಬದುಕು ಹೇಗೆ ಭಿನ್ನ ಎನ್ನುವುದನ್ನು ವಿಚಾರ ಮಾಡಿ ನೋಡಿದರೆ, ದಿನಪತ್ರಿಕೆ, ವಾರಪತ್ರಿಕೆ ಅಥವಾ ಯಾವುದೇ ಪತ್ರಿಕೆಯನ್ನು ಓದದೆಯೂ ಆರಾಮವಾಗಿ ಬದುಕಬಹುದು ಎಂಬುದನ್ನು ಕಂಡುಕೊಳ್ಳಬಹುದು. ಆದುದರಿಂದ ವೃತ್ತಪತ್ರಿಕೆಯನ್ನು ಓದುವ ಅಗತ್ಯವಿಲ್ಲ ಎಂಬ ತೀರ್ಮಾನಕ್ಕೂ ಬರಬಹುದು.

ದಿನ ಬಿಡದೆ ವೃತ್ತಪತ್ರಿಕೆಯನ್ನು ಓದುವ ಮಂದಿಗೆ ಕೂಡ ಪತ್ರಿಕೆಯನ್ನು ಓದಿ ಏನಾಗಬೇಕು ಎಂದು ಅನೇಕ ಬಾರಿ ಅನಿಸುವುದಿದೆ. ವಿದ್ಯಾವಂತರೆಲ್ಲ ವೃತ್ತಪತ್ರಿಕೆ ಓದುವವರಲ್ಲ. ವೃತ್ತಪತ್ರಿಕೆಯನ್ನು ಕೊಂಡುಕೊಳ್ಳುವವರಲ್ಲಿ ಬಹಳಮಂದಿ ಅದರ ಮೇಲೊಮ್ಮೆ ಕಣ್ಣಾಡಿಸುವುದಕ್ಕಿಂತ ಹೆಚ್ಚು ಓದುವುದಿಲ್ಲ.

ಈ ದೇಶದಲ್ಲಿ ಪತ್ರಿಕೆಯನ್ನೋದುವುದು ಬದುಕುವಿಕೆಯ ಒಂದು ಭಾಗವಾಗಿದೆಯೆ ಎಂದು ಕೇಳಿದರೆ ಇಲ್ಲವೆಂದೇ ಅನಿಸುತ್ತದೆ. ಜನತಂತ್ರದ ಬಹಳಮುಖ್ಯವಾದ ಒಂದು ಅಂಗ ಎನಿಸಿಕೊಳ್ಳುವ ಪತ್ರಿಕೆ ಐವತ್ತು-ಅರವತ್ತು ವರ್ಷಗಳಲ್ಲಿ ಯಾವ ರೀತಿ ವಿಕಾಸ ಹೊಂದಿದೆ ಎಂದು ಕೇಳಿದರೆ, ವಿಕಾಸಹೊಂದಿಲ್ಲ, ಅದು ದೈನಿಕ ಪೂಜೆಯಂತೆ ರೂಢಿಗತವಾಗಿರುವ ಆಚಾರದ ಪರಿಕರದ ರೂಪದಲ್ಲಿಯೇ ಇದೆ ಎನ್ನಬಹುದು. ಆದ್ದರಿಂದಲೇ ಟಿವಿ ವಿಜೃಂಭಿಸತೊಡಗಿದ ಮೇಲೆ, ಅದು ಟಿವಿಯ ಜೊತೆ ಸ್ಪರ್ಧಿಸುವ ಒಂದು ಸಾಧನವಾಗಿದೆ, ಹಾಗೆ ಸ್ಪರ್ಧಿಸಬೇಕಾದ್ದು ಪತ್ರಿಕೆಗೆ ಅನಿವಾರ್ಯವೆಂಬ ಸ್ಥಿತಿ ಉಂಟಾಗಿದೆ.

ಪತ್ರಿಕೆ ಆಕರ್ಷಕವಾಗಿರಬೇಕು ನಿಜ. ಆದರೆ ಪತ್ರಿಕೆ ಓದುವ ಸಾಧನ, ನೋಡುವ ಸಾಧನವಲ್ಲ. ಓದುವುದು ಎಂದರೆ ವಿಚಾರ ಮಾಡುವುದು, ಮನದಲ್ಲಿ ಮಥಿಸಿ ತಿಳಿದುಕೊಳ್ಳುವುದು ಎಂದು ಅರ್ಥ. ಈ ವಿಚಾರದಲ್ಲಿ ಟಿವಿ ಪತ್ರಿಕೆಯ ಜೊತೆ ಸ್ಪರ್ಧಿಸಲಾರದು. ಹಾಗೆಯೇ, ಪತ್ರಿಕೆ ಟಿವಿಯ ಜೊತೆ ಸ್ಪರ್ಧಿಸಬೇಕಾಗಿಲ್ಲ. ನೋಡುವಿಕೆ ಬೇರೆ, ಓದುವಿಕೆ ಬೇರೆ.

ಓದುವ-ಬರೆಯುವ ಸಾಮರ್ಥ್ಯ ಮತ್ತು ಶಿಕ್ಷಣ ಒಂದೇ ಅಲ್ಲ. ಓದುಬರಹ ಬಲ್ಲವರೆಲ್ಲ ಸುಶಿಕ್ಷಿತರು, ಅರಿವುಳ್ಳವರು, ಪ್ರಜ್ಞಾವಂತರು ಎಂದು ಹೇಳಲಿಕ್ಕಾಗುವುದಿಲ್ಲ. ಕಾಲೇಜು ಓದು ಮಾಡಿದವರಲ್ಲಿ ಸಹ ಓದದ, ವಿಚಾರ ಮಾಡದ ಬದುಕನ್ನು ಬದುಕುವವರು ದೊಡ್ಡ ಸಂಖ್ಯೆಯಲ್ಲಿರುತ್ತಾರೆ. ವಯಸ್ಕರ ಶಿಕ್ಷಣವೆಂದರೂ ಅಷ್ಟೇ. ಅದರಲ್ಲಿ ಶಿಕ್ಷಣವೆಂಬುದು ಅಲ್ಪ, ಅದು ಓದಲು ಬರೆಯಲು ಕಲಿಸುವುದು ಎಂದೇ ಪರಿಗಣಿಸಲ್ಪಡುತ್ತದೆ. ಹಾಗೆ ವಯಸ್ಕರ ಶಿಕ್ಷಣ ಪಡೆದವರಲ್ಲಿ ಮುಕ್ಕಾಲು ಪಾಲು ಮಂದಿ ಹೆಬ್ಬೆಟ್ಟು ಒತ್ತುವ ಬದಲು ಸಹಿ ಹಾಕುವುದೇ ಮಹತ್ವದ ಸಾಧನೆ ಎಂದುಕೊಂಡು ಅದರಾಚೆಗೆ ಹೋಗದೆ ಉಳಿದುದು ಒಂದು ವಾಸ್ತವ. ಅಲ್ಪಸ್ವಲ್ಪ ಓದಲು ಕಲಿತವರು ಪತ್ರಿಕೆ ಪುಸ್ತಕ ಓದುವ ಮಟ್ಟಕ್ಕೇರಲಿಲ್ಲ. ಅಕ್ಷರಸ್ಥರಾದವರನ್ನು ಪತ್ರಿಕೆ ಓದುವವರಾಗಿ ಸಬೇಕಾದರೆ, ಅವರಿಗೆ ಅಂಥ ಓದು ಅಗತ್ಯ ಎನಿಸಬೇಕು. ಅದಕ್ಕಾಗಿ ಪತ್ರಿಕೆ ಅವರನ್ನು ಆಕರ್ಷಿಸಬೇಕು. ಆದರೆ ಪತ್ರಿಕೆಗಳು ಅದನ್ನು ಮಾಡಲಿಲ್ಲ. ಅವರು ಕೂಡ ಇತರ ಅವಿದ್ಯಾವಂತರಂತೆ ಟೀವಿ ಮಾತ್ರ ನೋಡುವವರಾದರು.

ಪತ್ರಿಕೆಗಳು ವರ್ಷಗಳ ಹಿಂದೆ ಏನು ಮಾಡುತ್ತಿದ್ದವೋ ಈಗಲೂ ಅದನ್ನೇ ಮಾಡುತ್ತಿವೆ. ಪತ್ರಿಕೆಯ ಜೀವ ಜೀವಾಳ ರಾಜಕೀಯ ವಾಗಿದೆ. ಜನತಂತ್ರವೆಂದರೇನು? ಅದು ಮಂತ್ರಿಯ ಮುಖದಿಂದ ಹೊರಡುವ ಮಾತು ಎಂದು ಜನತೆ ತಿಳಿದುಕೊಂಡಂತಿದೆ. ಅದರಲ್ಲೇ ಆಡಳಿತದ ಸೂತ್ರ ಮತ್ತು ಆಚರಣೆ ಎರಡೂ ಇದೆ ಎಂಬಂತೆ ನಡೆದುಕೊಳ್ಳುತ್ತಾರೆ. ಅದಕ್ಕೆ ಅಷ್ಟು ಕೊಡುತ್ತಿದ್ದೇನೆ ಇದಕ್ಕೆ ಇಷ್ಟು ಕೊಡುತ್ತಿದ್ದೇನೆ ಎಂದು ಮಂತ್ರಿ ಹೇಳುತ್ತಾನೆ. ಇದು ತಮ್ಮ ಹಣ ಎಂದು ತಿಳಿಯದವರೆಷ್ಟೋ ಮಂದಿಯಿದ್ದಾರೆ. ಟಿವಿ ಮತ್ತು ಪತ್ರಿಕೆಗಳಿಂದ ಏನಾಗಬೇಕಿತ್ತೋ ಆದುದು ಅದರ ವಿರುದ್ಧ. ಟಿವಿ ಮತ್ತು ಪತ್ರಿಕೆಗಳು ಜನರನ್ನು ಆದರಿಸುವ ಬದಲು ಆದರಿಸತೊಡಗಿದ್ದು ಅಧಿಕಾರಸ್ಥ ರಾಜಕಾರಣಿಗಳನ್ನು. ರಾಜಕಾರಣಿ ಏನಾದರೂ ... ಪ್ರಚಾರ ... ಮಾಡುತ್ತಲೇ ... ಎಲ್ಲಾ ...


ಪತ್ರಿಕೆಗಳು ವರ್ಷಗಳ ಹಿಂದೆ ಏನು ಮಾಡುತ್ತಿದ್ದವೋ ಈಗಲೂ ಅದನ್ನೇ ಮಾಡುತ್ತಿವೆ. ಪತ್ರಿಕೆಯ ಜೀವ ಜೀವಾಳ ರಾಜಕೀಯವಾಗಿದೆ. ಜನತಂತ್ರವೆಂದರೇನು? ಅದು ಮಂತ್ರಿಯ ಮುಖದಿಂದ ಹೊರಡುವ ಮಾತು ಎಂದು ಜನತೆ ತಿಳಿದುಕೊಂಡಂತಿದೆ. ಅದರಲ್ಲೇ ಆಡಳಿತದ ಸೂತ್ರ ಮತ್ತು ಆಚರಣೆ ಎರಡೂ ಇದೆ ಎಂಬಂತೆ ನಡೆದು ಕೊಳ್ಳುತ್ತಾರೆ. ಅದಕ್ಕೆ ಅಷ್ಟು ಕೊಡುತ್ತಿದ್ದೇನೆ ಇದಕ್ಕೆ ಇಷ್ಟು ಕೊಡುತ್ತಿದ್ದೇನೆ ಎಂದು ಮಂತ್ರಿ ಹೇಳುತ್ತಾನೆ. ಇದು ತಮ್ಮ ಹಣ ಎಂದು ತಿಳಿಯದವರೆಷ್ಟೋ ಮಂದಿಯಿದ್ದಾರೆ.

ದಲ್ಲಿಯೂ ಎಲ್ಲಾ ಗೊತ್ತಿರುವಂತೆ ಮಾತಾಡುತ್ತಾನೆ. ಯಾಕೆಂದರೆ, ಅದು ವರದಿಯಾಗುತ್ತದೆ. ಇದನ್ನು ಮುದ್ರಿಸುವುದೇ ತನ್ನ ಪ್ರಧಾನ ಕಾಯಕ ಎನ್ನುವಂತೆ ಪತ್ರಿಕೆ ನಡೆದುಕೊಳ್ಳುತ್ತದೆ. ಈ ವಿಚಾರದಲ್ಲಿ ಟಿವಿಯನ್ನು ಹಳಿಯುವುದು ಬೇಡ. ಟಿವಿ ಇರುವುದೇ ಅದಕ್ಕೆ. ಅಧಿಕಾರದಲ್ಲಿರುವ ರಾಜಕಾರಣಿಯ ಮಾತುಗಳನ್ನೆಲ್ಲ ವಜ್ರದ ಹರಳುಗಳೆಂಬಂತೆ ಹೆಕ್ಕಿ ಮುದ್ರಿಸುವ ಪತ್ರಿಕೆಗಳು ಅವನು ಅಧಿಕಾರ ಕಳೆದುಕೊಂಡ ಕೂಡಲೇ ತಿಪ್ಪೆಯ ಕಸದಂತೆ ಉಪೇಕ್ಷಿಸುವುದಾದರೆ, ಪತ್ರಿಕೆಯ ದೃಷ್ಟಿಯಲ್ಲಿ ಅಧಿಕಾರದಲ್ಲಿರುವ ರಾಜಕಾರಣಿಗಿರುವುದು ಸುದ್ದಿ ಮೌಲ್ಯ ಮಾತ್ರ ಎಂದಂತೆ ಅಲ್ಲವೆ? ರಾಜಕಾರಣಿಯ ಸುದ್ದಿಯಿಲ್ಲದಿದ್ದರೆ, ಪತ್ರಿಕೆ ಅರೆಸತ್ತಂತೆ ಎನ್ನಬಹುದೆ? ಎಲ್ಲುಳಿಯಿತು ಪ್ರಜಾಪ್ರಭುತ್ವಕ್ಕೂ ಪತ್ರಿಕೆಗೂ ಇರುವ ಮತ್ತು ಇರಲೇಬೇಕಾದ ಅವಿನಾಸಂಬಂಧ? ಪತ್ರಿಕೆಯಿಂದ ಪ್ರಜಾಪ್ರಭುತ್ವಕ್ಕೆ ಸಿಗುವ ಮೌಲಿಕ ಸೇವೆ-ಸಹಕಾರ ಏನು? ಅಧಿಕಾರಸ್ಥ ರಾಜಕಾರಣಿ ರಾಜಧಾನಿಯಲ್ಲಿ ತಲೆ ಮರೆಸಿಕೊಂಡಿರದೆ, ಜನರ ನಡುವೆ ಇರುವಂತೆ ಪತ್ರಿಕೆ ಮಾಡಬೇಕು. ಪತ್ರಿಕೆ ಆಡಳಿತದ ಆಯುಧ ವಾಗಿರಬೇಕು.

ರಾಜಕೀಯದ ವರದಿಯಲ್ಲಿ ಬಳಕೆಯಲ್ಲಿರುವ ಭಾಷೆ ಕೂಡ ಎಷ್ಟು ರೂಢಿಗತವಾಗಿರುತ್ತದೆಂದರೆ, ಈಗೀಗ ಆ ಶಬ್ದಗಳು ಕಣ್ಣಿಗೆ ಬಿದ್ದರೆಸಾಕು, ಮುಂದೆ ಓದುವುದು ಬೇಡವೆನಿಸುತ್ತದೆ. ವರದಿಗಾರರಿಗೆ ಬೇರೆ ಶಬ್ದಗಳು ಸಿಕ್ಕಿಯೇ ಇಲ್ಲವೆನಿಸುತ್ತದೆ. ಎಲ್ಲಾ ಮಂತ್ರಿ ನುಡಿದದ್ದು, ತಿಳಿಸಿದ್ದು, ಹೇಳಿದ್ದು, ಭರವಸೆ ನೀಡಿದ್ದು, ಸಂಭವಿಸಿದ್ದು ಏನು? ಸಂಭವಿಸಿದ್ದರ ಕುರಿತು, ಸಂಭವಿಸಬೇಕಾದ್ದು ಸಂಭವಿಸದಿದ್ದುದರ ಕುರಿತು ವರದಿ ಎಲ್ಲಿದೆ? ಸಾವಿರೊಂದನೇಬಾರಿ ಅದೇ ಮುಖ, ಅದೇ ಮಾತು! ಕ್ಯಾಮರಾಕ್ಕೂ ವರದಿಗೂ ಏನು ವ್ಯತ್ಯಾಸ? ಹೊಸ ಭಾವವಿಲ್ಲದೆ ಹೊಸ ಶಬ್ದವೆಲ್ಲಿಂದ ಬಂದೀತು?

ಪತ್ರಿಕೆಗಳು ಜನರಿಗೆ ಎಷ್ಟೋ ವಿಷಯಗಳಲ್ಲಿ ತಿಳಿವಳಿಕೆಯನ್ನು ನೀಡಬಹುದು. ಎಷ್ಟೋ ಚರ್ಚೆಗಳನ್ನು ನಡೆಸಬಹುದು. ಭಾಷೆ ಮತ್ತು ಸಾಹಿತ್ಯದ ಕಡೆಗೆ ಓದುಗರನ್ನು ಆಕರ್ಷಿಸಬಹುದು. ಅದನ್ನು ಪತ್ರಿಕೆಗಳು ಮಾಡುವುದೇ ಇಲ್ಲ ಎನ್ನಲಾಗದು. ಆದರೆ ಪತ್ರಿಕೆ. ಅದಕ್ಕೆ ಪ್ರಾಧಾನ್ಯ ನೀಡುತ್ತಿಲ್ಲ. ಶಿಕ್ಷಣದ ಸಮಸ್ಯೆಯ ಕುರಿತಾದ ಒಂದು ಲೇಖನ ವಿದ್ದರಾಯಿತೆ? ಅಥವಾ ಒಂದು ಅಂಕಣ ವಿದ್ದರಾಯಿತೆ? ಶಿಕ್ಷಣದ ಕುರಿತು ಎಚ್ಚರ ಹುಟ್ಟಿಸುವಂಥ ಚರ್ಚೆ, ವಾಗ್ವಾದಕ್ಕೆ ಪತ್ರಿಕೆ ವೇದಿಕೆಯಾಗಬೇಕು. ಸಾಂಸ್ಕೃತಿಕ ವಿಚಾರಗಳಿಗೆ ವೇದಿಕೆಯಾಗಬೇಕು.

ಧಾರ್ಮಿಕ ಸಾಮರಸ್ಯಕ್ಕಾಗಿ ಸಚಿವರ ಕರೆ, ಭಾಷೆಯನ್ನು ಬೆಳೆಸಲು ಸಚಿವರ ಕರೆ, ಸಂಸ್ಕೃತಿಯನ್ನು ಬೆಳೆಸಲು ಕರೆ, ಪ್ರಜಾಪ್ರಭುತ್ವವನ್ನು ಬೆಳೆಸಲು ಕರೆ. ಒಂದೆರಡಲ್ಲಾ, ನೂರಾರು ಕರೆಗಳು. ಸತತ ಕರೆಗಳು. ಎಂಥ ಕರೆಗಳಿವು? ಇವತ್ತು ಯಾರೂ ಯಾವ ಮಂತ್ರಿಯೂ ಆಗಬಹುದು. ಈ ದಿನ ಅರಣ್ಯ ಮಂತ್ರಿಯಾದವನು ನಾಳೆ ಶಿಕ್ಷಣ ಸಚಿವನಾಗಬಹುದು. ಅತಿ ಹೆಚ್ಚು ಹಣ ಸಂಪಾದಿಸಲು ಅವಕಾಶವಿರುವ ಖಾತೆಗೋಸ್ಕರ ಚಾಕಲೇಟಿಗಾಗಿ ಹಟಹಿಡಿಯುವ ಚಿಕ್ಕ ಮಕ್ಕಳಂತೆ ಗೋಗರೆಯುವ ಎಮ್ಮೆಲ್ಲೆಗಳನ್ನು ಎಂಪಿಗಳನ್ನು ನಾವಿವತ್ತು ಕಾಣುತ್ತಿದ್ದೇವೆ.



ಕೆ.ಟಿ.ಗಟ್ಟಿ

ಎಲ್ಲರಿಗೂ ಗೊತ್ತಿದ್ದೂ ಯಾರಿಗೂ ಗೊತ್ತಿಲ್ಲ ಎಂಬಂತಿರುವ ಹಲವು ಸಂಗತಿಗಳಿವೆ. ಅಂಥ ಸಾಮಾಜಿಕ ವಿಷಯಗಳನ್ನು ಪತ್ರಿಕೆ ಹೊರಹಾಕಬೇಕು. ತೆಹಲ್ಕಾ ಮಾದರಿಯಲ್ಲಿ ಮಂತ್ರಿಗಳಿಗೆ ಬಲೆಬೀಸಿ ಹಿಡಿ ಯುವುದಕ್ಕಿಂತ ಪ್ರತಿದಿನವೆಂಬಂತೆ, ವಾಸ್ತವದಲ್ಲಿ ಹೇಗೆ ಭ್ರಷ್ಟಾಚಾರ ನಡೆಯುತ್ತದೆ ಎನ್ನುವುದನ್ನು ಕಂಡುಹಿಡಿದು ಜನಕ್ಕೆ ತಿಳಿಸಬೇಕು. ಹೇಗೆ ಪೋಲೀಸರು ಸಂಗ್ರಹಿಸುವ ಲಂಚದ ಹಣ, ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಸಂಗ್ರಹ ವಾಗುವ ಲಂಚದ ಹಣ, ಸಾರಿಗೆ, ವೈದ್ಯಕೀಯ ಮುಂತಾದ ಇಲಾಖೆಗಳಲ್ಲಿ ಸಂಗ್ರಹವಾಗುವ ಲಂಚದ ಹಣ ಪುಟ್ಟ ಪಟ್ಟಣದಿಂದ ಮಂತ್ರಿಯವರೆಗೆ ಪ್ರವಹಿಸುತ್ತದೆ ಎನ್ನುವುದನ್ನು ಜನಕ್ಕೆ ತಿಳಿಸಬೇಕು.

ನಗರದಲ್ಲಿ ಫ್ಲಾಟಿನಲ್ಲಿ ಹುಟ್ಟಿ ಬೆಳೆದ ಯಾರೋ ಒಬ್ಬ ಐಎಎಸ್ ಅಧಿಕಾರಿ ಗ್ರಾಮೀಣ ಬದುಕಿನ ಕಷ್ಟಸುಖ ತಿಳಿಯದೆ ಒಂದು ಸರಕಾರಿ ಆಜ್ಞೆ ತಯಾರು ಮಾಡಿ ಮಂತ್ರಿಯ ಮುಂದಿಡುತ್ತಾನೆ. ಮಂತ್ರಿ ಅದಕ್ಕೆ ಸಹಿ ಮಾಡುತ್ತಾನೆ. ಅಂಥ ಅಧ್ವಾನಗಳು ನಡೆದಾಗ ಪತ್ರಿಕೆಗಳು ತಪ್ಪು ಸರಿಪಡಿಸಲು ಜನರನ್ನು ಎಚ್ಚರಿಸುವ ಕೆಲಸ ಮಾಡಬೇಕು.

ಪ್ರಲೋಬನವೊಡ್ಡಿ ಅವ್ಯವಹಾರ ಮಾಡಿಸಿ ಬಯಲಿಗೆಳೆಯುವುದು ಇವತ್ತು ಪತ್ರಿಕೋದ್ಯಮದ ಒಂದು ಹೊಸ ಆಯಾಮವಾಗಿ ವೈಭವೀಕೃತವಾಗಿ ವರದಿಯಾಗುತ್ತಿದೆ. ಆದರೆ ಇದು ಹೆಚ್ಚು ಕಾಲ ಆಕರ್ಷಣೆಯನ್ನು ಉಳಿಸಿಕೊಳ್ಳಲಿಕ್ಕಿಲ್ಲ. ನಿಜವಾದ ಅವ್ಯವಹಾರವನ್ನು ಪತ್ತೆಮಾಡಿ ವರದಿ ನೀಡಲು ಪತ್ರಿಕೆಗಳಿಂದ ಸಾಧ್ಯವಿದೆ. ಅವ್ಯವಹಾರ ನಡೆದ ಬಳಿಕ ಸುದ್ದಿಯಾಗುವುದಲ್ಲ, ಅವ್ಯವಹಾರ ನಡೆಯುತ್ತಿರುವಾಗಲೇ ಸುದ್ದಿಯಾಗಬೇಕು. ಆರ್ಥಿಕ ಲಾಭವನ್ನೇ ದೃಷ್ಟಿಯಲ್ಲಿರಿಸಿಕೊಂಡು ಅತಿ ಲಾಭದಾಸೆಯಿಂದ ಬೆಳೆ ಬೆಳೆಯುವ ರೈತ ತಾನು ಬೆಳೆಸಿದ ಬೆಳೆಗೆ ಸರಿಯಾದ ಪ್ರತಿಫಲ ಸಿಗಲಿಲ್ಲ ಎಂದು ಬೆಳೆಯನ್ನು ತಂದು ನಗರದ ರಸ್ತೆಯಲ್ಲಿ ಸುರಿದದ್ದು ಅಥವಾ ಆತ್ಮಹತ್ಯೆ ಮಾಡಿಕೊಂಡದ್ದು ಸುದ್ದಿ...ಯಾಗುತ್ತದೆ. ಅವನು ಬೆಳೆ ಬೆಳೆಯುತ್ತಿರುವಾಗಲೇ ದಿವಾಳಿ...ಬಹುದು ಎಂಬ ವರದಿ... ಬರಬೇಕು.

ಒಂದು ಚಿತ್ರದಲ್ಲಿ ನಟಿಸಲು... ಐದು ಕೋಟಿ ತೆಗೆದುಕೊಳ್ಳುವ... ತಾರಾಮಣಿಗಳ ಬದುಕಿನ... ವಿವರಗಳು ಮತ್ತು ಅವರ ಸಂದರ್ಶನ ಪತ್ರಿಕೆಯ ಲೇಖನವಾಗ... ಬೇಕಾದ್ದು ಈ ದೇಶದ ಅಗತ್ಯವಲ್ಲ... ಅದಕ್ಕೆ ಯಾವ ದೇಶದ್ದಾದರೂ... ಯಾವ ದೇಶದ್ದೂ ಅಲ್ಲದ ಟೀವಿ... ಚಾನಲುಗಳಿವೆ. ದಟ್ಟ ದರಿದ್ರ ಸ್ಥಿತಿಯಲ್ಲಿರುವ ಸಾವಿರಾರು... ಹಳ್ಳಿಗಳಲ್ಲಿ ಜನರ ಬದುಕು ಹೇಗಿದೆ, ಹಾಗಿರಲು ಏನು... ಕಾರಣ, ಅದು ಹೇಗೆ ಬದಲಾಗಬಹುದು, ಅಂಥ... ಹಳ್ಳಿಯನ್ನು ಪ್ರತಿನಿಧಿಸುವ... ಎಮ್ಮೆಲ್ಲೇ ಎಂಪೀ ಎಲ್ಲಿದ್ದಾನೆ,... ಏನು ಮಾಡುತ್ತಿದ್ದಾನೆ ಎಂಬ... ವರದಿ ವಿವರಗಳು ಪತ್ರಿಕೆಗಳಲ್ಲಿ... ಪ್ರಕಟವಾಗುತ್ತಲೇ ಇರಬೇಕು... ಪತ್ರಿಕೆಗಳು ಸ್ಥಳೀಯ ಆಡಳಿತ... ಕುರಿತು ಜನರನ್ನು ಎಚ್ಚರದಲ್ಲಿಡ... ಬೇಕು. ಇಷ್ಟೇ ಅಲ್ಲ, ಒಳ್ಳೆಯ... ಕೆಲಸ ಎಲ್ಲಿ ನಡೆದರೂ ಅದರ... ಕುರಿತು ಪತ್ರಿಕೆ ಜನರಿಗೆ ತಿಳಿಸ... ಬೇಕು. ಒಳ್ಳೆಯ ವಿಚಾರ... ಎಲ್ಲಿದ್ದರೂ ಅದಕ್ಕೆ ಪತ್ರಿಕೆ ದನಿ... ಯಾಗಬೇಕು. ಮಂತ್ರಿಗಳ ಪಾದ... ಪೂಜೆ ಮಾಡುವ ಸ್ವಾರ್ಥಸಾಧಕ... ಅಧಿಕಾರಿಗಳ ಬುದ್ಧಿಜೀವಿಗಳ... ಮೇಲೆ ಪತ್ರಿಕೆ ಕಣ್ಣಿರಿಸಬೇಕು.


ಹಳ್ಳಿಗಳ ಉದ್ಧಾರದಿಂದ ಮಾತ್ರ... ಈ ದೇಶದ ಉದ್ಧಾರ ಸಾಧ್ಯ... ಎಂದು ಮಂತ್ರಿ ಹೇಳಿದ್ದು... ಪತ್ರಿಕೆಯ ಮುಖಪುಟದಲ್ಲಿ... ಮುದ್ರಿತವಾಗುತ್ತದೆ. ಆದರೆ ಇದು... ಎಂಥ ಸುದ್ದಿ? ಅದರ ಜೊತೆಗೇ... ಉದ್ಧಾರದ ವಿಧಾನದ ಸಕಲ... ವಿವರಗಳನ್ನೂ ಹೇಳುವವ...ರಿರಬೇಕು. ಪತ್ರಿಕೆ ಕೇವಲ ಸುದ್ದಿಯಬಾಲ್ದಿಯಲ್ಲ. ಕೇವಲ... ಸುದ್ದಿಯಿಂದೇನು ಆಗುತ್ತದೆ? ದಿನದಿನ ವರ್ಷವರ್ಷ... ಸುದ್ದಿ ಕೇಳಿ, ಸುದ್ದಿ ಓದಿ ಏನು ಪ್ರಯೋಜನ? ಸುದ್ದಿಯ...ನ್ನೋದುವುದರಿಂದ ಜನಸಾಮಾನ್ಯನ ಮನಸ್ಸು ಮತ್ತು... ಬದುಕಿನ ಮೇಲೆ ಏನು ಧನಾತ್ಮಕ ಪರಿಣಾಮ...ವುಂಟಾಗುತ್ತದೆ ಎನ್ನುವುದು ಮುಖ್ಯ. ಏನು ಒಳ್ಳೆಯ... ಬದಲಾವಣೆಗಳಾಗುತ್ತವೆ ಎನ್ನುವುದು ಮುಖ್ಯ. ಪತ್ರಿಕೆ... ವಿಚಾರ ವೇದಿಕೆಯಾಗಿರಬೇಕು. ಗೆದ್ದ ಅಭ್ಯರ್ಥಿ ಅಥವಾ... ಮಂತ್ರಿ, ಮುಖ್ಯಮಂತ್ರಿಯಾದ ವ್ಯಕ್ತಿ ತಮ್ಮ ಜಾತಿಗೆ... ಸೇರಿದವನು ಎನ್ನುವುದನ್ನು ಬಿಂಬಿಸುವ ಸನ್ಮಾನ ವರದಿ,... ಜಾಹೀರಾತುಗಳನ್ನು ಪತ್ರಿಕೆ ತಿರಸ್ಕರಿಸಬೇಕು. ಚುನಾವಣೆ... ಬಂತೆಂದರೆ ರಾಜಕಾರಣಿ ಮಂದಿರ, ಮಸೀದಿ, ಇಗರ್ಜಿ,... ಗುರುದ್ವಾರ ಮತ್ತು ಎಲ್ಲಾ ದೇವರಗುಡಿಗಳಿಗೂ ದೇವರಿಲ್ಲದ... ಗುಡಿಗಳಿಗೂ ನುಗ್ಗುತ್ತಾನೆ. ಪತ್ರಿಕೆ ಅವನ ಪರಿಚಾರಕನಂತೆ... ಅವನ ಹಿಂದೆಯೇ ಚಲಿಸುತ್ತದೆ. ಇದನ್ನು ಪತ್ರಿಕೆ... ಮಾಡಬೇಕೆ? ಇದು ಪತ್ರಿಕೆ ಆಚರಿಸುವ ಸೆಕ್ಯೂಲರಿಸಮ್ಮ? ... ಮಂತ್ರಿಯಾದೊಡನೆ ಅವನ ದೊಡ್ಡ ಬಣ್ಣದ ಭಾವಚಿತ್ರವನ್ನು... ಪತ್ರಿಕೆಯಲ್ಲಿ ಹಾಕಿಸಿ ಅವನ ಜಾತಿಯವರು ನಮ್ಮ... ಜಾತಿಯವನು ಎಂದು ಕೊಂಡಾ ಡುತ್ತಾರೆ. ಈ... ಜಾಹೀರಾತಿನ ಹಣ ಪತ್ರಿಕೆಗೆ ಅನಿವಾರ್ಯವೆ? ಪತ್ರಿಕೆ... ವೈಚಾರಿಕ ಎಚ್ಚರಕ್ಕಾಗಿರಬೇಕು. ಅದು ಕೇವಲ... ಬುದ್ಧಿಜೀವಿಗಳ ಚರ್ಚೆಯ ವೇದಿಕೆಯಲ್ಲ, ಅದು ಸಾಮಾನ್ಯ... ಪ್ರಜೆಯಲ್ಲಿ ಎಚ್ಚರ ಮೂಡಿಸಬೇಕು. ರಸ್ತೆಯಮೇಲಿನ... ಹೊಂಡ, ಕೆಟ್ಟ ಸೇತುವೆ, ಉಪೇಕ್ಷಿತ ಶಾಲೆ, ಕಾಲೇಜು,... ಆಸ್ಪತ್ರೆ ಮುಂತಾದವುಗಳ ಚಿತ್ರ-ಕಥೆ ಪತ್ರಿಕೆಯ... ಮುಖಪುಟದಲ್ಲಿ ಬರಬೇಕು. ಪತ್ರಿಕೆ ಕೇವಲ ಕ್ರೈಮ್... ಹೇಗೆ ಸಂಭವಿಸಿತು ಎಂಬುದನ್ನು ಸಚಿತ್ರವಾಗಿ ವರ್ಣಿಸುವ... ಕ್ರೈಮ್ ನ್ಯೂಸ್ಅಲ್ಲ, ಕ್ರೈಮ್ ಯಾಕೆ ಸಂಭವಿಸಿತು ಎನ್ನು...ವುದನ್ನು ತಿಳಿಸಬೇಕು. ಪತ್ರಿಕೆ ಸಾಮಾಜಿಕ ಪರಿವರ್ತನೆಯ... ರೂವಾರಿಯಾಗಬೇಕು. ಪತ್ರಿಕೆ ಪ್ರಜಾಪ್ರಭುತ್ವದ ಚಾಟಿ... ಮಾತ್ರವಲ್ಲ, ಅದು ಜನರ ಕೋರ್ಟು ಆಗಬೇಕು.

ಮೇಲುಕೀಳು ಎಂಬುದಿರುವಲ್ಲಿ ಜನತಂತ್ರವಿರುವುದಿಲ್ಲ. ಜಾತಿಬೇಧ, ಮತಭೇದವಿರುವಲ್ಲಿ ಪ್ರಜಾಪ್ರಭುತ್ವವಿರಲು ಸಾಧ್ಯವಿಲ್ಲ ಎನ್ನುವ ಸತ್ಯವನ್ನು ಪತ್ರಿಕೆಗಳು ಸಾರುತ್ತಲೇ ಇರಬೇಕು.



# ಮುಕ್ತ ನುಡಿ ಅಥವಾ ದ್ವೇಷ ನುಡಿ?

ಪ್ರವಾದಿ ಮುಹಮದರ ವ್ಯಂಗ್ಯಚಿತ್ರದಿಂದಾಗಿ ಎದ್ದಿರುವ ವಿವಾದದ ಅಲೆಯಲ್ಲಿ ದಿಗ್ಭ್ರಾಂತರಾಗಿರುವವರ ಬಗ್ಗೆ ನನ್ನ ಸಹಾನುಭೂತಿ ಇದೆ. ಈ ವ್ಯಂಗ್ಯ ಚಿತ್ರಗಳು ಮೊದಲು ಪ್ರಕಟವಾಗಿದ್ದು 'Jyllands-Posten' ಎಂಬ ಡೇನಿಶ್ ಪತ್ರಿಕೆಯಲ್ಲಿ, ಅದೂ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ. ಈ ಬಗ್ಗೆ ಬಂದ ಮೊದಲ ಪ್ರತಿಭಟನೆ ಡೆನ್‌ಮಾರ್ಕ್‌ನ ಅಲ್ಪಸಂಖ್ಯಾತ ಮುಸ್ಲಿಮರಿಗೆ ಮಾತ್ರ ಸೀಮಿತವಾಗಿತ್ತು. ಈ ಪ್ರತಿಭಟನೆಯನ್ನು ಅಲ್ಲಿನ ಸರ್ಕಾರ ಹಾಗೂ ನಾಗರಿಕ ಸಮಾಜ ಗಂಭೀರವಾಗಿ ಪರಿಗಣಿಸದೆ ತಳ್ಳಿ ಹಾಕಿತು. ಆಗ ಕೆಲ ಸಂಪ್ರದಾಯಸ್ಥ ಡೇನಿಶ್ ಇಮಾಮ್‌ಗಳು ವಿಷಯವನ್ನು ಕೈಗೆತ್ತಿಕೊಂಡು ಈ ಉದ್ರೇಕಕಾರಿ ವ್ಯಂಗ್ಯ ಚಿತ್ರಗಳನ್ನು ಒಳಗೊಂಡ ಮಾಹಿತಿಯನ್ನು ತೆಗೆದುಕೊಂಡು ಅರೇಬಿಯಾ ಹಾಗೂ ಈಜಿಪ್ಟ್ ರಾಷ್ಟ್ರಗಳಿಗೆ ಹೊರಟರು. ಎರಡು ವಾರದ ಕೆಳಗೆ ಈ ರಾಷ್ಟ್ರಗಳ ರಾಯಭಾರಿ ಕಛೇರಿಗಳಲ್ಲಿ ಇದರ ಕಂಪನ ಕೇಳಿಸಿತು. ಪರಿಣಾಮವಾಗಿ ಸೌದಿ ಅರೇಬಿಯ ತನ್ನ ಡೆನ್‌ಮಾರ್ಕ್ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತು; ಲಿಬಿಯಾ ತನ್ನ ದೇಶದಲ್ಲಿದ್ದ ಡೆನ್‌ಮಾರ್ಕ್‌ನ ರಾಯಭಾರಿ ಕಛೇರಿಯನ್ನು ಮುಚ್ಚಿಸಿತು. ಇದಾದ ನಂತರ ಒಂದೊಂದಾಗಿ ಸಂಗತಿಗಳು ನಡೆಯ ತೊಡಗಿದವು: ಡೇನಿಶ್ ವಸ್ತುಗಳ ಬಹಿಷ್ಕಾರ, ಮುಷ್ಕರ, ಪ್ರತಿಭಟನೆ, ಧ್ವಜ ಸುಡುವುದು ಇತ್ಯಾದಿ. ಕಡೆಗೆ ಪ್ರತಿಭಟನಾಕಾರರು ಡಮಾಸ್ಕಸ್ ಮತ್ತು ಬೈರೂತ್‌ನ ಡೇನಿಶ್ ರಾಯಭಾರಿ ಕಛೇರಿಗಳಿಗೆ ಬೆಂಕಿ ಕೂಡಾ ಇಟ್ಟರು.



ಆದರೆ ಈ ಘಟನೆಗಳೆಲ್ಲಾ ನಡೆದದ್ದು ನಿಜಕ್ಕೂ ಏನಾಯಿತು ಎನ್ನುವುದು ಬಹಿರಂಗಗೊಳ್ಳುವುದಕ್ಕೆ ಮುಂಚೆ. 2003 ರ ಏಪ್ರಿಲ್‌ನಲ್ಲಿ ಡೇನಿಶ್ ವ್ಯಂಗ್ಯ ಚಿತ್ರಕಾರನೊಬ್ಬ ಕ್ರಿಸ್ತನ ಪುನರುತ್ಥಾನ ಕುರಿತಂತೆ ಕೆಲವು ಚಿತ್ರಗಳನ್ನು Jyllands-Posten ಪತ್ರಿಕೆಗೆ ತಾನಾಗಿಯೇ ಕಳುಹಿಸಿದ್ದ. ಆ ಪತ್ರಿಕೆಯ ಭಾನುವಾರದ ಪುರವಣಿಯ ಸಂಪಾದಕರು ಈ ವ್ಯಂಗ್ಯಚಿತ್ರಕಾರನಿಗೆ ಒಂದು ಈ-ಮೈಲ್ ಕಳುಹಿಸಿ, 'ನಮ್ಮ ಪತ್ರಿಕೆಯ ಓದುಗರಿಗೆ ನಿನ್ನ ಚಿತ್ರಗಳು ರುಚಿಸಲಾರವು. ಬದಲಿಗೆ ಅವು ಒಂದು ದೊಡ್ಡ ಹುಯಿಲನ್ನೇ ಎಬ್ಬಿಸಬಹುದು. ಆದ್ದರಿಂದ ಈ ಚಿತ್ರಗಳನ್ನು ನಾನು ಬಳಸಲಾರೆ' ಎಂದು ತಿರಸ್ಕರಿಸಿದ್ದರು.

ಈಗ ನಡೆಯುತ್ತಿರುವ ಪ್ರತಿಭಟನೆಗಳ ತೀವ್ರತೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಸೆಪ್ಟೆಂಬರ್ 11 ರ ನಂತರ ಪ್ರವಾದಿ ಮುಹಮದರನ್ನು ಹಳಿಯುವ, ಗೇಲಿ ಮಾಡುವ ಪ್ರವೃತ್ತಿ ಪತ್ರಿಕೆಗಳಲ್ಲಿ ಹೆಚ್ಚುತ್ತಿದೆ. "ಇಸ್ಲಾಂ ಒಂದು ಕೇಡಿನ, ದುಷ್ಟ ಧರ್ಮ" ಎಂದು ಬಹಿರಂಗವಾಗಿಯೇ ಹೇಳಿಕೆ ಕೊಟ್ಟ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಷ್‌ನ ಆಧ್ಯಾತ್ಮಿಕ ಸಲಹೆಗಾರನಾದ ಬಿಲ್ಲಿ ಗ್ರಾಹಂನ ಮಗನಾದ ರೆವರೆಂಡ್ ಫ್ರಾಂಕ್ಲಿನ್ ಗ್ರಹಾಂನಿಂದ ಹಿಡಿದು, "ಪ್ರವಾದಿ ಮುಹಮದ್ ಒಬ್ಬ ದೆವ್ವ ಹಿಡಿದ ಶಿಶುಕಾಮಿ" ಎಂದು ಭಾಷಣ ಮಾಡಿದ ದಕ್ಷಿಣ ಬ್ಯಾಪ್ಟಿಸ್ಟ್ ಕನ್‌ವೆನ್‌ಷನ್ ಮಾಜಿ ಅಧ್ಯಕ್ಷನಾದ ರೆವರೆಂಡ್ ಜೆರ್ರಿ ವಿನ್ಸನ್‌ವರೆಗೂ ಈ ಚಾಳಿ ಹಬ್ಬಿದೆ. ಆದರೆ ಇಂಥ ನಿಂದನಾ ಹೇಳಿಕೆ ಮತ್ತು ಚುಚ್ಚುಮಾತುಗಳ ವಿರುದ್ಧ ಈಗ ವ್ಯಂಗ್ಯಚಿತ್ರಗಳಿಗೆ ಮೂಡಿ ಬಂದಿರುವಂಥ ವ್ಯಾಪಕ ಪ್ರತಿಭಟನೆ ಎಂದೂ ಬಂದಿರಲಿಲ್ಲವೆಂಬುದು ಗಮನಾರ್ಹ.

ವ್ಯಂಗ್ಯ ಚಿತ್ರಗಳನ್ನು ಮೊದಲು ಪ್ರಕಟಿಸಿದ ಪತ್ರಿಕೆ ಒಮ್ಮೆ, ಈ ಚಿತ್ರಗಳು "ನಿರ್ವಿವಾದವಾಗಿಯೂ ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡುವಂಥದ್ದು" ಎಂದು ಕ್ಷಮೆ ಕೇಳಿತಾದರೂ, ಹೀಗೆ ಮುಸ್ಲಿಮರಿಗೆ "ಘಾಸಿಯಾದ್ದರಿಂದ" ಕೋಪಗೊಂಡ ಇತರ [illegible]

ವಿಷಯವನ್ನು ಮತ್ತೆ ಕೈಗೆತ್ತಿಕೊಂಡವು. ಇದರ ಮುಂದಾಳತ್ವ ವಹಿಸಿದ್ದು ಪ್ಯಾರಿಸ್ಸಿನ 'France soir' ಮತ್ತು ಬರ್ಲಿನ್ನಿನ 'Die welt' ಪತ್ರಿಕೆಗಳು. ಈ ಪತ್ರಿಕೆಗಳಲ್ಲಿ ಅದೇ ವ್ಯಂಗ್ಯ ಚಿತ್ರಗಳು ಮುಖಪುಟದಲ್ಲೇ ಇನ್ನೂ ದೊಡ್ಡದಾಗಿ ಪ್ರಕಟಗೊಂಡವು.

ವಿವಾದಕ್ಕೊಳಗಾದ ವ್ಯಂಗ್ಯ ಚಿತ್ರಗಳು ಆಕ್ರಮಣಕಾರಿಯಾಗಿವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಮನ ನೋಯಿಸುವ ವಿಚಾರ ಪ್ರವಾದಿಗಳನ್ನು ಮನುಷ್ಯ ರೂಪದಲ್ಲಿ ತೋರಿಸಲಾಗಿದೆ ಎಂಬುದಷ್ಟಕ್ಕೇ ಸೀಮಿತವಾಗಿಲ್ಲ. (ಹಾಗೆ ನೋಡಿದರೆ ಟರ್ಕಿಷ್ ಮತ್ತು ಪರ್ಷಿಯನ್ ಮಿನಿಯೇಚರ್ ಚಿತ್ರಗಳಲ್ಲಿ, ಸಮಕಾಲೀನ ಇರಾನ್ ಕಲಾಕೃತಿಗಳಲ್ಲಿ ಪ್ರವಾದಿಗಳನ್ನು ಮಾನವ ರೂಪದಲ್ಲೇ ತೋರಿಸಲಾಗಿದೆ). ಈ ಆಕ್ರಮಣಕಾರಿ ವ್ಯಂಗ್ಯ ಚಿತ್ರಗಳ ಕೇಂದ್ರವಸ್ತು ಅವುಗಳ ಮೂಲಕ ಜಗತ್ತಿಗೆ ಹೇಳಲು ಹೊರಟಿರುವ ಸಂದೇಶದಲ್ಲಿ ಅಡಗಿದೆ. ಈ ಸಂದೇಶವಾದರೂ ಏನು? ಒಂದು ಚಿತ್ರದಲ್ಲಿ, ಇನ್ನೇನು ಸಿಡಿಯಲಿರುವ ಬಾಂಬಿನ ಮಾದರಿಯ ಪೇಟವನ್ನು ಪ್ರವಾದಿ ಮಹಮದ್‌ರ ತಲೆಯ ಮೇಲೆ ಇರಿಸಲಾಗಿದೆ. ಇನ್ನೊಂದರಲ್ಲಿ ಅವರು ಚಿಂದಿ ಬಟ್ಟೆ ಉಟ್ಟಿರುವ ಸೂಸೈಡ್ ಬಾಂಬರ್‌ಗಳ ದೊಡ್ಡ ಸಾಲನ್ನು ಉದ್ದೇಶಿಸಿ, "ನಿಲ್ಲಿ, ನಿಲ್ಲಿ, ನಮ್ಮಲ್ಲಿ ಕನ್ಯೆಯರ ಸಂಖ್ಯೆ ಸಾಕಷ್ಟಿಲ್ಲ" ಎಂದು ಹೇಳುತ್ತಿರುವಂತೆ ತೋರಲಾಗಿದೆ. ಹೀಗೆ ಯಾವ ಸೂಕ್ಷ್ಮತೆಯೂ, ವಿಶೇಷಣವೂ ಇಲ್ಲದ ಈ ವ್ಯಂಗ್ಯ ಚಿತ್ರಗಳ ಹಿಂದಿನ ಉದ್ದೇಶ ಅತ್ಯಂತ ಸ್ಪಷ್ಟ. ಇಸ್ಲಾಂ ಒಂದು ಭಯೋತ್ಪಾದಕ ಹಾಗೂ ಸೆಕ್ಸಿಸ್ಟ್ ಧರ್ಮ ಎಂಬುದಾಗಿ ಪ್ರತಿಪಾದಿಸುವುದು.


ಪ್ರವಾದಿಯೊಬ್ಬರನ್ನು ಹೀಗೆ ಭಯೋತ್ಪಾದಕನಂತೆ ಬಿಂಬಿಸಿರುವುದನ್ನು ಪ್ರತಿಭಟಿಸುತ್ತಿರುವವರು ನಿಜವಾಗಿಯೂ, ಭಯೋತ್ಪಾದನೆಯನ್ನೇ ಪ್ರತಿಭಟಿಸುತ್ತಿದ್ದಾರೆ ಎಂಬ ತೀರ್ಮಾನಕ್ಕೆ ನಾವು ಯಾಕೆ ಬರುವುದಿಲ್ಲ? ನಿಜಕ್ಕೂ ಈ ಪ್ರತಿಭಟನೆಕಾರರು ಭಯೋತ್ಪಾದನೆಯನ್ನೇ ತಿರಸ್ಕರಿಸುತ್ತಿದ್ದಾರೆ ಎಂದು ಯಾರಿಗೂ ಹೊಳೆದೇ ಇಲ್ಲ, ಯಾಕೆಂದರೆ ಈ ಪ್ರತಿಭಟನೆಯ ಹಿಂದೆ ಭಯೋತ್ಪಾದನೆಯನ್ನು ಒಪ್ಪುವ ಅಥವಾ ತಿರಸ್ಕರಿಸುವುದಕ್ಕಿಂತಲೂ ಹೆಚ್ಚಿನದೇನೋ ಇದೆ ಎಂದು ನಾವು ಭಾವಿಸಿದ್ದೇವೆ. ಇದು ಈ ಮುಷ್ಕರಗಳು ನಡೆಯುತ್ತಿರುವ ಸಂದರ್ಭದ ಮೇಲೆ ಅವಲಂಬಿತವಾಗಿದೆ.

> ಪ್ರವಾದಿ ಮಹಮದರನ್ನು ಕುರಿತಂತೆ ಪ್ರಕಟವಾದ ವ್ಯಂಗ್ಯಚಿತ್ರಗಳು ಪ್ರಪಂಚದ ನಾನಾ ಕಡೆ ವಿವಾದ, ಪ್ರತಿಭಟನೆಯ ಅಲೆಗಳನ್ನು ಎಬ್ಬಿಸಿದೆ. ಈ ಚಿತ್ರಗಳನ್ನು ಪ್ರಕಟಿಸಬೇಕೋ, ಬೇಡವೋ ಎಂಬುದು ಈಗ ಕೇವಲ ವಾಕ್ ಸ್ವಾತಂತ್ರ್ಯದ ಪ್ರಶ್ನೆಯಾಗಿ ಮಾತ್ರ ಉಳಿದಿಲ್ಲ. ಈ ವಿವಾದ ಎದ್ದಿರುವ ಸಂದರ್ಭವನ್ನು ಗಮನಿಸಿದರೆ ಮುಂಬರಬಹುದಾದ ಜಾಗತಿಕ ವಿದ್ಯಾಮಾನಗಳಿಗೆ ಈ ವಿವಾದ ಒಂದು ಮುನ್ಸೂಚನೆಯಂತಿದೆ.

ಇಲ್ಲಿ ಎರಡು ವಿಭಿನ್ನ ಸಂದರ್ಭಗಳ ಬಗ್ಗೆ ನಿಮ್ಮ ಗಮನ ಸೆಳೆಯಲು ಇಚ್ಛಿಸುತ್ತೇನೆ: ಒಂದು ಮುಸ್ಲಿಂ ಬಹುಸಂಖ್ಯೆಯಲ್ಲಿರುವ ರಾಷ್ಟ್ರಗಳು, ಇನ್ನೊಂದು ಯುರೋಪ್. ಇವೆರಡೂ ಪ್ರದೇಶಗಳಲ್ಲೂ ನಡೆಯುತ್ತಿರುವ ಪ್ರತಿಭಟನೆಗಳಿಗೆ ಅದರದ್ದೇ ಆದ ಸ್ಥಳೀಯ ಮಹತ್ವವಿದೆ.

ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳಲ್ಲಿನ ಪ್ರತಿಭಟನೆಗಳ ಹಿಂದೆ ವಿವಿಧ ರೀತಿಯ ವಿಪರ್ಯಾಸಗಳನ್ನೊಳಗೊಂಡ ಶಕ್ತಿಗಳು ಕೆಲಸ ಮಾಡುತ್ತಿವೆ. ಹಮಾಸ್ ಪಕ್ಷ ಚುನಾವಣೆಯಲ್ಲಿ ಗಳಿಸಿದ ಜಯಭೇರಿ, ಅಮೆರಿಕಾ ಪರ ಸರ್ಕಾರಗಳಲ್ಲಿ ಅತೀವ ಆತಂಕವನ್ನುಂಟು ಮಾಡಿದೆ. ಇವರಿಗೆ ಹಮಾಸ್‌ನ ವಿಜಯ ಇಸ್ಲಾಮಿಕ್ ಶಕ್ತಿಗಳು [illegible] ಎಡೆ ಸಿಕ್ಕಿ[illegible]

ಇಸ್ಲಾಮಿಕ್ ಪ್ರಾಬಲ್ಯವನ್ನು ಹೇಗಾದರೂ ಮಾಡಿ ತಗ್ಗಿಸುವುದು ಈ ಪ್ರತಿಭಟನೆಯ ಒಂದಂಶ ಉದ್ದೇಶವಾಗಿದೆ. ಆದ್ದರಿಂದ ಅಮೆರಿಕಾ ಪರ ಇರುವ ರಾಷ್ಟ್ರಗಳಿಗೆ ಪ್ರತಿಭಟನೆಯನ್ನು ನಿಲ್ಲಿಸುವುದಕ್ಕಿಂತಲೂ, ಪ್ರೋತ್ಸಾಹಿಸುವುದೇ ಅವರಿಗೆ ಹೆಚ್ಚು ಲಾಭ.



ಮಹಮೂದ್ ಮಮ್ದಾನಿ

ಕೊಲಂಬಿಯಾ ವಿವಿ ಪ್ರೊಫೆಸರ್


ಅದೇ ವೇಳೆಗೆ ಈ ವ್ಯಂಗ್ಯ ಚಿತ್ರಗಳ ಬಗ್ಗೆ ಹುಯಿಲೆಬ್ಬಿಸುತ್ತಿರುವವರು- ಅವರು ಉಗ್ರಗಾಮಿಗಳಾಗಿರಲಿ, ಇಲ್ಲದಿರಲಿ-ಈ ಬಗ್ಗೆ ತಮ್ಮ ಸರ್ಕಾರಗಳು ಸ್ಪಷ್ಟ ನಿಲುವನ್ನು ತಾಳಲೇಬೇಕೆಂಬ ಪಟ್ಟು ಹಿಡಿದಿದ್ದಾರೆ. 'ಅಮೆರಿಕನ್ ನಿಯಂತ್ರಣ' ಎಂಬ ಹೆದರಿಕೆಗೆ ಸೊಪ್ಪು ಹಾಕದೆ ತಮ್ಮ ದೇಶಗಳು ಗಟ್ಟಿಯಾಗಿ ನಿಲ್ಲಬೇಕು ಎಂದು ವಾದಿಸುವವರಿಗೆ, ವ್ಯಂಗ್ಯ ಚಿತ್ರ ವಿವಾದ ಒಂದು ವೇದಿಕೆಯನ್ನು ನಿರ್ಮಿಸಿದೆ. ತಮ್ಮ ದೇಶಗಳು ಯಾವ ಬಿಗುಮಾನವೂ ಇಲ್ಲದೆ ಒಪ್ಪಿಕೊಂಡಿರುವ "ಭಯೋತ್ಪಾದನೆಯ ವಿರುದ್ಧ ಸಮರ"ವೆಂಬುದು ಮೂಲದಲ್ಲಿ "ಇಸ್ಲಾಂ ಮತ್ತು ಮುಸ್ಲಿಮರ ವಿರುದ್ಧದ ಸಮರ" ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂಬುದು ಈ ಪ್ರತಿಭಟನಾಕಾರರ ಒತ್ತಾಯ.

ಯೂರೋಪ್ ಯೂನಿಯನ್‌ನ ಸದಸ್ಯ ರಾಷ್ಟ್ರಗಳಿಗೂ, ಅಮೆರಿಕನ್-ಬ್ರಿಟಿಷ್ ರಾಷ್ಟ್ರಗಳಿಗೂ ಇರುವ ಭಿನ್ನಾಭಿಪ್ರಾಯ ಕೂಡ ಈ ವಿವಾದದ ಹಿನ್ನೆಲೆಯಲ್ಲಿ ಕೆಲಸ ಮಾಡಿದೆ. ಟರ್ಕಿಯನ್ನು ಯೂರೋಪ್ ಯೂನಿಯನ್‌ಗೆ ಸೇರಿಸಿ ಕೊಳ್ಳಬೇಕೇ, ಇಲ್ಲವೇ ಎಂಬುದು ಈ ಭಿನ್ನಾಭಿಪ್ರಾಯದ ಕೇಂದ್ರ ಪ್ರಶ್ನೆ. 'ವಾಕ್ ಸ್ವಾತಂತ್ರ್ಯ'ದ ಹೆಸರಿನಲ್ಲಿ ಪ್ರಾರಂಭವಾದ ವಿವಾದ, ಎಷ್ಟು ಬೇಗ, "ನಾಗರೀಕತೆ ಮತ್ತು ಅಂಧಕಾರದ" ನಡುವಿನ ಆಯ್ಕೆಯ ಪ್ರಶ್ನೆಯಾಗಿ ಹೊರಳಿಕೊಂಡಿತು ಎಂಬುದು ಇಲ್ಲಿ ಮುಖ್ಯವಾಗಿ ಪರಿಶೀಲನೆಗೊಳಗಾಗಬೇಕಿದೆ.

ಯಾಕೆಂದರೆ ವ್ಯಂಗ್ಯ ಚಿತ್ರಗಳನ್ನು-ಅದು ಯಾರ ಬಗ್ಗೆಯೇ ಆಗಲಿ- ಪ್ರಕಟಿಸುವುದು ಪತ್ರಿಕಾ ಸ್ವಾತಂತ್ರ್ಯದ ಹಕ್ಕು ಎನ್ನುವುದಾದರೆ, ಆ ಹಕ್ಕಿನ ಪ್ರಧಾನ ವಾರಸುದಾರರು ಕ್ರಿಶ್ಚಿಯನ್ ಯೂರೋಪಿನ ಸಮಾಜ ಮಾತ್ರವೆ ಎಂಬ ಪ್ರಶ್ನೆ ಏಳುತ್ತದೆ. ಅಂದರೆ ಯೂರೋಪ್ ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ, ಮುಕ್ತ ಪ್ರಜಾಪ್ರಭುತ್ವ ಸರ್ಕಾರವೆಂತಲೂ, ವ್ಯಂಗ್ಯ ಚಿತ್ರದ ಬಗ್ಗೆ ಕ್ರೋಧ ವ್ಯಕ್ತಪಡಿಸುತ್ತಿರುವ ಮುಸ್ಲಿಮ್ ಸಮಾಜ ಅಭಿಪ್ರಾಯ, ಪತ್ರಿಕಾ ಸ್ವಾತಂತ್ರ್ಯಗಳ ಶತ್ರು, ಎಂಬ ಅರ್ಥವನ್ನೂ ಈ ವಿವಾದ ಸೃಷ್ಟಿಸುತ್ತಿದೆ. ಇದೇ ವಿವಾದವನ್ನು ಇನ್ನೊಂದು ರೀತಿಯಲ್ಲಿ ನೋಡಿದರೆ ಯೂರೋಪಿಯನ್ನರಿಗೆ ಅದು ನಾಗರೀಕತೆ ಮತ್ತು ಅಸಂಸ್ಕೃತ ಬರ್ಬರತೆಗಳ ನಡುವಿನ ಸಮರದಂತೆ ಕಾಣುತ್ತದೆ. ಇದರ ಪ್ರಕಾರ ಮುಸ್ಲಿಮರಿಗೆ ತಾವು ಯಾರ ಕಡೆ ಇದ್ದೇವೆ ಎಂಬ ಆಯ್ಕೆಯೇ ಇಲ್ಲ. ಈ ಆಯ್ಕೆಯನ್ನು ಯೂರೋಪೇ ತೀರ್ಮಾನಿಸಿಬಿಟ್ಟಿದೆ. ಆದರೆ ಜೀಸಸ್ ಕ್ರೈಸ್ಟ್‌ರ ಬಗ್ಗೆ ಏನಾದರೂ ಇದೇ ರೀತಿ ಸಂವೇದನಾರಹಿತ ವ್ಯಂಗ್ಯಚಿತ್ರ ಬರೆದರೆ, ಅದು ಕೇವಲ ದೇವನಿಂದನೆ ಅಥವಾ ಧಾರ್ಮಿಕ ಉಲ್ಲಂಘನೆ ಮಾತ್ರವಾಗಿರುವುದಿಲ್ಲ, ಅದು ಎಲ್ಲಾ ಮರ್ಯಾದಸ್ಥ ನಾಗರೀಕರ-ಜಾತ್ಯತೀತರಿರಲಿ, ಧಾರ್ಮಿಕರಾಗಿರಲಿ- ಸಂವೇದನೆಗೆ ಧಕ್ಕೆಯುಂಟು ಮಾಡುವಂಥ, ಒಂದು [illegible] ವಿರೋಧಿ, ದ್ವೇಷಪೂರಿತ ವ್ಯಂಗ್ಯಚಿತ್ರವಾಗಿ ಕಾಣುತ್ತದೆ.

ಈ ವಿವಾದದ ಸನ್ನಿವೇಶದ ಗಂಭೀರತೆ ಮತ್ತು ಸಂದಿಗ್ಧತೆಗಳು ತೀಕ್ಷ್ಣವಾಗಿ ಕಾಡುವುದು [illegible] ಮುಸ್ಲಿಮರಿಗೆ ಪ್ರವಾದಿ ಮುಹಮದರನ್ನು [illegible] ಭಯೋತ್ಪಾದಕ ಅಥವಾ ಸೆಕ್ಸಿಸ್ಟ್ ಆಗಿ ಚಿತ್ರಿಸಿರುವುದು [illegible] ಜಗತ್ತಿನ [illegible] ಮುಸ್ಲಿಮರನ್ನು ಪೈಶಾಚಿಕ ಪ್ರವೃತ್ತಿಯುಳ್ಳವರೆಂದು ತೋರಿಸುವುದಕ್ಕಿಂತ ಹೆಚ್ಚಾಗಿ, ಯೂರೋಪಿನಲ್ಲಿರುವ ಮುಸ್ಲಿಮರನ್ನೇ ಗುರಿಯಾಗಿ ಇಟ್ಟುಕೊಂಡಿರುವಂತೆ ಕಾಣುತ್ತದೆ. ಇಲ್ಲೊಂದು ಸೂಕ್ಷ್ಮ ದಬ್ಬಾಳಿಕೆ ಹಾಗೂ ಹಠಮಾರಿತನ ಕೆಲಸ ಮಾಡುತ್ತದೆ. ಯೂರೋಪ್ ಸಮಾಜದಲ್ಲಿ ಬೆರೆತುಹೋಗಿರುವ, 'ಅಧುನಿಕ' ಮುಸ್ಲಿಮರು ಈಗ ವಾಕ್ ಸ್ವಾತಂತ್ರ್ಯದ ಮೌಲ್ಯವನ್ನು ಒಪ್ಪಿಕೊಳ್ಳಬೇಕು; ಅಷ್ಟೇ ಅಲ್ಲ ಅವರು ಯೂರೋಪ್ ಸಮಾಜದಲ್ಲಿ ರಾಜಕೀಯ ಮತ್ತು ಸಾಮಾಜಿಕ ಮನ್ನಣೆ ಪಡೆಯಬೇಕಾದರೆ, ವಾಕ್ ಸ್ವಾತಂತ್ರ್ಯದ ಪರಮ ಮೌಲ್ಯ ಹಾಗೂ ಪ್ರಯೋಜನಗಳನ್ನು ಯಾವ ಷರತ್ತು ಇಲ್ಲದೆ ಮಾನ್ಯ ಮಾಡಬೇಕು. ಅಂದರೆ ಯೂರೋಪಿನಲ್ಲಿನ ಮುಸ್ಲಿಮರು ತಮ್ಮ ಸ್ವಂತ ಅಭಿಪ್ರಾಯ ಸ್ವಾತಂತ್ರ್ಯವನ್ನು ಬದಿಗಿಟ್ಟು, ಈ ಯೂರೋ ಕೇಂದ್ರಿತ ವಾಕ್ ಸ್ವಾತಂತ್ರ್ಯದ ಪರವಾಗಿ ಹೋರಾಡಬೇಕು ಎನ್ನುವ ಅಘೋಷಿತ ಬೇಡಿಕೆಯನ್ನು ಎದುರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈಗ ಯೂರೋಪಿನಲ್ಲಿ ಒಟ್ಟಾರೆ ಸಮ್ಮತಿ ಪಡೆದು ಕೊಂಡು ಬಿಟ್ಟಿರುವ ವಿಚಾರ ಯಾವುದೆಂದರೆ ಈ ವ್ಯಂಗ್ಯ ಚಿತ್ರಗಳಿಂದ ಉದ್ಭವವಾಗಿರುವ ವಿವಾದ ಕೇವಲ ವಾಕ್ ಸ್ವಾತಂತ್ರ್ಯಕ್ಕೆ ಮಾತ್ರ ಸೀಮಿತವಾದದ್ದಲ್ಲ, ಬದಲಿಗೆ ಇಡೀ ಯೂರೋಪಿನ ಸೆಕ್ಯುಲರ್ ನಾಗರೀಕತೆಯ ಅಸ್ತಿಬಾರವನ್ನೇ ಪ್ರಶ್ನಿಸುವಂಥದ್ದು ಎಂಬುದು. ಇದನ್ನು ಕಡೆಗಣಿಸದ ಹಾಗೆ, ಈ ವಿವಾದಕ್ಕೆ ಹೊಸ ತಿರುವನ್ನು ನೀಡಲಾಗಿದೆ. ಈ ವ್ಯಾಖ್ಯಾನ ಹೊಸದೇನಲ್ಲ, ಬಹುಕಾಲದಿಂದಲೂ ಎಡ ಹಾಗೂ ಬಲಪಂಥೀಯರು ಯೂರೋಪ್ ಸಾಮ್ರಾಜ್ಯ ನಾಗರೀಕತೆಯ ರಕ್ಷಣೆಗೆ ಅಗತ್ಯವೆಂದೇ ಪ್ರತಿಪಾದಿಸಿಕೊಂಡು ಬಂದಿದ್ದಾರೆ. ಮೊದಲು ಕ್ರಿಶ್ಚಿಯನ್ ಧರ್ಮ ನಂತರ "ಜಾತ್ಯತೀತ" ಮಾನವ ಹಕ್ಕುಗಳು ಈ ನಾಗರೀಕತೆಯ ಸಂಕೇತಗಳಾಗಿ ಕೆಲಸ ಮಾಡುತ್ತಿವೆ.



ನಾನು ಪ್ರತಿದಿನ ಪತ್ರಿಕೆಯನ್ನೋ, ಅಂತರಜಾಲವನ್ನೋ ನೋಡುವಾಗ ಯೂರೋಪಿನ ಬುದ್ಧಿಜೀವಿ ಅಥವಾ ಕಲಾಕಾರರು ಯಾರಾದರೂ ಈ ಬಗ್ಗೆ ಪ್ರಶ್ನೆ ಎತ್ತಿದ್ದಾರೆಯೇ, ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಇಸ್ಲಾಂ ಕುರಿತಂತೆ ಭಯವನ್ನು ಹುಟ್ಟಿಸುವ ಈ ಪ್ರಯತ್ನದಿಂದ ತಮ್ಮನ್ನು ದೂರವಿರಿಸಿಕೊಂಡಿದ್ದಾರೆಯೇ ಎಂದು ಆತಂಕದಿಂದ ನಿರೀಕ್ಷಿಸುತ್ತೇನೆ. (ಸರ್ಕಾರಗಳಿಂದಂತೂ ಈ ಧ್ವನಿಯನ್ನು ನಿರೀಕ್ಷಿಸುವಂತಿಲ್ಲ!) ಯೂರೋಪಿನ ಸರ್ವಾಧಿಕಾರಿ ತತ್ವದ ವಿರುದ್ಧ ಹೋರಾಡಿದವರ ಬೌದ್ಧಿಕ ಹಾಗೂ ರಾಜಕೀಯ ವಾರಸುದಾರರಾದ ತಾವು ಈಗ ನಡೆಯುತ್ತಿರುವ ದ್ವೇಷನುಡಿಯ ಬಗ್ಗೆ ಧ್ವನಿ ಎತ್ತುವ ಸಾಮರ್ಥ್ಯವನ್ನು ಇನ್ನೂ ಕಳೆದುಕೊಂಡಿಲ್ಲ ಎಂಬುದನ್ನು ತೋರಲು ಸಿದ್ಧರಿದ್ದಾರೆಯೇ ಎಂಬುದನ್ನು ಕಾತುರದಿಂದ ನಿರೀಕ್ಷಿಸಿದ್ದೇನೆ. ಯೂರೋಪಿನ ನಾಗರೀಕ ಸಮಾಜ ಸದ್ಯದ ಬಿಕ್ಕಟ್ಟಿನ ಸ್ಥಿತಿಯನ್ನು ಭೇದಿಸುವ ಚಿನ್ಹೆಗಳಿಗಾಗಿ, ಇದರ ಬಗ್ಗೆ ಅರ್ಥಪೂರ್ಣ ಚರ್ಚೆ ಎಲ್ಲಾದರೂ ಪ್ರಾರಂಭವಾಗಬಹುದಾದ ಸೂಚನೆಗಾಗಿ ನಾನು ತವಕದಿಂದ ಕಾದಿದ್ದೇನೆ.

ಆದರೆ ದುರದೃಷ್ಟವಶಾತ್, ಈ ವಿವಾದದ ಎರಡೂ ಕಡೆ ಇರುವವರು, 'ಮುಕ್ತ ನುಡಿ' ಎಂದರೆ, ಅದು 'ದ್ವೇಷ ನುಡಿಗೆ' ನೀಡಿರುವ ಪರವಾನಿಗೆ ಎಂದು ಭಾವಿಸಿದಂತಿದೆ. ಈ ವಿವಾದವನ್ನು ಇನ್ನೊಂದು ದೊಡ್ಡ "ನಾಗರೀಕತೆಯ ಸಮರ"ಕ್ಕೆ ಬೇಕಾದ ಭೂಮಿಕೆ ಎಂದೇ ಎಲ್ಲರೂ ಅಂದುಕೊಂಡಂತಿದೆ. ಎರಡೂ ಕಡೆ, ಮುಕ್ತ ನುಡಿಯ ಭಾವೋದ್ರೇಕ ವಕ್ತಾರರಿದ್ದಂತೆಯೇ ಇನ್ನೂ ಹೆಚ್ಚಿನ ಜಾಗತಿಕ ರಾಜಕೀಯ ಅಜೆಂಡಾವೊಂದಕ್ಕೆ ಈ ವಿವಾದವನ್ನು ನೆಪವಾಗಿಸುವ ಹಠಮಾರಿಗಳೂ ಇದ್ದಾರೆ. ಮುಕ್ತತೆ, ಅಭಿಪ್ರಾಯ ಸ್ವಾತಂತ್ರ್ಯದ ವಕ್ತಾರರು ಈ ಇನ್ನೊಂದು ಆಯಾಮದ ಪರಿಣಾಮಗಳನ್ನು ಲೆಕ್ಕಿಸುವುದು ಒಳ್ಳೆಯದು. ನುಡಿ ಸ್ವಾತಂತ್ರ್ಯದ ಚಲಾವಣೆ ಉಂಟು ಮಾಡುವ ಪರಿಣಾಮಗಳಿಂದ ಮುಕ್ತವಾಗಿರಲು ಯಾರಿಗೂ ಸಾಧ್ಯವಿಲ್ಲ, ಅಂದರೆ, ಯಾವುದನ್ನು ಬೇಕಾದರೂ ವ್ಯಕ್ತಪಡಿಸುವ ಲೀಗಲ್ ಹಕ್ಕು ಹೊಂದಿದ್ದಾಗ್ಯೂ ಯಾವುದು ಹಿತ ಯಾವುದು ಸಲ್ಲ ಅಥವಾ ಅಸಲ್ಲ ಎಂಬುದನ್ನು [illegible] ಸಮಾಜವೇ ನಿರ್ಧರಿಸಬೇಕ[illegible] ಈ ಸಂದರ್ಭದಲ್ಲಿ [illegible]

[illegible]

ಅನುವಾದ: [illegible]

# ಶಂಭು

ಒಂಬತ್ತೊಂದರ ದಶಕದ ನಂತರ ನಾನು ಬಿಟ್ಟು [illegible] ಊರದು. ರಾತ್ರಿ ವೇಳೆಯಾದ್ದರಿಂದ ನನ್ನನ್ನು ಯಾರೂ ಗುರುತು ಹಿಡಿಯುತ್ತಿರಲಿಲ್ಲ. ಅಂದಿನ ನನ್ನ ಪರಿಚಿತ [illegible] ನಾನು ಗುರುತಿಸುವಷ್ಟರಲ್ಲಿ ಮುಂದೆ ಹೋಗುತ್ತಿದ್ದರು. ನಾನೇ ನೆಟ್ಟ ಮೂರು ನೆರಳು ಕೊಡುವ ಗಿಡಗಳು ಹೆಮ್ಮರವಾಗಿದ್ದವು. ಆದರೆ ಸರಿಯಾಗಿ ಇಲ್ಲಿಗೆ ಮುವ್ವತ್ತು ವರ್ಷಗಳ ಹಿಂದೆ ಪ್ರಾರಂಭವಾದ ಗ್ರಂಥಾಲಯ ಮಾತ್ರ ಆರಂಭವಾದ ಸ್ಥಿತಿಯಲ್ಲೇ ಇರುವಂತೆ ಕಂಡಿತು.

ಗ್ರಂಥಾಲಯ ಸದಾ ಬೆಳೆಯುವ ಸಂಸ್ಥೆ. ಗ್ರಂಥಾಲಯದ ಪಂಚಸೂತ್ರಗಳಲ್ಲಿ ಮೊದಲ ಸೂತ್ರವೇ **Library is a growing organization.** ಆದರೆ ಮುವತ್ತು ವರ್ಷಗಳ ಹಿಂದೆ ಪ್ರಾರಂಭವಾದ ಚಿಕ್ಕ ಕೊಠಡಿಯಲ್ಲೇ ಆ ಗ್ರಂಥಾಲಯ ಇನ್ನೂ ನರಳುತ್ತಿದೆ ಎಂದರೆ, ಒಂದೋ ಆ ಗ್ರಂಥಾಲಯದ ಪಾಲಿಗೆ ಊರವರು ಸತ್ತಿರಬಹುದು. ಅಥವಾ ಅದೇ ಸತ್ತಿರಬಹುದು. ಅಥವಾ ಅದರ ಸಿಬ್ಬಂದಿ ಸತ್ತಂತೆ ಬದುಕಿರಬಹುದು.

ಹೀಗೆ ಯೋಚಿಸುತ್ತಿರಬೇಕಾದರೆ ಆ ಏರಿಯಾದಲ್ಲಿ ಗೆಳೆಯರಾದವರ ಪಟ್ಟಿಯೇ ಮನಸ್ಸಿನ ಮುಂದೆ ಹಾದು ಹೋಯ್ತು. ಚಿಕ್ಕಮಗಳೂರು ಜಿಲ್ಲೆ ಕಮ್ಯುನಿಸ್ಟ್ ನಾಯಕ ಬಿ.ಕೆ. ಸುಂದರೇಶ್ ರೈಲ್ವೆ ಅಪಘಾತದಲ್ಲಿ ಮಡಿದರು. ನಂತರ ಶಂಕರ ಲಾಳಾಪುರ ಕುಡಿತ ಮತ್ತು ಬೇಜವಾಬ್ದಾರಿ ಜೀವನ ಶೈಲಿಯಿಂದ ಬದುಕನ್ನೇ ನೀಗಿಕೊಂಡರು. ಗೆಳೆಯ ಸೀನೋಜಿ ಆತ್ಮಹತ್ಯೆ ಮಾಡಿಕೊಂಡ. ಮನೋವೈದ್ಯ ಡಾ. ತಾರಾನಾಥ, ಪತ್ರಿಕೆಯೊಂದು ಅವರನ್ನು ಅವಹೇಳನ ಮಾಡಿ ಆಡಿಕೊಂಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡರು. ಈಚೆಗೆ ದಲಿತ ನಾಯಕ ಎಂ.ಡಿ. ಗಂಗಯ್ಯನವರು ಹೃದಯಾಘಾತಕ್ಕೆ ಬಲಿಯಾದರು.

ಹೀಗೇ ಯೋಚಿಸುತ್ತ ಹೋದಂತೆ ಎಲ್ಲ ಗೆಳೆಯರೂ ಹೋಗಿ ನಾನಷ್ಟೇ ಉಳಿದಿರುವಂತೆ ಭಾಸವಾಯ್ತು. ಸೂಕ್ತ ಕಾಲದಲ್ಲಿ ನಾವೂ ಹೊರಟು ಹೋಗದಿದ್ದರೆ ಎಲ್ಲರ ಸಾವಿಗೂ ಅಳಬೇಕಾಗುತ್ತದೆ, ಮತ್ತು ಸಂತಾಪ ಬರೆಯಬೇಕಾಗುತ್ತದೆ ಎನಿಸಿತು.

ಇದ್ದಕ್ಕಿದ್ದಂತೆ ನಾನು ಕುಳಿತ ಜಾಗದಲ್ಲಿ ಹೋಗುವಾಗ, ಬರುವಾಗ ನನ್ನನ್ನು ತುಂಬಾ ನಗಿಸುತ್ತಿದ್ದ ಶಂಭು ನೆನಪಿಗೆ ಬಂದ. ಆಕಾರದಲ್ಲಿ ಸಿನಿಮಾ ನಟ ದಿನೇಶ್‌ನಂತೆ ಕಾಣುತ್ತಿದ್ದ ಶಂಭು, ದಿನೇಶ್‌ಗಿಂತ ಚಿಕ್ಕ ಆಕೃತಿಯವನು. ರೋಮಮಯವಾಗಿದ್ದ ಕರಡಿಯಂತಹ ದೇಹ. ಅವನು ನಗುತ್ತಿದ್ದರೆ ನನಗೇನೂ ನಗು ಬರುತ್ತಿರಲಿಲ್ಲ. ಆದರೆ ಒಮ್ಮೊಮ್ಮೆ ಅವನು ಯಾವುದರ ಬಗ್ಗೆಯೋ ಹೇಳುತ್ತಿದ್ದಾಗ ಅವನ ಗಂಭೀರ ಮುಖ ಮತ್ತು ಕಣ್ಣು ನೋಡಿ ನಾವೇ ಬಿದ್ದು ಬಿದ್ದು ನಗುವಂತೆ ಮಾಡುತ್ತಿದ್ದ.

ಈ ಊರಲ್ಲಿ ಶೋಷಣೆ ಮತ್ತು ಎಚ್ಚರಿಕೆಯಿಂದ ಶ್ರೀಮಂತಿಕೆ ಕಾಯ್ದುಕೊಂಡು ಬಂದವನ ಮಗ ಈ ಶಂಭು. ಅವರಪ್ಪ ತಿಳಿದುಕೊಂಡಂತೆ ತನ್ನ ಸ್ಥಾನವೇ ಬೇರೆ, ಅಭಿರುಚಿಯೇ ಬೇರೆ, ಸಮಾಜದಲ್ಲಿ ವಿಹರಿಸುತ್ತಿರುವ ಅಂತಸ್ತೆ ಬೇರೆ. ಅದರ ವಿರುದ್ಧ ದಿಕ್ಕಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಅವರ ಮಗ ಶಂಭು. ಅಪ್ಪ ಕಾಂಟ್ರಾಕ್ಟ್ ಮಾಡಿಸುತ್ತ ಜನಗಳಿಗೆ ಕೂಲಿ ಕೊಡುವುದನ್ನು ನೋಡಿದ್ದ ಶಂಭು ತಾನೂ ಕೂಡ ಕೂಲಿ ಕೊಟ್ಟು ನೋಟ್ಸ್ ಬರೆಸುತ್ತಿದ್ದ, ತಾನೇ ಓದುವ ಬದಲಾಗಿ ಸಹಪಾಠಿಗಳಿಂದ ಜೋರಾಗಿ ಓದಿಸಿ ಕೇಳುತ್ತಿದ್ದ. ಹಲವೊಮ್ಮೆ ಪಾಠದ ಪತ್ರಿ ಮಾತನ್ನು ಆಡಿಕೊಂಡು ಸಹಪಾಠಿ ಮುಂದೆ ಓದದಂತೆ ನಗಿಸುತ್ತಿದ್ದ. ಉದಾಹರಣೆಗೆ ಮುಸ್ಲಿಂ ದೊರೆಯೊಬ್ಬ ಸಾಲು ಮರ ನಡೆಸಿದ ಎಂದರೆ "ಸಾಬರು ಮರ ಕಡಿಯದ ನೋಡ ಕ್ಯಾಗದೆ ನೆಡಿಸಿರಬವುದು, ಮುಂದಕ್ಕೋದು" ಎನ್ನುತ್ತಿದ್ದ.

ವಿದ್ಯೆಯ ಬಗ್ಗೆ ಅವನ ಗೇಲಿ ಮತ್ತು ಅವನಿಗೊದಗಿ ಬಂದ ಸವಲತ್ತುಗಳ ದೆಸೆಯಿಂದ ಫೇಲಾಗಿ ಊರಿಗೆ ಬಂದ. ಆದರೆ ಬಂದವನೇ ಸದ್ಯದಲ್ಲೇ ಮತ್ತೆ ವಾಪಸು ಹೋಗುವವನ ತರಾತುರಿಯಲ್ಲಿ ಓಡಾಡುತ್ತಿದ್ದ. ಪೋಸ್ಟಾಫಿಸಿಗೆ ಬಂದು ತನಗೆ ಬಂದಿರುವ ಪತ್ರಗಳನ್ನು ಕೇಳುತ್ತಿದ್ದ. ಸ್ಟೈಲಾಗಿ ಆತ ಬಂದು ಕೇಳಿದಾಗ ಎಲ್ಲಾ ಜಾಗ ಬಿಟ್ಟು ಅವನತ್ತ ನೋಡುತ್ತಿದ್ದರು. ಯಾರಿಗಾದರೂ ಪತ್ರ ಬರೆದರೆ ತಾನೆ ಅವನಿಗೂ ಪತ್ರ ಬರುವುದು? ಆದರೆ ಬೆಳಗ್ಗೆ ಎದ್ದ ಕೂಡಲೇ ಡ್ರೆಸ್ ಮಾಡಿಕೊಂಡು [illegible]

[illegible] ಇದ್ದ ಬೀದಿಯಲ್ಲೇ ಅವನ ಮನೆಯೂ ಇದ್ದಿದ್ದರಿಂದ ನಾನು ತುಂಬಾ ಕುತೂಹಲದಿಂದ ಶಂಭು ಚಟುವಟಿಕೆಗಳನ್ನು ಗಮನಿಸುತ್ತಿದ್ದೆ. ನನ್ನ ಅವನ ಪರಿಚಯವೇನಿದ್ದರೂ ತುಟಿ ಬಿರಿಯುವ ನಗುವಿನಲ್ಲೇ ಇತ್ತು. ಅವನು ಕ್ಲಾಸ್ ಒನ್ ಕಂಟ್ರಾಕ್ಟರ್ ಮಗನಾಗಿದ್ದರಿಂದ ಮನೆ ಮುಂದೆ ಕಾರು, ಲಾರಿ, ಟ್ರಾಕ್ಟರ್ ನಿಂತಿರುತ್ತಿದ್ದವು. ಅವನ ಮನೆ ವೈಭೋಗ ನೋಡಿದ ನಾನು ಶಂಭು ಜೋಬಿನ ತುಂಬ ದುಡ್ಡಿದೆ ಎಂದುಕೊಂಡಿದ್ದೆ. ಆದರೆ ಖರ್ಚಿಗೆಂದು ಅವನಿಗೆ ಮನೆಯಲ್ಲಿ ಹತ್ತು ರೂಪಾಯಿ ಕೂಡಾ ಸಿಗುತ್ತಿರಲಿಲ್ಲವೆಂದು ನನ್ನ ಅರಿವಿಗೆ ಬರುವುದು ತಡವಾಗಲಿಲ್ಲ.

ಒಮ್ಮೆ ಊರಿಗೆ ಹೊಸದಾಗಿ ಬಂದಿದ್ದ ಸಬ್‌ಇನ್ಸ್‌ಪೆಕ್ಟರ್ ದಿವಾಕರ ಎಂಬುವನು ತನ್ನ ಸ್ಟೇಷನ್ ಕಿಟಕಿಯಿಂದ ಆಸ್ಪತ್ರೆ ಕಿಟಕಿಯಲ್ಲಿ ಕಾಣುತ್ತಿದ್ದ ವೈದ್ಯೆಯೊಬ್ಬಳಿಗೆ ಲೈನ್ ಹೊಡೆಯುತ್ತಿದ್ದಾನೆಂದು ಶಂಭು ಪತ್ತೆ ಹಚ್ಚಿದ. ಇನ್ಸ್‌ಪೆಕ್ಟರನ ಅಂತ ಖುಷಿ ಸಮಯದಲ್ಲಿ ಶಂಭು ಹೋಗಿ "ಸಾರ್, ನಾನು ಕಂಟ್ರಾಕ್ಟರ್ ಈಶ್ವರಪ್ಪನ ಮಗ. ಆಳುಗಳಿಗೆ ಕೂಲಿ ಕೊಡಕ್ಕೆ ಹಣ ಶಾರ್ಟೇಜಾಗಿದೆ. ಒಂದಿಷ್ಟು ಅಮವುಂಟಿದ್ರೆ ಕೊಡಿ, ನಮ್ಮ ತಂದೆ ಬಂದಕೂಡ್ಲೆ ಈಸಿಕೊಡ್ತೀನಿ" ಎಂದ. ಇನ್ಸ್‌ಪೆಕ್ಟರ್ ಹಿಂದೆ ಮುಂದೆ ನೋಡದೆ ಇದ್ದ ದುಡ್ಡನ್ನೆಲ್ಲಾ ಕೊಡವಿಕೊಟ್ಟ.

ಇದಾದ ನಂತರ ಇನ್ಸ್‌ಪೆಕ್ಟರ್ ಹಲವು ಬಾರಿ ಶಂಭು ಕರೆಸಿ ಹಣ ಕೇಳಿದ. "ಕೋಡೋಣ ತಗಳಿ ಸಾರ್. ನಿವಂಗೇನು ಕಡಿವೆ. ಯಾವ್ಯಾವುದೊ ಸೋರ್ಸಿಂದ ಹಣಬರುತ್ತೆ, ಅಂತಹದರಲ್ಲಿ ಯಾವ ಸೋರ್ಸು ಇಲ್ಲದ ನನಿಗೆ ಬಾಕಿ ಕೊಡು ಅಂದ್ರೆ ಎಲ್ಲಿಂದ ಕೊಡ್ಲಿ? ಆದ್ರು ನಿಮ್ಮ ದುಡ್ಡ ತಿನ್ನಕಳಲ್ಲ, ಬಲ್ಲಾಗ್ಲಿ ಕೊಡ್ತಿನಿ" ಎಂದುಕೊಂಡೆ ಬಂದ. ಇನ್ಸ್‌ಪೆಕ್ಟರ್ ತಾನು ಕಿಟಕಿಯಲ್ಲಿ ನೋಡುತ್ತಿದ್ದ ಡಾ.ಲೀಲಾರನ್ನು ಮದುವೆಯಾಗುವ ಹಂತ ತಲುಪಿದ. ಆಗ ಶಂಭು "ನೋಡಿ ಸಾರ್, ನಿಮ್ಮ ಸ್ಟೇಷನ್ನು, ಆ ಆಸ್ಪತ್ರೆ ಕಟ್ಟಿಸಿದ್ದು ನಾವೆಯ. ಆಗ ನಾವು ಬುದ್ಧಿ ಓಡಿಸಿ ಒಳ್ಳೆ ಕಿಟಕಿ ಬಿಡದೆಯಿದ್ರೆ ಒಂದು ಲವ್ ಮ್ಯಾರೇಜ್ ನೆಡಿತಿರಲಿಲ್ಲ" ಎಂದು ಹೇಳಿ ಇನ್ಸ್‌ಪೆಕ್ಟರ್‌ರನ್ನೇ ನಗಿಸಿದ. ಊರಿನ ಪೋಲೀಸ್ ಇನ್ಸ್‌ಪೆಕ್ಟರ್‌ಗೇ ಟೋಪಿ ಹಾಕಿದ ಮೇಲೆ ಶಂಭುಗೆ ಇನ್ನಾರು ಲೆಕ್ಕಾ!

ಇಡೀ ಊರ ತುಂಬ ಸಾಲ ಮಾಡಿಬಿಟ್ಟ. ಆದರೆ ಯಾರ ಬಳಿಯೂ ಐವತ್ತು ರೂಗಳ ಮೇಲೆ ಹೋಗಿರಲಿಲ್ಲ. ಕೊಟ್ಟವರಿಗೆ ನಷ್ಟವಾಗದ ಮೊತ್ತದಲ್ಲೇ ಆತನ ವ್ಯವಹಾರಗಳಿದ್ದವು. ಹುಟ್ಟು ಜಿಪುಣನಾದ ಅವರಪ್ಪನಿಗೆ ಇದೆಲ್ಲವೂ ಗೊತ್ತಾದಾಗ ಮಗನನ್ನು ಮಾತನಾಡಿಸದೆ ಒಂದು ರೀತಿ ಕಠೋರವಾಗಿ ವರ್ತಿಸತೊಡಗಿದ. ಕ್ರಮೇಣ ಅಪ್ಪನ ಸುಳ್ಳು ಪ್ರತಿಷ್ಠೆಗೆ ಮಗ ಸವಾಲಾಗಿಬಿಟ್ಟ.

ಶಂಭು ಅಪ್ಪನ ಅಪ್ಪ, ಬಡ್ಡಿ ವ್ಯವಹಾರದ ಮುದುಕ. ವಾಚು, ಉಂಗುರ ಅಡ ಮಡಗಿಸಿಕೊಂಡು ಹಣ ಕೊಡುತ್ತಿದ್ದ. ಮೊಮ್ಮಗನ ಮೇಲಿನ ಪ್ರೀತಿಯಿಂದ ಅಡದ ಮಾಲಿನ ತಿಜೋರಿ ಕೀಯನ್ನು ಅಡವಿಡುವ ಸಮಯದಲ್ಲಿ ಶಂಭುಗೇ ಕೊಡುತ್ತಿದ್ದ. ಆ ಮುದುಕನ ಟ್ರೆಜರಿ ಈ ವೇಳೆಗೆ ವಾಚು, ಉಂಗುರದಿಂದ ಭರ್ತಿಯಾಗಬೇಕಿತ್ತು, ಆದರೆ ಅಡವಿಟ್ಟ ವಾಚುಗಳೇ ಮತ್ತೆ ಮತ್ತೆ ಮತ್ತೆ ವಾಪಸು ಬಂದು ಸಂಗ್ರಹವಾಗುತ್ತಿದ್ದವು. ಅಂದರೆ ತಿಜೋರಿಯಿಂದ ಮಾಯವಾದ ವಾಚು ಯಾರದ್ದೋ ಮುಖಾಂತರ ಮತ್ತೆ ಬರುತ್ತಿದ್ದವು. ಇದನ್ನ ಪತ್ತೆ ಹಚ್ಚಿದ ಅಪ್ಪ ಮುಂದೆಂದೂ ತಿಜೋರಿ ಕೀಯನ್ನ ಶಂಭುಗೆ ಕೊಡಲಿಲ್ಲ.

ಇದರಿಂದ ಶಂಭುನ ಆದಾಯದ ಮೂಲವೇ ಬಂದಾಯ್ತು, ಸಾಯಂಕಾಲವಾಗುತ್ತಿದ್ದಂತೆ ಒಂದು ಸಿಕ್ಸ್ಟಿ ರಮ್ಮಾದರೂ ಶಂಭು ಹೊಟ್ಟೆಗೆ ಬೀಳಬೇಕಿತ್ತು, ಅದಕ್ಕಾಗಿ ಅವನಾಡುತ್ತಿದ್ದ ಮಾತಿಗೆ ಮರುಳಾಗದವರೇ ಇಲ್ಲ, ನನ್ನ ಬಳಿಯಂತೂ ಆತ ಐದು ರೂಪಾಯಿಗಳಿಗಿಂತ ಹೆಚ್ಚಿಗೆ ಕೇಳುತ್ತಿರಲಿಲ್ಲ, ಹಾಗಾಗಿ ಹದಿನೈದೇ ರೂಪಾಯಿಗೆ ನನ್ನ ಅವನ ವ್ಯವಹಾರ ನಿಂತುಹೋಗಿತ್ತು.

ಒಮ್ಮೆ ನನ್ನ ರೂಮಿನಲ್ಲಿ ನನ್ನಷ್ಟಕ್ಕೇ ನಾನು ಏನೋ ಯೋಚಿಸುತ್ತಾ ಕುಳಿತಿದ್ದಾಗ ತೆರೆದ ಒಂಟಿ ಬಾಗಿಲಲ್ಲಿ ಶಂಭು ಮುಖ ಕಾಣಿಸಿತು. ದೇಹವೆಲ್ಲಾ ಹೊಸಲಿಂದ ಹೊರಗಿಟ್ಟು ಕತ್ತು ಮಾತ್ರ ಚಾಚಿದ್ದ ಶಂಭು "ಗೌಡ್ರೆ ಒಂದಿಷ್ಟು ಸ್ಮಗಲಿಂಗ್ ಗೂಡ್ಸಿದೆ ಬೇಕಾ" ಎಂದ. ನನಗಾಗ ವಾಚು, ಉಂಗುರ, ಕ್ಯಾಮರಾ ಇತ್ಯಾದಿ ವಸ್ತುಗಳ ಅಗತ್ಯವಿತ್ತು. ಅದೂ ಅಗ್ಗದ ಬೆಲೆಯಲ್ಲಿ. "ಏನೇನಿದೆ" ಎಂದೆ. "ಸಕ್ಕರೆ, ರವೆ, ಅಕ್ಕಿ ತಗದಿಟ್ಟದ್ದಿನಿ. ಯಲ್ಲಾ ಟೋಟಲ್ಲಿ ಐದು ಕೆ.ಜಿ. ಅದೆ. ಕತ್ಲೆ ಆದ ಮೇಲೆ ನಿಮ್ಮ ರೂಮು ತಲುಪುತ್ತೆ, ಒಳ್ಳೇ ರೇಟಾಕಿ ಕೊಡ್ತಿನಿ, ತಗಳಿ" ಎಂದ. ನನಗೆ ಕೂಡಲೇ ನಗುಬಂತು. ತನ್ನ ಮನೆಯಲ್ಲೇ ಕದ್ದಿರುವ ರೇಷನ್ ಮಾರಲು ಹೊರಟ ಶಂಭು ಬಳಿ ನಾನು ವ್ಯವಹಾರ ಮಾಡಿದರೆ ನನ್ನ ಮಾನ ಮರ್ಯಾದೆ ಗತಿಯೇನು ಎಂದು ಯೋಚಿಸಿ "ಬೇಡ ಶಂಭು" ಎಂದೆ. "ಇಲ್ಲ ಗೌಡ್ರೆ, ಅಕ್ಕಿಯಂತೂ ಬಾಸುಮತಿ ಅಕ್ಕಿಯಂಗದೆ. ರವೆ, ಸಕ್ಕರೆಯಂತೂ ನೀವಿಲ್ಲಿವರಿಗೂ ತಿಂದಿಲ್ಲ" ಎಂದು ಗಂಭೀರವಾಗಿ ಹೇಳಿದಾಗ ಇಬ್ಬರೂ ಗಹಗಹಿಸಿ ನಕ್ಕೆವು.

ನಂತರ ನಾನು ಖಡಾಖಂಡಿತವಾಗಿ ನಿರಾಕರಿಸಿದೆ. ನನ್ನ ರೂಮಿನ ಸುತ್ತಾ ಕಣ್ಣು ಹಾಯಿಸಿದ ಶಂಭು ನನ್ನ ರೂಮಿನಲ್ಲಿ ಇನ್ನೊಂದು ಬಲ್ಬಿನ ಕೊರತೆಯಿರುವುದನ್ನು ಗಮನಿಸಿದ. "ಹೋಗ್ಲಿ ಒಂದೆರಡು ಒಳ್ಳೆ ಬಲ್ಬಿವೆ. ತಗತ್ತಿರಾ?" ಎಂದ. "ಅವೆಲ್ಲಿ ಸಿಕ್ಕಿದ್ದೋ?" ಎಂದೆ. "ನಮ್ಮನೆಲೆ. ತಗದಿಟ್ಟು ಬರ್ನಾಗಿರುವ ಬಲ್ಬ್ ಫಿಕ್ಸ್ ಮಾಡಿ ಏನೋ ಮಾಡಿದ್ದೀನಿ. ಆ ಡಿಟೈಲೆಲ್ಲಾ ಯಾಕೆ? ತಂದು ಕೊಡ್ತೀನಿ" ಎಂದ. "ಖಂಡಿತ ಬೇಡ" ಎಂದು ಹೇಳಿ ಐದು ರೂ. ಕೊಟ್ಟೆ. ಆತ ನಗಾಡುತ್ತ ಹೋದ.

ಒಂದು ದಿನ ಲೈಬ್ರರಿಗೆ ಬಂದ. ಏನೋ ಓದುತ್ತ ಕುಳಿತಿದ್ದ ನಾನು ಆಚ್ಚರಿಯಿಂದ ಕತ್ತೆತ್ತಿ ನೋಡಿದೆ. ಶಂಭು ದೊಡ್ಡ ವಿದ್ವಾಂಸನ ಗತ್ತಿನಲ್ಲಿ ರಾಕಿನಲ್ಲಿದ್ದ ಪುಸ್ತಕಗಳನ್ನು ನೋಡತೊಡಗಿದ. ಆ ನಂತರ ನನ್ನ ಹತ್ತಿರ ಬಂದು "ಗೌಡ್ರೆ, ಈ ಊರು ಸರಿಲ್ಲವ್ರೋ ಅಥವಾ ನಾನೇ ಸರಿಯಿಲ್ಲವ್ರೋ ಅಂತ ತಿಳಕಳಕ್ಕೆ ಯಾವಾರ ಪುಸ್ತಕ ಇದ್ದವಿಲ್ಲಿ?" ಎಂದ. ಲೈಬ್ರರಿಯಾದ್ದರಿಂದ ಜೋರಾಗಿ ನಗಾಡುವಂತಿರಲಿಲ್ಲ, ಉಕ್ಕಿ ಬರುತ್ತಿದ್ದ ನಗೆ ತಡೆದುಕೊಂಡು "ಇಲ್ಲ ಶಂಭು. ಆತರ ಯಾವ ಪುಸ್ತಕನೂ ಇಲ್ಲ" ಎಂದೆ. "ಇರಬೇಕು ನೋಡಿ. ಈಸಕ್ಕೊಂದು ಪುಸ್ತಕದಲ್ಲಿ ಈ ಮಿಂಡ್ರಿಗುಟ್ಟಿದ ಊರಿನ ಬಗ್ಗೆ ಯಾರಿಸು ಪುಸ್ತಕ ಬರದಿಲವೆ" ಎಂದು ತನಗೆ ತಾನೇ ಹೇಳಿಕೊಂಡ.

"ಅವೇನವು ಅಷ್ಟು ಗಾತ್ರವಲ್ಲ?" ಎಂದು ವಿಶ್ವಕೋಶದ ಕಡೆ ಕೈ ತೋರಿದ. "ಅವು ವಿಶ್ವಕೋಶ" ಎಂದೆ. "ಅದರ್ಗಳಗೂ ಇಲವೆ?" ಎಂದ. "ಇಲ್ಲ, ಆದ್ರು ಓದು ಬೇಕಾದ ಗ್ರಂಥ ಅವು" ಎಂದೆ.

"ನೀವೇಳದು ಸರಿ. ಆ ವಿಶ್ವಕೋಶ ಓದನಾ ಅಂದ್ರೆ ನಮ್ಮ ಶ್ವಾಸಕೋಶನೇ ಸರಿಯಿಲ್ಲವಲ್ಲ. ಹೇಳಿ. ಎಷ್ಟವೇ ಅವು?" ಎಂದ.

"ಸದ್ಯಕ್ಕೆ ಆರವೆ."

"ಏಳ್ನೆದಿಲವೆ?"

"ಇನ್ನ ಪ್ರಿಂಟಾಗ್ತ ಅದೆ. ಬರುತ್ತೆ."

"ಛೇ, ಏಳನೆದು ಬೇಕಾಗುತ್ತೆ ಕಂಡ್ರಿ ನನಿಗೆ. ಅದು ಬಂದಾಗೇಳಿ" ಎಂದವನೆ ದುರುಗುಟ್ಟಿ ನೋಡಿ "ಸ್ವಲುಪ ಜೇಬಿಗೆ ಕೈ ಹಾಕ್ತಿರಾ?" ಎಂದ. "ನೀನೇ ಹಾಕು" ಎಂದು ಧೈರ್ಯವಾಗಿ ಜೇಬು ತೋರಿದೆ. "ಛೇ, ಬೆಳಬೆಳಿಗ್ಗೆ ನಿಮ್ಮ ಕೇಳಿದ್ನಲ್ಲಾ ಗೌಡ್ರೆ. ಇರ್ಲಿ ಏಳನೇ ವಿಶ್ವಕೋಶ ಬಂದಾಗೇಳಿ. ಅದರಲ್ಲೇನಾರ ನಮ್ಮೂರ ಜನಗಳ ಸುದ್ದಿ ಇದ್ರೆ ಓದಿಕತ್ತಿನಿ" ಎಂದು ಹೊರಟು ಹೋದ.

ಅದೇ ದಿನ ಸಂಜೆ ಲಗ್ನಪತ್ರಿಕೆ, ತಿಥಿಕಾರ್ಡು, ಹ್ಯಾಂಡ್ ಬಿಲ್ಲು ಪ್ರಿಂಟ್ ಮಾಡುವ ಒಬ್ಬ ಶೆಟ್ಟಿ ಪ್ರೆಸ್ಸಿನಲ್ಲಿ ಕುಳಿತಿದ್ದೆ. ಸೈಕಲ್ಲಿನಲ್ಲಿ ಹೋಗುತ್ತಿದ್ದ ಶಂಭು ಬ್ರೇಕ್ ಹೊಡೆದು ನಿಲ್ಲಿಸಿ "ಗೌಡ್ರೆ, ಏಳನೆ ಸಂಪುಟ ಇಲ್ಲಿ ಪ್ರಿಂಟಿಗೆ ಕೊಟ್ಟದ್ದೀರಾ" ಎಂದ. ನನಗೆ ಗಂಟಲು ಹರಿಯುವಷ್ಟು ನಗು ಬಂತು. ಅಷ್ಟರಲ್ಲಿ ಶಂಭು ಮಾಯವಾಗಿದ್ದ.

ಆ ವರ್ಷ ಊರಲ್ಲಿ ನಾಟಕಗಳ ಸ್ಪರ್ಧೆಯಿತ್ತು, ಒಳ್ಳೊಳ್ಳೆಯ ನಾಟಕಗಳು ಸ್ಪರ್ಧೆಗೆ ಬಂದಿದ್ದವು. ಶಂಭು ಒಳ್ಳೆಯ ಪ್ರೇಕ್ಷಕನಂತೆ ಬಂದು ಮುಂದೆ ಕೂರುತ್ತಿದ್ದ. ಅದೂ ತರತರದ ವೇಶ ಹಾಕಿಕೊಂಡು ಬರುತ್ತಿದ್ದ. ಒಂದು ದಿನ ಅರಬ್ ದೇಶದವನಂತೆ ಬಂದು ಕೂತಿದ್ದ. ನಾಟಕ ಪ್ರಾರಂಭವಾಗುವುದಕ್ಕೆ ಮುನ್ನ ಲೈಟ್ ಸರಿ ಮಾಡುತ್ತಿದ್ದವನು ಕರೆಂಟ್ ಹೊಡೆಸಿಕೊಂಡು ನೆಗೆದು ನಿಂತ ಕೂಡಲೇ ಶಂಭು "ವಾಹ್ ಇದಪ್ಪ ಆಕ್ಟಿಂಗು. ಈ ತರ ಆಕ್ಟ್ ಮಾಡಿದರೆ ಯಾಕ್ ಪ್ರೈಜ್ ಬರಲ್ಲ" ಎಂದ. ಕರೆಂಟ್ ಶಾಕಿಗೆ ತುತ್ತಾದವನೂ ನಗಾಡಿದ. ಮಂಡ್ಯದಿಂದ ಬಂದಿದ್ದ ನಾಟಕದಲ್ಲಿ ದುಶ್ಯಾಸನ ಪಾತ್ರ ಮಾಡಿದ್ದವನ ಗದೆ ಒಡ್ಡಾಗಿತ್ತು. ಅದನ್ನ ಆಗೀಗ ಆ ಪಾತ್ರಧಾರಿ ತಿರುಗಿಸಿ ಸ್ಟೈಲಾಗಿ ಊರುತ್ತಿದ್ದ. ಅವನನ್ನು ತದೇಕ ಚಿತ್ತದಿಂದ ನೋಡಿದ ಶಂಭು "ಹಿಂಗಾಡಿದ್ರೆ ಗದೆ ಮುರಕತ್ತಿ ನೀನು" ಎಂದ. ಶಂಭು ಏನೆಂದು ಊರವರಿಗೆ ಗೊತ್ತಿದ್ದರಿಂದ ಆತ ಬಾಯಿ ಬಿಟ್ಟದ್ದಕ್ಕೆಲ್ಲಾ ಜನ ನಕ್ಕುಬಿಡುತ್ತಿದ್ದರು. ಆದರೆ ನಾಟಕದ ಪಾತ್ರಧಾರಿಗಳು ನಗುವಂತಹ ಅಭಿನಯವನ್ನು ನಾವೆಲ್ಲಿ ಮಾಡಿದೆವು ಎಂದು ಗಲಿಬಿಲಿಗೊಳಗಾಗುತ್ತಿದ್ದರು.

ಸರಿಯಾಗಿ ಅದೇ ಸಮಯಕ್ಕೆ ಆಗ ಮಹಾಮಸ್ತಕಾಭಿಷೇಕ ನಡೆಯುತ್ತಿತ್ತು, ಮಗುವಿನಂತಹ ಬಾಹುಬಲಿಗೆ ಭಕ್ತಾದಿಗಳು ಕೊಡುವ ಹಿಂಸೆಯನ್ನು ವಿರೋಧಿಸುವ ವಿಚಾರವಾದಿಗಳು, ಅಲ್ಲಲ್ಲಿ ಪ್ರತಿಭಟಿಸಲು ಸಜ್ಜಾಗುತ್ತಿದ್ದರು. ಈಗಿನಂತೆ ಆಗ ಪ್ರತಿಭಟನೆಯ ದನಿಗಳೇ ಮುಳುಗಿ ಹೋಗಿರಲಿಲ್ಲ. ವಿಚಾರವಾದಿ ಗೆಳೆಯರೆಲ್ಲಾ ನನ್ನ ರೂಮಿನಲ್ಲಿ ಸೇರಿಕೊಂಡು ಪತ್ರಿಕೆಗಳಿಗೆ ಹೇಳಿಕೆ ಕೊಡುವ ಮುಖಾಂತರ ಪ್ರತಿಭಟಿಸುವ ಬಗ್ಗೆ ಮಾತನಾಡುತ್ತಿದ್ದೆವು. ಆಗ ಬಾಗಿಲಲ್ಲಿ ಇಣುಕಿದ ಶಂಭು "ವಿಚಾರವಾದಿಗಳತ್ರ ನಂದೊಂದು ಸಮಸ್ಯೆ ತಂದಿದ್ದೀನಿ. ಬಗೆ ಹರಿಸಿಕೊಡಬೇಕು" ಎಂದ. ಯಾರೂ ಉತ್ತರ ಕೊಡದೆ ನಗುವಿಗಾಗಿ ಕಾಯುತ್ತ ಆತನ ಮುಖ ನೋಡಿದರು.

"ಏನಿಲ್ಲ, ನಮ್ಮನೇಲಿ ಕಿರಾಳಮ್ಮನ ಹುಂಡಿ ಅದೆ. ಅದನ್ನ ಹ್ವಡಿಬವುದೆ? ಅಥವಾ ಕದಿಬವುದೆ? ಅದರಿಂದ ಏನೂ ಆಗದಿಲವೆ? ತಾವೇ ಮಾರ್ಗದರ್ಶನ ಮಾಡಬೇಕು" ಎಂದ. ನಾವೆಲ್ಲಾ ಒಮ್ಮೆಲೆ ನಗಾಡಿದೆವು. ನಂತರ ಶಂಭು ಸಾಹಸಗಳ ಬಗ್ಗೆ ಮಾತನಾಡುತ್ತಾ ನಾವೆಲ್ಲಾ ಪ್ರತಿಭಟನೆಯ ವಿಷಯವನ್ನೇ ಮರೆತೆವು. ಅಂದು ಅಲ್ಲಿದ್ದ ಎಲ್ಲಾ ವಿಚಾರವಾದಿಗಳಿಗೂ ಗೆಳೆಯನಾಗಿದ್ದ ಶಂಭು ಎಲ್ಲರಿಗೂ ಸಾಲಗಾರನಾಗಿದ್ದ. ಶ್ರೀಮಂತನ ಮಗನೊಬ್ಬ ಸಿಕ್ಕಸಿಕ್ಕವರಲ್ಲಿ ಹತ್ತು ರೂ. ಕೇಳುವುದು ಅವಮಾನಕರ ಪ್ರಸಂಗವಾಗಿರುವುದರ ಬದಲು ಆತ ಜಿಪುಣ ತಂದೆಗೆ ತಕ್ಕ ಶಾಸ್ತಿ ಮಾಡುತ್ತಿರುವ ಬಗ್ಗೆ ಕೆಟ್ಟ ಖುಷಿ ನಮ್ಮಲ್ಲುಂಟಾಗುತ್ತಿತ್ತು.



ಬಿ.ಚಂದ್ರೇಗೌಡ



# ಮೌನವೆಂಬ ಗಂಗೋತ್ರಿ

ಪ್ರ[illegible] ತೇಜಸ್ವಿ ಹಿಂದೂಸ್ತಾನಿ ಸಂಗೀತ [illegible]ಯುತ್ತಿದ್ದ ದಿನಗಳು. ಮನೆಗೆ ಬಂದ ಯಾರೋ [illegible]ವರ ಸಂಗೀತಾಭ್ಯಾಸವನ್ನು ಕುರಿತು ವಿಚಾರಿಸುತ್ತಾರೆ. [illegible] "ಅವನ ಸಂಗೀತಾಭ್ಯಾಸದ ಬಗ್ಗೆ [illegible]ವನನ್ನು ಕೇಳಿ ಪ್ರಯೋಜನವಿಲ್ಲ. ಬೇರೆಯವರನ್ನು [illegible]ವರೆ ವಾಸಿ. ಇವನು ಸಂಗೀತ ಕಲಿಯಲು ಶುರು [illegible]ದಾಗಿನಿಂದ ನನಗೆ ನಿಶ್ಶಬ್ದವೇ ಜಗತ್ತಿನ ಅತ್ಯುತ್ತಮ [ಸಂ]ಗೀತ ಎನಿಸಲು ಶುರುವಾಗಿದೆ" ಎಂದು ಹೇಳುತ್ತಾರೆ. [ತೇ]ಜಸ್ವಿಯವರು ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದ [illegible] ಬಗ್ಗೆ ಕುವೆಂಪು ಅವರ ತತ್‌ಕ್ಷಣದ [illegible]ಯಾದರೂ ಇದಕ್ಕೆ ಆ ಘಳಿಗೆಯ ತುರ್ತನ್ನು [ಮೀ]ರಿದ ಆಯಾಮವೂ ಇದೆ. ಮೂರ್ತ- ಅಮೂರ್ತ [ನೆ]ಲೆಗಳೆರಡರಲ್ಲೂ ನಮ್ಮ ಅರಿವು, ಅನುಭವಕ್ಕೆ ದಕ್ಕುವ ಮೌನವು ಕಲೆಯಾಗಬಹುದಾದ ಸಾಧ್ಯತೆಯನ್ನು [ಕು]ವೆಂಪು ಅವರ [illegible] [ಧ್ವ]ನಿಸಿದರೆ, ನಮ್ಮ ಅನುಭಾವಿಗಳು ಮೌನವನ್ನು ಉದ್ದಕ್ಕೂ ಸಿದ್ಧಿಯ [ನೆ]ಲೆಯಾಗಿ, ಆತ್ಮದ ಜೊತೆಗಿನ [ಐಕ್ಯ]ವನ್ನು ಸಾಧಿಸುವ ನಿರ್ಣಾಯಕ [ಘ]ಟ್ಟ ಎಂದೇ ನೋಡುತ್ತಾ ಬಂದಿದ್ದಾರೆ. ಮನೋ[ವಿ]ಜ್ಞಾನಿಗಳು, ಭಾಷಾಶಾಸ್ತ್ರಜ್ಞರು ಮೌನ ಮನುಷ್ಯನ [ಅ]ತ್ಯಂತ ಸೂಕ್ಷ್ಮವಾದ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಒಂದು [ಎ]ನ್ನುವುದನ್ನು, ಅದರ ಹಲವು ಸಾಧ್ಯತೆಗಳನ್ನು ಬೇರೆ [ಬೇ]ರೆ ನೆಲೆಗಳಲ್ಲಿ ಚರ್ಚಿಸುತ್ತಲೇ ಇದ್ದಾರೆ.

ಮೌನವನ್ನು ಕುರಿತಂತೆ ಹಲವು ಭಿನ್ನ ಧ್ರುವಗಳ [ವ್ಯಾ]ಖ್ಯಾನಗಳು ನಮ್ಮಲ್ಲಿವೆ. ಜನತಾಂತ್ರಿಕ ವ್ಯವಸ್ಥೆಯು ಮೌನವನ್ನು ತೀವ್ರವಾಗಿ ವಿರೋಧಿಸುತ್ತದೆ. ಸಮು[ದಾ]ಯದ ಎಚ್ಚರವನ್ನು ಆರೋಗ್ಯವನ್ನು, ಸೌಷ್ಠವವನ್ನು [ಕಾ]ಪಾಡಿಕೊಳ್ಳಲು ಮಾತು ಮೂಲದ್ರವ್ಯವೂ ಹೌದು, [ಆ]ಯುಧವೂ ಹೌದು, ಆಭರಣವೂ ಹೌದು. ಅಲ್ಲಿ ಮಾತನಾಡದೇ ಇರುವುದು ದೌರ್ಬಲ್ಯ ಮಾತ್ರವಲ್ಲ [ಅ]ಪರಾಧ. ಈ ಹಿನ್ನೆಲೆಯಲ್ಲಿಯೇ ಜನತಾಂತ್ರಿಕ ವ್ಯವಸ್ಥೆ ಮೌನವನ್ನು ಪರಮ ಶತ್ರುವೆಂದೇ ಪರಿಗಣಿಸುತ್ತದೆ. [ಶ್ರೇ]ಣೀಕೃತ ವ್ಯವಸ್ಥೆಯಲ್ಲಿ ಮೌನವಾಗಿರುವುದು [ಅ]ಸಹಾಯಕತೆಯ ಸಂಕೇತವಾಗಿ ಕಂಡರೆ, ಮೌನವಾಗಿ[ರು]ವುದು ವ್ಯವಸ್ಥೆಯ ಯಶಸ್ಸಾಗಿರುತ್ತದೆ. ಎಲ್ಲ ಬಗೆಯ [ಶೋ]ಷಣೆಯ ವಿಧಾನಗಳ ಅಂತಿಮ ಗುರಿಯೂ [ಪ್ರ]ತಿರೋಧರ ಪ್ರಯತ್ನಗಳನ್ನು ಮೌನವಾಗಿಸುವುದೇ [ಆ]ಗಿರುತ್ತದೆ. ನಮ್ಮ ನಡುವಿನ ಬಹುಮುಖ್ಯ ಸ್ತ್ರೀವಾದಿ [ಚಿ]ಂತಕಿ ಗಾಯತ್ರಿ ಸ್ಪಿವಾಕ್ ಚಕ್ರವರ್ತಿಯವರ ಇತ್ತೀಚಿನ [ಅ]ಧ್ಯಯನದ ಶೀರ್ಷಿಕೆ **Can the subaltern [s]peak?** (ಅಲಕ್ಷಿತರು ಮಾತನಾಡಬಹುದೆ?) ಎನ್ನುವ [ಪ್ರ]ಶ್ನೆಯೇ ವಾಸ್ತವವನ್ನು ಶಕ್ತವಾಗಿ ಧ್ವನಿಸುತ್ತದೆ. [ಜ]ಗತ್ತಿನಾದ್ಯಂತ ನಡೆಯುತ್ತಿರುವ ಈ ಬಗೆಯ ಸಬಾಲ್ಟ್ರನ್ [ಅ]ಧ್ಯಯನಗಳು ಅಲಕ್ಷಿತರು ತಮ್ಮ ಆಶೋತ್ತರಗಳಿಗೆ [ಮಾ]ತಿನ ರೂಪ, ಶಕ್ತಿ, ಅಧಿಕೃತತೆ ಎಲ್ಲವನ್ನು ಪಡೆಯಲು ನಿರಂತರವಾಗಿ ನಡೆಸುವ ಪ್ರಯತ್ನಗಳನ್ನು ಕುರಿತದಾಗಿವೆ. (ಹಿಂದೊಮ್ಮೆ 'ಲಂಕೇಶ್' ವಾರಪತ್ರಿಕೆಯಲ್ಲಿ ಹೆಣ್ಣು ಮತ್ತು ಮೌನ ಎನ್ನುವ ನನ್ನ ಲೇಖನದಲ್ಲಿ ಮೌನ ಹೆಣ್ಣಿನ ಸಾರ್ವತ್ರಿಕ ಅಧಿಕೃತ ಭಾಷೆಯಾಗಿರುವುದರ ಹಿಂದಿನ ವ್ಯವಸ್ಥೆಯ ನಿರೀಕ್ಷೆ ಮತ್ತು ಒತ್ತಡಗಳನ್ನು, ಹಾಗೆಯೇ ಅದನ್ನು ಮೀರಲು ಹೆಣ್ಣು ನಡೆಸಿರುವ ಪ್ರಯತ್ನಗಳ ಕೆಲವು ಮಾದರಿಗಳನ್ನು ಚರ್ಚಿಸಿದ್ದೆ.)

ಮೌನ ಜೀವ ಚೈತನ್ಯದ ವಿರೋಧಿ ಎಂದೂ ವ್ಯಾಖ್ಯಾನಿಸಲಾಗಿದೆ. ಸದಾ ಮೌನಕ್ಕಾಗಿ ಹಾತೊರೆಯುವ, ಇತರರೊಂದಿಗಿನ ಮಾತುಕತೆಯಲ್ಲಿ



ಆಸಕ್ತಿ ತೋರಿಸದಿರುವವರನ್ನು ಯಾವಾಗಲೂ ಅನುಮಾನದಿಂದಲೇ ನೋಡಲಾಗುತ್ತದೆ. ಮೌನ ಮನುಷ್ಯನ ಆಯ್ಕೆಯಾಗುವ ಸನ್ನಿವೇಶಗಳು ಕೇವಲ ಕ್ವಚಿತ್ತಾಗಿ ಮಾತ್ರ ಒದಗಿ ಬರುತ್ತವೆ. ಬಹುತೇಕ ಸನ್ನಿವೇಶಗಳಲ್ಲಿ ಮೌನ ವ್ಯಕ್ತಿಯ ಮೇಲೆ ಇತರರು ಹೇರುವ ಇಲ್ಲವೇ ವ್ಯಕ್ತಿ ತನ್ನೊಳಗಿನ ಸಮಸ್ಯೆಗಳಿಂದಾಗಿ ತನ್ನ ಮೇಲೆ ಹೇರಿಕೊಳ್ಳುವ ಮನಃಸ್ಥಿತಿ ಎಂದು ತಿಳಿಯಲಾಗುತ್ತದೆ. ಈ ದೃಷ್ಟಿಕೋನದ ಹಿಂದೆ ಮೌನವು ವ್ಯಕ್ತಿಯ ಸಹಜ ಆಯ್ಕೆಯಲ್ಲಿ ಆಗಬಾರದು ಎನ್ನುವ ನಿಲುವು ಸ್ಪಷ್ಟವಾಗಿದೆ. ನಾಗರಿಕ ಸಮಾಜಕ್ಕೆ ಮೌನದ ಬಗ್ಗೆ ಕೊನೆಯಿರದ ಅಸಹನೆ.

ಅನುಭಾವಿಗಳಿಗೆ ಮಾತು-ಮೌನ ಎರಡರ ಬಗೆಗೂ ಅಪಾರವಾದ ಪ್ರೀತಿ ಮತ್ತು ನಂಬಿಕೆ. ಮೌನವನ್ನು ಅದರೆಲ್ಲ ವಿಸ್ತಾರದಲ್ಲಿ, ಸೂಕ್ಷ್ಮದಲ್ಲಿ, ಎತ್ತರದಲ್ಲಿ ಕಟ್ಟಿಕೊಳ್ಳಲು ಅವರು ನಿರಂತರವಾಗಿ ಹಂಬಲಿಸುತ್ತಾರೆ. ಲಂಕೇಶರ 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ' ಲೇಖನ ಈ ಸೂಕ್ಷ್ಮವನ್ನು [illegible] ಮಾಡುತ್ತದೆ. ಆಸೆಗಳನ್ನು ಜೀವಂತವಾಗಿಟ್ಟುಕೊಂಡು ಮೋಹವನ್ನು ಮೌನವಾಗಿಸುವುದೇ ಬುದ್ಧನ ಬದುಕನ್ನು ಕುರಿತ ನಿಜವಾದ ನಿಲುವು; ಅದೇ ಅವನ ಸಂದೇಶ ಎನ್ನುವ ವ್ಯಾಖ್ಯಾನ ಬುದ್ಧನನ್ನು ಶುದ್ಧ ಜೀವಪರ ನೆಲೆಗೆ ತಂದು ನಿಲ್ಲಿಸುವಲ್ಲಿ ಯಶಸ್ವಿಯಾಗುತ್ತದೆ.

ಮೌನದ ಬಗೆಗಿನ ಇಷ್ಟೆಲ್ಲ ವಿಚಾರಗಳನ್ನು ಪ್ರಸ್ತಾಪಿಸಿದ್ದು ನಮ್ಮ ಇವತ್ತಿನ ಶಬ್ದ ಪ್ರಳಯ ಲೋಕದಲ್ಲಿ ಅಗತ್ಯವಿರುವ ಮೌನದ ಬಗ್ಗೆ ಚರ್ಚಿಸಲು.



ಒಂದು ಕಾಲದಲ್ಲಿ ರಾತ್ರಿಯೆನ್ನುವುದು ಬಹುತೇಕ ಮೌನಕ್ಕೆ ಸಮಾನಾರ್ಥಕ ಪದವೆನ್ನುವಷ್ಟು ಅವಿನಾಸಂಬಂಧವನ್ನು ಮೌನದ ಜೊತೆ ಕಟ್ಟಿಕೊಂಡಿತ್ತು. ಆದರೆ ಈಗ ರಾತ್ರಿಯ ನೀರವ ಮೌನ ಎನ್ನುವುದಕ್ಕಾಗಲಿ, ಬೆಳಗಿನಿಂದ ರಾತ್ರಿಯವರೆಗೂ ಎನ್ನುವುದಕ್ಕಾಗಲೀ ಮಹಾನಗರಗಳಲ್ಲಿ, ಬೆಳೆಯುತ್ತಿರುವ ಪಟ್ಟಣಗಳಲ್ಲಿ ಹೆಚ್ಚಿನ ಅರ್ಥ ಉಳಿದಿಲ್ಲ. ಹಗಲುರಾತ್ರಿ ಶಿಫ್ಟ್‌ಗಳಲ್ಲಿ ಕೆಲಸ ಮಾಡುವ ಕಾರ್ಖಾನೆಗಳು, ಅವುಗಳ ಕರ್ಕಶ ಶಬ್ದ, ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಒಡನಾಟ, 24 ಗಂಟೆ ಹಾಡುವ-ಕುಣಿಯುವ ಟಿ.ವಿ. ಚಾನೆಲ್‌ಗಳು ನಗರಗಳ ಬೀದಿಗಳ ತುಂಬ ಕೋರೈಸುವ ವಿದ್ಯುದ್ದೀಪಗಳು ಈ ಎಲ್ಲವೂ ಮೌನದ ಸಾಂದ್ರತೆಯನ್ನೂ, ಘನತೆಯನ್ನೂ, ನಮ್ಮ ಮನಸ್ಸಿನಾಳದಲ್ಲಿ ಉಳಿದುಕೊಂಡಿದ್ದ ಕತ್ತಲು ಮೌನದ ಪ್ರತಿಮೆಯನ್ನು ನಾಶ ಮಾಡುತ್ತಿವೆ. (ಪ್ರತಿಭಾಳ ಪ್ರಕರಣ ಹೇಗೆ ಮರೆತಿರಿ? ಎಂದು ಕೇಳಬೇಡಿ, ನಾನು ಮರೆತಿಲ್ಲ. ಹೆಣ್ಣಿನ ಮೇಲಿನ ಮೂರ್ತ ಅಮೂರ್ತ ಅತ್ಯಾಚಾರಗಳು ಹಗಲು ರಾತ್ರಿ ಎನ್ನುವ ಯಾವ ಭೇದವೂ ಇಲ್ಲದೆ ನಿರಂತರವಾಗಿ ನಡೆಯುತ್ತಲೇ ಇವೆ. ಬೆಳಕಿಗೆ ಬರುವ ಒಂದು ಪ್ರಕರಣ ನಮ್ಮನ್ನು ಬೆಚ್ಚಿ ಬೀಳಿಸುವುದರ ಜೊತೆಗೆ ವಸ್ತುಸ್ಥಿತಿಯನ್ನು; ಅದರೆಲ್ಲ ಕಹಿ ವಾಸ್ತವದಲ್ಲಿ ಗ್ರಹಿಸಲು ನೆರವಾಗಬೇಕು.)

ಇಂದಿನ ನಮ್ಮ ಬದುಕಿನ ಪ್ರತಿಯೊಂದು ಕ್ಷಣವೂ ಕೊನೆಯಿರದ ನಾನಾ ರೀತಿಯ ಶಬ್ದಗಳೊಂದಿಗೆ ಜೋಡಿಸಲ್ಪಟ್ಟಿದೆ. ಬೆಳಿಗ್ಗೆ ಏಳುವುದರಿಂದ ಹಿಡಿದು ಮಲಗುವ ತನಕವೂ ಶಬ್ದದ ಜೊತೆಗಿನ ನಮ್ಮ ಸಂಬಂಧ 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು [illegible]' ಎನ್ನುವ ಸಾಲನ್ನು ಕೊಂಚ ಬದಲಾಯಿಸಿ ಹೇಳಬಹುದಾದರೆ 'ಬಂದ ದಾಗಿಲು [illegible]' ಶಬ್ದ. 'ಬಂದ ದಾಗಿಲು ದುಃಖ [illegible]' [illegible] ನರಸಿಂಹಸ್ವಾಮಿಯವರ ಕವನದ [illegible]

ಒಂದು ಕಾಲದಲ್ಲಿ ನಮ್ಮ ಅಡಿಗೆಯ ಕೆಲಸ ಎಷ್ಟು ನಿಶಬ್ದವಾಗಿ ನಡೆಯುತ್ತಿತ್ತೆಂದರೆ ಅಕಸ್ಮಾತ್ [illegible] ಶಬ್ದ ಮಾಡಿದರೆ ಇವತ್ತು ನೆಂಟರು ಬರುತ್ತಾರೆ ಎಂದು ಆಸೆಯಿಂದ ಕಾಯಲಾಗುತ್ತಿತ್ತು. ಈಗ ಮಿಕ್ಸರ್‌ಗಳ, ಗ್ರೈಂಡರ್‌ಗಳ, ಕುಕ್ಕರ್‌ಗಳ ಶಬ್ದವಿಲ್ಲದೆ ನಡೆಯುವುದೇ ಇಲ್ಲ (ನನ್ನ ಮಗ ಸಣ್ಣವನಿದ್ದಾಗ ಅವನಿಗೆ ಕುಕ್ಕರ್ ನೋಡಿದರೆ ಅಪಾರ ಭಯ, ದ್ವೇಷ. ಅದನ್ನು ಗ್ಯಾಸ್ ಮೇಲೆ ಇಟ್ಟ ತಕ್ಷಣ ಅದು ಬೇಡ, ಅದು ಬೇಡ ಎಂದು ಕೂಗುತ್ತಿದ್ದ). ಮನೆಯ ಶಬ್ದದೊಂದಿನ ಕೆಲಸ ಮುಗಿದು ಹೊರಗಿನ ಕೆಲಸಕ್ಕೆ ಹೊರಟರೆ ಅದು ಕರ್ಕಶ ಶಬ್ದಲೋಕ. ಬಸ್ಸು, ಕಾರು, ಲಾರಿ, ಸ್ಕೂಟರ್‌ಗಳ, ಆಟೋಗಳ ಬರ್ರೋ ಎನ್ನುವ, ಬುದ್ಧಿ ಭಾವಗಳೆರಡನ್ನೂ ಹಿಂಸಿಸುವ ಶಬ್ದ ಪ್ರಪಂಚ. ಮೊಬೈಲ್‌ಗಳು ಬಂದ ಮೇಲಂತೂ ಏಕಾಂಗಿ, ಏಕಾಂತ ಎನ್ನುವುದಕ್ಕೆ ಯಾವ ಅರ್ಥವೂ ಉಳಿದಿಲ್ಲ. ಮೊಬೈಲ್ ಆಫ್ ಮಾಡುವುದು ಅಷ್ಟು ಸುಲಭವಲ್ಲ ಮಾತ್ರವಲ್ಲ ಪಲಾಯನವಾದಿ ಎನ್ನುವ ಆರೋಪವನ್ನು ಹೊರಬೇಕಾಗುತ್ತದೆ.

ಯಾಕೆ ಹೀಗೆ ಶಬ್ದ ಲೋಕಕ್ಕೆ ನಮ್ಮನ್ನು ನಾವು ಕೊಟ್ಟು ಕೊಂಡಿದ್ದೇವೆ? ಶಬ್ದದ ಲಜ್ಜೆಯನ್ನು ಎಷ್ಟು ನಿರ್ಲಜ್ಜವಾಗಿ ಕಳೆದು ಬಿಟ್ಟಿದ್ದೇವೆ. ಅದು ನಮ್ಮ ಆಯ್ಕೆಯಲ್ಲ ಸರಿ. ಮೌನದ ಬಗೆಗಿನ ನಮ್ಮ ಸಂವೇದನೆಯನ್ನೇ ನಿಧಾನವಾಗಿ ಕಳೆದುಕೊಳ್ಳುತ್ತಿದ್ದೇವೇನೋ ಎನ್ನುವ ಆತಂಕ ಕಾಡುತ್ತದೆ. ನಮ್ಮ ಒಳಗಿನ ಮಾತು ಸಂಗೀತಗಳು ಹುಟ್ಟುವ ಗಂಗೋತ್ರಿ ಮೌನವೇ. ಆ ಗಂಗೋತ್ರಿಯನ್ನು ಸೃಜನಶೀಲ ವ್ಯಕ್ತಿಗಳು ಬತ್ತದ ಹಾಗೆ ಕಾಪಾಡುತ್ತಾರೆ. ಪ್ರತಿಯೊಬ್ಬ ವ್ಯಕ್ತಿಗೂ, ಸಮುದಾಯಕ್ಕೂ ಈ ಬಗೆಯ ಮೌನ ಗಂಗೋತ್ರಿಯ ಅಗತ್ಯ ಯಾವಾಗಲೂ ಇರುತ್ತದೆ. ಅದು ಬತ್ತದೆ ಇರುವ ಹಾಗೆ ನೋಡಿಕೊಳ್ಳುವುದು ನಮ್ಮ ಇಂದಿನ ಆದ್ಯತೆಯೆಂದೇ ಕಾಣುತ್ತದೆ. ■

---

ಶಂಭುಗೆ ಜಯಪ್ರದಳಿಗಿಂತಲೂ ಸುಂದರಿಯಾದ [ಸ]ಹೋದರಿಯಿದ್ದಳು. ಆಕೆಗೆ ಪಾಠ ಹೇಳುವ ಹಲವು [ಮೇ]ಷ್ಟರುಗಳು ಅವಳ ಆರಾಧನೆಯಲ್ಲಿದ್ದರು. ಮೈಸೂರು [illegible]ಡೆಯ ಮಹಿಳಾವಾದಿ ಪ್ರೊಫೆಸರರೊಬ್ಬರು ಅವಳ [ಕು]ರಿತೇ ಒಂದು ಪತ್ರವನ್ನೋ, ಕತೆಯನ್ನೋ, ಪ್ರಬಂಧ[ವ]ನ್ನೋ ಬರೆದಿದ್ದರು. ಅಂತಹ ಹುಡುಗಿಯನ್ನು ಅವರಪ್ಪ [illegible] ಕಾಂಟ್ರಾಕ್ಟ್‌ಗೆ ಸಿಮೆಂಟ್ ಅಗ್ಗವಾಗಿ ಸಿಗುತ್ತದೆಂದು [illegible]ದರ ಫ್ಯಾಕ್ಟರಿ ಓನರ್‌ನೊಂದಿಗೆ ಮದುವೆ ಮಾಡಿ[ಕೊ]ಡಲು ತಯಾರಾದ. ಆ ಮದುವೆಗೆ ಒಪ್ಪದ ತಂಗಿ [ಶಂ]ಭು ಬಳಿ ಅತ್ತು ತನ್ನ ಗೋಳು ತೋಡಿಕೊಂಡಳು. [illegible]ವ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲದ ಶಂಭು [illegible] ಮೆಚ್ಚಿದವರ ಜೊತೆ ಓಡಿ ಹೋಗು" ಎಂದು [illegible]ಹೆ ಕೊಟ್ಟು ಸುಮ್ಮನಾದ. ಅತ್ತೂ ಕರೆದ ಆ [ಹು]ಡುಗಿ ಕಡೆಗೆ ಸಿಮೆಂಟ್ ಚೀಲವನ್ನೇ ಮದುವೆ[ಯಾ]ದಳು. ಆಗೊಂದಿಷ್ಟು ದಿನ ದಲ್ಲಾಗಿದ್ದ ಶಂಭು [ಮ]ನಸ್ಸಿನಲ್ಲಿ ಪ್ರೀತಿ ಪ್ರೇಮದ ಪರವಾಗಿ ಮರುಗುವ [illegible]ನ್ನು ಗುರುತಿಸಿದ್ದೆ ಜೊತೆಗೆ ಅಪ್ಪನ ಕ್ರೂರ ಮನಸ್ಸಿನ [illegible] ತೀರಿಸಿಕೊಳ್ಳುವ ಛಲವೂ ಅವನ [illegible] ವ್ಯಕ್ತವಾಗಿತ್ತು.

ಸ್ವಲ್ಪ ದಿನಗಳ ನಂತರ ಆಕಾಶದಿಂದ ಸ್ಕೈಲಾಬ್ [illegible] ಈ ಅಂಜಿಕೆಗೆ ಕಾರಣವಾಗಿತ್ತು, ಆ ದಿನ [illegible] ಸುದ್ದಿಯಾಗಿ.

"[illegible]" ಎಂದ.

"[illegible]"

"ಯಾರು ಬುಟ್ಟಿದ್ದೊರದಾ?"

"ಅಮೆರಿಕದೋರಂತೆ."


"ಪುನಃ ಬುಡಕ್ಕುಲದಂತೆ ಅಮೆರಿಕದೋರು?"

"ಯಾರಿಗ್ಗೊತ್ತಪ್ಪ?"

"ಪ್ರಮಾಣ ಮಾಡಿಸಿ ಕೈಬುಡುಬೇಕಾಗಿತ್ತು, ಲೌಡಿಗಂಡ್ರು."

"ಯಾವ ತರ ಪ್ರಮಾಣ ಮಾಡುಸಬೇಕಾಗಿತ್ತಪ್ಪ?"

"ಏನುವಿಲ್ಲ ಗೌಡ್ರೆ, ಹಾಲು, ಅನ್ನ ರಾಘವೇಂದ್ರ ಸ್ವಾಮಿ ಪೋಟಾ ಮುಂದೆ ಮಡಗಿ, ಮುಟ್ಟಿ ಲೌಡಿಗಂಡ್ರ ಅನ್ನ ಬೇಕಾಗಿತ್ತು" ಎಂದು ಗಂಭೀರವಾಗಿ ಹೇಳಿದ. ನಾನು ಗಹಗಹಿಸಿ ನಗಾಡಿದೆ.



ಊರ ಡಾಕ್ಟರೊಬ್ಬರು ಅನಾಮತ್ತು ವರ್ಗವಾದಾಗ ಶಂಭು ಮೂರು ಜನ ಕೌನ್ಸಿಲರ್‌ಗಳ ಮೇಲೆ ಸಂಶಯ ಬರುವಂತೆ ಮಾತನಾಡಿದ. ಅಂದರೆ ಆ ಭ್ರಷ್ಟ ಕೌನ್ಸಿಲರ್‌ಗಳೇ ಆರೋಗ್ಯ ಸಚಿವರಿಗೆ ಫೋನ್ ಮಾಡಿದ್ದಾರೆಂದು ದೂರಿದ. ಇದನ್ನು ನಿರಾಕರಿಸಿದವರಿಗೆ "ಆಯ್ತು, ಊರ ಮುಂದೆ ನಾನು ಹಾಲು, ಅನ್ನ, ರಾಘವೇಂದ್ರಸ್ವಾಮಿ ಪೋಟಾ ಮಡಗ್ತಿನಿ. ನಮಿಗೂ ಆ ಡಾಕ್ಟರ ವರ್ಗವಣೆಗೂ ಸಂಬಂಧಿಲ್ಲ ಅಂತ ಆ ಕೌನ್ಸಿಲರ್‌ಗಳು ರಾಘವೇಂದ್ರ ಸ್ವಾಮಿ ಪೋಟಾ ಮುಟ್ಟಿ ಹಾಲು, ಅನ್ನ ಊಟ ಮಾಡ್ಲಿ" ಎಂದ. ಅವನ ಈ ಶರತ್ತಿಗೆ ಯಾರೂ ಮುಂದೆ ಬರಲಿಲ್ಲ. ಇಂತಹ ಲೋಕಲ್ ಪ್ರಮಾಣವನ್ನೇ ಅಮೇರಿಕದವರಿಗೂ ಹೇಳಿದ್ದ ಶಂಭು ಪ್ರಮಾಣಕ್ಕೆ, ವಿಶ್ವವ್ಯಾಪಿ [illegible] ಎಂದು ಗಂಭೀರವಾಗಿ ಹೇಳಿ ನಗಿಸಿದ್ದ.

ಒಮ್ಮೆ [illegible] ಇಟ್ಟಿದ್ದ ಪೆಟ್ಟಿಗೆ ಅಂಗಡಿ ಲಿಂಗೇಶ ಇದ್ದಕ್ಕಿದ್ದಂತೆ "ನನಗೆ ಲಕ್ಷ ರೂ. ಲಾಟರಿ ಹೊಡೆದಿದೆ" ಎಂದು ಹೇಳಿಕೊಂಡು ತಿರುಗತೊಡಗಿದ. ಜನ ಆತನನ್ನು ಮಾತನಾಡಿಸುವ ವೈಖರಿಯೇ ಬದಲಾಗಿಹೋಯ್ತು. ಸಂಬಂಧಿಗಳು ಆತನನ್ನು ಊಟ ಮಾಡಿ ಹೋಗುವಂತೆ ಬಲವಂತ ಮಾಡತೊಡಗಿದರು. ಕ್ಷಣಮಾತ್ರದಲ್ಲಿ ಬದಲಾದ ಈ ವ್ಯವಸ್ಥೆಗೆ ಬಗ್ಗಿಕೊಂಡ ಲಿಂಗೇಶ್ ಟಿಕೆಟ್ ಜೇಬಿನಲ್ಲೇ ಇರುವಂತೆ ತಿರುಗುತ್ತಿದ್ದ. ಆಗ ಒಂದು ದಿನ ಶಂಭು "ಲೇ ಲಿಂಗೇಶ, ಬಾರ್ಲ ಇಲ್ಲಿ" ಎಂದು ಕರೆದ. ಲಿಂಗೇಶ್ ಹತ್ತಿರ ಬಂದಾಗ "ನಿನ್ನ ಲಾಟ್ರಿ ಟಿಕೆಟ್ ಇನ್ನೂ ಕ್ಯಾಶ್ಯಾಗಿಲವೆ?"

"ಆಗ್ಯದೆ, ಅದ್ಯಾಕಂಕೇಳ್ತೀ?"


"ಅಲ್ಲಾ ಕಂಡ್ಯಾ, ಲಾಟ್ರಿ ಹೊಡೆದ್ದೋರು ಮೊದ್ಲು ಮಾಡೋ ಕೆಲಸ ಏನಪ್ಪ ಅಂದ್ರೆ ಒಂದು ಜೊತೆ ಮೆಟ್ಟ ತಗೊತರೆ. ಆಮೇಲೆ ಈ ಕೊಳಕ ಪಂಚೆ ಬಸಾಕಿ ಪ್ಯಾಂಟು ಶರಟು ಹೊಲಿಸಿಕ್ಕತಾರೆ. ಇಲ್ಲ ಅಂದ್ರೆ ರೆಡಿಮೇಡ್ ತಗೊತರೆ. ನಿನಿಗೆ ಲಾಟ್ರಿ ಹ್ವಡದು ತಿಂಗಳಾದ್ರು ಅಂಗೆ ಇದ್ದಿ ಯಾಕ್ಲ?" ಎಂದ. ಲಿಂಗೇಶ್ ಯಾವ ಉತ್ತರವನ್ನು ಕೊಡದೆ ಜಾರಿಕೊಂಡ. ನಂತರ ಶಂಭು "ನೋಡ್ರಿ, ಗೌಡ್ರೆ, ಈ ನನ್‌ಮಕ್ಕಳು ಕೋಟಾ ನೋಟಿನ ದಂದೆವಳಿಕೆ ಹೋದ ಮ್ಯಾಲೆ ಮಾಡೋ ಆಸ್ಗೆ ಈಗ್ಲೆ ಲಾಟ್ರಿ ನಾಟಕ ಶುರು ಮ್ಯಾಡವ್ರೆ" ಎಂದ.

ಹೀಗೆ ಆ ಊರ ಜನಗಳ ಮನಸ್ಸಿನ ಎಕ್ಸರೆ ತರ ಕೆಲಸ ಮಾಡುತ್ತಿದ್ದ ಶಂಭು ಬರೀ ರಂ ಕುಡಿಯುವವನಾಗಿರಲಿಲ್ಲ, ಸಂಗೀತದ ಬಗ್ಗೆ ಒಳ್ಳೆ ಅಭಿರುಚಿಯನ್ನು ಇಟ್ಟುಕೊಂಡಿದ್ದ, ಆತನಲ್ಲಿದ್ದ ಕ್ಯಾಸೆಟ್ ಸಂಗ್ರಹದಲ್ಲಿ [illegible] ನೂರಾರು ಬಾರಿ ಹಾಕಿಸಿ ಕೇಳಿ ಕಲಿತುಕೊಂಡೆ. ಈಗಲೂ ಯಾರಾದರೂ ಹಾಡಲು ಒತ್ತಾಯ ಮಾಡಿದರೆ ಅದನ್ನು ಹಾಡುವಾಗ ಶಂಭು ನೆನಪಿಗೆ ಬರುತ್ತಾನೆ. ಏಕೆಂದರೆ ಅವನಿಲ್ಲ ಈಗ.

ಬೀರೂರಿನ ಬಳಿ ಟ್ರಾಕ್ಟರ್ ಬಿಟ್ಟುಕೊಂಡು ಹೋಗುತ್ತಿರಬೇಕಾದರೆ ಟ್ಯಾಂಕರ್ ಬಂದು ಢಿಕ್ಕಿ ಹೊಡೆಯಿತು. ಬಲಗಾಲು ಕತ್ತರಿಸಿ ಹೋಯ್ತು. ಅಂತೂ ಮಗ ಇನ್ನು ಮನೆಯಲ್ಲೇ ಬಿದ್ದಿರುತ್ತಾನೆಂದು ಅಪ್ಪ ಅವನಿಗೆ ಕೃತಕ ಕಾಲು ಜೋಡಿಸದೆ ತಾತ್ಸಾರ ಮಾಡಿದ. ಆದರೆ ಗೆಳೆಯರೆಲ್ಲಾ ಸೇರಿ ಕೃತಕ ಕಾಲು ಜೋಡಿಸುವಲ್ಲಿ ನೆರವಾದರು. ಶಂಭು ಕೃತಕ ಕಾಲಿನಲ್ಲೇ ಕುಂಟುತ್ತಾ ಕಾಸು ಕೇಳುತ್ತಾ ಕುಡಿತದಿಂದಲೇ ಆರೋಗ್ಯ ಹಾಳುಮಾಡಿಕೊಂಡು ಅಂತೂ ಅವನಿಗೆ ಬೇಕಿಲ್ಲದ ಬದುಕನ್ನು ನೀಗಿಕೊಂಡ.

ಅವನಿಗಿದ್ದ ಆಸ್ತಿ ಅಂತಸ್ತು ಸುಖ, ಸವಲತ್ತುಗಳನ್ನೆಲ್ಲಾ ಧಿಕ್ಕರಿಸಿ ಜನರ ಬಾಯಿಗೆ ಸಿಕ್ಕಿ ಬದುಕುವಂತದ್ದೇನಿತ್ತು ಎಂದು ಎಷ್ಟು ಯೋಚಿಸಿದರೂ ಉತ್ತರ ಹೊಳೆಯುತ್ತಿಲ್ಲ. ಅವನು ನಾನು ಮಾತನಾಡಿದ, ತಿರುಗಾಡಿದ, ಜಾಗವಲ್ಲಿ ಕುಳಿತು ಹೀಗೆ ಯೋಚಿಸುತ್ತಿರಬೇಕಾದರೆ ನನ್ನ ಪುಸ್ತಕಗಳನ್ನು ಪ್ರಿಂಟ್ ಮಾಡುತ್ತಿರುವ ವೆಂಕಟೇಶ್ ಬಂದು "ಏನೀತರ ಕುಂತಿದೀರಲ್ಲಾ?" ಎಂದ. "ಏನಿಲ್ಲ ಶಂಭು ನೆನಪಿಕೊಂಡೆ" ಎಂದೆ.

"ಆತ ಸತ್ತಿದ್ದರೂ ನೆನಪಿಕೊಂಡ ಕೂಡಲೇ ನಗುವಿನ [illegible]




# ಉತ್ತರ ಕರ್ನಾಟಕದವರ ಸಿನಿಮಾ ಗೀಳು

# ಕಾಸು ಚೆಲ್ಲಿ ಲಾಸು ಆದವರು

**ಹತ್ತೂರ ಒಡೆಯ ಸಿನಿಮಾ ಮಾಡಿದ್ದ ಹುಬ್ಬಳ್ಳಿಯ ಪ್ರಭಾಕರ ಶೆಟ್ಟಿ ಕಳೆದ ತಿಂಗಳಷ್ಟೇ ವಿಷ ಸೇವಿಸಿ ಸತ್ತ... ಬಿಜಾಪುರದಲ್ಲಿ ಹಲವಾರು ಜನ ಮನೆ, ಹೊಲ ಮಾರಿಕೊಂಡು ಬೀದಿಗೆ ಬಂದಿದ್ದಾರೆ. ಕಂಡಕ್ಟರ್ ಒಬ್ಬ ತನ್ನನ್ನು ಜೂ. ಕಲ್ಯಾಣ್‌ಕುಮಾರ್ ಎಂದುಕೊಳ್ಳುತ್ತಾ ಕೆಲಸ ಬಿಟ್ಟು, ನಾಲ್ಕು ಎಕರೆ ಹೊಲ ಮಾರಿ ವಿಧಿವಶನಾದ.... ಗದಗಿನ ಜಡಿ ಮಾರುತಿ ರವಿ ದಂಡಿನನಿಗೆ ಸಿನಿಮಾ ಹುಚ್ಚು ಹಚ್ಚಿ ಹಳ್ಳ ಹಿಡಿಸಿದ... ಹೀಗೆ ಬಣ್ಣದ ಸಿನಿಮಾ ನಂಬಿ ಕತ್ತಲೆಗೆ ಸರಿದವರ ಹಲವಾರು ಕತೆಗಳು ಇಲ್ಲಿವೆ.....**

ಮೇಘರಾಜ್-ಮಲ್ಲಿ

‘ಸಿನಿಮಾ ರಂಗ’ ಎನ್ನುವ [illegible] [illegible] ಹುಚ್ಚು ಹಿಡಿಸುತ್ತದೆ. ‘[illegible]’ ಎಂಬ ಮಾಯಾಂಗನೆಯ ಹಿಂದೆ ಬಿದ್ದು ಆ ಮಾಯಾಂಗನೆಯನ್ನು ಒಲಿಸಿಕೊಂಡವರು ನೂರಾದರೆ, ಹಳ್ಳ ಹಿಡಿದವರು ಸಾವಿರವಾಗುತ್ತಾರೆ. ರಾಜಧಾನಿಯ ಹೃದಯಭಾಗದಲ್ಲಿ ತನ್ನ ಸಾಮ್ರಾಜ್ಯ ಕಟ್ಟಿಕೊಂಡಿರುವ ಈ ‘ಮಾಯಾಂಗನೆ’ ನಮ್ಮ ಉತ್ತರ ಕರ್ನಾಟಕದವರಿಗೆ ನಿಲುಕಿದ್ದು ಅಪರೂಪ. ಉತ್ತರ ಕರ್ನಾಟಕದಿಂದ ಗಾಂಧಿನಗರ ಹೊಕ್ಕು ಯಶಸ್ಸು ಕಂಡ ಬೆರಳೆಣಿಕೆಯ ಪುಣ್ಯವಂತರು. ಸಿನಿಮಾ ಹುಚ್ಚಿನಲ್ಲಿ ಸಿನಿಮಾಯಿಯ ಕುತಂತ್ರಗಳನ್ನರಿಯದೇ ಮನಸ್ಸು ಮುರಿದುಕೊಂಡವರು. ಮನೆ ಮಾರಿಕೊಂಡವರ ಒಂದಿಷ್ಟು ಕತೆಗಳನ್ನು ಇಲ್ಲಿ ನೀಡುತ್ತಿದ್ದೇವೆ.



ಕೆರೂರಿನ ಬಿ.ಸಿ. ಪಾಟೀಲ್




ವಿಜಾಪುರದ ದೇಸಾಯಿ

## ಸತ್ತೋದ ಹತ್ತೂರ ಒಡೆಯ!

ಕಾರವಾರದಿಂದ ಬಂದು ಹುಬ್ಬಳ್ಳಿ, ಹಾವೇರಿಗಳಲ್ಲಿ ಹೋಟೆಲ್ ವ್ಯವಹಾರದಲ್ಲಿ ಯಶಸ್ಸು ಕಂಡಿದ್ದ ಪ್ರಭಾಕರ್ ಶೆಟ್ಟಿಗೆ ಮಧ್ಯದಲ್ಲಿ ಸಿನಿಮಾ ಹುಚ್ಚು ಶುರುವಾಯ್ತು. ಯಾವ ಯಾವುದೋ ಡಬ್ಬಾ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಗಿಟ್ಟಿಸಿ, ಆತ್ಮ ತೃಪ್ತಿ ಅನುಭವಿಸಿದ. ಒಂದೊಂದು ಪುಟಗೋಸಿ ಪಾತ್ರ ಮಾಡಿದಾಗಲೂ ಜೇಬು ಖಾಲಿಯಾಗುತ್ತಲೇ ಇತ್ತು. ಗಾಂಧಿನಗರದ ತಗಡು ನಿರ್ಮಾಪಕರಿಗೆ ದುಡ್ಡು ಕೊಟ್ಟು ‘ಪಾತ್ರ’ ಮಾಡಿ ಬರುತ್ತಿದ್ದ ಪ್ರಭಾಕರ್ ಶೆಟ್ಟಿಗೆ ಹಲವಾರು ಗಾಂಧಿನಗರದ ‘ಕಲಾಕಾರರು’ ಪರಿಚಯವಾದರು. ಯಾವಾಗ ಈತನೇ ಸಿನಿಮಾ ನಿರ್ಮಾಣ ಮಾಡುವುದಕ್ಕೆ ಕೈಹಾಕಿದ ನೋಡಿ; ಶುರುವಾಯ್ತು ಶೆಟ್ಟಿಯ ಅಧಃಪತನ... ಹೋಟೆಲ್‌ಗಳು ನಷ್ಟದತ್ತ ನಡೆದವು. ಶೆಟ್ಟಿ ಬೆಂಗಳೂರಿನ ಕಾನಿಷ್ಕಾ ಬಲೆಗೆ ಬಿದ್ದ. ಗಾಂಧಿನಗರದ ಬಗ್ಗೆ ಅರೆಬರೆ ಗೊತ್ತಿರುವ ಹರಕು ಮುರುಕು ಡೈರೆಕ್ಟರ್‌ಗಳ ಕಣ್ಣಿಗೆ ಸಿನಿಮಾ ಚಪಲದ ಪ್ರಭಾಕರ್ ಶೆಟ್ಟಿ ಬಿದ್ದಿದ್ದೇ ತಡ, ಶೆಟ್ಟಿಯ ಮುಂದೆ ಹಲವಾರು ಕದ್ದ ಕತೆ, ಚಿತ್ರಕತೆಗಳು ಬಂದುಬಿದ್ದವು. ಕೆಲವರು ಚಿತ್ರಕತೆ, ಸಂಭಾಷಣೆ ತಯಾರಿಸಿ ಕೊಡುವುದಾಗಿ ತಿಂಗಳಾನುಗಟ್ಟಲೇ ‘ರೂಮ್’ ಹಾಕಿಸಿಕೊಂಡು ಮೆರೆದರು. ಅಸಲಿಗೆ ಅವರೆಲ್ಲ ವಂಚಕರೇ. ಕನ್ನಡ ಕಾಗುಣಿತವೇ ಸರಿಯಾಗಿ ಗೊತ್ತಿಲ್ಲದ ನಯವಂಚಕರು ಮಾತಿನಲ್ಲೇ ಮಂಟಪ ಕಟ್ಟಿ ಪ್ರಭಾಕರ್ ಶೆಟ್ಟಿಯ ಲಕ್ಷಾಂತರ ರೂಪಾಯಿ ಪೋಲು ಮಾಡಿದರು. ಪ್ರಭಾಕರ್ ಶೆಟ್ಟಿಗೆ ಸುಧಾರಿಸಿಕೊಳ್ಳಲು ಹಲವಾರು ತಿಂಗಳೇ ಹಿಡಿಯಿತು. ಎರಡು ವರ್ಷದ ಹಿಂದೆ ಹಾಗೂ ಹೀಗೂ ಮಾಡಿ ಬಿ.ಸಿ. ಪಾಟೀಲ್ ಪರಿಚಯ ಮಾಡಿಕೊಂಡ ಶೆಟ್ಟಿಗೆ ಮತ್ತೆ ಚಿತ್ರ ನಿರ್ಮಿಸುವ ಹುಚ್ಚು ಹೊಕ್ಕಿದ್ದೇ ತಡ, ಒಂದಿಬ್ಬರು ಗೆಳೆಯರ ನೆರವಿನೊಂದಿಗೆ ದುಡ್ಡು ಹಾಕಿ, ‘ಹತ್ತೂರ ಒಡೆಯ’ ನಿರ್ಮಿಸಿಯೇ ಬಿಟ್ಟ. ಮಾರ್ಕೆಟಿನಲ್ಲಿ ಚಲಾವಣೆ ಕಳೆದುಕೊಂಡಿದ್ದ ಬಿ.ಸಿ. ಪಾಟೀಲ್ ಹೀರೋ ಆಗಿದ್ದ ‘ಹತ್ತೂರ ಒಡೆಯ’ ಹತ್ತೂರುಗಳಿಗೂ ತಲುಪದೇ ಸತ್ತು ಹೋಯ್ತು.



ಗದಗಿನ ದಂಡಿನ



ಗದಗಿನ ಜಡಿ ಮಾರುತಿ

ಸಿನಿಮಾಕ್ಕಾಗಿ ಮಾಡಿದ ಸಾಲ ಒಂದು ಕಡೆ, ನಿರ್ಲಕ್ಷ್ಯಕ್ಕೊಳಗಾದ ಹೋಟೆಲ್‌ಗಳ ಲಾಸು ಇನ್ನೊಂದು ಕಡೆ ... ಬಣ್ಣದ ಬದುಕಿನ ಹುಚ್ಚಿನಲ್ಲಿ ಅಧಿಕವಾಗಿ ದಿವಾಳಿ ಎದ್ದ ಪ್ರಭಾಕರ್ ಶೆಟ್ಟಿ ಕಳೆದ ತಿಂಗಳು ಹಾವೇರಿಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ.

## ದಕಾಯಿತನ ಧರ್ಮ ದೇವತೆ!

ಗದಗಿನ ಈ ದಕಾಯಿತನ ಹೆಸರು ಜಡಿ ಮಾರುತಿ... [illegible] ರಾಬರಿ ಕೇಸುಗಳಲ್ಲಿ ಬೆಂಗಳೂರು ಜೈಲು ನೋಡಿ ಬಂದಿರುವ ಈತನ ಮೇಲೆ ಗದಗಿನಲ್ಲೂ ಕೇಸುಗಳಿವೆ. ಮೂಲತಃ ಗದಗ ಜಿಲ್ಲೆ ರೋಣ ತಾಲ್ಲೂಕಿನ ನರೇಗಲ್‌ನವನಾದ ಈ ಮಾರುತಿಗೆ ಅದೇ ಊರಿನ ಇನ್ನೊಬ್ಬ ಮಾರುತಿ ಜೊತೆಗಾರನಾಗಿದ್ದ. ಅವನು ಗೋಡಿ ಹನುಮಂತ.




ಬಂಗಾರಪ್ಪ ಕೆಸಿಪಿ ಸ್ಥಾಪಿಸಿದಾಗ ಈ ಹನುಮಂತ ಎದೆ ಮೇಲೆ ಸಾಲ್ಡರ್ ಗನ್‌ನಿಂದ ‘ಬಂಗಾರಪ್ಪ’ ಎಂದು ಬರೆಸಿಕೊಂಡು ‘ಬಂ’ ಪ್ರೀತಿಗೆ ಪಾತ್ರನಾಗಿ ಅವಿಭಜಿತ ಧಾರವಾಡ ಜಿಲ್ಲೆಯ ಕೆಸಿಪಿ ಕಾರ್ಯದರ್ಶಿಯಾಗಿದ್ದ! ‘ಬಂ’ ಮೂಲೆಗುಂಪಾದ ಮೇಲೆ ಈ ಮಾರುತಿ, ಹನುಮಂತಗಳು ದರೋಡೆ ವೃತ್ತಿಗಿಳಿದರು. ಕೊನೆಗೆ ಗೋಡಿ ಹನುಮಂತ ನಿಗೂಢವಾಗಿ ಕೊಲೆಯಾಗಿ ಹೋದ. ಅಷ್ಟೊತ್ತಿಗೆ ಒಂದಿಷ್ಟು ಕಾಸು ಮಾಡಿಕೊಂಡಿದ್ದ ಜಡಿ ಮಾರುತಿ ಸದ್ಯ ಗದಗ ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷನಾಗಿರುವ ರವಿ ದಂಡಿನ ದೋಸ್ತಿ ಮಾಡಿ, ಸಿನಿಮಾ ನಿರ್ಮಾಣದ ಹುಚ್ಚು ತುಂಬಿದ.

ಪಾಲಿಟಿಕ್ಸ್‌ನಲ್ಲಿ ಮಿಂಚಲು ಸಿನಿಮಾ ಸಹಾಯ ಮಾಡಬಹುದು ಎಂದು ನಂಬಿದ ದಂಡಿನ ಸಿನಿಮಾ ಮಾಡಲು ರೆಡಿ ಆಗೇಬಿಟ್ಟ. ಗುಳೇದಗುಡ್ಡದ ಈಗಿನ ಎಂಎಲ್‌ಎ ನಂಜಯ್ಯನಮಠನ ಸಲಹೆ ಪಡೆದ ಜಡಿ ಮಾರುತಿ ರವಿದಂಡಿನನ ದುಡ್ಡಲ್ಲಿ ‘ಧರ್ಮ ದೇವತೆ’ ಚಿತ್ರ ಮಾಡಿದ. ಇಬ್ಬರೂ ಕುರುಬರಾದ್ದರಿಂದ ಕುರುಬರ ಆರಾಧ್ಯ ದೇವತೆ ಇಟಗಿ ಭೀಮವ್ವನ ಚರಿತ್ರೆಯ ಮೇಲೆ ‘ಧರ್ಮ ದೇವತೆ’ (ನಿರ್ದೇಶನ: ನಾಗೇಂದ್ರ ಮಾಗಡಿ) ತಯಾರಾಗಿ ಗದಗ ಸುತ್ತಮುತ್ತ ಒಂದಿಷ್ಟು ಓಡಿತು. ಅಷ್ಟೊತ್ತಿಗೆ ಚಿತ್ರರಂಗದ ‘ಮ್ಯಾಥ್ಸ್’ ಗೊತ್ತಿಲ್ಲದ ರವಿ ದಂಡಿನನನ್ನು ಮಾರುತಿ ಮುಂಡಾ ಮೋಚಿದ್ದ.

ಕೆರೆಯಲ್ಲಿ ಕಳೆದದ್ದನ್ನು ಕೆರೆಯಲ್ಲೇ ಹುಡುಕಬೇಕು ಎಂದು ದಂಡಿನನಿಗೆ ಮತ್ತೆ ಬ್ರೇನ್‌ವಾಷ್ ಮಾಡಿದ ಜಡಿ ಮಾರುತಿ. ಬೆಳಗಾವಿಯ ಆನಂದ ಅಪ್ಪುಗೋಳ ಎನ್ನುವ ಹೊಸ ಮಿಕ ಹಿಡಿದ. ರವಿ ದಂಡಿನ ಮತ್ತು ಅಪ್ಪುಗೋಳರಿಂದ ದುಡ್ಡು ಹಾಕಿಸಿ, ರಾಘವೇಂದ್ರ ರಾಜಕುಮಾರ್‌ನನ್ನು ನಾಯಕನನ್ನಾಗಿ ಮಾಡಿ ‘ಪಕ್ಕದ ಮನೆ ಹುಡುಗಿ’ ರೆಡಿ ಮಾಡಿದ. ಪಕ್ಕದ ಮನೆಯವರಿರಲಿ, ನಿರ್ಮಾಪಕರ ಮನೆಯವರೇ ರಾಘಣ್ಣನ ‘ಹುಡುಗಿ’ ನೋಡಲು ಒಲ್ಲೆ ಎಂದರು. ಸಿನಿಮಾ ಅದೆಷ್ಟು ಅಟರ್‌ಫ್ಲಾಪ್ ಆಯಿತೆಂದರೆ, ಇವತ್ತಿಗೂ ರಾಘಣ್ಣನನ್ನು ಹಾಕಿ ಸಿನಿಮಾ ಮಾಡಲು ಪಾರ್ವತಮ್ಮನೇ ಹೆದರುತ್ತಿದ್ದಾರೆ. ರವಿ ದಂಡಿನನ ಹಣವೆಲ್ಲ ಹೊಳೆಯ ಪಾಲಾದಂತಾಯ್ತು. ಆದರೆ ಕೇಡಿ ಜಡಿ ಮಾರುತಿ ಅದೂ ಇದೂ ಸುಳ್ಳು ಹೇಳಿ ಲಕ್ಷಾಂತರ ರೂಪಾಯಿ ಎಬ್ಬಿಸಿದ್ದ.

ದಂಡಿನ ತಂದೆ ಕಳೆದ ಎಲೆಕ್ಷನ್ನನಲ್ಲಿ ಮುಂಡರಗಿ ಕ್ಷೇತ್ರದಲ್ಲಿ ಜೆಡಿಎಸ್ ಪರ ನಿಂತು ಠೇವಣಿ ಕಳೆದುಕೊಂಡಿದ್ದೂ ಆಯ್ತು. ಆದರೂ ರವಿ ದಂಡಿನನಿಗೆ ಸಿನಿಮಾ ಹುಚ್ಚು ಬಿಟ್ಟಿರಲಿಲ್ಲ.... ಜೊತೆಗೆ ಕೇಡಿ ಜಡಿ ಮಾರುತಿ ಬೇರೆ ಇದ್ದನಲ್ಲ.. ನಂತರ ಬಂದಿದ್ದೇ ‘ಅಜ್ಜು’ ಎಂಬ ಚಿತ್ರ.. ಬಂದಷ್ಟೇ ಸ್ಪೀಡ್‌ನಲ್ಲಿ ಗಟಾರ ಸೇರಿದ ‘ಅಜ್ಜು’ ಹೊಡೆತಕ್ಕೆ ದಂಡಿನ ನಜ್ಜುಗುಜ್ಜಾದ. ಮಾರುತಿ ಮಾತ್ರ ದುಂಡಗಾಗುತ್ತಲೇ ಹೋದ. ಈಗ ಈ ದಕಾಯಿತ ಮಾರುತಿ. ದಕಾಯಿತರ ಕುರಿತೇ ಒಂದು ಚಿತ್ರ ಮಾಡುತ್ತಾನಂತೆ... ಅಲ್ಲಲ್ಲ ಮಾಡಿಸುತ್ತಾನಂತೆ....



ಬೆಳಗಾವಿಯ ಅತುಲ್ ಕುಲಕರ್ಣಿ



ಬೆಳಗಾವಿಯ [illegible]

## ಚಲನಚಿತ್ರ ಮಾಡಿ ಚಿತ್ರಾನ್ನವಾದವರು!

ಹುಬ್ಬಳ್ಳಿಯ ಪ್ರಸಿದ್ಧ ನವಲೆ ಮನೆತನದ ಸುರೇಶ್ ನವಲೆ ಧಾರವಾಡದಲ್ಲಿ ಎಂಬಿಎ ಮುಗಿಸುವ ಹೊತ್ತಿಗೆ ಸಿನಿಮಾ ನಿರ್ಮಿಸುವ ಗೀಳಿಗೆ ಬಿದ್ದ. ಬೆಂಗಳೂರಲ್ಲಿ ಸಿನಿಮಾ ಫೈನಾನ್ಸ್ ಮಾಡುತ್ತಿದ್ದ ಮಾವ ಡಾ. ರಾಮಾಂಜನೇಯನನ್ನು ನೋಡಿಯೇ ಸುರೇಶನಿಗೆ ಈ ಆಶೆ ಹುಟ್ಟಿತ್ತು. ಹುಬ್ಬಳ್ಳಿ ತೊರೆದು ಬೆಂಗಳೂರಿಗೇ ಬಂದು ಕುಳಿತ... ಬರುವಾಗ ಲಕ್ಷಾಂತರ ರೂಪಾಯಿಯನ್ನು ಜೊತೆಗೇ ತಂದಿದ್ದನಲ್ಲ.. ಗಾಂಧಿನಗರಕ್ಕೆ ಕಾಲಿಟ್ಟಿದ್ದೇ ತಡ ಕಾನಿಷ್ಕಾ ಸುತ್ತಲಿನ ಶನಿಗಳು ಎಂದಿನಂತೆ ವಕ್ಕರಿಸಿಕೊಂಡವು. ಫಲಿತಾಂಶ? ‘ಮಾವ ಮಾವ ಮದ್ವೆ ಮಾಡು’ ಎಂಬ ಡಬ್ಬಾ ಚಿತ್ರ ಹುಟ್ಟಿತು. ಹುಟ್ಟುತ್ತಲೇ ಗೊಟಕ್ ಎಂದಿತು. ಸುರೇಶ್ ನವಲೆ ಸಾಲಕ್ಕೆ ಬಿದ್ದ. ಈಗಲೂ ಬೆಂಗಳೂರಲ್ಲೇ ಇರುವ ನವಲೆ “ನಾನು ಖಂಡಿತ ಒಂದು ಹಿಟ್ ಚಿತ್ರ ಮಾಡುತ್ತೇನೆ” ಎಂದು ಬಡಬಡಿಸುವುದನ್ನು ಬಿಟ್ಟಿಲ್ಲ.

ಬಿಜಾಪುರ ಜಿಲ್ಲೆ ಮುದ್ದೇಬಿಹಾಳದಲ್ಲಿ ಶ್ರೀನಿವಾಸ್ ತಾವರಗೇರಿ ಎಂಬ ನಾಟಕ ಪ್ರೇಮಿಯೊಬ್ಬರಿದ್ದರು. ಮರಾಠಿಯ ಏಕಾಂಗಿ ನಾಟಕಗಳನ್ನು ಮಾಡುತ್ತಾ ಜನಪ್ರಿಯರಾಗಿದ್ದ ಶ್ರೀನಿವಾಸ್ ತಾವರಗೇರಿ ಮೊಟ್ಟಮೊದಲ ಬಾರಿಗೆ ಮೂರು ಗಂಟೆ ಅವಧಿಯ ನಾಟಕವಾಡಿದವರು ಎಂಬ ದಾಖಲೆ ಹೊಂದಿದ್ದರು. ಮರಾಠಿ ನಾಟಕಗಳ ಬಗ್ಗೆ ಒಳ್ಳೆ ಜ್ಞಾನ ಹೊಂದಿದ್ದ ಶ್ರೀನಿವಾಸ್ ತಾವರಗೇರಿಗೆ ನಾಗ್ ಸಹೋದರರ ಪರಿಚಯವಾಗಿ, ಸಿನಿಮಾ ಲೋಕದ ಸಂಪರ್ಕ ಬಂದಿತು. ಶಂಕರನಾಗ್‌ರ ‘ಮಾಲ್ಗುಡಿ ಡೇಸ್’ ಸೀರಿಯಲ್ ಮತ್ತು ‘ಆಕ್ಸಿಡೆಂಟ್’ ಚಿತ್ರಗಳಿಗೆ ಅಸಿಸ್ಟೆಂಟ್ ಡೈರೆಕ್ಟರಾಗಿ ಕೆಲಸ ಮಾಡಿದ ತಾವರಗೇರಿಗೆ ಶಂಕರನಾಗ್‌ರ ಪ್ರಶಂಸೆಯೂ ದೊರಕಿತ್ತು. ಶ್ರೀನಿವಾಸ ತಾವರಗೇರಿ ಪತ್ನಿ ಸುಧಾತಾಯಿಯೂ ಅನೇಕ ನಾಟಕಗಳಲ್ಲಿ ಅಭಿನಯಿಸಿದರು. ಏಕಾಏಕಿ ಸಿನಿಮಾ ನಿರ್ಮಿಸುವ ಹುಚ್ಚಿಗೆ ಬಿದ್ದ ತಾವರಗೇರಿ ದಂಪತಿಗಳಿಗೆ ಗಾಂಧಿನಗರದ ಫಾರ್ಮುಲಾಗಳೂ ಒಗ್ಗಲೇ ಇಲ್ಲ. ಅವರ ಹೆಸರಿಡದ ಚಿತ್ರ ಡಬ್ಬಾದಿಂದ ಹೊರಬರಲೇ ಇಲ್ಲ. ಇದ್ದ ಪಿತ್ರಾರ್ಜಿತ ಮನೆ ಮಾರಿಕೊಂಡ ಶ್ರೀನಿವಾಸ ತಾವರಗೇರಿ ಸಿನಿಮಾ ನಿರ್ಮಿಸುವ ಕನಸಲ್ಲೇ ಇಹಲೋಕ ತ್ಯಜಿಸಿದರು.

## ಹೊಲ ಮಾರಿದ ಈ ಜೂ. ಕಲ್ಯಾಣ್‌ಕುಮಾರ್!

ಇದೂ ಸಹ ಬಿಜಾಪುರದ ಕತೆಯೇ. ಬಿಜಾಪುರ ಭಾಗದಲ್ಲಿ ಕಂಪನಿ ನಾಟಕಗಳು ಆ ಕಾಲದಿಂದಲೂ ಜನಪ್ರಿಯವಾಗಿವೆ. ಈ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರ ಗಿಟ್ಟಿಸಿದ ಹಲ ಯುವಕರು ಸಿನಿಮಾ ಹುಚ್ಚಿಗೆ ಬಿದ್ದು ಹೀರೋ ಕನಸಲ್ಲಿ ಜೀರೋಗಳಾಗಿದ್ದಾರೆ.

ಬಿಜಾಪುರದ ಹತ್ತಿರದ ಗ್ರಾಮ ಬಿಜ್ಜರಗಿಯ ಮಾನಪ್ಪ ಬಡಿಗೇರ್ ವೃತ್ತಿಯಲ್ಲಿ ಕಂಡಕ್ಟರ್ ಆಗಿದ್ದ. ನೋಡಲು ಸ್ಫುರದ್ರೂಪಿ ಆಗಿದ್ದ ಕಂಡಕ್ಟರ್ ಮಾನಪ್ಪ ಸ್ವಲ್ಪ ಕಲ್ಯಾಣ್‌ಕುಮಾರ್‌ರನ್ನು ಹೋಲುತ್ತಿದ್ದ. ನಿತ್ಯ ಬಸ್‌ನಲ್ಲಿ ಜನ ಈತನನ್ನು ಕಲ್ಯಾಣ್‌ಕುಮಾರ್, ಕಲ್ಯಾಣ್‌ಕುಮಾರ್ ಎನ್ನತೊಡಗಿದರು.

ಇದು ವಿಪರೀತಕ್ಕೆ ಹೋಗಿ ಮಾನಪ್ಪ ತನ್ನ ಹೆಸರನ್ನೇ ಮರೆತು ಜೂ. ಕಲ್ಯಾಣ್‌ಕುಮಾರ್ ಆಗಿಹೋದ. ಹಳ್ಳಿ ಜಾತ್ರೆಗಳಲ್ಲಿ ನಡೆಯುತ್ತಿದ್ದ ನಾಟಕಗಳಲ್ಲಿ ಈ ಜೂ. ಕಲ್ಯಾಣ್‌ಕುಮಾರನಿಗೆ ಒಂದು ಪಾತ್ರ ‘ರಿಜರ್ವ್’ ಆಗತೊಡಗಿತು. ಹ್ಯಾಂಡ್ ಬಿಲ್‌ಗಳಲ್ಲಿ ಕಂಡಕ್ಟರ್ ಮಾನಪ್ಪ ಎಂದು ಮುದ್ರಿಸುವುದನ್ನು ಆಕ್ಷೇಪಿಸತೊಡಗಿದ ಮಾನಪ್ಪ ಜ್ಯೂ ಕಲ್ಯಾಣ್‌ಕುಮಾರ್ ಎಂದೇ ತನ್ನನ್ನು ಗುರುತಿಸಿಕೊಂಡ. ಹಳ್ಳಿಯ ಅಗಸೀ ಕಟ್ಟೆಗಳಲ್ಲಿ ಕುಳಿತು ಹಾಳು ಹರಟೆ ಹೊಡೆಯುತ್ತಿದ್ದ ಯುವಕರ ಗುಂಪೊಂದು ಮಾನಪ್ಪನಿಗೆ ಹವಾ ಹಾಕಿ ಸಿನಿಮಾ ಹುಚ್ಚು ಹಿಡಿಸಿತು. ಒಂದಲ್ಲ ಹತ್ತು ಬಾರಿ ಕನ್ನಡಿ ನೋಡಿಕೊಂಡ ಮಾನಪ್ಪನಿಗೆ ಕನ್ನಡಿಯಲ್ಲಿ ಕಲ್ಯಾಣ್ ಕುಮಾರನೇ ಕಂಡ. ಅಲ್ಲಿಗೆ ಎಡವಟ್ಟು ಆರಂಭವಾಯ್ತು,

ತಾನೇ ಒಂದು ಸಿನಿಮಾ ಮಾಡುವ ತೆವಲಿಗೆ ಬಿದ್ದ ಡ್ಯೂ. ಕಲ್ಯಾಣ್‌ಕುಮಾರ್ ಸಾಹೇಬರು ಕಂಡಕ್ಟರ್ ನೌಕರಿಗೆ ನಿಂತ ನಿಂತಲ್ಲೇ ರಾಜೀನಾಮೆ ಬರೆದುಕೊಟ್ಟರು. ನಾಟಕಗಳಲ್ಲಿ ಸುರಿತ ಕೆಲ ಬಿಜಾಪುರದ ಜನರ ಪರಿಚಯದೊಂದಿಗೆ ಡ್ಯೂ. ಕಲ್ಯಾಣ್‌ಕುಮಾರರ ಸಿನಿಮಾ ಸಾಹಸ ಆರಂಭಗೊಂಡಿತು. ಬೆಂಗಳೂರು, ಸೊಲ್ಲಾಪುರ್, ಕೊಲ್ಲಾಪುರಗಳಿಗೆಲ್ಲ ಸುತ್ತಿ 'ಸಿನಿಮಾ ನಾಲೆಜ್' ಪಡೆದ ಡ್ಯೂ. ಕಲ್ಯಾಣ್‌ಕುಮಾರ್ ಸಿನಿಮಾ ಮಾಡಿಯೇ ತೀರುವ ಹಠಕ್ಕೆ ಬಿದ್ದರು. ಊರಲ್ಲಿನ ಮನೆ, 4 ಎಕರೆ ಹೊಲವನ್ನು ನಾಟಕ, ಸಿನಿಮಾಗಳ ಕನಸಲ್ಲೇ ಕಳೆದುಕೊಂಡು ಅಟ್ಟೇಹಾರಿಯಂತೆ ಸ್ವರ್ಗಸ್ಥರಾದರು ಬಿಜ್ಜರಗಿಯ ಡ್ಯೂ. ಕಲ್ಯಾಣ್‌ಕುಮಾರ್! ಸುಮಾರು 10 ವರ್ಷಗಳ ಮೇಲಾದರೂ ಇವತ್ತಿಗೂ ಈ ಡ್ಯೂ. ಕಲ್ಯಾಣ್‌ಕುಮಾರ್ ಈ ಭಾಗದಲ್ಲಿ ತಮಾಷೆಯ ವಸ್ತುವಾಗಿದ್ದಾನೆ! ಆದರೆ ಅದರ ಹಿಂದೆ ಬಣ್ಣದ ಬದುಕಿಗೆ ಕೈ ಹಾಕಿ ಸ್ವಂತ ಬದುಕನ್ನು ಕತ್ತಲು ಮಾಡಿಕೊಂಡ ದುರಂತವಿದೆ.

## ಸಿನಿಮಾ ಸಿಕ್ತು-ಮದ್ವೆ ಮಲಿಗ್ತು!

ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡದ ಅನಿಲ್‌ಕುಮಾರ್ ನಾಯಕ್‌ಗೆ ಈಗ ಐವತ್ತು ವರ್ಷ ದಾಟಿದೆ. ಆದರೆ ಆತನಿಗಿನ್ನೂ ವಿವಾಹವಿಲ್ಲ. ಆಗುವ ಇರಾದೆಯೂ ಅನಿಲ್‌ಗಿಲ್ಲ... ಸಿನಿಮಾ ಎಂಬ ಮಾಯಾವಿಯನ್ನು ಮೂರು ದಶಕಗಳ ಹಿಂದೆಯೇ ಮದುವೆಯಾದ ಅನಿಲ್ ದೊಡ್ಡ ಹೀರೋ ಆಗುವ ಕನಸಲ್ಲಿ ಮನೆ, ಮೂರು ಹೋಟೆಲ್‌ಗಳನ್ನೆಲ್ಲ ಮಾರಿ ಪಾಪರ್ ಆಗಿ ಹೋದ. 1971 ರ ಸುಮಾರಿನಲ್ಲಿ ಅನಿಲ್ ನಾಯಕ್ ಇನ್ನೂ ಯುವಕ. ಕುಟುಂಬದ ಮೂರು ಹೋಟೆಲ್‌ಗಳಲ್ಲಿ ಭರ್ಜರಿ ವ್ಯಾಪಾರವೂ ಇತ್ತು. ಅನಿಲ್‌ಗೆ ಅಭಿನಯ ಕಲೆಯೂ ಇತ್ತು. 80 ರ ದಶಕದಲ್ಲಿ ಗಾಂಧಿನಗರದಲ್ಲಿ ಈಗಿನಷ್ಟು ಸಂಖ್ಯೆಯ



ಹುಬ್ಬಳ್ಳಿ ಪ್ರಭಾಕರ

ವಂಚಕರಿರಲಿಲ್ಲವೆಂದು ಕಾಣುತ್ತದೆ. ಅಂತೂ ಅನಿಲನ ಪುಣ್ಯ. ಕೆ.ಟಿ. ಶೇಷಗಿರಿರಾವ್ ಎಂಬ ಸಂಭಾವಿತ ನಿರ್ದೇಶಕರ ಭೇಟಿಯಾಯ್ತು. 1971 ರಲ್ಲಿ ಬಿಡುಗಡೆಯಾದ 'ಬದುಕು ಬಂಗಾರವಾಯ್ತು' ಚಿತ್ರದಲ್ಲಿ ಒಂದು ಗಮನಾರ್ಹ ಪಾತ್ರ ಮಾಡಿದ ಅನಿಲ್‌ಗೆ ಅವತ್ತಿನಿಂದಲೇ ದೊಡ್ಡ ಹೀರೋ ಆಗುವ ಕನಸು ಗರಿಗೆದರಿತ್ತು. ನಂತರ ಆರ್. ನಾಗೇಂದ್ರರಾವ್‌ರ ಜೊತೆ ಕೆಲಸ ಮಾಡಿ ಸಿನಿಮಾ ನಿರ್ಮಾಣದ ಬಗ್ಗೆಯೂ ಅನಿಲ್ ತಿಳಿದುಕೊಂಡ. ಗುಡಗೇರಿಯ ಎನ್. ಬಸವರಾಜ್ ನಿರ್ಮಿಸಿದ 'ರೈತನ ಮಕ್ಕಳು' ಚಿತ್ರದಲ್ಲಿ ಹೀರೋನ (ಎನ್. ಬಸವರಾಜ್) ಕೊನೆ ತಮ್ಮನಾಗಿ ಅನಿಲ್ ಅಭಿನಯಿಸಿದ. 'ಕಾಲೇಜು ರಂಗ' ಚಿತ್ರದಲ್ಲಿ ಪುಟ್ಟ ಪಾತ್ರವನ್ನು ಮಾಡಿದ್ದ ಅನಿಲ್ ನಾಯಕ್ 'ಫಲಿತಾಂಶ' ಚಿತ್ರದಲ್ಲಿ ಎರಡನೇ ನಾಯಕನಟನಾಗಿ ನಟಿಸಿ ಈ ಭಾಗದಲ್ಲಿ ಸ್ವಲ್ಪ 'ಫೇಮಸ್' ಆದ. ಆದರೆ ರಾತ್ರೋರಾತ್ರಿ ಮಾಸ್ ಲೀಡರ್ ಆಗಲು ಹೊರಟ ಅನಿಲ್ ನಾಯಕ್‌ನ ತೆವಲಿಗೆ ಮೂರು ಹೋಟೆಲ್‌ಗಳು, ಸ್ವಂತ ಮನೆಯೆಲ್ಲ ನಿಖಾಲಿಯಾದವು. ಅದೆಲ್ಲ ಇರಲಿ, ಸಿನಿಮಾವನ್ನೇ 'ಹೆಂಡತಿ' ಎಂದು ಬಗೆದ ಅನಿಲ್‌ಗೆ ಐವತ್ತು ದಾಟಿದ್ದರೂ ಮದುವೆ ಇಲ್ಲ, ಈಗ ಸಿನಿಮಾದಲ್ಲಿ ಛಾನ್ಸ್ ಇಲ್ಲ. ಅದಕ್ಕೇ ಈ ಗುಳೇದಗುಡ್ಡದ 'ಪ್ರಿನ್ಸ್' ಟಿವಿ ಸೀರಿಯಲ್ ಎಂಬ 'ಉಪಪತ್ನಿ'ಗೆ ಅಂಟಿಕೊಂಡಿದ್ದಾನೆ... ಅಲ್ಲೂ ಅಲ್ಲೊಂದು ಇಲ್ಲೊಂದು ಚೋಟು ರೋಲ್‌ಗಳು ಮಾತ್ರ ಸಿಗುತ್ತಿವೆ!

## ಸುಮಂಗಲಾಗೆ ಮಾರ್ವಾಡಿಯ ಟೈಮ್‌ಬಾಂಬ್!

ಇದೇ ಗುಳೇದಗುಡ್ಡದ ಮೂಲದ ಲೇಡಿ ಅನಿಲ್ ಕುಮಾರ್ ಒಬ್ಬರಿದ್ದಾರೆ. ಯೌವನದಲ್ಲಿ ಸುರಸುಂದರಿಯಾಗಿದ್ದ ಸುಮಂಗಲಾ ಕರಗೋಳನವರಿಗೆ ಬೆಂಗಳೂರಿನ ಸರ್ಕಾರಿ ಕಚೇರಿಯೊಂದರಲ್ಲಿ 20 ವರ್ಷದ ಹಿಂದೆ ನೌಕರಿ ಸಿಕ್ಕಿತು. ಬೆಂಗಳೂರಿನ ಥಳಕು ಬಳಕು ನೋಡಿದ ಸುಂದರಿ ಸುಮಂಗಲಾಗೆ ಹೀರೋಯಿನ್ ಆಗುವ ಕನಸು. ಅಂತಹ ಹುಡುಕಾಟದಲ್ಲಿದ್ದಾಗ ಹುಬ್ಬಳ್ಳಿಯ ನಿರ್ಮಾಪಕ ನಂದಿಹಾಳ್ ಪರಿಚಯ ವಾಯ್ತು. ನಿಜ ಜೀವನದ 'ಲವ್ ಸ್ಟೋರಿ' ಶುರುವಾಗಿ ಸುಮಂಗಲಾ ನಂದಿಹಾಳನನ್ನು ಮದುವೆಯೂ ಆದಳು. ಸುಮಂಗಲಾಳನ್ನು ಹೀರೋಯಿನ್ ಮಾಡಲೆಂದೇ ನಂದಿಹಾಳ್ 'ಭರತ್' ಎಂಬ ಚಿತ್ರಕ್ಕೆ ಕೈ ಹಾಕಿದರು. ಕೊನೆಗೆ ಸುಮಂಗಲಾ ಚಿಕ್ಕ ಪಾತ್ರದಲ್ಲೂ, ಟೈಗರ್ ಪ್ರಭಾಕರ್, ಜಯಂತಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ 'ಭರತ್' 87 -88ರಲ್ಲಿ ಜನ್ಮತಾಳಿತು. ನಂದಿಹಾಳ್ ದಂಪತಿಗಳಿಗೆ ಒಂದಿಷ್ಟು ಕಾಸೂ ಬಂತು. ನಂತರ ಈ ದಂಪತಿಗಳು ದೊಡ್ಡ ಪ್ರಾಜೆಕ್ಟ್‌ಗೆ ಕೈ ಹಾಕಿದರು. ಆಗ ಜೊತೆಯಾದವನು ವಂಚಕ ಮಾರ್ವಾಡಿ ಉತ್ತಮ್‌ಚಂದ್ ಜೈನ್! ಎಲ್ಲರನ್ನೂ ನಂಬುತ್ತಿದ್ದ ಈ ದಂಪತಿಗಳಿಗೆ ಜೈನ್ ಮೋಸ ಮಾಡಲು ನಿರ್ಧರಿಸಿ ಆಗಿತ್ತು. ಸುಮಂಗಲಾಗೆ ಹೀರೋಯಿನ್ ಅಲ್ಲದಿದ್ದರೂ, ಸೈಡ್ ರೋಲ್ ಮಾಡುವ ಆಸೆಯಂತೂ ಇತ್ತು. ವಿಷ್ಣುವರ್ಧನ್, ದೇವರಾಜ್‌ರಂತಹವರನ್ನು ಹಾಕಿಕೊಂಡು 'ಟೈಮ್-ಬಾಂಬ್' ಎಂಬ ಚಿತ್ರ ಮಾಡಿದ್ರು. ದೊಡ್ಡ ಬಜೆಟ್ಟಿನ 'ಟೈಮ್ ಬಾಂಬ್' ನಿರ್ಮಾಣದಲ್ಲಿ ಉತ್ತಮ್ ಚಂದ್ ಜೈನ್ ತನ್ನ ತಗಡು ಬುದ್ಧಿ ತೋರಿಸಿ ಹಣ ಲಪಟಾಯಿಸಿದ್ದ. ಸುಮಂಗಲಾಗೆ ಈ ಚಿತ್ರದಲ್ಲಿ ನರ್ಸ್ ಪಾತ್ರ ಮಾಡಿದ ಖುಷಿಯೇನೋ ಇತ್ತು. ಆದರೆ ಉತ್ತಮ ಚಂದ್ ಜೈನ್ ಇಟ್ಟ 'ಟೈಮ್ ಬಾಂಬ್' ಹೊಡೆತಕ್ಕೆ ನಂದಿಹಾಳ ದಂಪತಿಗಳು ತತ್ತರಿಸಿ ಹೋದರು. ಇವತ್ತಿಗೂ ಉತ್ತಮ್‌ಚಂದ್‌ನಿಂದ ಹಣ ವಸೂಲಿಯಾಗುತ್ತಿಲ್ಲ....

## ಕಳ್ಳರಿದ್ದಾರೆ ಜೋಕೆ!

ಸಿನಿಮಾ ಹುಚ್ಚಿನಲ್ಲಿ ಗಾಂಧಿನಗರದಲ್ಲಿ ನಿರ್ಮಾಪಕರಾಗಲು ಬಯಸುವ ಉತ್ತರ ಕರ್ನಾಟಕದ ಜನ ಆದಷ್ಟೂ ಎಚ್ಚರದಿಂದಿರಬೇಕು. ಗಾಂಧಿನಗರದ ಫೈನಾನ್ಸ್ ವ್ಯವಹಾರವೇ ಅಷ್ಟೊಂದು ಕರಾಳವಾಗಿದೆ. ನಟ, ನಟಿ ಆಗುವ ಹುಮ್ಮಸ್ಸಿನಲ್ಲಿ ಎಷ್ಟೋ ಜನ ಬದುಕು ಕಳೆದುಕೊಂಡಿದ್ದಾರೆಂಬ ವಿಷಯ ಗಮನದಲ್ಲಿರಲಿ...

# ಮಾಯೆಯ ಹಿಂದೆ!

ಪ್ರತಿಭೆ ಇದ್ದರೂ ಗಾಂಧಿನಗರದಲ್ಲಿ ಬದುಕುವುದು ಕಷ್ಟ ಎಂಬುದು ಬಹುತೇಕರಿಗೂ ಗೊತ್ತಿರುವ ಸತ್ಯ ಆದರೂ ಕಲೆಯನ್ನು ಪ್ರೀತಿಸುವ, ರಂಗಭೂಮಿ ಹಿನ್ನೆಲೆಯ ಹಲವಾರು ಕಲಾವಿದರಿಗೆ ಗಾಂಧಿನಗರ ಅವಮಾನ ಮಾಡುತ್ತಲೇ ಬಂದಿದೆ. ಬಿಜಾಪುರದ ಪ್ರೇಮಾ ಗುಳೇದಗುಡ್ಡ ಎಂಬ ರಂಗಭೂಮಿ ಕಲಾವಿದೆ ಸಿನಿಮಾ ಕನಸಲ್ಲಿ ಗಾಂಧಿನಗರ ಸೇರಿ 'ಎರಡು ಹೃದಯಗಳು' ಚಿತ್ರದಲ್ಲಿ ಸಣ್ಣ ಪಾತ್ರ ಮಾಡಿದಳು. 'ಸೂಪರ್ ನೋವಾ-459' ಎಂಬ ಚಿತ್ರಕ್ಕೆ ಫೈನಾನ್ಸ್ ಮಾಡಿ ದಿವಾಳಿ ಎದ್ದಳು. 'ಸೂಪರ್ ನೋವಾ' ಡಬ್ಬಾದಲ್ಲೇ ಕೊಳೆತು ಸತ್ತಿತು. ವೀರಪ್ಪ ಮೊಯ್ಲಿ ಸರಕಾರದಲ್ಲಿ ಸಚಿವನಾಗಿದ್ದ ಬ್ಯಾಡಗಿಯ ಹೆಗ್ಗಪ್ಪ ಲಮಾಣಿಯ ಪುತ್ರ ಇಂಜಿನಿಯರ್ ಹೇಮಂತ್‌ಕುಮಾರ್‌ಗೂ ಸಿನಿಮಾ ಹುಚ್ಚು ಹಿಡಿದು ಅವರಪ್ಪನ ಪಾಪದ ಹಣವನ್ನೆಲ್ಲಾ ಪೋಲು ಮಾಡುವಂತಾಯ್ತು. ಲಂಬಾಣಿ ಭಾಷೆಯ 'ಝೂಡೆರೋ ಪಂಖಿರೊ' ಮಾಡಿ ಕೈ ಸುಟ್ಟುಕೊಂಡ ಹೇಮಂತ್ ಕುಮಾರ್ ನಂತರ 'ಕನ್ನಡ ಕುವರ' ಚಿತ್ರ ನಿರ್ಮಿಸಿ, ನಿರ್ದೇಶಿಸಿ, ನಾಯಕ ನಟನಾಗಿ ನಟಿಸಿ ಅದೆಂತಹಾ 'ಯಶಸ್ಸು' ಪಡೆದನೆಂದರೆ, ಇವತ್ತಿಗೂ ಆತ ಗಾಂಧಿನಗರದ ಕಡೆ ಮುಖ ಮಾಡಿ ಮಲಗುವುದಿಲ್ಲ. ಬಿಜಾಪುರ ಜಿಲ್ಲೆ ಜಮಖಂಡಿಯ ಸುಧೀಂದ್ರ ಕಲ್ಲೋಳ 'ಪುಂಡ ಪ್ರಚಂಡ' ನಿರ್ದೇಶಿಸಿ ಅಲ್ಪ ಯಶಸ್ಸು ಪಡೆದು ಈಗ ಟಿವಿ ಸೀರಿಯಲ್‌ಗಳಲ್ಲಿ ಬ್ಯುಸಿಯಾಗಿದ್ದಾರೆ.. ಈರಣ್ಣ ಬಾದರದಿನ್ನಿ, ಬಿರಾದಾರ್ ಸಿನಿಮಾ, ಟಿ.ವಿ.ಗಳೆರಡರಲ್ಲೂ ಮಿಂಚುತ್ತಿದ್ದಾರೆ. 'ಸಿಲ್ಲಿ ಲಲ್ಲಿ' ಸೀರಿಯಲ್‌ನ ಕಾಂಪೌಂಡರ್ ಪಾತ್ರದಿಂದ ಜನಪ್ರಿಯನಾದ ಸಂಗಮೇಶ್ ಮೊನ್ನೆ ಕೆ.ಎ.ಎಸ್ ಆಫೀಸರ್ ಆಗುವ ಮೂಲಕ ಚಿತ್ರರಂಗದಿಂದ ದೂರ ಉಳಿಯುವಂತಾಗಬಹುದು. ಡಾ. ಗೋವಿಂದ ಮಣ್ಣೂರು, ಕನ್ನಡ ಪಂಡಿತ ದೇವೇಂದ್ರ ಗಿರಡ್ಡಿ, ಕೆಮಿಸ್ಟ್ರಿ ಪ್ರೊಫೆಸರ್ ಡಾ. ಅರವಿಂದ ಸಜ್ಜನ್ ಮುಂತಾದವರಲ್ಲಿ ನಟನಾ ಪ್ರತಿಭೆಯಿದ್ದರೂ ಅವಕಾಶ ಕಡಿಮೆ ದೊರೆತಿವೆ. ಗಾಂಧಿನಗರವೆಂದರೆ ಇವರಿಗೆಲ್ಲ ಅಸಹ್ಯ ಎನಿಸಿಬಿಟ್ಟಿದೆ.



ಬೆಳಗಾವಿ ಜಿಲ್ಲೆ ಬೈಲಹೊಂಗಲದ ಶಿವರಂಜನ್ ಎನ್ನುವ ಹುಡುಗ 'ಅಮೃತ ಸಿಂಧು' ಎಂಬ ಸಿನಿಮಾ ನಿರ್ಮಿಸಿ, ನಾಯಕ ನಟನಾಗಿ ಅಭಿನಯಿಸಿ ಬೈಲಹೊಂಗಲದಲ್ಲಿ ಸಿನಿಮಾವನ್ನು 50 ದಿನ ಓಡಿಸಿ, ಗಾಂಧಿನಗರದಿಂದ ಬೈಲಹೊಂಗಲಕ್ಕೆ ಓಡಿಹೋದವನು ಈಗ ಕನಸಲ್ಲೂ ಸಿನಿಮಾ ಎನ್ನುವುದಿಲ್ಲ. ದಾವಣಗೆರೆಯ ರವಿರಾಜ್ ಎಂಬ ಹೋಟೆಲ್ [illegible] ಏಕೈಕ ಕಾರಣದಿಂದ 'ರಾಜಾ [illegible] ರೋಜಾ' [illegible] ಲಾಸ್ ಆಗಿ ಹೋದ.




ಬಾಗಲಕೋಟೆ ಬಸಂತ್

ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ನಿಂಬಾಳ ಗ್ರಾಮದ ಸುನಿಲ್ ಕುಮಾರ್ ದೇಸಾಯಿ 'ತರ್ಕ', 'ಉತ್ಕರ್ಷ', 'ನಿಷ್ಕರ್ಷ', 'ಪ್ರೇಮರಾಗ ಹಾಡು ಗೆಳತಿ' ಮುಂತಾದ ಹಿಟ್ ಚಿತ್ರಗಳನ್ನು ನೀಡಿ ಈಗ ಪರ್ವ, 'ರಮ್ಯ ಚೈತ್ರ ಕಾಲ'ದಂತಹ ಕಳಪೆ ಚಿತ್ರ ಮಾಡುವ ಹಂತಕ್ಕೆ ಇಳಿದಿದ್ದಾರೆ. ತನ್ನ ಸಿನಿಮಾ ಭವಿಷ್ಯವನ್ನು ತಾನೇ ಹಾಳು ಮಾಡಿಕೊಂಡ ಧಾರವಾಡದ 'ದಾಮಿನಿ' 'ಭಾ-ರತಿ'ಯಾಗಿ ವಂಚನೆಗೀಡಾಗಿದ್ದಾಳೆ. ಹುಬ್ಬಳ್ಳಿಯ ಸ್ಟೈಮ್ಯಡ್ ಪೋಷಕ ನಟನ ಪಾತ್ರದಲ್ಲಿ ಸೈ ಎನಿಸಿಕೊಳ್ಳುತ್ತಿದ್ದಾನೆ. ರಂಗಭೂಮಿಯ ಎನ್. ಬಸವರಾಜ್‌ಗೂ ಸಿನಿಮಾ ಒಲಿಯಲಿಲ್ಲ.

ಪದ್ಮಪ್ರಿಯಳೊಂದಿಗೆ ಅಭಿನಯಿಸಬೇಕೆಂದು ಬಾಗಲಕೋಟೆಯಿಂದ ಬೆಂಗಳೂರಿಗೆ ಬಂದ ಬಸಂತ್‌ಕುಮಾರ್ ಪಾಟೀಲ್ ಹಂಚಿಕೆದಾರನಾಗಿ ಕೊಚ್ಚಿ ಬೆಳೆದುಬಿಟ್ಟ. ಹೀರೋ ಆಗುವ ತೆವಲಿನಲ್ಲಿ ವರ್ಷದ ಹಿಂದೆ 'ವಿಶ್ವಾ-ಮಿತ್ರ' ಎಂಬ ಚಿಲ್ಲರೆ ಸಿನಿಮಾ ಮಾಡಿದ; ರಿಲೀಸ್ ಇನ್ನೂ ಆಗಿಲ್ಲ. ಹಾವೇರಿ ಜಿಲ್ಲೆ ಹಿರೇಕೆರೂರಿನ ಬಿ.ಸಿ. ಪಾಟೀಲ್ ನಟನಾಗಿ, ನಿರ್ಮಾಪಕನಾಗಿ ಒಂದಿಷ್ಟು ಯಶ ಪಡೆದು ಈಗ ಎಂ.ಎಲ್.ಎ ಆಗಿಹೋಗಿದ್ದಾರೆ. ರಾಯಚೂರಿನ ರಾಮು ಎಂಬ ಹುಡುಗ 'ಜಾಲಿ ನನ್ನ ಜಾಲಿ' ಚಿತ್ರ ಮಾಡಲು ಹೋಗಿ ಗಾಂಧಿನಗರದಲ್ಲಿ ಹಗಲು ದರೋಡೆಗೆ ಒಳಗಾಗಿ ರಾಯಚೂರು ಸೇರಿದ್ದಾನೆ. ಬೆಳಗಾವಿಯ ಚರಣ್‌ರಾಜ್ ತಮಿಳಿಗೆ ಹೋದರೆ, ಅತುಲ್ ಕುಲಕರ್ಣಿ, ರಾಜಪುರೋಹಿತ್ ಬಾಲಿವುಡ್‌ನಲ್ಲಿ ಮಿಂಚುತ್ತಿದ್ದಾರೆ. ಗುಲ್ಬರ್ಗದ ಮುಸ್ತಫಾ 'ಈಶ' ಸಿನಿಮಾ ನಿರ್ಮಾಣ ಮಾಡಿ, ಬಿಡುಗಡೆಗೆ ಓಡಾಡುವಾಗಲೇ ಅಪಘಾತದಲ್ಲಿ ತೀರಿಹೋದ. ಬೀದರ್‌ನ ಒಬ್ಬರು ಅಂಬೇಡ್ಕರ್ ಕುರಿತು ಚಿತ್ರ ಮಾಡಿ ಪ್ರಶಂಸೆ ಪಡೆದರೂ, ಆರ್ಥಿಕವಾಗಿ ನಷ್ಟ ಹೊಂದಿದರು. ಅದಕ್ಕೇ ಗಾಂಧಿನಗರ ಮಾಯಾವಿ ಇದ್ದಂತೆ. ಗಮನಿಸಿ ಹೆಜ್ಜೆ ಇಟ್ಟರಷ್ಟೇ ಇಲ್ಲಿ ಬದುಕು.... ಏಕೆಂದರೆ ಇಲ್ಲಿ ಕಲರ್ ಕಲರ್ ಟೋಪಿಗಳು ಸದಾ ಸಿದ್ಧವಾಗಿರುತ್ತವೆ!

## 'ಪುಟ್ಟಕ್ಕನ ಹೈವೇ'ಯಲ್ಲಿ ನಾಗ್ತಿ!





'ಶತಮಾನಗಳ'ನಂತರ ವಿಷ್ಣುವರ್ಧನ್ ಫಾರ್ ಎ ಚೇಂಜ್ ಸ್ವಮೇಕ್ ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಇನ್ನೂ ಸಂತೋಷದ ವಿಷಯವೆಂದರೆ ಒಂದು ಕಾಲದ ಸೂಪರ್ ಹಿಟ್ ಜೋಡಿಯಾದ ವಿಷ್ಣು-ಸುಹಾಸಿನಿ ಈ ಚಿತ್ರದಲ್ಲಿ ಮತ್ತೆ ಒಂದಾಗುತ್ತಿದ್ದಾರೆ.

'ಬಂಧನ', 'ಮುತ್ತಿನ ಹಾರ', 'ಸುಪ್ರಭಾತ', 'ಹಿಮಪಾತ' ಮೊದಲಾದ ಚಿತ್ರಗಳಲ್ಲಿ ಈ ಜೋಡಿ ಪ್ರೇಕ್ಷಕ ಮನಸ್ಸನ್ನು ಗೆದ್ದಿತ್ತು, ಇತ್ತೀಚೆಗೆ ಏಳೆಂಟು ವರ್ಷಗಳಿಂದ ಯಾಕೋ ಈ ಜನಪ್ರಿಯ ನಾಯಕ-ನಾಯಕಿಯರು ಮತ್ತೆ ಒಂದೇ ಚಿತ್ರದಲ್ಲಿ ನಟಿಸಿರಲಿಲ್ಲ.

ಅಂದಹಾಗೆ, ನಾಗತಿಹಳ್ಳಿ ಚಂದ್ರಶೇಖರ್ ಈ ಹಳೆಯ ಜೋಡಿಯನ್ನು ಒಂದುಗೂಡಿಸಿದ್ದಾರೆ. ಬರೀ ತರುಣ-ತರುಣಿಯರನ್ನು ಹಾಕಿ ಲವ್ ಸ್ಟೋರಿ ಚಿತ್ರಗಳನ್ನು ತೆಗೆಯುತ್ತಿದ್ದ ನಾಗತಿಹಳ್ಳಿ ಈಗ ವಿಷ್ಣು ಸುಹಾಸಿನಿಯಂತಹ ಪ್ರಬುದ್ಧರನ್ನು ಹಾಕಿ ಚಿತ್ರ ಮಾಡಲು ಹೊರಟಿರುವುದೇ ಸಂತೋಷ. ಈ ಚಿತ್ರಕ್ಕೆ 'ಮಾತಾಡು ಮಾತಾಡು ಮಲ್ಲಿಗೆ' ಅಂತ ಹೆಸರಿಟ್ಟದ್ದಾರೆ.


ಅದೇನೆ ಇರಲಿ, ವಿಷ್ಣು-ಸುಹಾಸಿನಿಯ ನಟನೆಯ 'ಜುಗಲ್ ಬಂದಿ' ಖಂಡಿತ ನೋಡುಗರಲ್ಲಿ ರೋಮಾಂಚನ ಉಂಟು ಮಾಡಬಹುದು. ಅಂದಹಾಗೆ, ಇದು ನಾಗತಿಹಳ್ಳಿಯವರ ಸೀಕ್ವೆಲ್ 'ಪುಟ್ಟಕ್ಕನ ಹೈವೇ'ಯನ್ನು ಆಧರಿಸಿರುವ [illegible] ಅದನ್ನು ನಾಗ್ತಿಹಳ್ಳಿ ಯಾಕೆ ಬಹಿರಂಗಪಡಿಸಿಲ್ಲವೆಂಬುದೇ ವಿಶೇಷ. ಮಾತಾಡು ಮಲ್ಲಿಗೆ!

## ರಕ್ಷಿತಾ-ರಾಧಿಕಾ ಮಧ್ಯೆ ರವಿ!



ಎರಡು ವರ್ಷದ ಗಾಳಿ ಸುದ್ದಿಗೆ ಕೊನೆಗೂ ತೆರೆಬಿದ್ದಿದೆ.


ಕ್ರೇಜಿ ಸ್ಟಾರ್ ಮತ್ತು ಕ್ರೇಜಿ ಕ್ವೀನ್ ಕೊನೆಗೂ ಒಂದೇ ಚಿತ್ರದಲ್ಲಿ ನಟಿಸುವುದು ಖಾತ್ರಿಯಾಗಿದೆ. ರವಿಚಂದ್ರನ್-ರಕ್ಷಿತಾ ಜೋಡಿಯ ಈ ಹೊಸ ಚಿತ್ರದ ಹೆಸರು 'ಒಡಹುಟ್ಟಿದವಳು.' ಇನ್ನೊಂದು ವಿಶೇಷವೆಂದರೆ ರಾಧಿಕಾ ಕೂಡಾ ಈ ಚಿತ್ರದ ನಾಯಕಿ. ಹೀಗಾಗಿ ಆರ್.ಆರ್.ಆರ್ ತಾರಾಗಣದ 'ಒಡಹುಟ್ಟಿದವಳು' ಅಪರೂಪದ ಕಾಂಬಿನೇಷನ್ ಚಿತ್ರವಾಗಲಿದೆ.



ಗಂಡುಗಲಿ ಬರುದಿನ ಮಂಜು ಈ ಚಿತ್ರದ ನಿರ್ಮಾಪಕರು. ಸಾಯಿಪ್ರಕಾಶ್ ಈ ಚಿತ್ರದ ನಿರ್ದೇಶಕರು.

ಇದು ಸಿದ್ಧಲಿಂಗಯ್ಯನವರ ಪುತ್ರ ಮುರಳಿ ನಟಿಸಿದ 'ಪೂರ್ ಕಾಲಂ' ಚಿತ್ರದ ರೀಮೇಕ್. ಈ ಚಿತ್ರ ಮುರಳಿಗೆ ಮರಳಿ ತಾರಾಮೌಲ್ಯ ತಂದು ಕೊಟ್ಟದ್ದು ಮಾತ್ರವಲ್ಲ ಪ್ರಶಸ್ತಿಯನ್ನು ತಂದು ಕೊಟ್ಟಿತು. ಅಂತಹ 'ಪುನರ್ ಜನ್ಮ' ರವಿಚಂದ್ರನ್‌ಗೆ ಈ [illegible]

## ಶಿವು-ಉಪ್ಪಿ ಮತ್ತೆ ಅಪ್ಪಿ....!



ಸುಮಾರು ಐದು ವರ್ಷಗಳ ನಂತರ ಶಿವರಾಜ್ ಕುಮಾರ್ ಮತ್ತು ಉಪೇಂದ್ರ ಒಟ್ಟಿಗೆ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಚಿತ್ರದ ಹೆಸರು 'ಲವಕುಶ'. ಹಾಗಂತ ಇದು ಖಂಡಿತವಾಗಿಯೂ ಪೌರಾಣಿಕ ಚಿತ್ರ ಅಲ್ಲ.

'ಲವಕುಶ'ದ ಡಿಟೈಲ್ಸ್ ಹೀಗಿದೆ: ಇದು ಅಪ್ಪಟ ಸಾಮಾಜಿಕ ಚಿತ್ರ. ಕಣ್ಣೀರ ಚಿತ್ರಗಳನ್ನು ನಿರ್ದೇಶಿಸುವಲ್ಲಿ ಡಾಕ್ಟರೇಟ್ ಪಡೆಯಬಹುದಾದ ಸಾಯಿಪ್ರಕಾಶ್ ಈ ಚಿತ್ರದ ನಿರ್ದೇಶಕರು. 'ಅಣ್ಣ-ತಂಗಿ' ನಿರ್ಮಿಸಿ ಬಾಕ್ಸ್ ಆಫೀಸ್‌ನಲ್ಲಿ 'ಜಾಕ್‌ಪಾಟ್' ಹೊಡೆದಿರುವ ಕೆ. ಪ್ರಭಾಕರ್ ಈ ಚಿತ್ರದ ನಿರ್ಮಾಪಕರು. ಹಂಸ್ ಸಂಗೀತ ಸಾಧ್ಯತೆ ಇದೆ.



ಉಪ್ಪಿ-ಶಿವು ಕಾಂಬಿನೇಷನ್ 'ಪ್ರೀತ್ಸೆ' ಚಿತ್ರದಲ್ಲಿ ಮೊದಲ ಬಾರಿಗೆ ಪ್ರೇಕ್ಷಕರನ್ನು ಮೋಡಿ ಮಾಡಿತ್ತು.

ಒಂದೇ ಒಂದು ಮಾತು. ಅಂದು ಉಪೇಂದ್ರ ಸೂಪರ್ ಸ್ಟಾರ್ ಆಗಿ ಮೆರೆಯುತ್ತಿದ್ದರು. ಶಿವರಾಜ್‌ಕುಮಾರ್ ಸ್ವಲ್ಪ ಒಣಗಿ ಹೋಗಿದ್ದರು. ಈಗ ಅದು ರಿವರ್ಸ್ ಆಗಿದೆ. ಜೋಗಿಯ ಯಶಸ್ಸಿನಿಂದಾಗಿ ಶಿವರಾಜ್‌ಕುಮಾರ್ ಮತ್ತೆ ಸೂಪರ್ ಸ್ಟಾರ್ ಆಗಿದ್ದಾರೆ. ಆದರೆ ಉಪ್ಪಿ ಈಗ ಒಂದು ಯಶಸ್ಸಿಗಾಗಿ ಎರಡು ವರ್ಷಗಳಿಂದ ತಿಣುಕಾಡುತ್ತಿದ್ದಾರೆ. ಹಿಸ್ಟರಿ ರಿಪೀಟ್ಸ್ ಇಟ್ಸೆಲ್ಫ್ ಅನ್ನುವುದು ಇದಕ್ಕೆ ತಾನೆ...?

ಅಂತಹ ಒಂದು ಹಿಸ್ಟರಿ ರಿಪೀಟ್ ಆಗಲಿ ಎಂದು ಪ್ರಭಾಕರ್ ಕನಸು ಕಾಣುತ್ತಿದ್ದಾರೆ. ಗಾಂಧಿನಗರದ [illegible] 'ಅಣ್ಣ-ತಂಗಿ' ಚಿತ್ರದಿಂದ ಪ್ರಭಾಕರ್‌ಗೆ [illegible]



# ಕಾಡುವ ಒಂದು ನೆನಪು

## ಸಾಂತ್ವನ ಹೇಳದ್ದಕ್ಕೆ ಕ್ಷಮೆ ಇರಲಿ....!



1986, ನಾನಾಗ ದ್ವಿತೀಯ ಪಿ.ಯು. ಓದುತ್ತಿದ್ದೆ. ಮೂಡಿಗೆರೆ ತಾಲ್ಲೂಕಿನ ಮುತ್ತಿಗಪುರ ಎಂಬ ಹಳ್ಳಿಯಿಂದ ಕಾಲೇಜು ಮೆಟ್ಟಿಲು ಹತ್ತಿದ್ದ ಹುಡುಗಿಯರೆಂದರೆ ನಾನು ಮತ್ತು ನನ್ನ ಗೆಳತಿ ಬ್ರಿಜಿತ್ ಅಂದ್ರೇಜ(ಬಜ್ಜು). ನಾವಿಬ್ಬರು ಒಂದು ಕಿಲೋಮೀಟರ್ ನಡೆದು ಬಸ್ಸಿನಲ್ಲಿ ಕಾಲೇಜಿಗೆ ಹೋಗಬೇಕಿತ್ತು. ಮೊದಲ ವರ್ಷದ ಪಿ.ಯು. ಓದುತ್ತಿರುವಾಗಲೇ ಪ್ರೀತಿಯ ಗೆಳತಿಗೆ ತಗುಲಿದ್ದು ರಕ್ತದ ಕ್ಯಾನ್ಸರ್ ಎಂಬ ಮಹಾಮಾರಿ. ಕ್ಯಾನ್ಸರ್ ಕ್ರೂರತೆ ಏನು ಎಂದರಿಯದ ಎಳೆಯ ಮನಸ್ಸುಗಳು ನಮ್ಮವು. ಬಡವರಾದ ಅವಳ ಮನೆಯವರು ಕೈಲಾದ ಚಿಕಿತ್ಸೆಯನ್ನೆಲ್ಲಾ ಕೊಡಿಸಿದರೂ ಕ್ಯಾನ್ಸರ್ ಬಜ್ಜುವಿನ ದೇಹವನ್ನೆಲ್ಲಾ ವ್ಯಾಪಿಸಿತ್ತು. ದ್ವಿತೀಯ ವರ್ಷದ ಅರ್ಧ ವಾರ್ಷಿಕ ಪರೀಕ್ಷೆಗಳನ್ನು ದಿಟ್ಟವಾಗಿಯೆ ಎದುರಿಸಿದಳು. ದಸರಾ ರಜೆಯಲ್ಲಿ ಅವಳ ಕಾಯಿಲೆ ಉಲ್ಬಣಿಸಿತು. ರಜೆಯಲ್ಲಿ ಹಾಸಿಗೆ ಹಿಡಿದವಳು ಮತ್ತೆ ಮೇಲೇಳಲಿಲ್ಲ, ನನಗಾಗ ಸಾವಿನ ಕರಾಳತೆಯ ಅರಿವೇ ಇರದ ವಯಸ್ಸು.


ಒಂದು ದಿನ ಅವಳನ್ನು ನೋಡಲೆಂದು ಅವಳ ಮನೆಗೆ ಹೋದೆ. ಹಾಸಿಗೆ ಹಿಡಿದಿದ್ದ ಅವಳ ಸ್ಥಿತಿ ನೋಡಿ ಕಣ್ಣೀರು ಬಂತು. ಅವಳಮ್ಮ ಅಳುತ್ತಿದ್ದದ್ದು ನೋಡಿ ನನಗೆ ಆ ಪರಿಸ್ಥಿತಿಯನ್ನು ಎದುರಿಸುವ ಧೈರ್ಯವೇ ಆಗಲಿಲ್ಲ, ಬಜ್ಜು ನನ್ನ ಕೈ ಹಿಡಿದು "ಭಾರತಿ, ನಾನೇನಾದ್ರು ತಪ್ಪು ಮಾಡಿದ್ರೆ, ನಿನ್ನ ಮನಸ್ಸಿಗೆ ನೋವು ಮಾಡಿದ್ರೆ ನನ್ನ ಕ್ಷಮಿಸಿಬಿಡು'' ಅಂದಳು. ದುಃಖ ತಡೆಯಲಾರದೆ ಹೂ ಅಂದೆ. ಅಂದು ಅವಳಿಂದ ಬಿಡಿಸಿಕೊಂಡು ಅಳುತ್ತಲೇ ಮನೆಗೆ ಹೋದೆ. ಅದಾದ ಆರು ದಿನಗಳಲ್ಲಿ ಅವಳು ತೀರಿಕೊಂಡಳು.

ಆದರೆ ನಾನು ಅವಳ ಕೊನೆಯ ಆರೂ ದಿನಗಳು ಅವಳನ್ನು ನೋಡಲು ಹೋಗಲೇ ಇಲ್ಲ, ಕಾಲೇಜಿಗೆ ಹೋಗಲು ಅವಳ ಮನೆ ಕಡೆಯ ದಾರಿಯಲ್ಲೇ ಹೋಗುತ್ತಿದ್ದ ನಾನು ಆ ದಾರಿಯನ್ನೇ ಬದಲಾಯಿಸಿಬಿಟ್ಟೆ. ಯಾಕೆಂದರೆ ಅವಳ ನೋವನ್ನು ನೋಡುವ, ಅವಳ ಮಾತನ್ನು ಕೇಳುವ, ಸಮಾಧಾನಿಸುವ ಧೈರ್ಯವೇ ನನಗಿರಲಿಲ್ಲ, ಆ ದಾರಿಯಲ್ಲಿ ಹೋದರೆ ಅವರಮ್ಮನಿಗೆ ಹೇಳಿ ನನ್ನನ್ನು ಒಳಕ್ಕೆ ಕರೆಸಿಕೊಂಡರೆ ಎಂದು ಭಯವಾಗುತ್ತಿತ್ತು. ಆದರೆ ನನಗೆ ಖಂಡಿತಾ ಅವಳು ಸಾಯುತ್ತಾಳೆಂದು ಗೊತ್ತಿರಲಿಲ್ಲ.

ಆದರೆ ಆ ನಂತರದ ದಿನಗಳಲ್ಲಿ ಅವಳ ಸಾವು ನನ್ನನ್ನು ಬೆಂಬಿಡದೆ ಕಾಡುತ್ತಿದೆ. ಅವಳಿಂದ ತಪ್ಪಿಸಿಕೊಂಡು ಬೇರೆ ದಾರಿಯಲ್ಲಿ ಹೋಗುತ್ತಿದ್ದ ಪಾಪಪ್ರಜ್ಞೆ ಈಗಲೂ ನನ್ನನ್ನು ಕಾಡುತ್ತಿದೆ. ನಸುಗತ್ತಲ ಕೋಣೆಯಲ್ಲಿ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದ ಗೆಳತಿಗೆ ನಾಲ್ಕು ಚೇತರಿಕೆಯ ಮಾತುಗಳನ್ನೋ ಕಾಲೇಜಿನ ವಿಷಯಗಳನ್ನೋ ಹೇಳುತ್ತ ಸ್ವಲ್ಪ ಹೊತ್ತಾದರೂ ಖುಷಿಯಾಗಿ ಇಡಬಹುದಿತ್ತೇನೋ ಎಂಬ ನೋವು ತೀವ್ರವಾಗಿ ಇಂದೂ ನನ್ನನ್ನು ಕಾಡುತ್ತಿದೆ. ಪ್ರೌಢತೆ ಇರದಿದ್ದ ವಯಸ್ಸಿನಲ್ಲಿ ನಡೆದ ತಪ್ಪು ಎಂದುಕೊಂಡು ನನ್ನೊಳಗೆ ಅಡಗಿಸಿಕೊಂಡಿದ್ದ ನೆನಪುಗಳನ್ನು ಬಿಚ್ಚಿಟ್ಟಿದ್ದೇನೆ. 19 ವರ್ಷಗಳ ನಂತರ ನನ್ನ ಗೆಳತಿ ನನ್ನನ್ನು ಕ್ಷಮಿಸಲಾರಳಾ?

**-ಭಾರತಿ ವಿಜಯ್, ಹಾಸನ**

## ಮರೆಯಲಾಗದ ಒಂದು ದೃಶ್ಯ!



ನಮ್ಮ ಹಳ್ಳಿಗೆ ನಮ್ಮದು ದೊಡ್ಡ ಮನೆತನ, ದೌಲತ್ತು, ದೌರ್ಜನ್ಯಕ್ಕೆ ಹತ್ತಿರವಾದದ್ದು. ನಾನಾಗ ಮೂರನೆಯ ತರಗತಿ ಓದುತ್ತಿದ್ದೆ, ನಮ್ಮನೆಯ ಅವಿಭಕ್ತ ಕುಟುಂಬದ ಸದಸ್ಯರ ಸಂಖ್ಯೆ ಕನಿಷ್ಠವೆಂದರೆ ಮೂವತ್ತರಿಂದ ನಲವತ್ತು, ಮನೆಯ ಕೆಲಸಕ್ಕೆ ಹಾಗೂ ತೋಟದ ಕೆಲಸಕ್ಕೆ ಎಲ್ಲಾ ದಲಿತರೇ. ಅಲ್ಲಿ ಮುಖ್ಯವಾಗಿ ದಲಿತ ಬಡಕಪ್ಪ ಚಾಕರಿ ಮಾಡುತ್ತಿದ್ದರು.

ನಮ್ಮಿಂದ ದಲಿತರಿಗೆ ಇದ್ದ ಕಾನೂನು ದೇವಸ್ಥಾನದ ಕಟ್ಟೆ ಹತ್ತುವಂತಿಲ್ಲ, ಬಾವಿಯ ನೀರು ಸೇದುವಂತಿಲ್ಲ, ಹೋಟೆಲಿನಲ್ಲಿ ನೆಲದ ಸೀಟು, ಊರ ಹೊರಗೆ ಅವರ ಮನೆಗಳು. ನಮ್ಮ ತಂದೆ ತಾಯಿಗೆ ಮೂರು ಹೆಣ್ಣಿನ ನಂತರ ನಾ ಹುಟ್ಟಿದ್ದಕ್ಕೆ ನನ್ನ ಹೆಸರು ಮುತ್ತಣ್ಣ ಎಂದು ನಾಮಕರಣ ಮಾಡಿದ್ದರಂತೆ (ಡಾ.ರಾಜ್ ಹೆಸರಿನ ಕಥೆಗೆ ಅನ್ವಯಿಸುವುದಿಲ್ಲ). ನಾನು ಚಿಕ್ಕವನಿದ್ದಾಗ ಎಲ್ಲರ ಪ್ರೀತಿಪಾತ್ರನಾಗಿ 8 ವರ್ಷದವರೆಗೂ ಮೈಮೇಲೆ ಸೇರು ಬಂಗಾರ, ಕೈಬೆರಳುಗಳಿಗೆ ಉಂಗುರ ತೊಡಿಸಿ ಎಲ್ಲರಿಗೂ ತೋರಿಸುತ್ತಿದ್ದರು. ಎಲ್ಲಾ ಕೂಲಿಗಳು ನಮ್ಮಪ್ಪನಿಗೆ ಧಣಿ ಎಂದೂ ನನ್ನನ್ನು ಚಿಕ್ಕಧಣಿ ಎಂದು ಕರೆಯುತ್ತಿದ್ದರು. ಕೂಲಿಗಳಿಗೆ ವಾರದ ಸಂಬಳ ನೀಡುವಾಗ ಕೈಯನ್ನು ಮೇಲೆತ್ತಿ ನೀಡಬೇಕೆಂಬ ನಿರ್ದೇಶನ ನಮ್ಮ ಕುಟುಂಬದ ರೂಲ್ಸ್, ಅಪ್ಪಿತಪ್ಪಿ ಮುಟ್ಟಿದರೆ ಸ್ನಾನ ಮಾಡಿ ಹನುಮಪ್ಪನ ದೇವಸ್ಥಾನದ ಗಂಟೆ ಒಡೆಯಬೇಕು. ಇಲ್ಲಿಗೆ ದೌಲತ್ ಅಧ್ಯಾಯ ಅಂತ್ಯ. ದಾರಿದ್ರ್ಯ ಪ್ರಾರಂಭ. ಕಾಲ ಚಕ್ರ ಉರುಳಿತ್ತು, ಇದ್ದ 60 ಎಕರೆ ಭೂಮಿ, ತೋಟ, ಗಾಣದ ಮಿಷನ್ ಎಲ್ಲವನ್ನು ನನ್ನ ಕಣ್ಣೆದುರಿಗೆ 2 ರಿಜರ್ವ್ ಪೋಲೀಸ್ ವ್ಯಾನ್, ಜೀಪುಗಳು ಹಳ್ಳಿಗೆ ಬಂದು ಸೀಜ್ ಮಾಡಿ ಕೋರ್ಟಿಗೆ ಒಪ್ಪಿಸಿದವು.

ನಮ್ಮಪ್ಪ ಕೋರ್ಟಿಗೆ ಅಲೆಯಲು ಪ್ರಾರಂಭ. ಆಗಿನ ಕಾಲದ ನಮ್ಮ ವ್ಯಾಜ್ಯದ ಲಾಯರ್ ಎಂ.ಪಿ.ಪ್ರಕಾಶ್ (ಈಗಿನ ಮಾಜಿ ಉಪಮುಖ್ಯಮಂತ್ರಿ). ನಮ್ಮ ಆಸ್ತಿಗೆ ಮುಖ್ಯ ವಿಟ್‌ನೆಸ್ ಎಂ.ಪಿ.ಪ್ರಕಾಶ್ ಅಣ್ಣ ಪುಲಾಪಗೌಡ. ಕೋರ್ಟಿನಲ್ಲಿ ವಾದ ವಿವಾದದ ನಂತರ ವಿರೋಧದವರ ಕಡೆಗೆ ಜಯ ಸಿಕ್ಕಿತು. ಅಂದು ನಮಗೆ ಬರುತ್ತಿದ್ದ ಆದಾಯ ಹೊಲದಿಂದ ಮಾತ್ರ, ಬೇರೆ ಬಿಸಿನೆಸ್ ಇರಲಿಲ್ಲ, ನಮ್ಮಪ್ಪ ಕೋರ್ಟ್ ಪಾಲಾದರು.




ಕೊನೆಕೊನೆಗೆ ಮನೆಯಲ್ಲಿದ್ದ ಬಂಗಾರ, ಹಿತ್ತಾಳೆ, ತಾಮ್ರ ಕೊನೆಗೆ ಕಬ್ಬಿಣ ಎಲ್ಲಾ ಮುಗಿದವು..... ನಂತರ ನಮ್ಮಪ್ಪ ಕತ್ತಲು ಮನೆಯಲ್ಲಿ ಮಾತಾಡದೆ ಮೌನವಾದರು. ಅವಿಭಕ್ತ ಕುಟುಂಬ ಹೊಡೆದು ಪಾಲಾಯಿತು.

ಮನೆಯಲ್ಲಿ ಹಸಿವು ಎಂಬ ಮಾಯೆ ಎದ್ದು ಕುಳಿತಿತು. ಆಗ ನನಗೆ ಇನ್ನೂ 13 ವರ್ಷ ನಾನು ಕೂಲಿ ಕೆಲಸಕ್ಕೆ ಹೋಗಲು ಪ್ರಾರಂಭಿಸಿದೆ. ಹಿಂದಿನ ಚಕ್ರದಲ್ಲಿ ಇದ್ದ ಬಡಕಪ್ಪನಿಗೆ ಇಂದಿರಾಗಾಂಧಿ ತುರ್ತು ಪರಿಸ್ಥಿತಿಯಲ್ಲಿ ಭೂಮಿ ಸಿಕ್ಕು ಬೋರ್‌ವೆಲ್ ಕೊರೆಸಿ ಚೆನ್ನಾಗಿ ಆಗಿದ್ದ. ಒಂದು ದಿವಸ ಅವನ ಹೊಲದಲ್ಲಿ ಕೆಲಸ ಮಾಡಿದೆ. ಸಾಯಂಕಾಲ ಬಡಕಪ್ಪ ಕೂಲಿ ಕೊಡುವಾಗ ಕೈಯಲ್ಲಿ ಕೂಲಿ ಇಟ್ಟು ಕೈ ಹಿಡಿದು ಕಣ್ಣೀರಿಟ್ಟ.

ಎಲ್ಲಿದೆ ಜಾತೀಯತೆ? ಎಲ್ಲಿದೆ ದೌರ್ಜನ್ಯ? ಎಲ್ಲಾ ತಿರುವು ಮುರುವು! ಇದು ಅವಮಾನವಂತೂ ಅಲ್ಲ, ನೆನಪು, ಸವಿನೆನಪು. ನಾನು ಕೈ ಮೇಲೆತ್ತಿ ಹಣ ಹಾಕುತ್ತಿದ್ದೆ, ಅವನು ಕೈ ಹಿಡಿದು ಹಣಕೊಟ್ಟ. ಪ್ರೀತಿಯಿಂದ ಕಣ್ಣುಗಳ ಅಂಚಿನಿಂದ ನೀರು. ಆ ದೃಶ್ಯ ಎಂದೂ ಮರೆಯಲು ಸಾಧ್ಯವಿಲ್ಲ.

**-ಮುತ್ತಣ್ಣ ಪೂಜಾರ್, ಬೆಂಗಳೂರು**

## ಇಬ್ಬರ ನೆನಪಿನಲ್ಲಿ ನಾನು.....!



ಮೇಷ್ಟ್ರಾಗಿ ಹುಳಿಯಾರಲ್ಲಿ ಕೆಲಸ ಮಾಡ್ತಿದ್ದೆ. ಅವತ್ತು ಕ್ಲಾಸ್ ಮಾಡ್ತ ಇರೋವಾಗ "ನಿಮ್ಮ ತಮ್ಮ ಫೋನ್ ಮಾಡಿದ್ದಾರೆ" ಅಂತ ಕೊಲಿಗ್ ಹೇಳಿದ್ರು. ಕ್ಲಾಸ್ ಬಿಟ್ಟು ಬಂದು ಫೋನಿಗೆ ಕಿವಿಕೊಟ್ಟಾಗ ನನ್ನ ತಮ್ಮ ನಿಧಾನವಾಗಿ ದುಃಖದಿಂದಲೇ "ಲಂಕೇಶ್ ಹೋಗಿಬಿಟ್ರು" ಅಂದ. ನಂಬದ ನಾನು "ನಿಜಾನಾ" ಅಂದೆ. ನಿಜ ಅಂದ. ನನ್ನ ತಮ್ಮ, ತಂಗಿ, ನಾನು ಲಂಕೇಶ್ ಅವರನ್ನು ಬರಹದ ಮೂಲಕ ಆಪ್ತವಾಗಿಸಿಕೊಂಡಿದ್ದವರು. ಆತ ನಿಜ ಅಂದ್ಮೇಲೆ ಮಾತಾಡ್ಲಿಕ್ಕೆ ಆಗಲಿಲ್ಲ, ಕೈಕಾಲೆಲ್ಲಾ ಸುಸ್ತಾಗಿ ಕುಸಿದು ಹೋಗುವಂತಾಯ್ತು. ಅಲ್ಲಿಂದ ಹೇಗೋ ಸಾವರಿಸಿಕೊಂಡು ರೂಮ್ ಸೇರಿದೆ. ಎಂಥದೋ ವೇದನೆ, ತಳಮಳ. ಲಂಕೇಶ್ ಸರ್ ಇಲ್ಲದೇ ಇರೋದನ್ನ ನೆನಸಿಕೊಂಡಾಗೆಲ್ಲ ದುಃಖ ಹೆಚ್ಚಾಗ್ತಿತ್ತು.


ಲಂಕೇಶರ ಪತ್ರಿಕೆಗೆ ಕಾಯುತ್ತಿದ್ದ ನನ್ನನ್ನು ಲಂಕೇಶ್ ಸಾವು ದಿಗ್ಭ್ರಾಂತವಾಗಿಸಿತ್ತು. ಮುಂದಿನ ವಾರಗಳಲ್ಲಿ ಯಾವ ಪತ್ರಿಕೇನ ನಿರೀಕ್ಷಿಸ್ತ ಕಾಯೋದು? ಲಂಕೇಶರ ಬರಹಗಳಿಲ್ಲದ ಪತ್ರಿಕೆ ಇನ್ನಿಲ್ಲ, ಪತ್ರಿಕೆಯ ಬೆಚ್ಚನೆಯ, ಆತ್ಮೀಯ ಸ್ಪರ್ಶ ಇಲ್ಲ ಎಂಬ ಮಾತು ಮತ್ತೆ ಮತ್ತೆ ಕಾಡ್ತ ದುಃಖ ಹೆಚ್ಚಾಗ್ತಲೇ ಇತ್ತು, ಇಂತಹ ತೊಳಲಾಟದಲ್ಲೇ ಮೂರು ದಿನ ಕಳೀತು. ಜನವರಿ 28ನೇ ತಾರೀಖು ನನ್ನ ತಮ್ಮ ಫೋನ್ ಮಾಡ್ದ, "ನಮ್ಮ ಮುದ್ದು ತಂಗಿ ಯಶೋಧ ನಮ್ಮನ್ನು ಬಿಟ್ಟು ಹೊರಟೋದ್ಲು" ಅಂತ ಹೇಳ್ತಿರುವಾಗ್ಲೆ "ಇಲ್ಲ" ಅಂತ ಕೂಗಿ ಕುಸಿದುಬಿಟ್ಟೆ. ಗೆಳೆಯ ಕೆಂಪ್ಸ್ ಹೇಗೋ ಸಾವರಿಸಿಕೊಂಡು ಊರಿಗೆ ಕರೆತಂದ. ನನ್ನ ಉಮ್ಮಳಿಕೆ ನಿಂತೇ ಇರಲಿಲ್ಲ.

ನಾನು ಊರಿಗೆ ಬಂದಾಗ ನನ್ನ ಪುಸ್ತಕ, ಬಟ್ಟೆಗಳ ಬ್ಯಾಗಿಂದ ಲಂಕೇಶ್ ಹುಡುಕಿ ತೆಗೆದು ಪ್ರೀತಿ, ಉತ್ಸಾಹದಿಂದ ಕಣ್ಣರಳಿಸಿ ಓದ್ತಿದ್ದ ನನ್ನ ತಂಗಿ ಆ ದಿನ ನಿಸ್ತೇಜವಾಗಿದ್ಲು. ಮುಖದ ಮೇಲಿನ ಬಟ್ಟೆ ಸರಿಸಿ ಅವಳ ಗಲ್ಲ ಹಿಡಿದು "ನಿನ್ನ ಪ್ರೀತಿಯ ಪತ್ರಿಕೆ ತಂದಿದ್ದೇನೆ, ಎದ್ದೇಳು ಪುಟ್ಟಿ" ಅಂತ ಅಲುಗಾಡಿಸಿದೆ. ಮತ್ತೆ ಅತೀವ ದುಃಖದಿಂದ ಪ್ರಜ್ಞೆ ಕಳೆದುಕೊಂಡ ನಾನು ಕಣ್ ಬಿಟ್ಟಾಗ, ಬ್ಯಾಗು, ಬ್ಯಾಗಲಿದ್ದ ಮೇಷ್ಟ್ರು ಬರೆದ ಕೊನೆ ಬರಹದ ಪತ್ರಿಕೆ ಸುಮ್ಮನೆ ಮಲಗಿತ್ತು, ಮೇಷ್ಟ್ರ ಕೊನೆ ಬರಹಾನ ಅವ್ಳು ಓದ್ಲೇ ಇಲ್ಲ...


ಕಾಯಿಲೆ ತಾಯಿಯನ್ನು ನಾನು ನೋಡ್ಕೋತೀನಿ ಅಂತ ಜವಾಬ್ದಾರಿ ಹೊತ್ತು ಅಕ್ಕರೆಯಿಂದ ತಾಯಿನ ಸಾಕ್ತಿದ್ದ ತಂಗಿ, ನನ್ನನ್ನು ಕೆಲಸಕ್ಕೆ ಕಳ್ಸಿ ಸ್ಥೈರ್ಯ ತುಂಬಿದವಳು.

ತಮ್ಮ ಬರಹದ ಮೂಲಕ ನಮ್ಮಲ್ಲಿ ರೋಮಾಂಚನ, ಹೊಸ ಯೋಚನಾಕ್ರಮ ಮೂಡಿಸಿದ್ದ ಅಕ್ಕರೆಯ ನಮ್ಮ ಮೇಷ್ಟ್ರು ಮತ್ತು ನನ್ನ ತಂಗಿಯನ್ನು ಕಳೆದುಕೊಂಡ ಜನವರಿ 25 ಮತ್ತು 28ರ ದಿನಾಂಕಗಳು ನನ್ನ ಬದುಕಿನ ಮಹಾನ್ ದುಃಖದ, ಕಾಡುವ ಮರೆಯಲಾಗದ ಬೆಂಬತ್ತಿ ಕಾಡುವ ದಿನಗಳು.

**-ರಾಮಚಂದ್ರ ಸಿ. ನೇರಳಘಟ್ಟ**



## ಗಡವ ಬೆಕ್ಕಿನ ಪ್ರಸಂಗ



ಮಲೆನಾಡಿನ ತಪ್ಪಲಿನ ಒಂದು ಸಣ್ಣ ಹಳ್ಳಿ ನಮ್ಮೂರು. ಆಗಿನ್ನೂ ವಿದ್ಯುತ್ ನಮ್ಮ ಕೊಂಪೆಗೆ ಬರದ ದಿನಗಳವು. ನಮ್ಮ ಮನೆಯ ಎದುರುಗಡೆ ಕಪ್ಪಗೆ ಮಲಗಿರುವ ರಾಷ್ಟ್ರೀಯ ಹೆದ್ದಾರಿ. ಅದರ ಆಚೆ ದಟ್ಟಕಾಡು. ಮನೆಯ ಹಿಂಬದಿಯೂ ದಟ್ಟಕಾಡು. ಎಡಬದಿ, ಬಲಬದಿಗೆ ಒಂದೊಂದು ಫರ್ಲಾಂಗು ದೂರದಲ್ಲಿ ಒಂದೊಂದು ಮನೆ. ಸೂರ್ಯ ಮುಳುಗುತ್ತಿದ್ದಂತೆ ನಿಶ್ಯಬ್ದದ ಭಯ.

ಆ ದಿನ ರಾತ್ರಿ, ಎಂದಿನಂತೆ ತಿಂದುಂಡ ನಾನು, ನಮ್ಮ ತಮ್ಮಂದಿರು, ನನ್ನ ಅಣ್ಣ ಹೊರಗಿನ ಚಾವಡಿಯಲ್ಲಿ ಮಲಗಿದೆವು. ಸುಮಾರು 11ರ ಸಮಯದಲ್ಲಿ ವಸ್ತುವೊಂದು ಮೈಮೇಲೆ ಓಡಿದ, ತಿವಿದ ಅನುಭವವಾಗಿ ಗಕ್ಕನೆ ಎಚ್ಚರವಾಗಿ ಕುಳಿತೆ. ಓಡಿದ ವಸ್ತು ದಡಕ್ಕನೆ ಗೋಡೆಗೆ ಡಿಕ್ಕಿ ಹೊಡೆಯಿತು. ಅಲ್ಲಿಂದ ಮತ್ತೊಮ್ಮೆ ತಮ್ಮಂದಿರ ಮೇಲೆ ಓಡಿತು. ನಾವೆಲ್ಲಾ ಎದ್ದು ಭಯದಿಂದ ಕಿಟಾರನೆ ಕಿರುಚಲಾರಂಭಿಸಿದೆವು. ವಸ್ತು ಮಧ್ಯದ ಕೋಣೆಯಲ್ಲಿ ಮಲಗಿದವರಲ್ಲಿಗೆ ಓಡಿತು. ಅಲ್ಲಿಯೂ ಡಿಕ್ಕಿ, ಜಗಿತ, ಕಿರುಚಾಟ. ಬೆಂಚಿನ ಮೇಲೆ ಮಲಗಿದ್ದ, ಪಾರ್ಶ್ವವಾಯು ಪೀಡಿತವಾದ ನಮ್ಮಜ್ಜಿ ವಿಕಾರವಾಗಿ ಕಿರುಚಿಕೊಂಡು, ದೊಪ್ಪನೆ ನೆಲದ ಮೇಲೆ ಬಿದ್ದ ಸದ್ದು. ಸ್ವಲ್ಪ ಹೊತ್ತಲ್ಲಿ ಮತ್ತೆ ಆ ಪ್ರಾಣಿ ಹೊರಚಾವಡಿಯಲ್ಲಿ ದಾಳಿ.

ಅಷ್ಟರಲ್ಲಿ ನಮ್ಮ ಅಣ್ಣ ದೀಪ ಹೊತ್ತಿಸಿದನು. ನೋಡುತ್ತೇವೆ, ದೊಡ್ಡ ಗಡವ ಬೆಕ್ಕು, ಮೂತಿಯನ್ನು ನಮ್ಮ ದಿನ ನಿತ್ಯ ಹಾಲು ತರುವ ವಾಟಗೆ ಸಿಕ್ಕಿಕೊಂಡಿದೆ. ಕಣ್ಣು ಕಾಣಿಸುತ್ತಿಲ್ಲ. ಬೆಕ್ಕು ಪೂರ್ತಿ ಗಾಭರಿಗೊಂಡಿದೆ. ವಾಯುವೇಗದಿಂದ ಅತ್ತಿಂದಿತ್ತ, ಇತ್ತಿಂದತ್ತ ಓಡುತ್ತಿದೆ. ನಮಗೆ ಡಿಕ್ಕಿ, ಗೋಡೆಗೆ ಡಿಕ್ಕಿ, ಎದ್ದು ಬಿದ್ದು ಸಾವರಿಸಿ ಓಡುತ್ತಿದೆ. ಕೊನೆಗೆ ನಮ್ಮ ಅಣ್ಣ ದೊಣ್ಣೆಯಲ್ಲಿ ಒಂದೇಟು ಹೊಡೆದ. ಬೆಕ್ಕು ಸತ್ತಂತೆ ಬಿದ್ದುಬಿಡ್ತು, ಅವನೇ ಅದನ್ನೆತ್ತಿ ಅಂಗಳಕ್ಕೆಸೆದು ಬಾಗಿಲು ಭದ್ರಪಡಿಸಿದ. ಆನಂತರ ಬಿದ್ದ ಅಜ್ಜಿಯ ಶುಶ್ರೂಷೆ ನಡೆಯಿತು.

ಆ ರಾತ್ರಿ 10 ನಿಮಿಷಗಳ ಕಾಲ ಮನೆ ರಂಪಾಟ, ಕಿರುಚಾಟ, ಗದ್ದಲದಿಂದ ತುಂಬಿ ಹೋಯಿತು. ನಾವು ದೀಪ ಹೊತ್ತಿಸುವ ಮೊದಲೇ ಬೆಕ್ಕು ಹಾಲಿನ ವಾಟಿಯೊಂದಿಗೆ ಪರಾರಿಯಾಗಿದ್ದರೆ... ಅದೊಂದು ದೊಡ್ಡ ಭೂತದ ದೆವ್ವದ ಕತೆಯಾಗುತ್ತಿತ್ತು. ಆದರೆ ಈಗ ನನಗಿದು ಕಾಡುವ ನೆನಪು. ಹಾಗೂ ನನ್ನ ಮಕ್ಕಳಿಗೆ ಒಳ್ಳೆಯ ಮನರಂಜನೆಯ ಕಥೆ, ನಿಮಗೆ?

**- ಸುಧಾ ಯು.ಪಂಡಿತ್, ಬೆಂಗಳೂರು**





## ಮನುಷ್ಯನ ಹೊಲಿಗೆ ಇನ್ನು ಜೀವಂತ!


ಬಿಡತನ ಮತ್ತು ಅಸ್ಪೃಶ್ಯತೆ ನನ್ನ ಪಾಲಿಗೆ ಬಂಡವಾಳವಾಗಿತ್ತು, ಮನೆಯಿಲ್ಲದೆ ಮರದಡಿಯಲ್ಲಿ ವಾಸವಾಗಿದ್ದಾಗ ಮರದಡಿಯಲ್ಲಿ ನಾನು ಹುಟ್ಟಿರುವುದೆಂದು ಹೇಳುತ್ತಿದ್ದರು. ಊರಲ್ಲಿ ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ನನಗೆ ತರಟೇತಿಯಾಗುತ್ತಿತ್ತು, ಅನಕ್ಷರಸ್ಥ ಕುಟುಂಬವಾದ ನಮ್ಮಲ್ಲಿ ನಾನು ಮತ್ತು ನನ್ನ ಅಣ್ಣ ಶಾಲೆಗೆ ಹೋಗುವುದು ಪ್ರಥಮವಾಗಿತ್ತು, ಶಾಲೆಯಲ್ಲಿ ಅಸ್ಪೃಶ್ಯತೆ ಇಲ್ಲ ಎಂದು ನಂಬಿದ್ದೆವು. ಆದರೆ ವಾಸ್ತವವಾಗಿ ಊರಿನದೇ ಪ್ರತಿಬಿಂಬ ಶಾಲೆಯಲ್ಲಿತ್ತು, ಆಟಪಾಠದಲ್ಲಿ, ನೀರು ಕುಡಿಯುವುದರಲ್ಲಿ ಪ್ರತ್ಯೇಕತೆಯಿತ್ತು. ನಾವು ಆರಾಮವಾಗಿರಲೆಂದೋ, ಅಥವಾ ನಮ್ಮಲ್ಲಿ ಬಹಳ ಪ್ರೀತಿಯಿಂದಲೋ ನಮ್ಮಿಬ್ಬರನ್ನು ಒಂದು ಬೆಂಚಿನಲ್ಲಿ ಕುಳ್ಳಿರಿಸುತ್ತಿದ್ದರು. ಇತರ ಮಕ್ಕಳು ಕಷ್ಟಪಟ್ಟು ಕುಳಿತುಕೊಂಡರೂ ನಮ್ಮೊಂದಿಗೆ ಕುಳಿತುಕೊಳ್ಳುತ್ತಿರಲಿಲ್ಲ.



ನಮ್ಮದು ಏಕೋಪಾಧ್ಯಾಯರಿದ್ದ ಶಾಲೆ. ಸರಕಾರದಿಂದ ನಮಗೆ ಹೊಸ ಬಟ್ಟೆ ಬಂದಿದೆಯೆಂದು ಮಾರನೆಯ ದಿನ ಬೆಳಿಗ್ಗೆ ಮೇಷ್ಟ್ರು ಮನೆಗೆ ಬರಹೇಳಿದರು. ಅವರ ಅಣ್ಣ ಟೈಲರಾಗಿದ್ದು, ಮನೆಯಲ್ಲಿಯೇ ಅಂಗಡಿ ಇತ್ತು. ಅವರು ಜಾತಿಯಲ್ಲಿ ಬ್ರಾಹ್ಮಣರು. ಸುಮಾರು 4 ಕಿ.ಮೀ. ದೂರದಲ್ಲಿದ್ದ ಅವರ ಮನೆಯನ್ನು ಅರಮನೆಯೆಂದೇ ಕರೆಯುತ್ತಿದ್ದರು.

ಊರಿನವರ ಹಳೆಯ ಬಟ್ಟೆಗಳು ನಮ್ಮ ಪಾಲಿನ ಉಡುಪಾಗಿತ್ತು, ಅದು ನಮ್ಮ ಸೈಜಿಗೆ ಹೊಂದಿಕೊಳ್ಳದೆ ಮೂರ್ನಾಲ್ಕು ಕಡೆ ಪಿನ್ನು ಚುಚ್ಚಿಸಿಕೊಂಡು ಹೋಗಬೇಕಾಗಿತ್ತು, ಇದರಿಂದ ಎಷ್ಟೋ ಸಲ ಮಕ್ಕಳ ಅಪಹಾಸ್ಯಕ್ಕೆ ಗುರಿಯಾಗುತ್ತಿದ್ದೆವು. ಹೊಸ ಬಟ್ಟೆ ಸಿಗುತ್ತದೆಂದು ತುಂಬಾ ಖುಷಿ ಪಟ್ಟೆವು. ಅಪರೂಪಕ್ಕೆ ಸ್ನಾನ ಮಾಡುವವರಾಗಿದ್ದರೂ ನಮ್ಮನ್ನು ಆ ದಿನ ತಂದೆಯವರು ಕೋಳಿ ಕೂಗುವಾಗಲೇ ಎಬ್ಬಿಸಿ ಸ್ನಾನ ಮಾಡಿಸಿದರು. ತಂಗಳನ್ನ ತಿನ್ನಿಸಿ ಕರೆದುಕೊಂಡು ಹೊರಟರು. ಹೊಸಬಟ್ಟೆಯ ಕನಸು ಕಾಣುತ್ತಾ ದಾರಿ ಸಾಗಿದ್ದೇ ಗೊತ್ತಾಗಲಿಲ್ಲ.

ಮನೆಯ ಎದುರು ನಿಂತುಕೊಂಡಿದ್ದ ನಮ್ಮಲ್ಲಿಗೆ ಮೇಷ್ಟ್ರು ಬಂದರು. ಅವರು ಕಾಣುತ್ತಲೇ ನಾವೆಲ್ಲ ದೇವರಿಗೆ ಕೈ ಮುಗಿಯುವ ಹಾಗೆ ನಮಸ್ಕರಿಸಿದೆವು. ತೆಂಗಿನ ಮರದ ಬುಡದಲ್ಲಿ ಕುಳಿತುಕೊಳ್ಳಲು ಹೇಳಿ "ಅಣ್ಣ ಪೂಜೆ ಮಾಡುತ್ತಿದ್ದಾರೆ. ನೀವು ಇಲ್ಲೇ ಕೂತಿರಿ" ಎಂದರು. ಬಿಸಿಲು ಹೋಗಿ ನೆರಳು ಬಂತು, ಮತ್ತೆ ಬಿಸಿಲು ಬಂದರೂ ನಾವು ಅಲ್ಲೇ ಕಾದು ಕೂತೆವು. ಈ ಪೂಜೆ ಬಹಳ ಹೊತ್ತು ಹಿಡಿಯುತ್ತದೆ ಎಂದು ಆಗಲೇ ಗೊತ್ತಾದದ್ದು.



ಅಷ್ಟರಲ್ಲಿ ಮಾಸ್ತ್ರ ಅಣ್ಣ ಟೈಲರ್ ಬಂದರು. ಅವರನ್ನು ದೂರದಲ್ಲಿ ನೋಡುತ್ತಲೇ ನಾವು ಎದ್ದು ನಿಂತು ಕೈ ಮುಗಿದೆವು. "ನೀವು ಇಲ್ಲೇ ಇರಿ, ಕರೆಯುತ್ತೇನೆ" ಎಂದು ಹೇಳಿ ಅಂಗಡಿಗೆ ಹೋದರು. ಮನೆಯಲ್ಲಿಯೇ ಒಂದು ಭಾಗ ಟೈಲರ್ ಅಂಗಡಿಯಾಗಿತ್ತು, ಆವಾಗಲೇ ಅಲ್ಲಿ ಸ್ಪರ್ಶ ಜಾತಿಯ ನಮ್ಮ ಕ್ಲಾಸಿನ ಮಕ್ಕಳು ಬಂದಿದ್ದರು. ಅವರ ಅಳತೆ ತೆಗೆಯುವುದನ್ನು ನಾವು ದೂರದಿಂದಲೇ ನೋಡುತ್ತಿದ್ದೆವು. ತಂದೆಯವರು ಬುಟ್ಟಿ ನೇಯ್ದು ಕೊಡುವುದರಿಂದ ಊರಿಗೆ ಪರಿಚಯಸ್ಥರು. ಅಂಗಡಿಯ ಬಾಗಿಲಿಗೆ ಬಂದ ಟೈಲರ್ ಭಟ್ರು ತಂದೆಯನ್ನು ಕರೆದು "ಏನು ಮಹಾರಾಯ? ಇದು ನಿನ್ನ ಮಕ್ಕಳಾ?" ಎಂದು ಕೇಳಿದರು.

ತಂದೆಯವರು ಕೂಡಲೇ ಎದ್ದು ನಿಂತು ಮತ್ತೆ ಕೈಮುಗಿದು ವಿಧೇಯತೆ ತೋರಿಸಿದರು. ನಮ್ಮನ್ನು ಎದ್ದು ನಿಲ್ಲಲು ಹೇಳಿದರು. ತಾಯಿಯೂ ಎದ್ದು ನಿಂತರು. ಅವರಿಗೆ ಅಗತ್ಯ ಬೇಕಾದ ಬುಟ್ಟಿ, ಕುಕ್ಕೆ ಹೆಣೆದು ಕೊಡಲು ಹೇಳಿದರು. ನಮ್ಮನ್ನು ತೆಂಗಿನ ಬುಡದಲ್ಲಿಯೇ ನೋಡಿ "ನೀವಿನ್ನು ಹೋಗಬಹುದು, ಮಕ್ಕಳನ್ನು ನೋಡಿದ್ದೇನೆ. ಹೊಲೆದು ಕೊಡುತ್ತೇನೆ" ಎಂದು ಹೇಳಿದರು.

ನಾನು ನಮ್ಮಣ್ಣನ ಮುಖವನ್ನು, ಅವನು ನನ್ನ ಮುಖವನ್ನು ನೋಡಿದೆವು. ತಾಯಿಯನ್ನು ನೋಡಿದೆವು. ತಂದೆಯವರಿಗೆ ಅರ್ಥವಾಗಿತ್ತು. ನಾವು ನಿರಾಶೆಗೊಂಡು ಉಗುಳು ನುಂಗುತ್ತ ಹೊರಟೆವು. ಆಗ ಪ್ರತಿ ಹೆಜ್ಜೆಯೂ ಭಾರವಾಯ್ತು.


ಅವರ ಕಣ್ಣಳತೆ, ನಮ್ಮ ಕಣ್ಣೀರು ಯಾವುದೂ ಅರ್ಥವಾಗಲಿಲ್ಲ. ಅವರು ಹೊಲೆದ ಬಟ್ಟೆ ನಮ್ಮ ಸೈಜಿಗೆ ಹೊಂದಿಕೊಳ್ಳಲೇ ಇಲ್ಲ, ಅವರು ನಮ್ಮನ್ನು ನೋಡಿದರೋ, ತಂದೆಯನ್ನು ನೋಡಿದರೋ, ಅಥವಾ ತೆಂಗಿನ ಮರದ ಅಳತೆ ನೋಡಿದರೋ ಎಂದು ಗೊತ್ತಾಗಲಿಲ್ಲ. ಹೊಲೆದ ಬಟ್ಟೆ ಹರಿದು ಹೋದರೂ ಮನಸ್ಸಿನ ಹೊಲಿಗೆ ಇನ್ನೂ ಜೀವಂತವಾಗಿಯೇ ಇದೆ. ಅದು ಕಾಡುತ್ತಲೇ ಇದೆ.

-ಮುತ್ತಡಿ ಕಾಯರ್‌ಪಳಿಕೆ,
ಬಂಟ್ವಾಳ

## ಎದೆಯಲ್ಲಿ ಉರಿದ ಉತ್ಸ

ಸ್ಮಶಾನ ತಲುಪಿದಾಗ ಸಂಜೆಯಾಗಿತ್ತು.


ಅಜ್ಜಿಯನ್ನು ಮಟ್ಟಸವಾಗಿ ಒಪ್ಪದ ಕಟ್ಟಿಗೆ ಮೇಲೆ ಮಲಗಿಸಲಾಯ್ತು, ಕೆಂಪು ಸೀರೆ, ಬಿಳಿ ಕುಪ್ಪಸ ಸೆಳಿದ ಮೇಲೆ ಅಜ್ಜಿ ಪೂರ್ಣ ಚಿತ್ರದ. ಮುದುರಿದ್ದ ಹಣ್ಣು ತೊಗಲಿನ ಮೂಳೆ ಚಕ್ಕಳದ ಅಜ್ಜಿ ಒಂದೇ ಹಿಡಿಯಷ್ಟಾಗಿದ್ದಳು. ಹಕ್ಕಿಗೂಡಿನಷ್ಟಿದ್ದ ಬತ್ತಿದ ಎದೆಯ ಮೇಲೆ ಧಾಂಡಿಗನೊಬ್ಬ ಭಾರೀ ಕಟ್ಟಿಗೆ ದೊಡ್ಡೆಯೊಂದನ್ನು ಧಕ್ಕನೆ ಕುಕ್ಕಿದಂತೆ ಇಟ್ಟ. ಅಜ್ಜಿಯ ಇಡೀ ದೇಹ ಅಲುಗಿ ಮತ್ತಷ್ಟು ಹಿಡಿಯಾಯ್ತು, ಅಜ್ಜಿಗೆ ಅದೆಷ್ಟು ನೋವಾಯ್ತೊ.. ಎಂದೆನಿಸಿ ನನಗೆ ಆ ಧಾಂಡಿಗನ ಮೇಲೆ ಅಸಾಧ್ಯ ಸಿಟ್ಟು ಬಂತು... ಸೌದೆ ಒಟ್ಟುತ್ತಲೆ ಇದ್ದರು. ಇದೀಗ ಅಜ್ಜಿ ಸೌದೆಯ ಸಡುವಿನ ಸೀಳಿನಿಂದ ಮಾತ್ರವೇ ಕಾಣುತ್ತಿದ್ದಳು.



ಅಜ್ಜಿಯ ತೋಳಿನ ಹಣ್ಣುದೊಗಲಿನ ನೆರಿಗೆಗಳನ್ನು ನೇವರಿಸುತ್ತ ದಿನವೂ ಸಂಜೆ ಅವಳ ಮಡಿಲಲ್ಲಿ ಕೂರುವ ಪರಿಪಾಠ ನನಗೆ. ಯಾವುದೋ ಹಟದಲ್ಲಿ ಕೈಯಲ್ಲಿದದ್ದನ್ನು ಬಿಸಾಕಿ, ಅಜ್ಜಿಯ ಮುಂಗೈಗೆ ಗಾಯ ಮಾಡಿದ್ದೆ. ಅದು ದಿನಗಟ್ಟಲೆ ಮಾಯದೆ ಇದೀಗಷ್ಟೇ ಹಕ್ಕಳಿಗಟ್ಟಿತ್ತು, ನನ್ನ ಹಟ, ಮುಂಗೋಪ, ಸಿಟ್ಟನ್ನು ನೆನಪಿಸುವಂಥ ಒಣಹಕ್ಕಳಿಯೊಳಗೆ ನೋವು ಇನ್ನೂ ಹಸಿ ಹಸಿ ಇದ್ದಿತೇನೋ... ನನಗೆ ಸತ್ತೇ ಹೋಗುವಷ್ಟು ಪಶ್ಚಾತ್ತಾಪ.. ಗಂಟಲಲ್ಲಿ ಒತ್ತಿಬರುವ ಅಳು... ಮಾತೇ ಆಡಲಾಗದಷ್ಟು ದುಃಖ, ಸಂಕಟ, ತಳಮಳ... ಸಾಯುವ ಮುನ್ನಾದಿನದವರೆಗೂ ಕ್ಷೌರಿಕ ಗುರಪ್ಪನಿಗೆ ದಿನಾ ಮಧ್ಯಾಹ್ನ ಶಾಪ ಹಾಕಿ ಸ್ನಾನಕ್ಕಿಳಿಯುತ್ತಿದ್ದಳು. ಹೇಳಿದ ದಿನವಂತೂ ಆತ ಬಂದದ್ದೇ ಇಲ್ಲ, ಎರಡು ತಿಂಗಳ ಬಿಳಿ-ಬಿಳಿ ತಲೆಗೂದಲು ಒಂದೂವರೆ ಅಂಗುಲ ಬೆಳೆದು ಹೊದ್ದ ಕೆಂಪು ಸೀರೆ ಸೆರಗಿಂದ ಗುಂಡುಸೂಜಿಗಳಂತೆ ಹೊರ ಇಣುಕಿ ಸ್ಪಷ್ಟ ಗೋಚರಿಸುತ್ತಿದ್ದವು. ಗುರಪ್ಪನಿಗೆ ಬರಹೇಳು ಎಂದು ನನಗೆ ದಿನವೂ ಪದೆ ಪದೆ ನೆನಪಿಸುತ್ತಿದ್ದಳು.

ಅಜ್ಜಿ ಸಾಯುವ ಮುನ್ನಾದಿನ "ಗುರಪ್ಪನನ್ನು ಕರೆದುಬಂದಿದ್ದೇನೆ" ಎಂದು ಸುಳ್ಳು ಹೇಳಿ ಅಜ್ಜಿಯನ್ನ ನಂಬಿಸಿ ಆಟಕ್ಕೆ ಓಡಿದ್ದೆ. ಹೀಗಾಗಿ ಗುರಪ್ಪನೆಂಬುವ ಕೊನೆಗೂ ಬರಲೇ ಇಲ್ಲ, ಬೆಳೆದ ಬೆಳ್ಳಗಿನ ತಲೆಗೂದಲು ಕಟ್ಟಿಗೆ ಮಧ್ಯೆ ತೂರಿ ಕಾಣುತ್ತಿತ್ತು.

ಸಂಪ್ರದಾಯ, ಪದ್ಧತಿಯಲ್ಲ ಪೂರೈಸಿಯಾದ ಮೇಲೆ ಕಟ್ಟಿಗೆಗೆ ಬೆಂಕಿ ಇಟ್ಟದ್ದೆ. ಜ್ವಾಲೆ ನಿಧಾನ ವ್ಯಾಪಿಸಿತ್ತು. ಮೇಲೆ ಸುರಿವ ಸೀಮೆಎಣ್ಣೆ ಉಂಡು ಧಗಿಧಗಿಸುವ ಬೆಂಕಿ ಅಜ್ಜಿಗೆ ತೀರ ಹತ್ತಿರಕ್ಕೆ ಬಂದಾಗ ಅಳು ತಾಳಲಾಗದೇ ಬಿಕ್ಕಿದ್ದೆ.



ಅಜ್ಜಿಯ ಮೆತ್ತನೆ ತೋಳುಗಳಿಗೀಗ ಬೆಂಕಿ ತಗುಲಿ, ಕಂದೀ ಬಣ್ಣದ ರಸದಂತಹದೇನೋ ತಟತಟನೆ ತೊಟ್ಟಿಕ್ಕುತ್ತಿತ್ತು.... ನಾ ಮಾಡಿದ ಗಾಯದ ಹಕ್ಕಳಿ ಕೂಡಾ ಹೀಗೂ ಕರಗಿ ಇಳಿದು ಹೋಯ್ತೇನೋ... ಆಮೇಲೆ ಬೆಳ್ಳಗೆ ಅಡ್ಡಡ್ಡ ಬೆಳೆದ ಬಿಳಿ ತಲೆಗೂದಲನ್ನು ಪುರಪುರನೆ ಒಂದೇಟಿಗೆ ಸುಟ್ಟು, ತಲೆಗೆ ಆಡರಿತ್ತು ಜ್ವಾಲೆ... ಆಗ ಹಿರಿಯರೊಬ್ಬರು "ತಲೆ ಒಡೆದ ಮೇಲಷ್ಟೇ ಬನ್ರೋ..." ಎಂಬ ಮೇಲೆಚ್ಚರಿಕೆ ನೀಡಿ ನನ್ನ ಕರೆದುಕೊಂಡು ನಡೆದರು.

ಹಿಂದೆ ತಿರುಗಿ ನೋಡಬೇಕೆನ್ನಿಸಿತು. ಹಾಗೆ ನೋಡಬಾರದೆನ್ನುವ ಸಂಪ್ರದಾಯದ ಕಟ್ಟಪ್ಪಣೆ, ತುಂಬ ಕ್ರೌರ್ಯದ್ದು ಎನ್ನಿಸಿತು. ನಮ್ಮ ಮನೆಯ ಮಾಳಿಗೆಯಿಂದ ಸ್ಮಶಾನ ಕಾಣುತ್ತದೆಂಬ ಅಂತ ನೆನಪಾಗಿ ಮಾಳಿಗೆಗೆ ಧಾವಿಸಿದ್ದೆ.

ಆಗ ಮಧ್ಯರಾತ್ರಿ. ಊರೆಲ್ಲ ನಿಶ್ಶಬ್ದ. ಅಲ್ಲಲ್ಲಿ ನಾಯಿ, ಗೂಬೆಗಳ ಕೂಗು. ದೂರದಲ್ಲಿ ಸ್ಮಶಾನ. ಕಗ್ಗತ್ತಲೆ. ಅಲ್ಲೀಗ ಉರಿವ ಜ್ವಾಲೆ ಇರದೆ ಬರೀ ನಿಗಿ-ನಿಗಿ ಕೆಂಡಗಳ ರಾಶಿ. ಬೀಸುವ ಸಣ್ಣ ಗಾಳಿಗೂ ಏಳುತ್ತಿದ್ದ ಕಿಡಿಗಳು... ಮತ್ತೆ ನಿಗಿ ನಿಗಿ..

ನೆನ್ನೆಯಷ್ಟೇ ಇದ್ದ ಅಜ್ಜಿ ಈಗಲ್ಲಿ ಕೆಂಡಗಳ ಮಧ್ಯೆ ಬರೀ ಬೂದಿ ...ದೆನ್ನಿಸಿದಾಗ ಅಳು ಒತ್ತರಿಸಿ ಬರುತ್ತಿತ್ತು. ಇದಾಗಿ ಎಷ್ಟೋ ವರ್ಷಗಳೇ ಕಳೆದರೂ ಸುಟ್ಟು ಕರಕಲಾಗುತ್ತಿದ್ದ ಅಜ್ಜಿಯ ನೆನಪು ಇಂದಿಗೂ ಎದೆಯಲ್ಲಿ ...

ರಾಮಚಂದ್ರ ಎಸ್. ಕುಲಕರ್ಣಿ

## ಅಪರಾಧವೇ ಅಧಿಕಾರವಾದಾಗ ನಾವೇ ನಕ್ಸಲೈಟರು!

ಅದೊಂತರಾ ವಿಚಿತ್ರ ಪರಿಸ್ಥಿತಿ. ಅಸಹಾಯಕತೆಯ ಬದಲು ಆಕ್ರೋಶ ಉಕ್ಕುತ್ತಿತ್ತು, ದುಃಖವಾಗುವ ಬದಲು ಉತ್ಸಾಹ ಚಿಲುಮೆ ಒಡೆದಿತ್ತು, ನಮ್ಮಲ್ಲಿನ ಪ್ರಾಮಾಣಿಕತೆ, ಕಾಳಜಿ, ಆತ್ಮವಿಶ್ವಾಸ, ಕರಪತ್ರಗಳು, ಮನಸ್ಸಲ್ಲಿದ್ದ ವಿಚಾರಗಳು ನಮ್ಮನ್ನು ಸಾಮಾನ್ಯ ಜನರ ಬಳಿಗೆ ಕೊಂಡೊಯ್ಯಲು ಹಪಹಪಿಸುತ್ತಿದ್ದವು.

ಅವತ್ತು ಜನವರಿ ಹದಿನಾಲ್ಕನೇ ತಾರೀಖು, ನಾಲ್ಕು ಗಂಟೆ. ತೀರ್ಥಹಳ್ಳಿಯಲ್ಲಿ ಬಸ್ಸಿಳಿದು ತುಂಗ-ಭದ್ರ ನದಿಗಳ ಉಳಿವಿನ ಕಾರ್ಯಕ್ರಮದ ವಿವರಗಳನ್ನು ನೀಡಲು ತುಂಗಾ ತೀರದ ಜನರ ಬಳಿ ಬಂದಿದ್ದೆವು. ನಮ್ಮ ಜತೆಯಲ್ಲಿದ್ದದ್ದು ಸಿಂಧನೂರಿನ ಮೊಯಿನುದ್ದೀನ್, ನಾಗರಾಜ್, ಮಂಡ್ಯದ ಸರಳ ಮತ್ತು ಕಮಲ. ಕರ್ನಾಟಕದ ಒಂದೊಂದು ಮೂಲೆಯಲ್ಲಿದ್ದ ನಮ್ಮನ್ನು ಒಗ್ಗೂಡಿಸಿದ್ದು ತುಂಗ-ಭದ್ರ ಉಳಿಸಿ ಹೋರಾಟದ ಒಕ್ಕೂಟ. ಸಂಜೆ ಏಳೂವರೆ ಆಷ್ಟೊತ್ತಿಗೆ ನಮ್ಮನ್ನ ಹುಡುಕಿಕೊಂಡು ಬಂದವರು ತೀರ್ಥಹಳ್ಳಿ ಪೋಲೀಸರು. ಅವರ ದೃಷ್ಟಿಯಲ್ಲಿ ನಾವು ನಕ್ಸಲೀಯರು. ನಮ್ಮಲ್ಲಿದ್ದ ಬ್ಯಾಗು, ಕರಪತ್ರಗಳನ್ನು ವಶಪಡಿಸಿಕೊಂಡು ಠಾಣೆಯಲ್ಲಿ ರಾತ್ರಿಯವರೆಗೂ ವಿಚಾರಣೆಗೊಳಪಡಿಸಿದರು.

ನಿಮಗೆ ಸಾಕೇತ್ ರಾಜನ್ ಗೊತ್ತಾ? ಪಾರ್ವತಿ.... ಹಾಜೀಮಾ? ಪೋಲೀಸ್ ಅಧಿಕಾರಿ ಬಾಲರಾಜ್ ಪ್ರಶ್ನೆ. ತುಂಗ-ಭದ್ರಾ ನದಿ ಉಳಿಸುವ ಹೋರಾಟ ಮಾಡುತ್ತಿರುವವರು ನಕ್ಸಲೀಯರು ಎಂಬುದು ಅವರ ಅಭಿಪ್ರಾಯ. "ನಿಮ್ಮನ್ನು ನಕ್ಸಲೀಯರನ್ನಾಗಿ ಮಾಡುತ್ತಾರೆ. ಹಾಗಾಗಿ ನಿಮ್ಮನ್ನೆಲ್ಲಾ ನೋಡಿದರೆ ನನಗೆ ಹೊಟ್ಟೆ ಚುರ್ರೆನ್ನುತ್ತದೆ" ಮುಂದುವರೆದಿತ್ತು ಅವರ ಬುದ್ಧಿವಾದ. ನನ್ನೊಳಗೆ ಆಗ ಪ್ರಶ್ನೆಗಳ ಹುತ್ತ. ನದೀ ತೀರದ ಎರಡು ಕೋಟಿ ರೈತರ ಪ್ರಶ್ನೆ ಎತ್ತಿರುವ ಒಕ್ಕೂಟ ಮಾಡುತ್ತಿರುವ ತಪ್ಪಾದರೂ ಏನು? ಜನಸಾಮಾನ್ಯರ, ರೈತರ, ಕಾರ್ಮಿಕರ ಉಳಿವಿಗೆ ಹೋರಾಟ ಮಾಡುವುದು ತಪ್ಪೇ? ಇಷ್ಟಕ್ಕೂ ಈತನಿಗೆ ಈ ದೇಶದಲ್ಲಿರುವ ದರಿದ್ರರನ್ನು, ಬಡವರನ್ನು, ದಲಿತರನ್ನು ಕಂಡರೆ ಹೊಟ್ಟೆ ಚುರ್ರೆನ್ನುವುದಿಲ್ಲವೇ?

ಪೋಲೀಸರ ನಾಟಕದ ಮೊದಲನೆ ಭಾಗ ಮುಗಿದಿತ್ತು, ಯಥಾಪ್ರಕಾರ ನಮ್ಮ ಪ್ರಚಾರ ಜಾತಾ ತೀರ್ಥಹಳ್ಳಿಯ ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ, ಹಳ್ಳಿಗಳಲ್ಲಿ ನದೀ ಉಳಿವಿನ ಕುರಿತು ಜಾಗೃತಿ ಮೂಡಿಸುವ ಕೆಲಸ ಮುಂದುವರೆಸಿತ್ತು. ಸಂಜೆ ನಮ್ಮೂರು ಹುಲ್ಕೋಡಿಗೆ ಹೋದೆವು. ಅಷ್ಟರಲ್ಲಾಗಲೇ ನಮ್ಮೂರಿನ ಸುತ್ತ-ಮುತ್ತ ನಾನು ನಕ್ಸಲೀಯನಾಗಿದ್ದೆ. ಈ ವ್ಯವಸ್ಥೆಯ ವಿರುದ್ಧವಾಗಿ, ಪ್ರವಾಹದ ವಿರುದ್ಧ ಈಜುವವನಾಗಿ, ಅನ್ಯಾಯದ ವಿರುದ್ಧ ಬಡವರ-ಶೋಷಿತರ ಪರ ಧ್ವನಿ ಎತ್ತುವವನಾಗಿದ್ದೆ. ಊರಿನ ಶ್ರೀಮಂತರುಗಳಿಗೆ ನಾನು 'ಭಯೋತ್ಪಾದಕ'ನಾಗಿದ್ದೆ. ಬಡವರಿಗೆ ಆಶಾಕಿರಣವಾಗಿದ್ದೆ.

ರಾತ್ರಿ ಸುಮಾರಿಗೆ ಮಾಸಿದ ಪಂಚೆಯಲ್ಲಿದ್ದ ವ್ಯಕ್ತಿಯೊಬ್ಬರು ಮನೆಗೆ ಬಂದು ನನ್ನನ್ನು ಹೊರಗೆ ಕರೆದುಕೊಂಡು ಹೋಗಿ ಒಂದೇ ಉಸಿರಿಗೆ ಮಾತನಾಡಲಾರಂಭಿಸಿದರು.

"ಅಣ್ಣಾ" ಎಂದರು. "ದಯವಿಟ್ಟು ಹಂಗೆ ಕರಿಯಬೇಡಿ, ನಾನು ನಿಮಗಿಂತ ಚಿಕ್ಕವನು" ಎಂದೆ. ಅವರ ಕಣ್ಣಲ್ಲಿ ಸಣ್ಣ ನೀರಿನ ಪೊರೆ. "ನಮ್ಮ ಗ್ರಾಮದಲ್ಲಿ ಶ್ರೀಮಂತರೆಲ್ಲ ಸೇರಿಕೊಂಡು ಕೂಲಿಯಾಳುಗಳ ದರವನ್ನು ಇಳಿಸಲು ಮೀಟಿಂಗ್ ಕರೆದಿದ್ದಾರಂತೆ. ಇದರಿಂದಾಗಿ ಬಡವರಿಗೆ ತೊಂದರೆಯಾಗಿದೆ. ನೀವೇ ಅಂದರೆ ನಕ್ಸಲೀಯರೇ ಉಳಿಸಬೇಕು..." ಎಂಬುದು ಅವರ ಮಾತಿನ ಸಾರಾಂಶ.



"ನಾನು ನಕ್ಸಲೈಟ್ ಅಲ್ಲ, ಇಷ್ಟಕ್ಕೂ ನಾವು ಬಂದದ್ದು ತುಂಗಾ ನದಿ ವಿಚಾರ ಕುರಿತು. ಸಶಸ್ತ್ರ ಕ್ರಾಂತಿಯ ಕುರಿತು ನನಗೆ ಭಿನ್ನಾಭಿಪ್ರಾಯವಿದೆ" ಎಂದೇನೋ ಬಡಬಡಿಸಿದೆ. ಎದುರಿಗೆ ನಿಂತ ದಲಿತ ಅಣ್ಣನಿಗೆ ಅದ್ಯಾವುದೂ ಅರ್ಥವಾದಂತೆ ಕಾಣಲಿಲ್ಲ, ಆದರೆ ಅವರ ಕಣ್ಣೀರಿನಲ್ಲಿದ್ದ ಅಸಹಾಯಕತೆ, ಆಕ್ರೋಶ, ಶತಶತಮಾನಗಳಿಂದ ನಡುಬಗ್ಗಿಸಿ ದುಡಿದ ದೇಹದ ಭಂಗಿ ಎಲ್ಲವೂ ನನಗೆ ಅರ್ಥವಾಯಿತು. ಅವರು ದೂರದ ರಸ್ತೆಯ ತಿರುವಿನಲ್ಲಿ ಮರೆಯಾಗುವವರೆಗೂ ಸುಮ್ಮನೆ ನೋಡುತ್ತಾ ನಿಂತೆ.

ಅಪರಾಧವೇ ಅಧಿಕಾರವಾದಾಗ ನಾವು ನಕ್ಸಲೀಯರ ... ಕಟ್ಟಿಕೊಳ್ಳಬೇಕಾಗುತ್ತದೆ!

-ಪ್ರಶಾಂತ್ ಹುಲ್ಕೋಡ್,
ಶಿವಮೊಗ್ಗ

# ಒಬ್ಬ ತಾಯಿಯ ಅಕ್ಕರೆಯ ನೆನಪು

ನಮ್ಮೂರಿನಿಂದ ಒಂದೂವರೆ ಕಿಲೋಮೀಟರ್ ದೂರದ ಶ್ರೀ ನಂದಿಬಸವೇಶ್ವರ ದೇವಸ್ಥಾನದ ಬಳಿ ಪ್ರತಿವರ್ಷ ಸಂಕ್ರಾಂತಿಯಂದು ದನಗಳ ಜಾತ್ರೆ ನಡೆಯುತ್ತದೆ. ಸುಮಾರು ನಾಲ್ಕೈದು ವಾರಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ರೈತರು ತಮ್ಮ ದನ-ಕರುಗಳನ್ನು ಬದಲಾಯಿಸುವುದು, ಕೊಳ್ಳುವುದು, ಮಾರುವುದು ಸಾಮಾನ್ಯ. ಸಣ್ಣ ಹುಡುಗನಾಗಿದ್ದಾಗಿನಿಂದ ನನಗೆ ಈ ಜಾತ್ರೆ ಆಕರ್ಷಣೆಯ ಸ್ಥಳ. ಈ ಜಾತ್ರೆ ಊರಿನ ಪಕ್ಕದಲ್ಲೇ ನಡೆಯುವುದರಿಂದ ಸ್ಕೂಲಿಗೂ ಚಕ್ಕರ್ ಹಾಕಿ ಬೆಳಗ್ಗೆಯಿಂದ ಸಂಜೆಯತನಕ ಅಲ್ಲಿಯೇ ಕಾಲ ಕಳೆಯುತ್ತಿದ್ದೆ. ಆದರೆ ಜಾತ್ರೆಯಲ್ಲಿ ನಮ್ಮನ್ನು ಸೆಳೆಯುವ ತಿಂದಿ ಪದಾರ್ಥಗಳಿಗೆ ಮನೆಯಲ್ಲಿ ದಿನಾಲು ಕಾಸು ಕೊಡುತ್ತಿರಲಿಲ್ಲ. ಹಾಗಾಗಿ ನಾವು ಜಾತ್ರೆ ವೇಳೆ ದುಡ್ಡಿಗಾಗಿ ಕಂಡುಕೊಂಡ ದಾರಿ ಸೌದೆ ಮಾರುವುದು! ಜಾತ್ರೆ ಶುರುವಾಗುವ ಒಂದು ತಿಂಗಳ ಮುಂಚೆ ಸೌದೆಗಳನ್ನು ಹೊಡೆದು ಒಣಹಾಕಿ ಜಾತ್ರೆಯಲ್ಲಿ ಸೇರುವ ನೂರಾರು ಹೋಟೆಲ್‌ಗಳಿಗೆ, ಅಂಗಡಿಗಳಿಗೆ ಸೌದೆ ಮಾರಿ ಬಂದ ದುಡ್ಡಿನಲ್ಲಿ ಮಜಾ ಮಾಡುತ್ತಿದ್ದೆವು.

ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಒಂದು ಬಾರಿ ಜಾತ್ರೆ ಪ್ರಾರಂಭವಾಗುವ ಒಂದು ತಿಂಗಳ ಮುಂಚೆ ಸೌದೆಗಾಗಿ ನಮ್ಮ ಪಕ್ಕದ ಜಮೀನು ಬಳಿ ಆಲದ ಮರವನ್ನು ಕಡಿದಿದ್ದರು. ಆದರ ದೊಡ್ಡ ಗಾತ್ರದ ಬೇರುಗಳು ನಮ್ಮನ್ನ ಸೆಳೆದವು. ಜಾತ್ರೆಯಲ್ಲಿ ಗಟ್ಟಿಯಾದ ಒಣಸೌದೆಗಳಿಗೆ ಹೆಚ್ಚು ದುಡ್ಡು ಕೊಡುತ್ತಿದ್ದರು. ಒಂದು ದಿನ ನಾನು ಗೆಳೆಯ ಶಶಿಧರ, ನಮ್ಮಣ್ಣ ರವಿಯೊಡನೆ ಸೇರಿ ಕೊಡಲಿ, ಗುದ್ದಲಿಯನ್ನು ತೆಗೆದುಕೊಂಡು ಹೋದೆವು. ಹೋಗಿ ಆಲದ ಮರದ ಬೇರು ಹೋಗಿರುವ ಜಾಗ ಗುರುತಿಸಿ ಮಣ್ಣನ್ನು ತೆಗೆದು ಬೇರನ್ನು ಕಡಿಯುವಾಗ ಆಕಸ್ಮಿಕವಾಗಿ ನಮ್ಮಣ್ಣ ಶಶಿಧರನ ತಲೆಗೆ ಕೊಡ್ಲಿಯಿಂದ ಹೊಡೆದುಬಿಟ್ಟ! ತಕ್ಷಣ ಬಂದ ರಕ್ತ ನೆತ್ತಿಯಿಂದ ಹರಿದು ಆತನ ಬಟ್ಟೆ ಬರೆಯನ್ನು ರಕ್ತಮಯವಾಗಿಸಿ ನಮಗೆ ಭಯ ತಂದಿತು. ಶಶಿಧರನ ಕಿರುಚಾಟ ಇನ್ನಷ್ಟು ಆತಂಕ ಸೃಷ್ಟಿಸಿತು! ನಂತರ ಧೈರ್ಯಮಾಡಿ ಹರಿಯುತ್ತಿದ್ದ ರಕ್ತವನ್ನು ನಿಲ್ಲಿಸಲು ತುಂಬೆಸೊಪ್ಪು ಕಿತ್ತು ಕೈಯಲ್ಲಿ ಉಜ್ಜಿ ರಕ್ತ ಬರುತ್ತಿದ್ದ ಜಾಗವನ್ನು ಒತ್ತಿಹಿಡಿದುಕೊಂಡು ಪಕ್ಕದಲ್ಲಿದ್ದ ಕಟ್ಟೆಯ ಬಳಿ ಕರೆದುಕೊಂಡು ಹೋಗಿ ಬಟ್ಟೆಯನ್ನು ನೀರಿನಲ್ಲಿ ತೊಳೆದೆವು. ಪೆಟ್ಟು ತಿಂದ ನೋವಿನಿಂದಾಗಿ ಶಶಿಧರನ ಅಳು ನಿಲ್ಲಲಿಲ್ಲ, ರಕ್ತ ಬರುತ್ತಲೇ ಇತ್ತು, ನಮ್ಮಣ್ಣನಿಗೆ ನಡುಕ ಶುರುವಾಯಿತು! ಮನೆಯಲ್ಲಿ ನಮ್ಮಪ್ಪನಿಗೆ ತಿಳಿದರೆ ಚರ್ಮ ಸುಲಿಯುವುದು ಗ್ಯಾರಂಟಿ ಎಂದು ಮತ್ತಷ್ಟು ಆತಂಕಕ್ಕೆ ಒಳಗಾದ. ಅಲ್ಲದೆ ಶಶಿಧರನ ತಾಯಿ ನಮ್ಮನ್ನು ಸುಮ್ಮನೆ ಬಿಡುವರೆ ಎಂಬ ಭಯ ಆವರಿಸಿತ್ತು!

ಸಣ್ಣ ಮಕ್ಕಳ ಕಿತ್ತಾಟಕ್ಕೆ ಹಳ್ಳಿಗಳಲ್ಲಿ ಮನೆಮನೆಗಳ ನಡುವೆ ದೊಡ್ಡ ಕದನವೇ ನಡೆಯುವುದು ಸಾಮಾನ್ಯ. ಇಂತಹ ದೃಶ್ಯಗಳನ್ನು ನೋಡಿದ್ದ ನಮಗೆ ಮನೆಯವರ ಚಿಂತೆ ಹೆಚ್ಚಾಗಿತ್ತು, ಎಷ್ಟರಮಟ್ಟಿಗೆ ಅಂದರೆ ನಮ್ಮಣ್ಣ ನಮ್ಮಪ್ಪನಿಂದ ಬೀಳುವ ಹೊಡೆತ ತಪ್ಪಿಸಿಕೊಳ್ಳಲು ಅಲ್ಲಿಂದಲೇ ಆರು ಕಿಲೋಮೀಟರ್ ದೂರದ ನಮ್ಮ ಅಜ್ಜಿ ಮನೆಗೆ ಹೋಗೇಬಿಟ್ಟ. ಶಶಿಧರ 'ನಮ್ಮಪ್ಪನಿಗೆ ಹೇಳ್ತೀನಿ' ಎಂದು ಅಳುತ್ತಲೇ ಮನೆಗೋದ. ನಾನು ಸಂಜೆ ಏನಾಗುವುದೋ? ಎಂಬ ಆತಂಕದಿಂದಲೇ ಮನೆ ಕಡೆ ನಡೆದೆ.

ರಾತ್ರಿ ಮನೆಯಲ್ಲಿ ಎಲ್ಲರೂ ಊಟ ಮಾಡುತ್ತಿದ್ದಾಗ ಶಶಿಧರನ ತಾಯಿ ಲಕ್ಷ್ಮಮ್ಮ ಮಗನೊಂದಿಗೆ ಬಂದರು. ನನಗೆ ಒಳಗೊಳಗೆ ಆತಂಕ ಶುರುವಾಯಿತು. ಲಕ್ಷ್ಮಮ್ಮ ನಮ್ಮ ತಂದೆಗೆ "ಅಣ್ಣ ರವಿಗೆ ಏನು ಮಾಡಬ್ಯಾಡಿ. ಏನೋ ಹುಡುಗ್ರು ತಿಳಿದೆ ಮಾಡ್ಯಂದು ಬಂದವ್ರುರೆ. ದತ್ತರಿಕೆ ನಾನು ಆಸ್ಪತ್ರೆಗೆ ಕರ್‍ಕಂಡೋಗಿ ಬ್ಯಾಂಡೇಜು ಹಾಕುಸ್ಕೋಬತ್ತೀನಿ" ಎಂದರು. ಅಲ್ಲಿಯವರೆಗೆ ವಿಷಯ ಗೊತ್ತಿರದ ಮನೆಯವರೆಲ್ಲರೂ ಒಬ್ಬರಿಗೊಬ್ಬರು ಮುಖ ನೋಡಿಕೊಂಡರು. ನಮ್ಮಪ್ಪ ಪೂರ್ಣ ವಿಷಯ ತಿಳಿದ ನಂತರ ನನ್ನ ಕಡೆ ತಿರುಗಿ "ಎಲ್ಲಿ ರವಿ?" ಎಂದರು ಗಂಭೀರ ಧ್ವನಿಯಲ್ಲಿ, ನನಗೆ ಮೆಲ್ಲಗೆ ನಡುಕ ಶುರುವಾಗಿ "ಅದು... ಅದು... ರವಿ, ಕೊಪ್ಪುಕ್ಕೆ ನೀ ಹೊಡೆತಿಯಾ ಅಂತ.. ಹೆದ್ರುಕೊಂಡು ಹ್ವಂಟೋದ" ಅಂದೆ. ನಮ್ಮಪ್ಪ ಒಮ್ಮೆ ನನ್ನ ಕಡೆ ದುರುಗುಟ್ಟಿ ನೋಡಿ ನಂತರ ಲಕ್ಷ್ಮಮ್ಮನಿಗೆ "ಆಯ್ತು ಬಿಡಿ, ನನ್ಗೆ ಇದ್ಯಲ್ಲ ಗೊತ್ತೆಯಿರಲಿಲ್ಲ...ಈ ನನ್ಮಕ್ಕುಳಗೆ ತಿಂದಿಟ್ಟು ಹೆಚ್ಚಾಗಿದೆ. ಹಸಿ ಚಬ್ಬೆ ತಗಂಡು ನಾಕು ಬೀಗುದ್ರೆ ಸರೋಯ್ತರೆ" ಎಂದರು ಕೋಪದಿಂದ. ಲಕ್ಷ್ಮಮ್ಮನವರು "ಹೋಗ್ಲಿ ಬಿಡಣ್ಣ ಆಗೋದ್ ಆಗೋಯ್ತು, ಈಗ ಹೊಡೆದ್ಬಿಡಿದ್ರು ಏನು ಬಂತು. ಸುಮ್ನೆ ಹುಡುಗ್ರು ಹೆದ್ರುಕತ್ತವೆ" ಎಂದು ಸಮಾಧಾನದ ಮಾತಾಡಿದರು.

ಲಕ್ಷ್ಮಮ್ಮನವರು ಹೋದ ನಂತರ ನಮ್ಮ ತಾಯಿ "ನೋಡಿ, ಬ್ಯಾರೆ ಇನ್ಯಾರ್ ಮಕ್ಕುಗಾರ ಹಿಂಗ್ ಮಾಡಿದ್ರೆ ಇಷ್ಟೊತ್ತಿಗೆ ಊರು ಕೇರಿ ಒಂದ್ ಮಾಡಿರೋರು, ಸದ್ಯ ಇವುರಾಗಿರೋದಕ್ಕೆ ಸುಮ್ಮನಾದ್ರು" ಅಂದರು. ಲಕ್ಷ್ಮಮ್ಮನವರ ಪತಿ ದಿ.ಕೆ. ಹೊನ್ನಯ್ಯನವರೂ ನಮ್ಮಪ್ಪನವರೂ ಒಂದೇ ಓರಗೆಯವರು. ಜೊತೆಗೆ ಆಪ್ತರು. ಎರಡು ಕುಟುಂಬಗಳ



ಒಡನಾಟ ಇತ್ತು. ಎಲ್ಲಕ್ಕಿಂತ ಮಿಗಿಲಾಗಿ ಲಕ್ಷ್ಮಮ್ಮನವರು ತಿಳಿದ ಹೆಣ್ಣುಮಗಳು. ಹಾಗಾಗಿ ವಿಷಯ ಅಲ್ಲಿಗೆ ಮುಗಿಯಿತು.

ತನ್ನ ಒಬ್ಬನೇ ಮಗನಿಗೆ ತಲೆ ತೂತು ಆಗಿ ಅಪಾರ ರಕ್ತಸ್ರಾವವಾದರೂ ಇತರ ಹೆಂಗಸರಂತೆ ಆಕೆ ಜಗಳಕ್ಕೆ ನಿಲ್ಲಲಿಲ್ಲ, ಬದಲಾಗಿ ನಮಗೆ ಎಲ್ಲಿ ಹೊಡೆಯುವರೋ ಎಂದು ಆಕೆಯೇ ಬಂದು ತಂದೆಗೆ ಸಮಾಧಾನ ಹೇಳಿ ಹೋಗಿದ್ದರು. ನನಗೆ ತಿಳಿದ ಮಟ್ಟಿಗೆ ಆ ಕಾಲಕ್ಕೆ ನಮ್ಮೂರಿನ ವಿದ್ಯಾವಂತ ಮಹಿಳೆ ಅಂದ್ರೆ ಲಕ್ಷ್ಮಮ್ಮನವರು. ಆಕೆಗೆ ಶಶಿಧರ ಹುಟ್ಟಿದ ಕೆಲವು ದಿನಗಳಲ್ಲೇ ಪತಿ ಕೆ. ಹೊನ್ನಯ್ಯನವರು ಹೃದಯಾಘಾತದಿಂದ ಕಾಲವಾಗಿದ್ದರು. ಮೂರು ಜನ ಹೆಣ್ಣು ಮಕ್ಕಳು, ಒಂದು ಗಂಡು ಮಗುವಿನ ಲಾಲನೆ-ಪಾಲನೆಯ ಜವಾಬ್ದಾರಿ ಆಕೆಯ ಮೇಲೆ ಬಿತ್ತು. ಲಕ್ಷ್ಮಮ್ಮನ ಗಂಡನ ಸಂಬಂಧಿಕರು ಮೂರು ಹೆಣ್ಣುಮಕ್ಕಳ ಜವಾಬ್ದಾರಿಗೆ ಹೆದರಿ ಅವರ ಪಾಲಿನ ಆಸ್ತಿ ಕೊಟ್ಟು ದೂರ ಇಟ್ಟಾಗ ಧೃತಿಗೆಡದ ಈ ತಾಯಿ ತನ್ನ ತವರು ಮನೆ ಕಡೆ ಮುಖ ಮಾಡದೆ, ಬಂದ ತನ್ನ ಗಂಡನ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು, ತನ್ನ ಚಿಕ್ಕಮಕ್ಕಳೊಂದಿಗೆ ಹೊಸ ಜೀವನ ಆರಂಭಿಸಿದ್ದರು. ತನ್ನ ಮಕ್ಕಳಿಗೆ ಶಾಲೆಯ ಶಿಕ್ಷಣ ಕೊಡಿಸಿ, ಬೆಳಿಗ್ಗೆ ಶಾಲೆಗೆ ಹೋಗುವ ತನಕ ಸಂಜೆ ಶಾಲೆಯಿಂದ ಬಂದ ನಂತರ ಹೆಣ್ಣು ಮಕ್ಕಳಿಗೂ ನೇಗಿಲು ಹಿಡಿದು ಉಳುಮೆ ಮಾಡುವ ಪರಿಪಾಟವನ್ನು ಸ್ವತಃ ತಾವೇ ಕಲಿಸಿದರು. ಗಂಡಸರಂತೆ ತಮ್ಮ ಹೊಲ-ಗದ್ದೆಯಲ್ಲಿ ತಾವೇ ದುಡಿಯುತ್ತಿದ್ದರು. ಮುಂದೆ ಹೆಣ್ಣು ಮಕ್ಕಳು ಬೆಳೆದಾಗ ಒಳ್ಳೆಯ ಸಂಬಂಧವನ್ನು ನೋಡಿ ಮದುವೆ ಮಾಡಿದರು. ಈಗ ಇಪ್ಪತ್ಮೂರು ವರ್ಷದ ಶಶಿಧರ ಕಾಲೇಜುತನಕ ಶಿಕ್ಷಣ ಪಡೆದು ತಾಯಿಯ ಮಾರ್ಗದರ್ಶನದಲ್ಲಿ ಮನೆಯ ಹೊಣೆಯನ್ನು ನಿಭಾಯಿಸುತ್ತಿದ್ದಾನೆ.



ನಮ್ಮ ಹಳ್ಳಿಗಳಲ್ಲಿ ಒಂದೇ ಕುಟುಂಬದ ಎಲ್ಲರೂ ಶಿಕ್ಷಣ ಪಡೆದ ಉದಾಹರಣೆಗಳು ಇಂದಿಗೂ ಸಿಗಲಾರವು. ಆದರೆ ಲಕ್ಷ್ಮಮ್ಮ ತನ್ನ ಕಡುಕಷ್ಟದ ದಿನಗಳಲ್ಲೂ ಸಂಸಾರದ ಎಲ್ಲಾ ಸದಸ್ಯರಿಗೂ ಶಿಕ್ಷಣಕೊಡಿಸಿ, ಮಕ್ಕಳಿಗೆ ಅಪ್ಪನ ಕೊರತೆ ನೀಗಿಸಿ ಎಲ್ಲವೂ ತಾವೇ ಆಗಿ ಇತರರಂತೆ ತಮ್ಮ ಮಕ್ಕಳ ಬೆಳೆಸಿ ಗ್ರಾಮದ ಇತರ ಹೆಂಗಸರಿಗೆ ಮಾದರಿಯಾಗಿದ್ದಾರೆ. ಆಕೆಯ ಶಿಕ್ಷಣ, ಶಿಕ್ಷಣದಿಂದ ರೂಪಿತಗೊಂಡ ವ್ಯಕ್ತಿತ್ವ, ಸಸ್ನಡತೆ, ಸದ್ಗುಣ ಮುಂತಾದ ಒಳ್ಳೆಯ ಗುಣಗಳು 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ನುಡಿಯನ್ನು ನೆನಪಿಗೆ ತರುತ್ತದೆ.

-ದಿ.ಎಲ್ ಮಂಜು, ಬೆಂಗಳೂರು

# ಸದ್ಯ, ಜಡೆ ಕತ್ತರಿಸಿದರು!



ಆಗ 1981. ಏಪ್ರಿಲ್ ತಿಂಗಳು. ಬಿರುಬಿಸಿಲಿಗೆ ಧರೆ ಧಗಧಗ! ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿದಿತ್ತಾದ್ದರಿಂದ ನಮ್ಮ ಊರಿನ ಹತ್ತಿರದ ಬಾವಿ ಬಳಿ ಮೇಕೆ ಕಾಯುತ್ತಿದ್ದೆ. ಬಾವಿಯ ಸುತ್ತಲೂ ಲಂಟಾನ ಪೊದೆ ಭರ್ಜರಿಯಾಗಿ ಬೆಳೆದಿತ್ತು, ಮೇಕೆಗಳು ಅಲ್ಲಿ ಮೋಜಾಗಿ ತಿನ್ನುತ್ತಿದ್ದವು. ಆ ಬಾವಿಯಲ್ಲಿ ಆಗ ಎಂಟಡಿ ನೀರಿತ್ತು (ಈಗ ಹಾಳುಬಿದ್ದಿದೆ). ನಮ್ಮೂರಿನ ಚಿತ್ರಾಚಾರಿ ಮೇಷ್ಟ್ರು ಹೆಂಡತಿ ಅಲ್ಲಿ ಬಟ್ಟೆ ತೊಳೆಯುತ್ತಿದ್ದನ್ನು ನೋಡಿದೆ. ಸ್ವಲ್ಪ ಸಮಯದ ನಂತರ ದಬ್ ಅಂತ ಶಬ್ದ ಬಂತು! ಬಾವಿಯ ಬಳಿ ಹೋಗಿ ನೋಡ್ತೀನಿ, ಆಯಮ್ಮ ನೀರಲ್ಲಿ ಮುಳುಗುತ್ತಾ ತೇಲುತ್ತಾ ಕೈ ಮೇಲಕ್ಕೆತ್ತಿ ಅಬುಕ್... ಅಬುಕ್... ಅಬುಕ್ ಅಂತ ನೀರು ಕುಡಿತಾ ಅವ್ರೆ. ಆ ಬಾವಿಗೆ ಮಟ್ಟಸವಾದ ಮೆಟ್ಟಲುಗಳಿದ್ದವಾದ್ದರಿಂದ ನಾನು ಸರಸರ ಇಳಿದು ನೀರಿಗೆ ಜಿಗಿದೆ. ಅಷ್ಟರಲ್ಲೇ ಆಯಮ್ಮನಿಗೆ ನಾನು ಅಂತ ಗೊತ್ತಾಗಿ "ದೂರ ಇರೋ, ನನ್ ಮುಟ್ಟೇಡ, ನಾನ್ ಸತ್ತೇ ಸಾಯ್ತೀನಿ" ಅನ್ನಬೇಕೆ?! ಸದ್ಯ ಆಕೆಯ ಜಡೆ ಉದ್ದವಾಗಿದ್ದರಿಂದ ಅದನ್ನು ಹಿಡಿದೆಳೆದು ಮೆಟ್ಟಲು ಮೇಲಕ್ಕೆ ಆಕೆಯನ್ನು ಎಳೆದೆ.

ನಾನು ಹೊಲೆಯನಾಗಿದ್ದರಿಂದ ಆಕೆ ನನ್ನನ್ನು ಮುಟ್ಟಲೇ ಇಲ್ಲ! ಒಂದ್ವೇಳೆ, ಮುಟ್ಟಿದ್ರೆ ಆಕೆ ಬಲವಾದ ಆಳಾದ್ದರಿಂದ ನನ್ನನ್ನು ತಬ್ಬಿಕೊಂಡು ಇಬ್ಬರೂ ನೀರಿನಲ್ಲಿ ಮುಳುಗುತ್ತಿದ್ದೆವು. ಆದರೆ ನನ್ನ ಜಾತಿ ನಮ್ಮಿಬ್ಬರ ಜೀವ ಉಳಿಸ್ತು. ಮೆಟ್ಟಲ ಮೇಲೆ ಕುಳಿತು ಬಟ್ಟೆ ತೊಳೆಯುವಾಗ ಸೋಪ್ ಜಾರಿ ಬಿದ್ದಿದ್ದರಿಂದ ಅದನ್ನು ತಗೊಳ್ಳಾಕೆ ಅಂತ ಬಗ್ಗಿದಾಗ, ಮೆಟ್ಟಲ ಕೆಳಗೆ ಇದ್ದ ಆಳವಾದ ನೀರಿಗೆ ಜಾರಿ ಬಿದ್ದಿದ್ದಳು. ಸುಧಾರಿಸಿಕೊಂಡ ನಂತರ, ಊರಿನಲ್ಲಿ ವಿಷಯ ಗೊತ್ತಾಗಿ, ಆಕೆಯ ಗಂಡ ಬಾವಿಯ ಬಳಿ ಬಂದು, ಹೆಂಡತಿಗೆ ಏನಾಯ್ತು, ಹೇಗಾಯ್ತು ಅಂತ ಒಂದೇ ಸಮನೆ ಒದರಿದ್ದಲ್ಲದೇ ಆಕೆಯ ಜೀವ ಉಳಿಸಿದ ನನಗೆ ಶಹಬ್ಬಾಷ್ ಅನ್ನುವ ಬದಲು ಬದ್ಮಾಷ್ ಅಂತ ಬೈಯ್ಯಬೇಕೆ! ಸದ್ಯ ಹೊಡೀಲಿಲ್ಲ, ಯಾಕಂದ್ರೆ, ನನ್ನನ್ನು ಮುಟ್ಟುವ ಹಾಗಿಲ್ಲವಲ್ಲ! ಅದಕ್ಕೆ. ಆದ್ರೆ ನಾನು ಮುಟ್ಟಿದ ಆ ಜಡೆಯನ್ನು ಕತ್ತರಿಸಿದರು. ಯಾಕೋ ತಲೆಬೋಳಿಸಲಿಲ್ಲ!



ಜಡೆಯನ್ನೇನೋ ಕತ್ತರಿಸಿದರು. ಒಂದು ವೇಳೆ ನಾನು ಆಕೆಯ ಕೈ, ಮೈ ಹಿಡಿದೆಳೆದು ದಡಕ್ಕೆ ತಂದಿದ್ದರೆ ಆಕೆಯ ಕೈ-ಮೈ ಕತ್ತರಿಸುತ್ತಿದ್ದರೇ? ಈ ಪ್ರಶ್ನೆಯನ್ನು ನಾನು ಆಗ ಹಾಕಲಿಲ್ಲ. ಅಷ್ಟರಲ್ಲಿ ಮೇಕೆ ದಿಕ್ಕಾಪಾಲಾಗಿದ್ದರಿಂದ ಅವುಗಳನ್ನು ಹುಡುಕಿಕೊಂಡು ಅಲ್ಲಿಂದ ಜಾಗ ಖಾಲಿ ಮಾಡಿದೆ.


-ಎನ್. ಜಗದೀಶ ಬೆಳಗಟ್ಟ, ದಾವಣಗೆರೆ

# ಪುರೋಹಿತರ ತಂತ್ರ ಬಟಾ ಬಯಲುಗೊಂಡ ದಿನ

ನಮ್ಮ ಊರಿನ ನಮ್ಮ ಪಕ್ಕದ ಮನೆಯಲ್ಲಿ ಒಬ್ಬ ಭಂಡಾರಿ ಸಮಾಜದವರ ಮನೆಯಿದೆ. ಆ ಮನೆಯವರು ಹತ್ತಿರದ ನಂದಿಕೇಶ್ವರ ದೇವಾಲಯದಲ್ಲಿ ವಾದ್ಯ ಬಾರಿಸುವ ಮತ್ತು ದೇವರ ಪೂಜೆಯಲ್ಲಿ ಅಲ್ಲಿನ ಪುರೋಹಿತರಿಗೆ ಸಹಕರಿಸುವ ಕಾರ್ಯವನ್ನು ಅನಾದಿಯಿಂದ ಮಾಡುತ್ತಾ ಬಂದಿದ್ದರು. ಆದರೆ ಯಾವುದೋ ಕಾರಣದ ನಿಮಿತ್ತ ಆ ಭಂಡಾರಿ ದೇವಾಲಯಕ್ಕೆ ವಾದ್ಯ ಬಾರಿಸುವ ಕಾರ್ಯವನ್ನು ನಿಲ್ಲಿಸಿದ್ದರು.

ಒಂದು ದಿನ ನಾನು ನನ್ನ ಕಛೇರಿಯಿಂದ ಕೆಲಸ ಮುಗಿಸಿ ರಾತ್ರಿ ಮನೆಗೆ ಬಂದಾಗ ನಮ್ಮ ಮನೆಯವರು ಪಕ್ಕದ ಭಂಡಾರಿ ಮನೆಯಲ್ಲಿ ರಾತ್ರಿ ದೆವ್ವ ಬರುತ್ತಿದೆಯಂತೆ, ಹಾಗಾಗಿ ಭಂಡಾರಿ ಮನೆಯವರೆಲ್ಲ ಹೆದರಿ ಬೇರೆಯವರ ಮನೆಗೆ ಬಂದು ಮಲಗುತ್ತಾರೆ ಎಂದು ಹೇಳಿದರು. ನಾನು ಕುತೂಹಲಭರಿತನಾಗಿ ವಿಚಾರಿಸಿದಾಗ ದೆವ್ವ ಬರುವುದು ನಿಜವೆಂತಲೂ, ಸರಿಯಾಗಿ ರಾತ್ರಿ 1 ರಿಂದ 3 ಗಂಟೆ ಸಮಯದಲ್ಲಿ ಥಣಥಣ ಸದ್ದಿನೊಂದಿಗೆ ದೆವ್ವ ಆತನ ಮನೆಯ ಸುತ್ತಮುತ್ತ ತಿರುಗಾಡುತ್ತದೆಯೆಂತಲೂ ತಿಳಿದುಬಂದಿತು. ಊರಿನ ಜನರು ಕೂಡಾ ಭಯಗ್ರಸ್ತರಾಗಿದ್ದರು. ದೆವ್ವದ ಶಬ್ದ ಪ್ರತಿ ರಾತ್ರಿ ಕೇಳುತ್ತಿದ್ದರಿಂದ ಹೆದರಿದ ಭಂಡಾರಿ ಮನೆಯವರು ಊರ ಪುರೋಹಿತರನ್ನು ಕೇಳಲಾಗಿ, "ಇದು ದೆವ್ವದ ಕಾಟ ಅಲ್ಲಾ, ಬದಲಾಗಿ ನಂದಿಕೇಶ್ವರನೇ ದಿನಾಲೂ ರಾತ್ರಿ ಬರುತ್ತಿದ್ದಾನೆ. ನೀನು ನಂದಿಕೇಶ್ವರನಿಗೆ ಪೂಜೆ-ಪುನಸ್ಕಾರಗಳನ್ನು ಮಾಡಲು ಸಹಕರಿಸುವ ಕಾರ್ಯವನ್ನು ಬಿಟ್ಟಿದ್ದರಿಂದ ನಿನಗೆ ನಂದಿಕೇಶ್ವರ ಕಾಡುತ್ತಿದ್ದಾನೆ. ಆದ್ದರಿಂದ ನೀನು ದಿನ ನಂದಿಕೇಶ್ವರನ ಪೂಜೆ ಮಾಡು ಮತ್ತು ದಿನ ಅವನಿಗೆ ವಾದ್ಯ ಬಾರಿಸುವ ಸೇವೆಯನ್ನು ಎಂದಿನಂತೆ ಮುಂದುವರೆಸಿಕೊಂಡು ಹೋಗು" ಎಂದು ಹೇಳಿದರಲ್ಲದೇ ಹಿಂದಿನ ಪಾಪ ಪರಿಹಾರಕ್ಕಾಗಿ ಹೋಮವನ್ನು ಕೈಗೊಂಡಲ್ಲಿ ಪಾಪ ಪರಿಹಾರವಾಗುವುದಾಗಿ ಹೇಳಿದರು. ಅದರಂತೆಯೇ ಆತ ನಡೆದುಕೊಂಡರೂ ಆತನ ಮನೆಗೆ ದೆವ್ವದ ಕಾಟ ನಿಲ್ಲಲಿಲ್ಲ.

ಆಗ ಭಂಡಾರಿ ಮನೆಯವರು ಮತ್ತು ಊರಿನ ಕೆಲವರು ರಾತ್ರಿ ನೋಡೋಣ ಎನ್ನುತ್ತಾ ಎಚ್ಚರವಾಗಿ ಕುಂತರು. ಸರಿಯಾಗಿ ರಾತ್ರಿ ಮೂರುಗಂಟೆ ಸಮಯಕ್ಕೆ ಎಂದಿನಂತೆ ಥಣಥಣ ಶಬ್ದ ಶುರುವಾಯಿತು. ಬ್ಯಾಟರಿ ಬೆಳಕು ಬಿಟ್ಟು ನೋಡಿದಾಗ ಒಂದು ನರಿ ಥಣಥಣ ಶಬ್ದ ಮಾಡುತ್ತಾ ಬೆಟ್ಟದ ಕಡೆಗೆ ಓಡುವುದು ಕಂಡು ಬಂದಿತು. ದಿನ ಬೆಳಗಾಗುವುದರೊಳಗೆ ದೆವ್ವ ನರಿ ರೂಪದಲ್ಲೇ ಕಾಟ ಕೊಡುತ್ತಿದೆಯೆಂದು ಊರೆಲ್ಲಾ ಸುದ್ದಿಯಾಗಿತ್ತು.




ಈ ವಿಷಯ ಪಕ್ಕದ ಕಡತೋಕಾ ಊರಿನವರಿಗೂ ತಿಳಿಯಿತು. ಆ ಊರಿನ ಒಬ್ಬ ವ್ಯಕ್ತಿ ಭಂಡಾರಿ ಮನೆಯ ಆಳಾಗಿದ್ದು, ನಡೆದ ಘಟನೆ ವಿವರಿಸಿದ. ಕೆಲ ದಿವಸಗಳ ಹಿಂದೆ ಕೋಳಿ ಹಿಡಿಯಲು ಬಂದ ನರಿಯೊಂದು ಬಾವಿಯಲ್ಲಿ ಬಿತ್ತು. ಅದನ್ನು ಕೇರಿಯ ಮಕ್ಕಳೆಲ್ಲಾ ಸೇರಿ ಹಿಡಿದು ಆ ಕಳ್ಳ ನರಿಯ ಕುತ್ತಿಗೆಗೆ ಥಣಥಣ ಶಬ್ದ ಬರುವಂತೆ ತಗಡಿನ ಹಾರ ಹಾಕಿದ್ದರೆಂದು ತಿಳಿಸಿದ. "ಹಾಗೆ ಹಾರ ಹಾಕಿಸಿಕೊಂಡ ನರಿಯನ್ನು ಉಳಿದ ನರಿಗಳು ಗುಂಪಿನಲ್ಲಿ ಸೇರಿಸಿಕೊಳ್ಳದೇ ಇರುವುದರಿಂದ ಅದು ನಿಮ್ಮ ಊರಿಗೆ ಬರುತ್ತಿದೆ" ಎಂದು ತಿಳಿಸಿದ. ಈ ವಿಷಯ ನಿಜವಾಗಿತ್ತು. ಗುಂಪಿನಿಂದ ಹೊರಗಾದ ನರಿ ಭಂಡಾರಿ ಮನೆಯ ಪಕ್ಕದ ಹಳ್ಳದಲ್ಲಿರುವ ಏಡಿಯನ್ನು ತಿನ್ನಲು ಮತ್ತು ಹತ್ತಿರದಲ್ಲಿದ್ದ ಚಿಕ್ಕು ಹಣ್ಣು ತಿನ್ನಲು ಥಣಥಣ ಸದ್ದಿನೊಂದಿಗೆ ಬರುತ್ತಿತ್ತು. ಆನಂತರ ಇದು ಊರಿನವರಿಗೆಲ್ಲಾ ತಿಳಿದು ಒಂದೆರಡು ದಿವಸ ತಮಾಷೆಯ ವಿಷಯವಾಗಿಹೋಯಿತು.

ಆದರೆ ಪುರೋಹಿತಶಾಹಿಯ ಮೋಸತನ ನರಿಬುದ್ಧಿಯ ಕುಟಿಲೋಪಾಯ ಮಾತ್ರ ವಿಚಾರದ ಮಸ್ತುವಾಗದೇ ಥಣಥಣ ಸದ್ದಿನೊಂದಿಗೆ ಮಾಯವಾಯಿತು. ದೇವರು, ಧರ್ಮದ ಹೆಸರಿನಲ್ಲಿ ದುಡಿಸಿಕೊಳ್ಳಬೇಕೆಂಬ ಪುರೋಹಿತಶಾಹಿಗಳ ದುರಾಲೋಚನೆ ಬಟಾಬಯಲಾದ ಈ ಘಟನೆ ನನ್ನ ಮನದಲ್ಲಿ ಇಂದಿಗೂ ಕಾಡುತ್ತಿದೆ.

-ಉದಯ ನಾಯ್ಕ, ಹೊನ್ನಾವರ

# ಮಲ್ಟಿ ಜಿಮ್‌ಗೆ ದಾರಿ ಬಿಟ್ಟ

# ಉರ್, ಬೈಸ್!





36-24-36..... ಇದು ಬೆಸ್ಟ್ ಪರ್ಸನಾಲಿಟಿ ಹೊಂದಿರುವ ಹೆಣ್ಣಿನ ಅಳತೆ!

ಆದರೆ ಹೆಣ್ಣಿಗೆ ಇರುವಂತೆ ಗಂಡಿಗೆ ಯಾವುದೇ ಫಿಕ್ಸೆಡ್ ಸೂತ್ರ ಇಲ್ಲ. ಹೀಗಾಗಿ ಒಬ್ಬೊಬ್ಬ ನಾಯಕ, ಒಂದೊಂದು ಪರ್ಸನಾಲಿಟಿ ಹೊಂದಿರುತ್ತಾನೆ.

"ನಿಮ್ಮ ಪರ್ಸನಾಲಿಟಿ ಹೇಗೆ ಕಾಪಾಡುತ್ತೀರಿ?" ಎಂದು ಯಾರೋ ಒಬ್ಬರು ನಾಯಕ ನಟ ಶಂಕರ್‌ನಾಗ್‌ರನ್ನು ಪ್ರಶ್ನೆ ಕೇಳಿದಾಗ ಅವರೇನಂದಿದ್ದರು ಗೊತ್ತಾ?

"ಬೆಳಿಗ್ಗೆ ಎದ್ದು ಏಳೆಂಟು ದನಗಳ ಹಾಲು ಕರೆಯುತ್ತೇನೆ. ಆನಂತರ ಗಾರ್ಡನ್‌ನಲ್ಲಿ ಹಾರೆ, ಪಿಕ್ಕಾಸು ಹಿಡಿದು ಕೆಲಸ ಮಾಡುತ್ತೇನೆ, ಅಷ್ಟೇ....!" ಹೀಗೆ ಒಬ್ಬ ಟಿಪಿಕಲ್ ರೈತನ ತರಹ ಶಂಕರ್‌ನಾಗ್ ಉತ್ತರಿಸಿದ್ದರು.

ಅದೇ ಪ್ರಶ್ನೆಯನ್ನು ಈಗಿನ ನಾಯಕ ನಟರನ್ನು ಕೇಳಿದರೆ ಸಿಗುವ ಉತ್ತರವೇ ಬೇರೆ.


"ಬೆಳಿಗ್ಗೆ ಮಲ್ಟಿಜಿಮ್‌ನಲ್ಲಿ ಜಿಮ್ ಮಾಡುತ್ತೇನೆ. ಆಮೇಲೆ ಸ್ವಲ್ಪ ಜಾಗಿಂಗ್, ಸಂಜೆ ಏರೊಬಿಕ್..."ನಾಯಕ ನಟರು ಉತ್ತರಿಸುತ್ತಾ ಹೋಗುತ್ತಾರೆ.

ಅದರರ್ಥ ನಮ್ಮ ಹೀರೋಗಳ ಮನೆಯನ್ನು 'ಮಲ್ಟಿ ಜಿಮ್' ಎಂಬ ಮ್ಯಾಜಿಕ್ ಯಂತ್ರ ಆಕ್ರಮಿಸಿದೆ. ಅವರ ಮನೆಯೇ ಆಟದ ಮೈದಾನವಾಗಿ ರೂಪಾಂತರಗೊಂಡಿದೆ. ಶಂಕರ್‌ನಾಗ್ ತರಹ ಟಿಪಿಕಲ್ ರೈತನ ಮಾದರಿಯಲ್ಲಿ ಕೆಲಸ ಮಾಡುತ್ತಾ ವ್ಯಾಯಾಮ ಮಾಡುವ ನಾಯಕ ನಟ ಇಂದು ಸಿಗೋಲ್ಲ, ಯಾಕೆಂದರೆ ಇದು ಕಂಪ್ಯೂಟರ್ ಯುಗ!

ಇವತ್ತು ಕನ್ನಡದ ಬಹುತೇಕ ಎಲ್ಲಾ ನಟರ ಮನೆಯಲ್ಲಿ ಮಲ್ಟಿ ಜಿಮ್ ಇದೆ. ಉಪೇಂದ್ರ, ರವಿಚಂದ್ರನ್, ಪುನೀತ್, ದೇವರಾಜ್, ಮುರಳಿ, ದರ್ಶನ್... ಇವರೆಲ್ಲಾ ರೆಗ್ಯೂಲರ್ ಆಗಿ ಮಲ್ಟಿಜಿಮ್ ಉಪಯೋಗಿಸುತ್ತಾರೆ.

ಆದರೆ ಹಳೆಯ ಕಾಲದ ನಟರಾದ ಡಾ. ರಾಜ್‌ಕುಮಾರ್ ಮತ್ತು ಅನಂತ್‌ನಾಗ್ ಈ ಆಧುನಿಕ ಶೈಲಿಯ ವ್ಯಾಯಾಮದ ಬದಲಾಗಿ ಹಳೆಯದಕ್ಕೆ ಅಂಟಿಕೊಂಡಿದ್ದಾರೆ.


ಡಾ. ರಾಜ್ ಮತ್ತು ಅನಂತ್‌ನಾಗ್ ಎಂದೂ ಡಂಬಲ್ಸ್ ಎತ್ತಿದವರಲ್ಲ. ಅಥವಾ ಮನೆಯಲ್ಲಿ ಕುಳಿತು ಸೈಕಲ್ ತುಳಿದವರಲ್ಲ.



ಡಾ. ರಾಜ್‌ಕುಮಾರ್ ಬೆಳಿಗ್ಗೆ ಎದ್ದು ಸ್ನಾನ ಮಾಡಿ ಒಂದೂವರೆ ಗಂಟೆ ಯೋಗಾಸನ ಮಾಡುತ್ತಾರೆ. ಆನಂತರ ತಲೆಗೊಂದು ಮುಂಡಾಸು ಕಟ್ಟಿ ಮನೆಯಿಂದ ಹೊರಬಿದ್ದರೆ ನಾಲ್ಕೈದು ಕಿಲೋಮೀಟರ್ ಬ್ರಿಸ್ಕ್ ವಾಕಿಂಗ್ ಮಾಡುತ್ತಾರೆ. ಸಾಯಂಕಾಲ ಒಂದಿಷ್ಟು ಬಿಸ್ಲಿ ತೆಗೆದ ನಂತರ ಗದೆ ಎತ್ತಿ ತೋಳು, ಎದೆ, ಬೆನ್ನ ಮೇಲೆ ಆಡಿಸುತ್ತಾರೆ. ವಿಪರ್ಯಾಸವೆಂದರೆ, ಅಪ್ಪ ಹೀಗೆ ಗದೆ ಎತ್ತಿ ವ್ಯಾಯಾಮ ಮಾಡಿದರೆ ಮಕ್ಕಳಾದ ಶಿವಣ್ಣ, ರಾಘು, ಪುನೀತ್ ಮಾತ್ರ ಮಲ್ಟಿಜಿಮ್‌ಗೆ ಶರಣಾಗಿದ್ದಾರೆ.

ಅನಂತ್‌ನಾಗ್ ವ್ಯಾಯಾಮ ಇನ್ನೂ ವಿಚಿತ್ರ. ಅವರು ನಿರಂತರವಾಗಿ 108 ಬಾರಿ ಸೂರ್ಯ ನಮಸ್ಕಾರವನ್ನು ಮಾಡುತ್ತಾರೆ. ಒಬ್ಬ ಮಾಮೂಲಿ ಮನುಷ್ಯ ಹತ್ತು ಸೂರ್ಯ ನಮಸ್ಕಾರ ಮಾಡಿದರೆ ಸುಸ್ತಾಗುತ್ತಾನೆ. ಅಂತಹದರಲ್ಲಿ ಅನಂತ್ ಕೆಪಾಸಿಟಿ ಇನ್ನೆಷ್ಟಿರಬಹುದು, ನೀವೇ ಊಹಿಸಿ! ಈ ವ್ಯಾಯಾಮ ಬಿಟ್ಟರೆ ಅವರು ಬೇರೆ ಏನೂ ಮಾಡೋಲ್ಲ.

ಸುದೀಪ್ ಮತ್ತು ದರ್ಶನ್ ಇಬ್ಬರದೂ ಒಂದೇ ಶೈಲಿ. ಬೆಳಿಗ್ಗೆ ಸ್ವಲ್ಪ ಜಾಗಿಂಗ್, ಆನಂತರ ಮಲ್ಟಿಜಿಮ್. ದರ್ಶನ್ ತಮ್ಮ ಮುದ್ದಿನ ನಾಯಿಯೊಂದಿಗೆ ಜಾಗಿಂಗ್ ಹೋದರೆ, ಸುದೀಪ್ ಹೆಚ್ಚಾಗಿ ಮಡದಿ ಜೊತೆ ಹೋಗುತ್ತಾರೆ. ಒಮ್ಮೆ ಶೂಟಿಂಗ್ ಸಮಯದಲ್ಲಿ ಬಿದ್ದು ಭುಜಕ್ಕೆ



**ಈಗಿನ ಕನ್ನಡದ ಬಹುತೇಕ ನಟರ ಮನೆಯಲ್ಲೇ ಜಿಮ್‌ಗಳಿವೆ; ಅವರೆಲ್ಲ ಅಲ್ಲಿ ನಿತ್ಯ ಬೆವರು ಹರಿಸುತ್ತಾರೆ. ಆದರೂ ಒಬ್ಬ ನಟನೂ ಜಾನ್ ಅಬ್ರಹಾಂ, ಸಲ್ಮಾನ್‌ಖಾನ್‌ರಂತೆ 'ಬಾಡಿ' ಬಿಲ್ಡ್ ಮಾಡಲೇ ಇಲ್ಲ. ಯಾವ್ಯಾವ ನಟ ಯಾವ್ಯಾವ ರೀತಿಯ ವ್ಯಾಯಾಮ ಮಾಡುತ್ತಾನೆ ನೋಡೋಣ ಬನ್ನಿ.**

ಗಾಯವಾದ ನಂತರ ಈಗ ದರ್ಶನ್ ಮನೆಗೆ ಒಬ್ಬ ಟ್ರೈನರ್ ಬರುತ್ತಾರೆ.

ಉಪೇಂದ್ರ, ಜಾಗಿಂಗ್ ಬದಲು ಮನೆಯಲ್ಲಿ ಸೈಕ್ಲಿಂಗ್ ಮತ್ತು ಮಲ್ಟಿಜಿಮ್ ಮಾಡುತ್ತಾರೆ. ಹೀರೋ ಆಗುವ ಮೊದಲು, ಅಂದರೆ ನಿರ್ದೇಶಕನಾಗಿದ್ದಾಗ, ಮನೆಯಲ್ಲಿ ಬಸ್ಕಿ ಮತ್ತು ಇತರ ವ್ಯಾಯಾಮ ಮಾಡುತ್ತಿದ್ದರು. ಈಗ ಮನೆಯಲ್ಲಿಯೇ ಗೆಳೆಯರೊಂದಿಗೆ ರಾತ್ರಿ ಒಂದೆರಡು ಗಂಟೆ ಟೇಬಲ್ ಟೆನ್ನಿಸ್ ಆಡುತ್ತಾರೆ.

ವಿಷ್ಣುವರ್ಧನ್‌ಗೆ ಕೂಡಾ ವ್ಯಾಯಾಮ ಅಂದ್ರೆ ಪಂಚಪ್ರಾಣ. ಅವರು ಬೆಂಗಳೂರಿನಲ್ಲಿ ಇದ್ದರೆ ಸಾಯಂಕಾಲ ತಪ್ಪದೇ ಅಶೋಕಾ ಹೋಟೆಲ್‌ಗೆ ಭೇಟಿ ನೀಡುತ್ತಾರೆ. ಮೊದಲು ಮಲ್ಟಿ ಜಿಮ್, ಆನಂತರ ಒಂದು ಗಂಟೆ ಟೆನ್ನಿಸ್, ಕೊನೆಯಲ್ಲಿ ಸ್ವಿಮ್ಮಿಂಗ್.... ಇದು ಇವರ ವ್ಯಾಯಾಮದ ಶೈಲಿ. ಹಾಗೆಯೇ ತಿಂಗಳ ಪ್ರತಿ ಎರಡನೇ ಭಾನುವಾರ ಕ್ರಿಕೆಟ್ ಆಟ. ಇವರ ಸ್ನೇಹಲೋಕ ತಂಡದಲ್ಲಿ ದರ್ಶನ್, ಅಭಿಜಿತ್, ಅವಿನಾಶ್, ರಮೇಶ್, ಶೋಭರಾಜ್, ಅಂಬರೀಷ್, ಕೊಬ್ಬರಿ ಮಂಜು ಮೊದಲಾದವರು ಇದ್ದಾರೆ.

ನಾಯಕ ನಟ ಜಗ್ಗೇಶ್‌ರ 'ಪರ್ಸನಾಲಿಟಿ ಡೆವಲಪ್‌ಮೆಂಟ್' ಒಂಥರಾ ವಿಚಿತ್ರ. ಅವರು ಮಲ್ಟಿ ಜಿಮ್, ವಾಕಿಂಗ್, ಯೋಗ, ಧ್ಯಾನ ಇವೆಲ್ಲವನ್ನೂ ಮಾಡುತ್ತಲೇ ಬಂದಿದ್ದಾರೆ. ಮನೆಯಲ್ಲಿಯೇ ಜಿಮ್ ಮಾಡುವವರಲ್ಲಿ ರಾಕ್‌ಲೈನ್ ವೆಂಕಟೇಶ್ ಕೂಡಾ ಒಬ್ಬರು.

ನಾಯಕಿಯರು ಏನೂ ತಿನ್ನದೆ ಸ್ಲಿಮ್ ಆಗಿರಲು ಪ್ರಯತ್ನಿಸಿದರೆ, ನಾಯಕ ನಟರು ಚೆನ್ನಾಗಿ ತಿಂದು ವ್ಯಾಯಾಮ ಮಾಡಿ ಗಟ್ಟಿಮುಟ್ಟಾಗಿರಲು ಪ್ರಯತ್ನಿಸುತ್ತಾರೆ. ಯಾವ ವ್ಯಾಯಾಮವನ್ನೂ ಮಾಡುವ ಗೋಜಿಗೆ ಹೋಗದ ನಟರೂ ನಮ್ಮ ನಡುವೆ ಇದ್ದಾರೆ. ಅವರಲ್ಲಿ ಅಂಬರೀಷ್ ಮತ್ತು ದೊಡ್ಡಣ್ಣ ಮುಖ್ಯರು.


ಇಷ್ಟಾದರೂ ಹಿಂದಿಯ ಸಲ್ಮಾನ್‌ಖಾನ್ ಮತ್ತು ಜಾನ್ ಅಬ್ರಹಾಂ ತರಹ ಸುಂದರ ಮೈಕಟ್ಟು ಇರುವ ಒಬ್ಬನೇ ಒಬ್ಬ ನಟ ಕನ್ನಡದಲ್ಲಿ ಇಲ್ಲ. ಸಲ್ಮಾನ್ ಮತ್ತು ಜಾನ್ ಅಬ್ರಹಾಂ ಸಮಾರಂಭಗಳಲ್ಲಿ ಶರ್ಟ್ ತೆಗೆದು ಬಿಸಾಡಿದರೆ, ಅದನ್ನು ನೋಡಿ ಹೆಣ್ಣು ಮಕ್ಕಳು ಹುಚ್ಚೆದ್ದು ಕುಣಿಯುತ್ತಾರೆ. ಅವರು ಬಿಸಾಕಿದ ಶರ್ಟನ್ನು ಪಡೆಯಲು ಕಿತ್ತಾಡಿಕೊಳ್ಳುತ್ತಾರೆ.

ಅವರಿಬ್ಬರ ಪರ್ಸನಾಲಿಟಿಯೇ ಅವರನ್ನು ಪುರುಷತ್ವ ಮತ್ತು ಸೆಕ್ಸ್ ಸಿಂಬಲ್‌ಗಳಾಗಿಸಿವೆ. ಸಂಜಯ್ ದತ್ ಬಗ್ಗೆ ಕೂಡಾ ಅಲ್ಪಸ್ವಲ್ಪ ಇಂತದ್ದೇ ಕ್ರೇಜ್ ಇದೆ. ಆದರೆ ಕನ್ನಡದಲ್ಲಿ ಅಂತಹ ಕ್ರೇಜ್ ಹುಟ್ಟಿಸುವ ಒಬ್ಬನೇ ಒಬ್ಬ ನಟ ನಮಗೆ ಸಿಗೋದಿಲ್ಲ.

ಈ ವಿಷಯದಲ್ಲೂ ನಾವು ಎಂದಿನಂತೆ ಹಿಂದಿಯವರಿಗಿಂತ ಬಹಳ ಹಿಂದೆ ಇದ್ದೇವೆ.

–ಶೆಣೈ





ಈ ಕಾಮೋತ್ತೇಜಕ ದೇಶದಲ್ಲಿ ಶೃಂಗಾರವನ್ನು ಕಲೆಯ ವಿವಿಧ ಪ್ರಕಾರಗಳಲ್ಲಿ ತೋರಿಸುವಾಗಲೂ ಸಭ್ಯತೆಯ ಪ್ರಶ್ನೆ ಕಾಡುತ್ತದೆ. ಇತ್ತೀಚಿನ ಮರ್ಡರ್, ಜ್ಯೂಲಿ, ಬ್ವಾಯಿಸ್ ಮುಂತಾದ ಚಿತ್ರಗಳ ದೃಶ್ಯಗಳು ಸಿಂಗಲ್ X, ಡಬಲ್ X ಚಿತ್ರಗಳ ದೃಶ್ಯಗಳನ್ನು ನೆನಪಿಸುವಂತಿದ್ದವು.

ರೋಮಾಂಚನ ಮೂಡಿಸುವ, ಮಾದಕತೆ ಹರಡುವ ಹನ್ನೊಂದು ಮೋಹಕ ದೃಶ್ಯಗಳನ್ನು ಆಯ್ಕೆ ಮಾಡಿ ನೀಡುತ್ತಿದ್ದೇವೆ. ಸಭ್ಯತೆಯ ಎಲ್ಲೆ ದಾಟದ ಈ ದೃಶ್ಯಗಳು ನಿಮ್ಮನ್ನು ಶೃಂಗಾರ ಲಹರಿ ಕಡೆ ಕರೆದೊಯ್ಯುತ್ತವೆ. ಬಣ್ಣದ ಚಿಟ್ಟೆಗಳ ವರ್ಣರಂಜಿತ ಚಿತ್ರಗಳೂ ನಿಮ್ಮ ನಿದ್ದೆಗೆಡಿಸಲಿವೆ. ಕಮಾನ್ ಯಾರ್... ಹ್ಯಾವ್ ಎ 'ಪ್ಯಾರ್'.....

# ಬಾಯೂರಿದೆss ಮತ್ತೇರಿದೆss ಮಜವಾಗಿದೆss

ಮಲ್ಲಿ

## ಬೀಚ್‌ನಲ್ಲೊಬ್ಬಳು ಜೀನತ್!



'ಜೆಸ್ಮ್' ಬಿಡುಗಡೆಗೆ ಮುಂಚೆ ಬಿಪಾಶಾ ಬಸುಳನ್ನು ಜೀನತ್ ಅಮಾನ್‌ಗೆ ಹೋಲಿಸುತ್ತಿದ್ದರು. 'ಜಿಸ್ಮ್' ನೋಡಿದ ಮೇಲೆ ಅದು ನಿಜ ಎನಿಸುವಂತಿತ್ತು. ಖುರ್‌ಬಾನಿಯಲ್ಲಿ "ಹಮ್ ತುಮ್ಸೆ ಜುದಾ ಹೈ" ಹಾಡಲ್ಲಿ ಬೀಚ್‌ನಲ್ಲಿ ಕಂಗೊಳಿಸುವ ಜೀನತ್‌ಳನ್ನು ನೆನಪಿಸುವಂತೆ ಬಿಪಾಶಾ ಜಿಸ್ಮ್‌ನಲ್ಲಿ ಕಂಡಿದ್ದಳು. ನೀಳಕಾಯದ ಬಿಪಾಶಾ ಸಮುದ್ರ ದೇವತೆಯಂತೆ ಎದ್ದು ಬರುವ ದೃಶ್ಯ ಮನಮೋಹಕ... ನಂತರ ಜಾನ್ ಅಬ್ರಹಾಂನೊಂದಿಗಿನ ಅವಳ ಸರಸ-ಸಲ್ಲಾಪಗಳ ದೃಶ್ಯಗಳು ಬಿಚ್ಚಿಬಿಚ್ಚಿಗೆ... "ಜಾದು ಹೈ ನಶಾ ಹೈ" ಹಾಡಿನ ದೃಶ್ಯ ನಶೆ ಏರಿಸುವ ಜಾದೂ ಮಾಡದೇ ಇರುತ್ತಾ?

## ರವೀನಾ ಎಂಬ ಪಿಂಕಿ-ನೀರಲ್ಲೂ ಬೆಂಕಿ!



ಅಲ್ಲ... ಅಲ್ವೇ ಅಲ್ಲ.... ನಾವು 'ತು ಚೀಜ್ ಬಡೀ ಹೈ ಮಸ್ತ್ ಮಸ್ತ್' ಹಾಡಿನ ಬಗ್ಗೆ ಬರೆಯುತ್ತಲೇ ಇಲ್ಲ ಫ್ರೆಂಡ್ಸ್... ಮಳೆಯಲ್ಲಿ ಮೈಮಾಟ ತೋರಿಸುತ್ತ ಅಕ್ಷಯಕುಮಾರ್‌ನನ್ನು ಪ್ರಣಯಕ್ಕೆ ಉತ್ತೇಜಿಸುವ ರವೀನಾ ಟಂಡನ್‌ಳ ಒದ್ದೆ ಮೈಯನ್ನು ಮರೆಯೋಕಾಗುತ್ತಾ? ಹಳದಿ ಸೀರೆಯಲ್ಲಿನ ರವೀನಾ "ಟಿಪ್ ಟಿಪ್ ಬರ್‌ಸಾ ಪಾನಿ" ಎಂದು ವೈಯ್ಯಾರ ಮಾಡುತ್ತಿದ್ದರೆ ಪ್ರೇಕ್ಷಕರಿಗೆ "ನೀರಲ್ಲೂ ಬೆಂಕಿ ಹೊತ್ತಿದಂತಾಗುತ್ತೆ." (ಪಾನಿ ಮೆ ಆಗ್ ಲಗಿ ಹೈ!)

## ಅಂಡರ್‌ವರ್ಲ್ಡ್ ಚಿತ್ರದಲ್ಲೂ ಮಾಧುರಿಯ ಅಂಡರ್ ಕರೆಂಟ್!



ದಯಾವಾನ್‌ನಲ್ಲಿ ಪವರ್ ಆಡಿ ಮೋಡಿ ಮಾಡುವ ಜೋಡಿ ವಿನೋದ್ ಖನ್ನಾ-ಮಾಧುರಿ.... ಭಾರತೀಯ ಚಿತ್ರರಂಗದ ಬಿಸಿ ಮುತ್ತುಗಳ ಪೈಕಿ ಒಂದು ಪುಳಕದ 'ಪಪ್ಪಿ' ಈ ಚಿತ್ರದಲ್ಲಿದೆ. ವಿನೋದ್ ಖನ್ನಾಗಿಂತ ತುಂಬಾ ಚಿಕ್ಕವಳಾದ ಮಾಧುರಿ ವಿನೋದ್‌ನೊಂದಿಗೆ ನಡೆಸುವ ನೇರಾನೇರ ತುಟಿ-ತುಟಿಗಳ ತಿಕ್ಕಾಟ ಪಡ್ಡೆಗಳನ್ನು ತುಮುಲಗೊಳಿಸುತ್ತದೆ. ಸುರಿವ ನೀರು 'ಅಪ್ಪುಗೆಯ ಬೆಂಕಿ'ಗೆ ತುಪ್ಪ ಸುರಿದಂತಾಗಿ ಕಾಮದ ಕಾವು ಮನದ ತುಂಬಾ ಹರಡುತ್ತದೆ.

## ತೊಯ್ದ ಸೀರೇಲಿ ಸಿಹಿ ಸಿರಿ ದೇವಿ....

ತೊಯ್ದ ಸೀರೆಯ ಹಾಡುಗಳ ಪೈಕಿ ಟಾಪ್-ಒನ್ ಯಾವುದು ಎಂದು ಹೇಳುವುದು ಕಷ್ಟವೇ... ಆದರೆ ದಕ್ಷಿಣದ ದಂತದ ಗೊಂಬೆ ಶ್ರೀದೇವಿ 'ಮಿ. ಇಂಡಿಯಾ'ದಲ್ಲಿ ನೀಲಿನೀಲಿ ಸೀರೆಯಲ್ಲಿ ಮಳೆಯಲ್ಲಿ ನೆನೆಯುತ್ತ ನಲಿಯುತ್ತ "ಕಾಟೆ ನಹಿ... ಕಟತೆ ನಹಿ....." ಎನ್ನುತ್ತಿದ್ದರೆ ಪ್ರೇಕ್ಷಕರ ಮನಸ್ಸೇ ಒದ್ದೆಯಾಗಿಬಿಡುತ್ತೆ. ಕಣ್ಣುಗಳಲ್ಲೇ ಕೊಲ್ಲುವ ಸಿರಿಸೊಬಗಿನ ಶ್ರೀದೇವಿಯ ಮೈಮಾಟ... ಸಿಂಪ್ಲಿ ಸುಪರ್ಬ್....

## ಬೀಚ್‌ನಲ್ಲಿ ಡಿಂಪಲ್-ಕಳಚಿತವಳ ಟವೆಲ್...



'ಸಾಗರ್' ಚಿತ್ರದಲ್ಲಿ "ಜಾನೇ ದೊ ನಾ" ಎಂಬ ಮಾದಕ ಗೀತೆ ಡಿಂಪಲ್‌ಳ ನುಣುಪು ದೇಹ ಪ್ರದರ್ಶನ ಮಾಡಿ ನಿಮ್ಮನ್ನು ಹಿಡಿದಿಡುತ್ತೆ. ಈ ಬೀಚ್ ಹಾಡಿನ ಮಧ್ಯೆ ಅವಳ ಮೈ ಬಳಸಿದ ಟವೆಲ್ ಉದುರುವ ಸೀನ್ 'ಸೌಂದರ್ಯ ಸಾಗರ'ವನ್ನು ಪ್ರದರ್ಶನಕ್ಕಿಡುತ್ತದೆ. ನಂತರ ಕೆಂಪು ಸೀರೆಯಲ್ಲಿ ರಿಶಿಕಪೂರನನ್ನು ಪೀಡಿಸುವ ಡಿಂಪಲ್ ಮತ್ತೊಮ್ಮೆ ಬಿಕಿನಿಯ 'ಬಾಬ್ಬಿ'ಯನ್ನು ನೆನಪಿಗೆ ತರುತ್ತಾಳೆ.

## ಶರ್ಮಿಳಾ ಎಂಬ ಮಾಯಾಂಗನೆ....

70ರ ದಶಕದ ಬಿಸಿಯುಸಿರಿನ ಮಾಯಾಂಗನೆ ಶರ್ಮಿಳಾ ಟ್ಯಾಗೋರ್ ರೋಮ್ಯಾಂಟಿಕ್ ಯುವಕ ರಾಜೇಶ್ ಖನ್ನಾನೊಂದಿಗೆ ಸರಸದಲ್ಲಿರುವುದನ್ನು ನೋಡುವುದೇ ಬಲು ಚೆಂದ. 'ಆರಾಧನಾ'ದಲ್ಲಿ ಧೋ ಎಂದು ಸುರಿವ ರಾತ್ರಿಯ ಮಳೆ... ಅದಕ್ಕೆ ಜೊತೆಯಾಗಿ ಕ್ಯಾಂಪ್-ಫೈರ್... ಅಲ್ಲಿಗೆ ಬಿಸಿ ದೃಶ್ಯ



ಸಿದ್ಧ! ಶರ್ಮಿಳಾ ತನ್ನ ಒದ್ದೆ ಬಟ್ಟೆಗಳನ್ನು ತೆಗೆದು, ಕಿತ್ತಳೆ ಬಣ್ಣದ ಕಂಬಳಿ ಹೊದ್ದು ರಾಜೇಶ್ ಖನ್ನಾ ಬಳಿ ಬರುತ್ತಿದ್ದರೆ... ಥಿಯೇಟರ್‌ನಲ್ಲಿ 'ರೂಪ್ ತೇರಾ ಮಸ್ತಾನಾ... ಪ್ಯಾರ್ ಮೇರಾ ದಿವಾನಾ ಎಂಬ ಪ್ರೇಮದಲೆಗಳು.

## ಜೀನತ್ತು.... ಅದೇನು ಗತ್ತು... ಅದೆಷ್ಟು 'ಮತ್ತು'!



ಇವತ್ತು ಸೆಕ್ಸ್ ಸಿಂಬಲ್ ಎನಿಸಿಕೊಳ್ಳಲು ಪೈಪೋಟಿಗೆ ಬಿದ್ದಿರುವ ಮಲ್ಲಿಕಾ ಶೆರಾವತ್, ನೇಹಾ ದೂಪಿಯಾಗಳೆಲ್ಲ ಉದ್ದೀಪನ ಚೆಲುವೆ ಜೀನತ್ ಅಮಾನ್‌ಳ ಚಿತ್ರಗಳನ್ನು ನೋಡಿದರೆ ಮೋಹಕತೆ, ಮಾದಕತೆಗಳೆಂದರೇನು ಎಂಬುದು ತಿಳಿಯುತ್ತದೆ. 'ಸತ್ಯಂ ಶಿವಂ ಸುಂದರಂ' ಚಿತ್ರದಲ್ಲಿ ಜೀನತ್‌ಳ ಡ್ರೆಸ್ ಮತ್ತು attitude ಇದೆಯಲ್ಲ... ಅದು ಚಿನ್ನದ ಚೂರಿಯಂತೆ ನಿಮ್ಮೆದೆಗೆ ಚುಚ್ಚುತ್ತದೆ. ತನ್ನ ಹೀರೋಯಿನ್‌ಗಳನ್ನು 'ಸೆಕ್ಸ್ ದೇವತೆ'ಗಳಂತೆ ಚಿತ್ರಿಸುತ್ತಿದ್ದ ರಾಜ್‌ಕಪೂರ್ ಜೀನತ್‌ಳಿಗೆ ಮಾದಕತೆ ಬಗ್ಗೆ ಹೇಳಿ ಕೊಡುವ ಅವಶ್ಯವೇ ಇರಲಿಲ್ಲ...! ಕುಪ್ಪಸವಿಲ್ಲದೇ ಅರೆಬರೆ ಸೀರೆ ಸುತ್ತಿಕೊಂಡ ಈ ಸೌಂದರ್ಯದ ಗಣಿ ಶಿವಲಿಂಗದ ಮೇಲೆ ಬಾಗಿ ನಿಂತಿರುವ ಸೀನ್ ಮರೆಯಲಾಗುವುದೇ?

ಮತ್ತೇರಿಸುವ ಮತ್ತಿನ ದೇವತೆ ಜೀನತ್ ಕನಸಲ್ಲಿ ಬಂದಾಳು ಜೋಕೆ....

## ಬೇಲೂರ ಬಾಲೆ ಈ ಮಧುಬಾಲೆ...

ಸಲೀಮ್, ಅನಾರ್ಕಲಿಗಳ ಶಾಸ್ತ್ರೀಯ ಪ್ರೇಮಕತೆಯಾಧರಿಸಿದ ಮುಘಲ್-ಎ-ಆಜಮ್ ಚಿತ್ರದ ಹೈಲೈಟ್ ಮಧುಬಾಲಾ ಎಂಬ ಮೋಹನಾಂಗಿ.... ಕಪ್ಪು ಬಿಳುಪಿನ ಚಿತ್ರದಲ್ಲೂ ವರ್ಣರಂಜಿತ ಕನಸು ಮೂಡಿಸಬಲ್ಲ ಮಧುಬಾಲಾ ಅಮರಪ್ರೇಮ ಕಾವ್ಯದಂತೆ.... ಹೊಳೆವ ಮಧುಬಾಲಾಳ ಮುಖಾರವಿಂದವನ್ನು ಬಿಳಿ ಪುಚ್ಛದಿಂದ ಸವರುವ ದಿಲೀಪ್‌ಕುಮಾರ್... ಕಣ್ಣುಮುಚ್ಚುವ ಮಧು ತನ್ನ ತುಟಿಗಳನ್ನು ಪ್ರಿಯಕರ ದಿಲೀಪನ ಮುಖದ ಹತ್ತಿರಕ್ಕೆ ತರುತ್ತಾಳೆ... ಪುಚ್ಛದ ಹಿಂದುಗಡೆ ಬಿಸಿಬಿಸಿ ಮುತ್ತು... ಇಂಥ ರಮ್ಯ ಗಳಿಗೆಯಲ್ಲಿ ಉಸ್ತಾದ್ ಬಡೆ ಗುಲಾಮ್ ಅಲಿಖಾನ್ ಹಾಡಿದ "ಪ್ರೇಮ್ ಜೋಗನ್ ಬನ್ ಕೆ" ಎಂಬ ಗೀತೆ ತೇಲಿ ಬಂದು, ರಮ್ಯ ಕಾವ್ಯ ಸೃಷ್ಟಿಯಾಗುತ್ತೆ.



## ನರ್ಗೀಸ್ ಎಂಬ ನೈಟಿಂಗೇಲ್!



ರಾಜ್‌ಕಪೂರ್-ನರ್ಗೀಸ್ ಜೋಡಿ ತೆರೆ ಮೇಲೆ ಬಂದರೆ ಕಿಡಿಗಳು ಸೃಷ್ಟಿಯಾಗುತ್ತಿದ್ದವು. ಅವರಿಬ್ಬರ ಮಧ್ಯದ 'ಕೆಮಿಸ್ಟ್ರಿ'ಯೇ ಹಾಗಿತ್ತು ಅದು ಎಲ್ಲರಲ್ಲೂ ವಿದ್ಯುತ್ ಸಂಚಾರ ಉಂಟು ಮಾಡುತ್ತಿತ್ತು. 'ಆವಾರಾ'ದಲ್ಲಿ ಬೀಚ್‌ನಲ್ಲಿ ಪಾರದರ್ಶಕ ತೆಳು ಪರದೆ ಹಿಂದೆ ನಿಂತು ನರ್ಗೀಸ್ ಬಟ್ಟೆ ಬದಲಿಸುವ ದೃಶ್ಯ ಬಾಲಿವುಡ್‌ನ ಕಾಮೋತ್ತೇಜಕ ಪುಟಗಳಲ್ಲಿ ಎದ್ದು ಕಾಣುತ್ತದೆ. ಬಿರುಗಾಳಿಗೆ ನಲುಗಿದ ಬೀಚ್‌ನಲ್ಲಿ ನರ್ಗೀಸ್‌ಳ ಸಂಪದ್ಭರಿತ ದೇಹ ನೋಡುವುದೇ ಸೊಬಗು....

## ಮಾಯಾಳ ಮೈ ಮಾಟ-ದೀಪಾಳ ರಸದೂಟ

1992ರ ಸಮಯ... ಶಾರೂಖ್‌ಖಾನ್ ಆಗಿನ್ನೂ ಹೊಸಬ. ಗುಸ್ಟೇವ್ ಫ್ಲಾಬೆರ್ಟ್ ಕಾದಂಬರಿ "ಮೇಡಂ ಬೊವೆರಿ" ಆಧರಿಸಿ ಕೇತನ್ ಮೆಹ್ತಾ ನಿರ್ದೇಶಿಸಿದ 'ಮಾಯಾ ಮೇಮ್‌ಸಾಬ್' ಎಂಬ ಕಲಾತ್ಮಕ ಚಿತ್ರಕ್ಕೂ ಪಡ್ಡೆಗಳು ದಾಳಿ ಇಡತೊಡಗಿದ್ದವು. ಕಾರಣ? ಸಿಮಿಗರೆವಾಲ್ ನಂತರ ಮೊದಲ ಬಾರಿಗೆ ದೀಪಾ ಸಾಹಿ ಟಾಪ್‌ಲೆಸ್ ಆಗಿ, ಶಾರುಖ್‌ನೊಂದಿಗೆ ಹಾಸಿಗೆ ಏರಿ ಕಾಮಕೇಳಿಯ ಕಂಪನಗಳನ್ನುಂಟು ಮಾಡಿದ್ದಳು.



ಅಂದಂತೆ ಕಪ್ಪು ಮಲ್ಲಿಗೆ ದೀಪಾ ಸಾಹಿ ನಿರ್ದೇಶಕ ಕೇತನ್ ಮೆಹ್ತಾನ ಪತ್ನಿ....

## ಬೆತ್ತಲಿಲ್ಲ... ಕತ್ತಲಿಲ್ಲ.... ಕಣ್ಣಲ್ಲೇ ಕೊಲ್ತಾಳಲ್ಲ!

1997ರಲ್ಲಿ ಬಂದ ಬಸು ಭಟ್ಟಾಚಾರ್ಯ ನಿರ್ದೇಶನದ 'ಆಸ್ಥಾ' ಚಿತ್ರ ನಿಂತಿರುವುದೇ ಓಂಪುರಿ-ರೇಖಾರ ಅಭಿನಯದ ಮೇಲೆ... ಮಧ್ಯಮ ವರ್ಗದ ರೇಖಾಳಿಗೆ ಬಣ್ಣದ, ವೈಭವದ ಬದುಕಿನ ಕನಸುಗಳು ಗರಿಗೆದರಿ, ಪರಪುರುಷರೊಂದಿಗೆ ಹಾಸಿಗೆ ಹಂಚಿಕೊಳ್ಳುತ್ತಾ ಹಣ ಸಂಪಾದನೆ ಮಾಡತೊಡಗುತ್ತಾಳೆ. ಪ್ರೊಫೆಸರ್ ಗಂಡ ಓಂ ಪುರಿಯನ್ನು ರೇಖಾ ಕಾಮಕ್ರೀಡೆಗೆ ಉದ್ದೀಪನಗೊಳಿಸುವ ದೃಶ್ಯ ಅದ್ಭುತವಾಗಿ ಮೂಡಿ ಬಂದಿದೆ. ಅಲ್ಲಿ ಬಿಚ್ಚಾಟವಿಲ್ಲ... ನಗ್ನತೆಯಿಲ್ಲ... ಕೇವಲ ಅಭಿನಯದಿಂದಲೇ ನೋಡುಗರಲ್ಲಿ ಮತ್ತೇರಿಸುತ್ತಾರೆ ರೇಖಾ-ಓಂಪುರಿ. ಮಾದಕ ಕಣ್ಣುಗಳಲ್ಲೇ ಯುವಕರ ಕೊಲ್ಲುವ ಮೋಹಕ ರೇಖಾ ಮೆಲ್ಲಗೆ ತನ್ನ ಬೆರಳ ಚೀಪತೊಡಗಿದರೆ, ಪಡ್ಡೆಗಳೆಲ್ಲಾ ಕ್ಲೀನ್ ಬೌಲ್ಡ್!





R.B.P. LANKESH, Kannada Weekly Price Rs.20/- SPECIAL ISSUE RNI No. KARKAN2005/14648 Regd.No.KA/BG(S)/2036/2005-07

# ಎಲ್ಲಾರೂ ಮಾಡುವುದು ಹೊಟ್ಟೆಗಾಗಿ... ಗೇಣು ಬಟ್ಟೆಗಾಗಿ





ಕಾಲ ಬದಲಾಗಿದೆಯೋ? ಅಥವಾ ಕಲೆ ಬದಲಾಗಿದೆಯೋ? ಈ ಪ್ರಶ್ನೆಗೆ ಉತ್ತರ ಇಲ್ಲದಿರಬಹುದು. ಆದರೆ ಕನ್ನಡ ಚಿತ್ರರಂಗದ ಇಂದಿನ ಜಮಾನದ ನಾಯಕಿಯರನ್ನು ನೋಡಿದರೆ ಎರಡೂ ಬದಲಾಗಿದೆ ಅನ್ನಬಹುದು.

ಹಿಂದೊಂದು ಕಾಲವಿತ್ತು. ಕನ್ನಡದ ನಾಯಕಿಯರೆಂದರೆ ಅಪ್ಪಟ ಭಾರತೀಯ ನಾರಿಯರಂತೆ ಮೈತುಂಬ ಬಟ್ಟೆ ಹಾಕುತ್ತಿದ್ದರು. ಭಾರತಿ, ಆರತಿ, ಲೀಲಾವತಿ...ಹೀಗೆ ಯಾವುದೇ ರತಿಯನ್ನು ಉದಾಹರಣೆಗೆ ತೆಗೆದುಕೊಳ್ಳಿ. ಇವರ್‍ಯಾರೂ ತುಂಡು ಲಂಗ, ಖಾಲಿ ಬೆನ್ನು, ಸೀಳು ಎದೆ ತೋರಿಸಿದವರೇ ಅಲ್ಲ. ಅಡಿಯಿಂದ ಮುಡಿತನಕ ಬಟ್ಟೆ ತೊಟ್ಟರೂ ಗ್ಲಾಮರಸ್ ಆಗಿ ಕಾಣಿಸುತ್ತಿದ್ದರು....

ಆಗ ಕಾಲವೂ ಹಾಗೇ ಇತ್ತು. ಆದರೆ ಅಂದಿನ ಕಾಲದವರು ತುಂಡು ಲಂಗ ಹಾಕುತ್ತಿರಲಿಲ್ಲವೆಂಬುದು ಅರ್ಥವಲ್ಲ. ಆದರೆ ನಮ್ಮ ಕನ್ನಡದ ನಾಯಕಿಯರು ಮಾತ್ರ ಅಂತಹ ಡ್ರೆಸ್ ಬಗ್ಗೆ ಮಡಿವಂತಿಕೆ ತೋರಿಸುತ್ತಿದ್ದರು. ನಮ್ಮ ಪ್ರೇಕ್ಷಕರೂ ಅಷ್ಟೇ... ಪರಭಾಷಾ ನಟಿಯರು ಅಂಗಾಂಗ ಪ್ರದರ್ಶನ ಮಾಡಿದರೆ ಬಾಯಿ ಚಪ್ಪರಿಸುತ್ತಿದ್ದರು. ಅದೇ ಕನ್ನಡದ ನಾಯಕಿಯರು ಹಾಗೇನಾದರೂ ಮಾಡಿದಲ್ಲಿ, "ಈ ಹುಡುಗಿಗೆ ಏನಾಗಿದೆ ರೋಗ?" ಎಂದು ಅಪಸ್ವರ ಎತ್ತುತ್ತಿದ್ದರು.

ಆದರೆ ಈಗಿನ ಜಮಾನವೇ ಬೇರೆ. ಕನ್ನಡದ ನಾಯಕಿಯರು 'ಬೋಲ್ಡ್ ಅಂಡ್ ಬ್ಯೂಟಿಫುಲ್' ಎಂದು ಖ್ಯಾತಿ ಗಳಿಸಿದ್ದಾರೆ.

ಇದು ಶುರುವಾಗಿದ್ದು ರಕ್ಷಿತಾ ಮತ್ತು ರಮ್ಯ ಎಂಬ ಸುಂದರಿಯರ ಆಗಮನದ ನಂತರ. ಯಾವುದೇ ಮುಲಾಜು, ಮಡಿವಂತಿಕೆ ತೋರಿಸದೆ ಇವರು ಮಾಡ್ ಡ್ರೆಸ್‌ಗಳನ್ನು ತೊಡುತ್ತಾರೆ. ಇವರಿಗಿಂತ ಮೊದಲು ಚಿತ್ರರಂಗಕ್ಕೆ ಬಂದ ರಾಧಿಕಾ ಹಿರಿಯಕ್ಕ ಆಗಬೇಕಿತ್ತು. ಆದರೆ ಈ ರಮ್ಯ ರಕ್ಷಿತಾರ ಬಿಚ್ಚಾಟ ನೋಡಿ ಈಕೆಯೂ ಏಕ್‌ದಮ್ ಮಾಡ್ ಡ್ರೆಸ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ. ಈ ಮೂರು ಸುಂದರಿಯರನ್ನೇ ಬೆಚ್ಚಿ ಬೀಳಿಸುವಂತೆ ಡೈಸಿ ಬೋಪಣ್ಣ ಎಂಬ ಕೊಡಗಿನ ಚೆಲುವೆ ಮುಂಬೈಯಲ್ಲಿ ಕಿಸ್ಸಿಂಗ್ ದೃಶ್ಯಗಳಲ್ಲಿ ಮುಜುಗರವಿಲ್ಲದೆ ನಟಿಸಿದಳು. ಇವರಿಗಿಂತ ನಾನೇನು ಕಡಿಮೆ ಎಂಬಂತೆ ಈಗ ಮುಂಬೈಯಲ್ಲಿರುವ ಭಾವನಾ ಕೆಲವು ಹಾಟ್ ಫೋಟೋಗಳನ್ನು ಪತ್ರಕರ್ತರಿಗೆ ಕಳುಹಿಸಿಕೊಟ್ಟರು.

ಅಂತೂ ಈ ಪಂಚಕನ್ಯೆಯರು ನಮ್ಮ ಪಂಚಕೋಟಿ ಕನ್ನಡಿಗರ ಸಾಂಸ್ಕೃತಿಕ ರಾಯಭಾರಿಗಳಾದರು. ಹಾಗಂತ ಹೇಳಲು ಹೆಮ್ಮೆ ಮತ್ತು ಸಂಕೋಚ, ಎರಡೂ ಆಗುತ್ತದೆ.

ಒಂದಂತೂ ನಿಜ. ತಾವು ಕನಿಷ್ಠ ಉಡುಪು ಧರಿಸಿದ್ದರಿಂದ ತಮ್ಮ ಮಾನ, ಮರ್ಯಾದೆ ಹರಾಜಾಗಿದೆ ಎಂದು ಅವರೇನೂ ಭಾವಿಸಿಲ್ಲ. ಅದರ ಬದಲಿಗೆ, ಅದರ ಬಗ್ಗೆ ಅವರಿಗೆ ಹೆಮ್ಮೆಯಿದೆ. ಆದರೆ ಈ ಬಿಚ್ಚಾಟ, ವಸ್ತ್ರತ್ಯಾಗ, ಮೈಮಾಟ ತೋರಿಸುವ ಚಮಕ್ ನಡುವೆ ಈ ಕನ್ಯೆಯರು ತಮ್ಮ ಪ್ರತಿಭೆಯನ್ನೂ ಪ್ರದರ್ಶಿಸಲು ಮರೆಯಬಾರದು ಅಷ್ಟೇ!

ನಮ್ಮ ಚಿತ್ರರಂಗವೂ ಎಷ್ಟು ಬದಲಾಗಿದೆ ಅಂದರೆ ಇಲ್ಲಿ ಗೌರಮ್ಮನ ತರಹ ಸೀರೆ ಉಡುವವರಿಗೆ ಸಂಭಾವನೆ ಕಡಿಮೆ. ಅದೇ ಒಬ್ಬ ನಾಯಕಿ, ಮಿಡಿ, ಮಿನಿ ಇತ್ಯಾದಿ ಡ್ರೆಸ್‌ಗಳಲ್ಲಿ ಕಾಣಿಸಿಕೊಂಡರೆ ದುಪ್ಪಟ್ಟು ಸಂಭಾವನೆ ಪಡೆಯುತ್ತಾರೆ.

ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂಬ ದಾಸರ ಮಾತು ಈ ನಾಯಕಿಯರಿಗೂ ಅನ್ವಯಿಸುತ್ತದೆ. ಆದರೆ ಎಲ್ಲರೂ ಸಂಪಾದನೆ ಮಾಡುವುದೇ ಹೊಟ್ಟೆ ತುಂಬಾ ಉಣ್ಣಲು ಮತ್ತು ಮೈತುಂಬಾ ಬಟ್ಟೆ ತೊಡಲು. ನಮ್ಮ ನಾಯಕಿಯರು ಮಾತ್ರ ಲಕ್ಷಗಟ್ಟಲೆ ಸಂಪಾದಿಸಿದರೂ ಹೊಟ್ಟೆ ತುಂಬಾ ಉಣ್ಣುವುದೂ ಇಲ್ಲ; ಮೈ ತುಂಬಾ ಬಟ್ಟೆ ತೊಡುವುದೂ ಇಲ್ಲ. ಈಗ ನೀವೇ ಹೇಳಿ! ಕಾಲ ಮತ್ತು ಕಲೆ ಬದಲಾಗಿದೆಯೋ? ಇಲ್ಲವೊ?

-ಶೆಣೈ







PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore-4, Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44

ಗೌರಿ ಲಂಕೇಶರ

# ಲಂಕೇಶ್

20/- ರೂ

◆ ರಂಜನೆ ◆ ಬೋಧನೆ ◆ ಪ್ರಚೋದನೆ

## ಕ್ರಿಕೆಟ್: ದಲಿತರಿಗೆ ನೋ ಎಂಟ್ರಿ
## ಬ್ರಾಹ್ಮಣರ ಮ್ಯಾಚ್ ಫಿಕ್ಸಿಂಗ್

## ಉತ್ತರ ಕರ್ನಾಟಕ : ಸಿನಿಮಾ ಹುಚ್ಚಿಗೆ ಬಲಿಯಾದವರು

## ರಾಮನಗರದಲ್ಲಿ ಅನಿತಕ್ಕನ ದರ್ಬಾರು

ಬೆಂಗಳೂರು-ಗುಲ್ಬರ್ಗಾ-ಶಿವಮೊಗ್ಗ

## ಉಪಕುಲಪತಿ ಕುರ್ಚಿಗೆ ಕಿತಾಪತಿ



## ವಿಶೇಷಾಂಕ